ಶ್ರೀ ಎಮ್.ಆರ್. ಬಾಳೀಕಾಯಿ :
ಬದುಕು ಮತ್ತು ಕಲಾಕೃತಿಗಳು

ಎಂ.ಫಿಲ್ ಪದವಿಯ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಪ್ರಬಂಧ



ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ **೫೮೩೨೭೬**
೨೦೧೪

ಶ್ರೀ ಎಂ. ಆರ್. ಬಾಳೀಕಾಯಿ : ಬದುಕು ಮತ್ತು ಕಲಾಕೃತಿಗಳು

ಎಂ.ಫಿಲ್ ಪದವಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನಾ ಪ್ರಬಂಧ

ಸಂಶೋಧಕರು

ಸಾವಿತ್ರಿ ಎಸ್ ಟಂಕಲ್

ಮಾರ್ಗದರ್ಶಕರು

ಡಾ|| ಕೆ. ರವೀಂದ್ರನಾಥ

ಲಲಿತ ಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ,

ಹಂಪಿ ವಿದ್ಯಾರಣ್ಯ-೫೮೩೨೭೬

೨೦೧೪

ಶ್ರೀ ಎಂ. ಆರ್. ಬಾಳೀಕಾಯಿ : ಬದುಕು ಮತ್ತು ಕಲಾಕೃತಿಗಳು

ಪರಿವಿಡಿ

ಕಲಾವಿದ

ಶ್ರೀ ಎಂ. ಆರ್. ಬಾಳೀಕಾಯಿ



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ–ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ದೇವರು ಮನುಷ್ಯನನ್ನು ಸೃಷ್ಟಿಸಿದಂತೆ ಮನುಷ್ಯ ಕಲೆಯನ್ನು ಸೃಷ್ಟಿಸಿದ್ದಾನೆ. ಒಂದು ವೇಳೆ ಮನುಷ್ಯ ಕಲೆಯನ್ನು ಸೃಷ್ಟಿಸಿಕೊಳ್ಳದಿದ್ದರೆ ಅವನ ಬದುಕೆ ಬರಡಾಗಿ ಬಿಡುತ್ತವೆ. ಅವನ ಕಲಾ ಸೃಷ್ಟಿಗೂ ನಿಸರ್ಗದ ದೃಶ್ಯಗಳು ಪ್ರೇರಣೆ ನೀಡುತ್ತವೆ. ಹಾಗಾಗಿ ತನ್ನ ಕಲಾ ಸೃಷ್ಟಿ ನಿಸರ್ಗ ನೀಡಿದ ಕಲೆಗೆ ತಾನಿತ್ತ ಮನ್ನಣೆ ಎಂದು ಭಾವಿಸುತ್ತಾನೆ. ಹೆತ್ತ ಮಗುವನ್ನು ಕಂಡು ಆನಂದಿಸುವ ತಾಯಿಯಂತೆ ಈ ಕಲಾ ಸೃಷ್ಟಿಯನ್ನು ಕಂಡು ಖುಷಿಪಡುತ್ತಾನೆ. ಹಾಗೆ ಖುಷಿ ಕೊಡುವ ಕಲೆಯನ್ನು ದೈವದತ್ತವೆಂದೆ ಪರಿಭಾವಿಸುತ್ತಾನೆ. ಅದು ದೈವದತ್ತವಾದುದರಿಂದ ಅದಕ್ಕೆ ಒಂದು ಪಾವಿತ್ರ್ಯತೆಯನ್ನು ಕಲ್ಪಿಸಿಕೊಳ್ಳುತ್ತಾನೆ.

ಮನುಷ್ಯನ ಇತಿಹಾಸ ಇಂದು ನಿನ್ನೆಯದಲ್ಲ. ಅದಕ್ಕೆ ಸಹಸ್ರಾರು ವರ್ಷಗಳ ಪರಂಪರೆ ಇದೆ. ನಿಸರ್ಗದಲ್ಲಿ ಇರುವ ಇತರ ಎಲ್ಲಾ ಪ್ರಾಣಿಗಳಂತೆ ಮನುಷ್ಯನ ಜೀವನವೂ ಆರಂಭವಾಯಿತು. ಆದರೆ ಮೆದುಳು ಬೆಳೆದಂತೆ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ಮನುಷ್ಯ ಆಲೋಚಿಸತೊಡಗಿದ. [೧]ಆದಿ ಮಾನವ ನಿಸರ್ಗದಲ್ಲಿ ಒಬ್ಬನಾಗಿ ಬೆಳೆದರೂ ಅವನಿಗೆ ಆಲೋಚನಾಶಕ್ತಿ ಉಂಟಾದ ಕಾರಣ ಅವನ ಚುಟುವಟಿಕೆಗಳು ಭಿನ್ನವಾದವು ಮನಸ್ಸಿನಲ್ಲಿ ಉಂಟಾದ ಭಾವನೆಗಳನ್ನು ತನ್ನ ಚಟುವಟಿಕೆಗಳ ಮೂಲಕ ವ್ಯಕ್ತಪಡಿಸುವಿಕೆ ಹಲವು ಆಯಾಮಗಳಲ್ಲಿ ನಡೆಯಿತು[೧]. ಅಂತಹ ವಿವಿಧ ಅಭಿವ್ಯಕ್ತ ಸ್ವರೂಪಗಳನ್ನು ಕಲೆಗಳೆಂದು ಕರೆದುಕೊಂಡಿದ್ದೇವೆ.

ಕಲಾ ಜಗತ್ತಿನಲ್ಲಿ ಲಲಿತ ಕಲೆಗಳಿಗಿಂತ ದೃಶ್ಯಕಲಾ ಕ್ಷೇತ್ರವೂ ತುಂಬಾ ವಿಶಾಲವಾದದ್ದು. ಅದು ಉಳಿದೆಲ್ಲಾ ಕ್ಷೇತ್ರಗಳಿಗಿಂತ ತನ್ನದೆ ಆದ ರೀತಿಯಲ್ಲಿ ಶ್ರೇಷ್ಠತೆಯನ್ನು ಉಳಿಸಿ-ಬೆಳೆಸಿಕೊಂಡು ಬಂದಿದೆ. ಈ ಪ್ರಕಾರಕ್ಕೆ ಆದಿ ಅಂತ್ಯಗಳಿಲ್ಲ. ಆದುದರಿಂದ ದೃಶ್ಯಕಲೆಯು ವಿಶ್ವವ್ಯಾಪ್ತಿಯಾದ ತನ್ನದೆಯಾದ ದೃಶ್ಯ ಭಾಷೆಯನ್ನು ಕಟ್ಟಿಕೊಡುತ್ತದೆ.

ದೃಶ್ಯಕಲೆಯು ಮಾನವ ಸಂಸ್ಕೃತಿಯ ಒಳ ತಿರುಳನ್ನು ತಿಳಿಯಪಡಿಸುವುದರ ಜೊತೆಗೆ ಮಾನವನ ಜೀವನದ ರೀತಿ ನೀತಿಗಳನ್ನು ಅರಿಯುವ ಕೆಲಸವನ್ನು ಮಾಡುತ್ತಾ ಬಂದಿದೆ. ಹಾಗೆಯೇ ಪ್ರಾಚೀನ ಕಾಲದಿಂದಲೂ ಮಾನವನ ಬೆಳವಣಿಗೆಯೂ ಪ್ರಮುಖವಾಗಿ ಚಿತ್ರಕಲೆಯಲ್ಲಿ ಹಂತ ಹಂತವಾಗಿ ಬೆಳೆದು ಬಂದಿದ್ದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ.

ಮಾನವನು ಆದಿಯಿಂದಲೂ ತನ್ನ ಸುತ್ತಮುತ್ತಲಿನ ಪ್ರಕೃತಿಯನ್ನು ನೋಡಿ ತನ್ನಲ್ಲಿ ಉಂಟಾದ ಆನಂದವನ್ನು ಕಲೆಗಳ ಮೂಲಕ ವ್ಯಕ್ತಪಡಿಸುತ್ತಾ ಬಂದಿರುವನು. ಕಲೆಯು ಪ್ರಕೃತಿಯ ಪುನರ್ ಸೃಷ್ಟಿಯಾಗಿದೆ. ಕಲೆಯು ಕಲ್ಪನೆಯ ಸಾರ. ಹೀಗೆ ಗುಹೆಗಳಲ್ಲಿ ಬಂಡೆಗಳ ಮೇಲೆ ಇದ್ದಲಿನಿಂದ ಅಥವಾ ಚೂಪಾದ ಕಲ್ಲುಗಳಿಂದ ಗುರುತು ಮಾಡುವ ಯಾವುದಾದರೂ ವಸ್ತುವಿನ ಮೂಲಕ ರಚಿಸಿದ ಪ್ರಾಗೈತಿಹಾಸಿಕ ಕಾಲದ ಚಿತ್ರಗಳನ್ನು ಚಿತ್ರಕಲೆಯ ಅತ್ಯಂತ ಪ್ರಾಚೀನ ರೂಪ ಎಂದು ಗುರುತಿಸಬಹುದಾಗಿದೆ. ತನ್ನ ಆಹಾರ ಸಂಪಾದನೆ ಆ ಪ್ರಾಣಿಯ ಬಗೆಗಿನ ಕುತೂಹಲದ ಭಾವನೆಯಿಂದ ಬಿಡಿಸಿದ ಆ ಚಿತ್ರಗಳು ಇಂದು ಅತ್ಯಂತ ಸಂಕೀರ್ಣವಾದ ಚಿತ್ರಕಲಾ ಪ್ರಕಾರವೊಂದಕ್ಕೆ ನಾಂದಿಯಾಗಿದೆ. ಆದಿಮಾನವನು ಆಹಾರಕ್ಕಾಗಿ ಬೇಟೆಯಾಡುವುದು ಆತನ ಮುಖ್ಯ ವೃತ್ತಿಯಾಗಿತ್ತು. ಅವನ ಆಹಾರ ಮತ್ತು ವಸತಿಯ ಅವಶ್ಯಕತೆಗಳು ಪೂರೈಸಿಕೊಳ್ಳುವ ನೆಲೆಯಲ್ಲಿ ವಾಸಮಾಡಬೇಕೆಂಬ ಆಸೆ ಆಕಾಂಕ್ಷೆಗಳು ಸಂತೋಷ, ದುಃಖ-ದುಮ್ಮಾನಗಳು ಮೊದಲಾದ ಭಾವನೆಗಳನ್ನು ವ್ಯಕ್ತಪಡಿಸುವ ಆಕಾಂಕ್ಷೆ ಹುಟ್ಟಿರಬೇಕು. ಬಿಡುವಿನ ವೇಳೆಯಲ್ಲಿ ಏನನ್ನೋ ಗೀಚಿದನು, ಅದರೊಳಗೆ ಯಾವುದೋ ಹೋಲಿಕೆ ತೋರಿತು. ಅದು ಚಿತ್ರ ರಚನೆಗೆ ಮೂಲವಾಯಿತು. ಆ ಪ್ರವೃತ್ತಿಯು ಬೆಳೆಯತೊಡಗಿತು. ಕ್ರಮೇಣ ಗುಹೆಯ ಗೋಡೆಗಳ ಮೇಲೆ ಬೇಟೆಯ ದೃಶ್ಯ ಹಾಗೂ ಪ್ರಾಣಿಗಳ ಚಿತ್ರ ಗೀಚಿದನು. ನಿಜವಾದ ಪ್ರಾಣಿಯನ್ನು ಬೇಟೆಯಾಡುವ ಮೊದಲು ಚಿತ್ರಗಳಲ್ಲಿ ಅದನ್ನು ಈಟಿ ಭರ್ಜಿಗಳಿಂದ ತಿವಿಯುತ್ತಿದ್ದನು. ಇದರಿಂದ ಬೇಟೆಯಾಡುವಾಗ ಆ ಪ್ರಾಣಿಯೂ ದೊರೆತು ಅದಕ್ಕೆ ಘಾಸಿಯಾಗುವುದೆಂದು ನಂಬುತ್ತಿದ್ದನು. ಬೆಳಕು ಕಾಣದ ಗುಹಾಂತರಾಳಗಳಲ್ಲಿ ಚಿತ್ರಿಸಲು ಇಂತಹ ನಂಬಿಕೆಗಳೇ ಕಾರಣವಾಗುತ್ತವೆ.

ಕಲಾ ಪ್ರೇಮವು ಮಾನವರ ಸಹಜ ಗುಣ. ಚಿತ್ರಕಲೆಯು ನಾಗರಿಕರಿಗೆ ಮಾತ್ರವಲ್ಲ, ಕಾಡು ಜನರಿಗೂ ಪ್ರಿಯವಾಗಿತ್ತು. ಶಿಲಾಯುಗದ ಮಾನವನ ಕಾಲದಿಂದಲೂ ಕಲೆಗೆ ಅಗ್ರ ಸ್ಥಾನವಿತ್ತು. ಆಗ ಬರಹಗಳು ಇರಲಿಲ್ಲ. ಕಲೆಯನ್ನು ಪ್ರಾರಂಭದ ಭಾಷೆ ಎನ್ನಬಹುದು. ಅವರು ಗವಿಗಳಲ್ಲಿ ಬಿಡಿಸಿದ ಚಿತ್ರಗಳು ಸಾವಿರಾರು ವರ್ಷಗಳ ಹಿಂದಿನವುಗಳು ಎಂದು ಹೇಳಬಹುದು.

ಭಾರತದ ಅತ್ಯಂತ ಪ್ರಾಚೀನ ಚಿತ್ರ ಭಂಡಾರವು ಅಜಂತಾ, ಬಾಗ್ ಹಾಗೂ ಬದಾಮಿ ಗುಹೆಗಳಲ್ಲಿ ಇರುವಂತವು ಎಂಬದು ಸಾಮಾನ್ಯ ಅಭಿಪ್ರಾಯ. ಅದಕ್ಕಿಂತ ಹಿಂದಿನ ಕಾಲದ ಕೃತಿಗಳು ದೊರೆಯುವುದಿಲ್ಲ. ಆದರೆ ಆಗ ಚಿತ್ರಕಲಾ ಸಂಪ್ರದಾಯವಿದ್ದಷ್ಟು ಅನೇಕ ಉಲ್ಲೇಖಗಳಿಂದ ನಮಗೆ ತಿಳಿದುಬರುತ್ತದೆ. ಭಾರತದ ಕೆಲವು ಗವಿಗಳಲ್ಲಿ ಇತಿಹಾಸ ಪೂರ್ವದ ಜನರ ಕಲಾ ಚಟುವಟಿಕೆಯ ಕುರುಹುಗಳು ದೊರೆತಿವೆ.

ಹಾಗೆಯೇ ಗೆರೆ-ವೃತ್ತಗಳನ್ನು ಪುನರಾವರ್ತಿಸಿ ಎಳೆದಾಗ ಅವನಿಗೆ ಅಂದ ಕಂಡಿತು. ಸೌಂದರ್ಯ ಪ್ರಜ್ಞೆ ಉಂಟಾಯಿತು. ಅವನೊಡನೆ ಬೇಟೆಯ ಆಯುಧಗಳಿಂದ ಒಂದು ನಮೂನೆಯಲ್ಲಿ ಗೀಚಿದಾಗ ಆನಂದವಾಯಿತು. ಹಾಗೆಯೇ ಬಣ್ಣ/ಬೇಧಗಳ ಅರಿವು ಆಗಿ ಬಣ್ಣ ಬಣ್ಣದ ಮಣ್ಣು ಕಲ್ಲುಗಳನ್ನು ಉಪಯೋಗಿಸ ತೊಡಗಿದನು. ತನ್ನ ವಸತಿಯಲ್ಲಿನ ವಸ್ತುಗಳನ್ನು ಬಣ್ಣದ ಗೆರೆಗಳಿಂದ ಅಂದಗೊಳಿಸಿದನೆಂಬ ವಿವರಣೆಯು ಕಲಾ ಇತಿಹಾಸದಿಂದ ನಮಗೆ ತಿಳಿದು ಬರುತ್ತದೆ. ಕಾಲ ಬದಲಾದಂತೆ ಹೆಚ್ಚಿನ ಬಾಳಿಕೆಯುಳ್ಳ ಕಲೆಗಳಾದ ಚಿತ್ರ, ಶಿಲ್ಪ, ವಾಸ್ತು ರಚನೆಗಳು ಆರಂಭಗೊಂಡಿರುವುದು ಇಂದಿಗೂ ನಮಗೆ ದೊರೆಯುತ್ತಿವೆ. ಪೂರ್ವಕಾಲದ ಮನುಷ್ಯಚಿತ್ರ ಬರೆಯುತ್ತಿದ್ದಂತೆಯೇ ಹಾಡಿರಲೂಬೇಕು, ಕುಣಿದಿರಲೂಬೇಕು, ಒಂದಲ್ಲ ಒಂದು ಬಗೆಯ ಸಾಹಿತ್ಯವನ್ನು ಸೃಷ್ಟಿಸಿರಬೇಕು, ತನ್ನ ಮನಸ್ಸಿನ ಭಾವನೆಗಳಿಗೆ ವ್ಯಕ್ತ ರೂಪವನ್ನು ಕೊಡುವ ಹಂಬಲವು ಮಾನವನಿಗೆ ಅನಾದಿ ಕಾಲದಿಂದಲೇ ಬಂದಂತೆ ಕಾಣುತ್ತದೆ. ಇವುಗಳಲ್ಲಿ ಮುಂದೆ ಲಲಿತಕಲೆಗಳಾಗಿ ಬೆಳಕಿಗೆ ಬಂದಿವೆ.

ಕಲಾನುರಾಗವೆಂಬುದು ಮನುಷ್ಯರ ಜೀವನದ ಹುಟ್ಟು ಗುಣ. ಜನತೆಯು ತನ್ನ ಕಲಾ ಪ್ರೇಮವನ್ನು ಒಂದಲ್ಲೊಂದು ರೀತಿಯಲ್ಲಿ ಹೊರ ತೋರುತ್ತಲೇ ಇರುತ್ತಾರೆ. ಮೂಲ ಪುರುಷ ಎನಿಸಿಕೊಂಡವರು ಕೂಡ ದೇಹದ ಮೇಲೆಲ್ಲಾ ಮಚ್ಚೆಯನ್ನು ಕೆತ್ತಿಸಿಕೊಳ್ಳುವುದರಿಂದಲೂ, ಬೇಟೆಯ ಆಯುಧಗಳನ್ನು ಅಂದವಾಗಿ ರಚಿಸಿಕೊಳ್ಳುವುದರಿಂದಲೂ ಮತ್ತು ವೀರಗಲ್ಲುಗಳನ್ನು ಕೆತ್ತುವುದರ ಮೂಲಕ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಕಲೆಯು ನಾನಾ ರೂಪದಲ್ಲಿ ತಾಂಡವಾಡುತ್ತಿದ್ದರೂ ಇತಿಹಾಸ ತಜ್ಞರ ದೃಷ್ಟಿಪಥದಲ್ಲಿ ಕ್ರಿ.ಶ. ಮುಂಚೆ ಅನೇಕ ಕುರುಹುಗಳು ಕಂಡು

ಬರುವುದಿಲ್ಲ. ಆಧುನಿಕ ಟೀಕಾಚಾರ್ಯರನ್ನು ಕೂಡ ತಲೆದೂಗಿಸುವ ಅಜಂತಾ ಚಿತ್ರಕಲೆಯ ಬೆಳವಣಿಗೆಯು ಒಂದನೇ ಶತಮಾನದಿಂದ ಏಳನೇ ಶತಮಾನದವರೆಗೆ ಆಯಿತೆಂದು ತಿಳಿದುಬರುತ್ತದೆ.

ಅನೇಕ ಗುರುಕುಲ ಪದ್ಧತಿಯಲ್ಲಿ ೬೪ ವಿದ್ಯೆಗಳನ್ನು ಕಲಿಸುವ ಗುರುಕುಲ ಶಿಕ್ಷಣ ಪದ್ಧತಿ ಹುಟ್ಟಿಕೊಂಡಿತ್ತು. ಈ ಶಿಕ್ಷಣದಲ್ಲಿ ದೃಶ್ಯಕಲೆಗಳು ಇದ್ದವು. ನಂತರ ಇವುಗಳ ಧರ್ಮ ಆಧಾರಿತವಾದ ವಿದ್ಯಾರ್ಜನೆಗಾಗಿ ನಿಸರ್ಗ ಶೋಭಿತವಾದ ಅರಣ್ಯಗಳಲ್ಲೇ ವಾಸಿಸುತ್ತ ಅವುಗಳ ಸೊಬಗನ್ನು ಸವಿಯುತ್ತಿದ್ದ ಬೌದ್ಧ ಭಿಕ್ಷುಗಳ ಭಾವಪ್ರದರ್ಶನದ ತತ್ಪರಿಣಾಮವೇ ಈ ಚಿತ್ರಕಲೆಯ ಉತ್ಪತ್ತಿ ಮೂಲವಾಗಿ ಬೆಳಕಿಗೆ ಬಂದಿತು. ಬೌದ್ಧ ಬಿಕ್ಷುಗಳು ಮಳೆಗಾಲದಲ್ಲಿ ಅವರಿಗೆ ಹೊರಗೆ ಹೋಗಲು ಅನುಕೂಲವಾಗದಿದ್ದರಿಂದ ಗುಹೆಗಳಲ್ಲಿಯೇ ಇದ್ದುಕೊಂಡು ಬೌದ್ಧ ಧರ್ಮದ ವಿದ್ಯಾಭ್ಯಾಸದ ಬೇಸರವನ್ನು ನೀಗಿಸಿಕೊಳ್ಳಲು ಗುಹೆಯ ಗೋಡೆಗಳ ಮೇಲೆ ಮಾಳಿಗೆ ಜೊತೆಗೆ ಪೂಜಾಸ್ಥಳಗಳಲ್ಲಿಯೂ ಬುದ್ಧ ಭಗವಾನರ ಜೀವನ ಚಿತ್ರಗಳನ್ನು ಚಿತ್ರಿಸುವುದರ ಮೂಲಕ ಹೊತ್ತು ಕಳೆಯುತ್ತಿದ್ದರು. ಇವುಗಳಿಗಾಗಿ ನಂತರ ಬೌದ್ಧ ಧರ್ಮ ಪ್ರಚಾರಕ್ಕಾಗಿ ಮಾಧ್ಯಮ ಬೆಳೆದು ಬಂದಿರುವುದನ್ನು ಕಲಾ ಇತಿಹಾಸದಿಂದ ತಿಳಿದುಬರುತ್ತದೆ.

ನಂತರ ಮಾನವನಲ್ಲಿ ಧರ್ಮದ ಜೊತೆಗೆ ಅಂತರ್ಗತವಾಗಿದ್ದ ಕಲಾ ಪ್ರೇಮವು ಹೊರಹೊಮ್ಮಿ ವೃದ್ಧಿಯಾಗತೊಡಗಿತು. ಪರಿಣಾಮವಾಗಿ ಅವನ ಗುಹಾಶ್ರಯಗಳ ಗೋಡೆಗಳ ಮೇಲೆ ಅನೇಕ ಚಿತ್ರ ರಚನೆಗಳಾದವು. ಆ ಚಿತ್ರಗಳಿಂದ ನಮಗೆ ಆ ಕಾಲದ ಜನರ ಧಾರ್ಮಿಕ ಜೀವನ ವಿಧಾನವು ತಿಳಿದುಬರುತ್ತದೆ. ಈಗ ಧರ್ಮ ಮತ್ತು ಕಲೆಯು ಆಯಾ ಪ್ರಾಂತ್ಯಕ್ಕೆ ತನ್ನದೆಯಾದ ಕಲಾ ಸಂಸ್ಕೃತಿಯನ್ನು ತಂದುಕೊಡುತ್ತದೆ.

ಭಾರತದಲ್ಲಿ ಅತೀ ಪ್ರಾಚೀನವಾದ ಚಿತ್ರಗಳು ಮಧ್ಯ ಪ್ರದೇಶದ ರಾಯಘಡದಲ್ಲೂ, ವಿಂಧ್ಯ ಪರ್ವತ ಮತ್ತು ಕೈಮೂರ ಶ್ರೇಣಿಯ ಗುಹೆಗಳಲ್ಲಿ ಉತ್ತರ ಪ್ರದೇಶದ ವಿರ್ಜಾರ ಜಿಲ್ಲೆಯಲ್ಲಿ, ರಾಯಘಡ ಬೆಟ್ಟಗಳಲ್ಲಿ ಕಂಡುಬರುತ್ತವೆ. ಹೀಗೆ ಮನಸ್ಸಿನ ಭಾವನೆಗಳು ತುಂಬಿ ಅವುಗಳನ್ನು ತೊಡಗಿಸಿಕೊಳ್ಳಬೇಕೆಂಬ ಕಾತರತೆಯು ವಿಶೇಷವಾದಾಗ ನಿರ್ಮಿಸುವ ರಚನೆಯು ಕಲೆಯೆನಿಸಿಕೊಳ್ಳುತ್ತದೆ. ಈ ಅರ್ಥದಲ್ಲಿ ಆದಿಮಾನವರಲ್ಲೂ ಕಲಾ ಪ್ರತಿಭೆಯು ಇದ್ದು, ಅವರ ಕೆಲವು ರಚನೆಗಳು ಉತ್ತಮವಾಗಿದೆ. ಹೀಗೆ ಸೃಜನಗುಣ, ಸೌಂದರ್ಯ ಪ್ರಜ್ಞೆಗಳು ಕ್ರಮೇಣ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಉಪಯೋಗ ಹೊಂದಿ ಅದು ಕಲೆ ಎಂದಾಯಿತು.

ಯಾವುದೇ ದೇಶದ ಅಥವಾ ನಾಡಿನ ಕಲೆಗಳು ಒಮ್ಮೆಲೇ ಪರಿಪೂರ್ಣತೆಯ ಹಂತವನ್ನು ಮುಟ್ಟಿರುವುದಿಲ್ಲ. ಅವುಗಳು ಪರಿಪಕ್ವತೆಯ ಸ್ಥಿತಿಯನ್ನು ಮುಟ್ಟುವುದಕ್ಕೆ ಶತಮಾನಗಳ ಉದ್ದಕ್ಕೂ ಸಾವಿರಾರು ಕಲಾವಿದರು, ಪ್ರತಿಭಾವಂತರು. ಅವಿರತವಾಗಿ ಮಾಡಿದ ಪ್ರಯತ್ನವು ಇರುತ್ತದೆ. ಹಾಗೆಯೇ ನಾಡಿನ ಪ್ರಜೆಗಳ ಹಾಗೂ ಅವರ ಪ್ರತಿನಿಧಿಗಳಾಗಿದ್ದ ಅರಸರು, ಮಾಂಡಲಿಕರು, ನಾಯಕರು, ಕಲಾಭಿರುಚಿಯ ಕಲಾತಜ್ಞರ ಆಶ್ರಯ, ಪಾಲನೆ, ಪೋಷಣೆ ಮತ್ತು ಪ್ರೋತ್ಸಾಹಗಳು ಇರುತ್ತವೆ. ಸಾಹಿತ್ಯ, ಸಂಗೀತ, ಚಿತ್ರಕಲೆ, ವಾಸ್ತುಶಿಲ್ಪ ಕಲೆ ಮತ್ತು ನೃತ್ಯ ಮೊದಲಾದ ಲಲಿತಕಲೆಗಳು ಅಂದಿನ ಒಟ್ಟು ಜನಾಂಗದ ಪ್ರತಿಬಿಂಬವಾಗಿ ಬೆಳವಣಿಗೆ ಹೊಂದಿವೆ. ಅಲ್ಲದೇ ಆಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನೇ ತಮ್ಮಲ್ಲಿ ಒಡಮೂಡಿಸಿಕೊಂಡಿರುತ್ತವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಅದರಲ್ಲಿ ಭಾರತೀಯ ಚಿತ್ರಕಲೆಯು ಬಹು ಪ್ರಾಚೀನ ಕಾಲದ್ದು ಎಂಬುದಕ್ಕೆ ಸಂಸ್ಕೃತಿ, ಕಾವ್ಯಶಾಸ್ತ್ರ, ಪುರಾಣಗಳಲ್ಲಿ ಪ್ರಮಾಣ ಭೂತ ಕಾವ್ಯಗಳು ದೊರೆಯುತ್ತವೆ. ಪ್ರಾಚೀನ ಭಾರತದಲ್ಲಿ ಚಿತ್ರಕಲೆಯ ಕುರಿತು ಪ್ರಾಸ್ತಾವಿಕವಾಗಿ ಕೆಲವು ಸಲ ಚಿತ್ರಕಲೆಯ ವಿಷಯವಾಗಿಯೇ ಸಾಹಿತ್ಯ ಗ್ರಂಥಗಳು ರಚನೆಗೊಂಡಿದೆ. ಈ ಪರಂಪರೆಯಲ್ಲಿಯೇ ನಿರ್ಮಾಣಗೊಂಡ ಸುಮಾರು ಕ್ರಿ.ಶ. ೨ನೇ ಶತಮಾನದ 'ವಾತ್ಸಾಯನ ಕಾಮಸೂತ್ರ' ಎಂಬ ಪ್ರಸಿದ್ಧಿಯನ್ನು ಪಡೆದ ಗ್ರಂಥವಾಗಿದೆ. ಹೆಸರೇ ಸೂಚಿಸುವ ಹಾಗೆ ಈ ಕೃತಿ ಕೇವಲ ಕಾಮಕಲೆಯ ವರ್ಣನಾ ಕೃತಿಯಲ್ಲ. "ವಿಜ್ಞಾನ-ತಂತ್ರಜ್ಞಾನ ೬೪ ಕಲೆಗಳಂತಹ ವಿವೇಚನೆ ಇದೆ. ಹಾಗೆನೇ ಅಂತ್ಯಂತ ಪ್ರಾಚೀನ ಶಾಸ್ತ್ರ ಗ್ರಂಥವೆಂದರೆ ಚಿತ್ರ ಸೂತ್ರವೆಂದು ತಿಳಿದುಬರುತ್ತದೆ. ಆದರೆ ಅದು ಈಗ ದೊರಕುವುದಿಲ್ಲ. ಇನ್ನೊಂದು ಗ್ರಂಥವು 'ವಿಷ್ಣುಧರ್ಮೋತ್ತರಂ' ಎಂಬುದು ಅದರಲ್ಲಿ ಚಿತ್ರ ಸೂತ್ರಾಧ್ಯಾಯವಿದೆ. ಶಾಸ್ತ್ರಾನುಸಾರ ರಚಿಸಿದ ಚಿತ್ರವು ಧರ್ಮ, ಅರ್ಥ, ಕಾಮ, ಮೋಕ್ಷಾದಿ ಚತುರ್ವಿಧ ಪುರುಷಾರ್ಥಗಳನ್ನೀಯುವುದೆಂದು ಪ್ರಶಂಸೆ ಇದೆ[೩]. ಆ ಕಾಲದಲ್ಲಿ ಜನರು ನಿಷ್ಠೆಯಿಂದ ಚಿತ್ರಕಲೆಯ ಅಭ್ಯಾಸ ಮಾಡುತ್ತಿದ್ದರೆಂದೂ ಹೇಳಿದೆ. ಮತ್ಸ್ಯಪುರಾಣ, ಗರುಡಪುರಾಣ ಮೊದಲಾದವುಗಳಲ್ಲಿ ಶ್ರೀಮಾರನ ಶಿಲ್ಪ ರತ್ನ, ಭರತನಾಟ್ಯಶಾಸ್ತ್ರ, ವಿಶ್ವಕರ್ಮ ಪ್ರಕಾಶ ಮೊದಲಾದ ಗ್ರಂಥಗಳಲ್ಲಿ ವಾಸ್ತುಶಾಸ್ತ್ರದ ವಿಚಾರಗಳನ್ನೊಳಗೊಂಡಿರುವ ಇನ್ನು ಕೆಲವು ಗ್ರಂಥಗಳಲ್ಲಿ ಚಿತ್ರಕಲೆಯ ವಿಚಾರ ಮತ್ತು ಪ್ರಶಂಸೆಗಳಿವೆ. 'ಮಾನಸೊಲ್ಲಾ' ಕೂಡ ಚಿತ್ರಕಲೆಯನ್ನು ಪರಿಚಯಿಸುತ್ತದೆ. ಶಿಲ್ಪ, ವಾಸ್ತು, ಚಿತ್ರ ಈ ಮೂರು ಸಾಮಾನ್ಯವಾಗಿ ಒಂದುಗೂಡಿದ ವಿದ್ಯೆಗಳಾಗಿವೆ. ಇವುಗಳೇ ಈಗ ದೃಶ್ಯಕಲೆಗಳಾಗಿ ಅಧ್ಯಯನ ನಡೆಸುತ್ತಿರುವುದನ್ನು ನಾವುಗಳು ಕಾಣಬಹುದು.

ಭಾರತೀಯ ಚಿತ್ರಕಲೆ ಬಹು ಪ್ರಾಚೀನ ಎಂಬುದಕ್ಕೆ ಸಂಸ್ಕೃತ ಕಾವ್ಯಶಾಸ್ತ್ರ ಪುರಾಣಗಳಲ್ಲಿ ಪ್ರಮಾಣಭೂತ ವಾಕ್ಯಗಳು, ಸಂದರ್ಭಗಳು ದೊರೆಯುತ್ತವೆ[೪]. ರಾಮಾಯಣದ ಕಾಲದಲ್ಲಿ 'ಚಿತ್ರಗೃಹ'

'ಚಿತ್ರಶಾಲೆ'ಗಳಿದ್ದವೆಂದು ಆ ಕಾವ್ಯಗಳಿಂದ ತಿಳಿದುಬರುತ್ತದೆ. ಲಲಿತಕಲೆಯ ಅತಿಮುಖ್ಯ ಭಾಗವಾದ ಚಿತ್ರಕರ್ಮಕ್ಕೆ ಭಾಸನ ನಾಟಕಗಳಲ್ಲಿ ಸುಮಾರು ಕ್ರಿ.ಶ.೨೦೦ ಬಾರಿಬಾರಿಗೂ ಅನ್ವಯವು ದೊರೆಯುತ್ತದದೆ. ರಾಜಾಶ್ರಯವನ್ನು ಪಡೆದ ಚಿತ್ರಗಾರರು ಅರಮನೆಗಳಲ್ಲಿ ಕಲಾಕೋಶಗಳನ್ನಾಗಿ ಮಾಡಿಕೊಂಡಿದ್ದರು ಎನ್ನುವುದಕ್ಕೆ ಅನೇಕ ನಿದರ್ಶನಗಳು ಸಿಗುತ್ತವೆ. ಭಾರತೀಯ ಕಲಾವಿದನಿಗೆ ಊಹೆಗೆ ಪರಿಮಿತಿಯೇ ಇಲ್ಲ, ಹಾಗೆಯೇ ವಿಶ್ವಕಲ್ಯಾಣಕ್ಕಾಗಿ ಸಕಲ ಸುಖಗಳನ್ನು ತೊರೆದು ತಪಗೈದು ಜ್ಞಾನಾರ್ಜನೆಗೈದು ಗೌತಮ ಬುದ್ಧನನ್ನು ಸರಿಯಾಗಿ ರೂಪಿಸಬಲ್ಲವರು ಭಾರತೀಯ ಕಲಾವಿದರು[೫] ಮಾತ್ರ ಎಂಬ ವಿಚಾರಗಳು ಗಮನಾರ್ಹವಾಗಿದೆ.

ರೂಪಭೇದಾ ಪ್ರಮಾಣಾನಿ ಭಾವ ಲಾವಣ್ಯಯೋಜನಮ್ ।
ಸಾದೃಶ್ಯಂ ವರ್ಣಿಕಾಭಂಗಂ ಇತಿ ಚಿತ್ರ ಷಡಂಗಕಮ್ ॥

ಭಾರತೀಯ ಚಿತ್ರಗಾರರು ಈ ಸೂತ್ರಗಳನ್ನು ಅರಿತು ಚಿತ್ರ ರಚಿಸುತ್ತಿದ್ದರೆಂದು ಅಜಂತಾ ಮತ್ತು ಬಾಗ್‌ಗಳನ್ನು ಅವಲೋಕಿಸಿದಾಗ ವ್ಯಕ್ತವಾಗುತ್ತದೆ. ಭಾರತದಲ್ಲಿ ಪುರಾತನ ಕಾಲದಲ್ಲೇ ಚಿತ್ರಕಲೆಯನ್ನು ಪರಿಶೋಧಿಸಿ ಆಳವಾಗಿ ಅಭ್ಯಾಸ ಮಾಡಿದ್ದರು ಎಂಬುದಕ್ಕೆ ಈ ಸೂತ್ರಗಳೆಲ್ಲವೂ ಪ್ರಮಾಣಗಳಾಗಿವೆ ಹೀಗೆ ಕಲೆಗಳು ಪ್ರಾರಂಭವಾದವು. ನಂತರ ಸಾಂಪ್ರದಾಯಿಕ ಕಲಾ ಶಾಲೆಗಳು ಹಲವು ಶೈಲಿಗಳಾಗಿ ಬೆಳೆದು ಬಂದವು. ನಂತರ ದಿನಗಳಲ್ಲಿ ಅದ್ಯೆನಿಕ ಕಲೆ ಆರಂಭಗೊಳ್ಳಲು ಪಾಶ್ಚಾತ್ಯರ ಪ್ರಭಾವದಿಂದ ಭಾರತ ಸಂಪ್ರದಾಯಿಕ ಕಲಾ ಚಟುವಳಿಕೆಗಳು ಬದಲಾದವು.

ಪಾಶ್ಚಾತ್ಯರ ಸಂಪರ್ಕವು ಭಾರತದ ಕಲಾವಿದರ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿತು. ವ್ಯಾಪಾರಸ್ಥರಾಗಿ ಬಂದ ಬ್ರಿಟಿಷರು ಆಳರಸರಾಗಿ ನಿಂತರು. ಅರಸರನ್ನು ಅನುಸರಿಸಿ ನಡೆಯುವುದು ನಮ್ಮ ಗುಣ. ಅದರಿಂದ ಸ್ವದೇಶಿ ಕಲೆಯು ನಶಿಸುತ್ತಾ ಪಾಶ್ಚಾತ್ಯ ಶೈಲಿಯು ಬಳಕೆಯಾಯಿತು. ಭಾರತೀಯ ಕಲೆ ಎಂದರೆ ಮೊರೆ ಓರೆ ಮಾಡುವ ಕಾಲ ಬಂತು. ಈಗ ಮನೆ-ಮನೆಗಳಲ್ಲಿ ಕಾಣಸಿಗುವ ರವಿವರ್ಮನ ಲಕ್ಷ್ಮೀ, ಸರಸ್ವತಿ, ನಾರಾಯಣ, ಶಿವಪಾರ್ವತಿ ಮೊದಲಾದ ದೇವತೆಗಳ ಚಿತ್ರಗಳು ಪಾಶ್ಚಾತ್ಯರ ಚಿತ್ರಕಲಾ ಪ್ರಭಾವದ ರಚನೆಗಳು, ಬಾಹ್ಯ ಸೌಂದರ್ಯಕ್ಕೆ ಮನಸೋಲುವ ನಮ್ಮ ಕಣ್ಣುಗಳಿಗೆ ಪಾಶ್ಚಾತ್ಯರ ಚಿತ್ರಗಳು ಮೆಚ್ಚುಗೆಯಾದವು.

ಪಾಶ್ಚಾತ್ಯ ಸಂಪ್ರದಾಯ ಹೆಚ್ಚತೊಡಗಿತು. ಕಲ್ಕತ್ತಾ, ಮುಂಬೈ, ಮದ್ರಾಸ, ಲಾಹೋರ ಮೊದಲಾದ ಮಹಾನಗರಗಳಲ್ಲಿ ತೆರೆದ ಚಿತ್ರಕಲಾ ಶಾಲೆಗಳಲ್ಲಿ ಪಾಶ್ಚಾತ್ಯ ರೀತಿಯ ಕಲಾ ಶಿಕ್ಷಣವು ಕೊಡಲ್ಪಡುತ್ತಿದ್ದವು.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ನಮ್ಮಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ರಾಷ್ಟ್ರೀಯ ಜಾಗೃತಿ ತೀವ್ರವಾಯಿತು. ವಿದೇಶಿ ಆಡಳಿತ ವಿರುದ್ಧ ಮಾತ್ರವಲ್ಲ. ಸ್ವದೇಶಿ ಸಂಸ್ಕೃತಿಯ ಕುರಿತು ಕೂಡ ಪ್ರಜ್ಞೆಯು ಜಾಗೃತವಾಯಿತು. ಅಷ್ಟರಲ್ಲಿ ಅಜಂತೆಯ ಅದ್ಭುತ ಪ್ರದರ್ಶನ ಅರಿವಾಗಿತ್ತು. ಚಿತ್ರಕಲೆಯಲ್ಲಿ ಆಂದೋಲನ ಉಂಟಾಯಿತು. ಅದರ ಮುಖಂಡರು ಕಲ್ಕತ್ತಾ ಕಲಾ ಶಾಲೆಯ ಮುಖ್ಯಸ್ಥರಾದ ಇ.ಬಿ. ಹ್ಯಾವೆಲ್ಲರು ಮತ್ತು ಡಾ. ಅವನೀಂದ್ರನಾಥ ಟಾಗೋರರು.

ಇ.ಬಿ. ಹ್ಯಾವೆಲ್ಲರು ೧೮೯೬ ರಲ್ಲಿ ಕಲ್ಕತ್ತಾ ಕಲಾಶಾಲೆಗೆ ಮುಖ್ಯಸ್ಥರಾಗಿ ಬಂದರು. ನಮ್ಮ ಚಿತ್ರಕಲೆಯ ಹಿರಮೆಯನ್ನು ಅರಿತವರಾಗಿ "ನಿಮ್ಮಲ್ಲೇ ದಿವ್ಯ ಭವ್ಯ ಪರಂಪರೆ ಇದೆ. ಆ ಮಾರ್ಗದಲ್ಲೇ ಮುಂದಡಿ ಇಡಿರಿ" ಎಂದು ಬೋಧಿಸಿದರು. ಇವರಂತೆಯೇ ಭಾರತದಲ್ಲಿ ಸ್ವದೇಶಿ ಚಿತ್ರಕಲೆಗಳನ್ನು ಉಳಿಸಿಕೊಳ್ಳುವ ಪುನರುಜ್ಜೀವ ಕಲೆ ಆರಂಭವಾಯಿತು ಎಂಬುವುದನ್ನು ಕಲಾ ಇತಿಹಾಸದ ಅಧ್ಯಯನ ತಿಳಿದುಕೊಳ್ಳಬಹುದು.

ಮುಂದಿನ ಪೀಳಿಗೆಗೆ ಈ ಕಲೆ ಕಲಾವಿದರ ಸಾಧನೆಯನ್ನು ಪರಿಚಯಿಸುವ ಸಾಂಸ್ಕೃತಿಯ ಇತಿಹಾಸ ರಚನೆಯ ಸಂದರ್ಭದಲ್ಲಿ ಈ ದಾಖಲೆಗಳು ಮಹತ್ವದ ಆಕರಗಳಾಗುತ್ತವೆ. ವಿದೇಶಿಯ ಕಲಾ ಪರಂಪರೆಯನ್ನು ಗಮನಿಸಿದಾಗ ಅಲ್ಲಿ ಆಕರ ಸಾಮಗ್ರಿಗಳು ಹೇರಳವಾಗಿ ಲಭಿಸುತ್ತವೆ. ಇದಕ್ಕೆ ಕಾರಣ ವಿದೇಶಿಯ ಕಲಾತಜ್ಞರ ದೂರದೃಷ್ಟಿ ಕಲೆಯ ಬಗೆಗಿನ ಕಳಕಳಿ–ಕಾಳಜಿಗಳು ಗಮನಾರ್ಹವಾಗಿವೆ. ನಮ್ಮ ದೇಶದಲ್ಲಿ ಐತಿಹಾಸಿಕವಾಗಿ ಅನೇಕ ಕಲೆಯ ತಾಣಗಳು ಅಮೂಲ್ಯವಾದ ಕಲಾಕೃತಿಗಳು ಉಪಲಬ್ಧವಾದರೂ ಅದರ ಹಿಂದೆ ದುಡಿದ ಕಲಾವಿದರ ಕುರಿತಾದ ಯಾವುದೇ ಸ್ಪಷ್ಟವಾದ ಮಾಹಿತಿಗಳು ಅಷ್ಟೊಂದು ಉಪಲಬ್ಧವಾಗಿಲ್ಲ. ಹೀಗೆ ಹಲವಾರು ಕಾರಣಗಳಿಂದಾಗಿ ಕಲೆ ಕಲಾವಿದರನ್ನು ಕುರಿತಂತೆ ಸಮಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ.

ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿಯೂ ನಾವು ಈ ಕೊರತೆಯನ್ನು ಎದುರಿಸುತ್ತಿದ್ದೇವೆ. ಸಮಕಾಲೀನ ಕಲೆ, ಕಲಾವಿದರ ಕುರಿತಾದ ಅಮೂಲ್ಯವಾದ ಮಾಹಿತಿಯನ್ನು ಚಿಂತನಶೀಲ ವಿಚಾರಗಳನ್ನು ಅವರ ಕುರಿತು ಪ್ರಕಟಿತ ಸಾಹಿತ್ಯ ವಿಮರ್ಶೆಗಳ ಕಲಾಕೃತಿಗಳನ್ನು ಅರ್ಥೈಸುವ ಅದರ ಹಿಂದೆ ದುಡಿದ ಕಲಾವಿದನ ಮನಸ್ಸನ್ನು ಪರಿಭಾವಿಸುವ ಹಲವಾರು ಅಂಶಗಳನ್ನು ತುಂಬಾ ಗಂಭೀರವಾಗಿ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ದಾಖಲಿಸಬೇಕಾದದ್ದು ಇಂದಿನ ಬಹುಮುಖ್ಯ ಕಾರ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯೂ ತಡವಾಗಿಯಾದರೂ ಕಲೆ ಕಲಾವಿದರ ಕುರಿತಾದ ಸಂಶೋಧನಾ ಅಧ್ಯಯನಗಳು ಇಂದು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುತ್ತಿರುವುದು, ಈ ಕ್ಷೇತ್ರದ ಒಂದು ಶುಭ ಲಕ್ಷಣವೆಂದೇ ಹೇಳಬೇಕು. ಪ್ರಸ್ತುತ ಕರ್ನಾಟಕದ ಹಿರಿ ತಲೆಮಾರಿನ ಗಮನಾರ್ಹ ಕಲಾವಿದರಲ್ಲಿ ಒಬ್ಬರಾದ ಎಂ.ಆರ್. ಬಾಳೀಕಾಯಿ ಅವರ ಕುರಿತು ಇಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕರ್ನಾಟಕದ ಕಲಾಕ್ಷೇತ್ರದಲ್ಲಿ ಅನ್ವೇಷಣಾ ಭಾವನೆಯಿಂದ ಮತ್ತು ಹೊಸ ಹೊಸ ಪ್ರಯೋಗಗಳಿಂದ ಕಲಾಕೃತಿಗಳನ್ನು ರಚಿಸುತ್ತ ಬಂದಿದ್ದಾರೆ. ದೇಶ–ವಿದೇಶಗಳ ಕಲಾಸಕ್ತರ ಗಮನ ಸೆಳೆಯುವುದರೊಂದಿಗೆ ಅವರೊಬ್ಬ ಕಲಾಶಿಕ್ಷಣ ತಜ್ಞರಾಗಿ, ಕಲಾವಿಮರ್ಶಕರಾಗಿ, ಕಲಾ ಸಂಘಟಕರಾಗಿ ಬಹುಮುಖ ವ್ಯಕ್ತಿತ್ವವನ್ನು ಪಡೆದ ಹಿರಿಯ ಕಲಾವಿದರಿವರು. ಆದ ಕಲಾವಿದರಾದ ಎಂ. ಆರ್. ಬಾಳೀಕಾಯಿಯವರು ಒಬ್ಬರಾಗಿದ್ದಾರೆ. ಕನ್ನಡ ನಾಡಿನ ಕಲಾಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಠ ಸೇವೆ ಸಲ್ಲಿಸಿದ ಇಂತಹ ಕಲಾವಿದರ ಕುರಿತು ಇಲ್ಲಿಯವರೆಗೆ ಇವರ ಬಗ್ಗೆ ಕಿರು ಪ್ರಬಂಧಗಳು ಸಹಿತ ಇನ್ನು ಪರಿಪೂರ್ಣವಾಗಿಲ್ಲ ಎಂಬುದನ್ನು ಗಮನಿಸಿ, ಕಲಾವಿದರಾದ "ಎಂ.ಆರ್. ಬಾಳೀಕಾಯಿ ಬದುಕು ಮತ್ತು ಕಲಾಕೃತಿಗಳು" ಎಂಬ ವಿಷಯವನ್ನು ಅಧ್ಯಯನಕ್ಕೆ ತೆಗೆದುಕೊಳ್ಳುವುದು. ಪ್ರಸ್ತುತ ಸಂದರ್ಭದಲ್ಲಿ ಅವಶ್ಯಕತೆ ಇದೆ ಆದ್ದರಿಂದ ಮೇಳಿನ ವಿಷಯವನ್ನು ಕುರಿತು ಸಂಶೋಧನೆ ನಡೆಸಲಾಗಿದೆ.

ಉದ್ದೇಶ :

ಡಿ.ವಿ.ಜಿ.ಯವರು ಹೇಳಿದಂತೆ "ಕಲೆಗಳಲ್ಲಿ ಪರಮ ಕಲೆ ಜೀವನದ ಲಲಿತ ಕಲೆ" ಎಂಬ ಮಾತು ನಿಜ ಎನಿಸುತ್ತದೆ. ಚಿತ್ರಕಲೆ ಸಪ್ತಕಲೆಗಳ ದೃಷ್ಟಿಯಿಂದ ಹಿರಿಯ ಸ್ಥಾನ ಪಡೆದದ್ದು ನಿಜ. ಅತ್ತ ಚಿತ್ರಕಾರರ ಕುಂಚದ ಕೈಚಳಕದಲ್ಲಿ ಹತ್ತು ಹಲವಾರು ಬಗೆಯ ವರ್ಣ ರಂಜನೀಯ ಹೊಸ ಹೊಸ ಕಲೆಗಳು ಹೊರಚಿಮ್ಮುತ್ತವೆ. ಕಲೆ ನಿರ್ಮಾಣಕ್ಕೆ ಬೇಕಾಗುವ ಸಮನ್ವಯ ಪ್ರತಿಭೆಯನ್ನು ಕಲಾವಿದ ಉಳಿಸಿಕೊಂಡು ಹೋಗುವ ಮನೋಧರ್ಮವನ್ನು ಬೆಳೆಸಿಕೊಂಡಲ್ಲಿ ಆಗ ತನ್ನಿಂದ ರಚಿತವಾದ ಚಿತ್ರಕಲೆ ಇಂದ್ರ ಸೃಷ್ಟಿಯನ್ನೇ ನಿರ್ಮಿಸಬಲ್ಲದು. ಕಲೆಯಿಂದ ಸೌಂದರ್ಯ ತುಂಬುವ ಶಕ್ತಿ ಕಲಾರಾಧಕನಿಗೆ ಮಾತ್ರ ಸಾಧ್ಯ. ಅಂತೆಯೇ ಬಣ್ಣದ ಬದುಕಿನಲ್ಲಿಯೇ ಬಾಳಿ ಕಲ್ಪನಾ ಶಕ್ತಿಯಿಂದ ಅಳಿದುದ್ದನ್ನು ಸಹ ಜೀವಂತವಾಗಿಸುವ ಪ್ರತಿಭೆಯನ್ನು ಕಾಣಬಹುದು. ಕಲಾವಿದ ಕುಂಚದಿಂದ ಚಿತ್ರಿಸುವಾಗ ಜನರ ಕಣ್ಮನ ಸೆಳೆಯುವ ಈ ಚಿತ್ರಕಲೆಯನ್ನು ತನ್ನ ಅಪ್ರತಿಮ ಪ್ರತಿಭೆಯನ್ನು ಕಾಣಿಕೆಯಾಗಿ ನೀಡುತ್ತಾ ಬಂದಿದ್ದಾನೆ. ಇಂತಹ ಅನೇಕ ಕಲಾತಪಸ್ವಿಗಳು ಚಿತ್ತಾರ ಲೋಕಕ್ಕೆ ರೂವಾರಿಯಾಗಿದ್ದಾರೆ[೬] ಎಂಬುವುದನ್ನು ಗಮನಿಸಿದರೆ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಇತಿಹಾಸದಲ್ಲಿ ಲಲಿತಕಲೆಗಳ ಪಾತ್ರ ತುಂಬಾ

ಮೌಲಿಕವಾದದ್ದು ಈ ನಾಡನ್ನು ಕಟ್ಟುವಲ್ಲಿ ಅನೇಕ ಜನರ ಪರಿಶ್ರಮದ ಬೇವರಿನ ಫಲ. ಅದರಲ್ಲಿ ಕಲಾವಿದನ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಚಿತ್ರ ಶಿಲ್ಪಕಲೆಗಳು ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಅಲ್ಲದೇ ಅವುಗಳು ಸಾವಿರಾರು ವರ್ಷದ ಇತಿಹಾಸವನ್ನು ಇಂದಿಗೂ ಸಾರಿ ಹೇಳುತ್ತವೆ. ಅವುಗಳ ಸಂರಕ್ಷಣೆಯ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಗಳು ನಡೆಯದೆ ಇರುವುದು ದೃಶ್ಯಕಲಾ ಸಂಶೋಧನೆಯಲ್ಲಿ ಕಂಡುಬರುತ್ತದೆ. ನಾಡಿನ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿರುವ ಹರಿಕಾರರಾದ ಕಲಾವಿದರ ಕುರಿತಾದ ಅಧ್ಯಯನಗಳು ಗಮನಾರ್ಹವಾಗಿ ನಡೆಯಲೇಬೇಕೆಂಬ ಉದ್ದೇಶದಿಂದ ಸಂಶೋಧನೆ ಕಾರ್ಯವನ್ನು ನಡೆಸಲಾಗಿದೆ.

ಬಿಸಿಲು ನಾಡೆಂದು ಎನಿಸಿಕೊಂಡ ಉತ್ತರ ಕರ್ನಾಟಕ ಪ್ರದೇಶದಲ್ಲಿ ಹಲವಾರು ಕಲಾವಿದರು ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿ ಇಟ್ಟುಕೊಂಡಿರುವರು. ನಮ್ಮಲ್ಲಿ ಹಿರಿಯ ಕಲಾವಿದರು ಸಾಕಷ್ಟಿದ್ದರೂ ಅವುಗಳ ಕುರಿತು ನಡೆದ ಸಂವಾದ ವಿಮರ್ಶೆಗಳು, ಸಂಶೋಧನೆಗಳು ಮಾತ್ರ ತುಂಬಾ ವಿರಳ. ಬೆರಳೆಣಿಕೆಯಷ್ಟು ಎಂದರೆ ತಪ್ಪಿಲ್ಲ. ಇಂತಹ ಪ್ರಮುಖ ಕಲಾವಿದರ ಅಧ್ಯಯನಗಳು ಇಂದು ನಡೆಯಬೇಕಿವೆ. ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಖ್ಯಾತಿ ಪಡೆದ ಅನೇಕ ಕಲಾಕೃತಿಗಳನ್ನು ನಿರ್ಮಿಸಿ, ತಮ್ಮ ಬಹುಮುಖ ವ್ಯಕ್ತಿತ್ವದಿಂದ ಕರ್ನಾಟಕ ಕಲಾಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆ ನೀಡಿ ಚಿತ್ರಕಲಾ ಕ್ಷೇತ್ರದಲ್ಲಿ ಬಹುದೊಡ್ಡ ಸಾಧನೆಯನ್ನು ಮಾಡಿದಂತಹ ಕಲಾವಿದರಾದ, ಎಂ. ಆರ್. ಬಾಳೀಕಾಯಿ ಅವರ ಜೀವನ, ಸಾಧನೆ, ಕಲಾಕೃತಿಗಳ ಹಾಗೂ ಕಲಾಕ್ಷೇತ್ರಕ್ಕೆ ಕೊಟ್ಟ ಅವರ ವಿಶಿಷ್ಠ ಕೊಡುಗೆಯನ್ನು ಅವಲೋಕಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಯೂ ಕೂಡ ಅನೇಕ ಕಲಾವಿದರಿಗೆ ಜನ್ಮ ನೀಡಿದ ತಾಣವಾಗಿದೆ. ಇತ್ತೀಚಿನ ಆಧುನಿಕ ಯುಗದಲ್ಲಿ ಈ ಜಿಲ್ಲೆಯು ಚಿತ್ರಕಲೆ, ಸಂಗೀತ, ಸಾಹಿತ್ಯ, ಇವುಗಳು ರಾಷ್ಟ್ರಮಟ್ಟದವರೆಗೂ ಬೆಳೆದು ವ್ಯಾಪಿಸಿರುವುದು ತೋರುತ್ತದೆ. ಅದರಲ್ಲಿ ಮುಖ್ಯವಾಗಿ ಡಿ.ವಿ. ಹಾಲಭಾವಿ, ಟಿ.ಪಿ. ಅಕ್ಕಿ, ಎಂ.ಎ. ಚೆಟ್ಟಿ, ವಿಣಜಗಿ, ಡಿ.ಜಿ. ಬಡಿಗೇರ, ದಂಡಾವತಿಮಠ ಇವರನ್ನು ಗುರುತಿಸಬಹುದು. ಇವರ ಸಾಲಿನಲ್ಲಿ ಬದುಕನ್ನೇ ಕಲೆಗಾಗಿ ಮುಡುಪಾಗಿಟ್ಟುಕೊಂಡವರಲ್ಲಿ ಎಂ. ಆರ್. ಬಾಳೀಕಾಯಿ ಅವರು ಒಬ್ಬರು. ಇಂತಹ ಹಿರಿಯ ಕಲಾವಿದರ ಬಗ್ಗೆ ಸಂಶೋಧನೆ ನಡೆಸಿ ಅವರ ಕಲಾ ಬದುಕನ್ನು ಇತರರಿಗೆ ಸ್ಫೂರ್ತಿ ನೀಡಿ ಮಾರ್ಗದರ್ಶನ ನಡೆಸಲು ಅನುಕೂಲವಾಗುವ ಕಲೆಯ ನೆಲೆಯನ್ನು ಸಂಶೋಧನೆ ನಡೆಸುವ ಉದ್ದೇಶವನ್ನು ಇಟ್ಟುಕೊಂಡು ಸಂಶೋಧನೆ ನಡೆಸಲಾಗಿದೆ.

ಕಲಾವಿದನ ಬದುಕು, ಪರಿಸರ, ವ್ಯಾಸಂಗ, ಧ್ಯೇಯ, ಪ್ರೇರಣೆ, ಸಾಧನೆ ಸಿದ್ಧಿ ಮುಂತಾದವುಗಳು ಆತನ ಕಲಾಕೃತಿ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಲ್ಲಿ

ವಿಷತವ ಅಭಿವ್ಯಕ್ತಗೊಂಡಿರುತ್ತದೆ ಎಂಬುದು ಮುಖ್ಯವಾಗುತ್ತದೆ. ಕಲಾವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ, ಆ ವಸ್ತುವಿನ ಬಗ್ಗೆ ತೋರುವ ಪ್ರತಿಕ್ರಿಯೆ ಕಂಡುಬರುತ್ತದೆ. ಯಾವುದೇ ಕಲಾವಿದನ ಧೋರಣೆಯು ಅವನದೇ ಆದ ಭಾವ ಅಭಿವ್ಯಕ್ತಿಯ ವೈಯಕ್ತಿಕತೆಯಲ್ಲಿ ಅವನ ಕಲಾಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕಲಾವಿದರ ಜೀವನ ಚರಿತ್ರೆಯನ್ನು ಕಟ್ಟಿಕೊಡುವ ಉದ್ದೇಶವನ್ನು ಇಟ್ಟುಕೊಂಡು ಮೂಲ ಸಂಶೋಧನೆ ನಡೆಸಲಾಗಿದೆ.

ಎಂ. ಆರ್. ಬಾಳೀಕಾಯಿ ಅವರ ಸಾವಿರಾರು ಕಲಾಕೃತಿಗಳು, ವೈವಿಧ್ಯಮಯವಾಗಿದ್ದು ಅವುಗಳ ವಸ್ತುವಿಷಯ ಮಾಧ್ಯಮದ ಕುರಿತು ರೇಖಾ ವಿನ್ಯಾಸ, ವರ್ಣವಿನ್ಯಾಸಗಳ ಸ್ವರೂಪದ ಕುರಿತು ವಿಶೇಷವಾದ ಅಧ್ಯಯನ ಮಾಡುವ ಉದ್ದೇಶವು ಇಲ್ಲಿದೆ. ಬಾಳೀಕಾಯಿ ಅವರು ಒಬ್ಬ ಕಲಾ ಶಿಕ್ಷಕರಾಗಿ ಒಬ್ಬ ಬಹುಮುಖ ಪ್ರತಿಭೆಯ ವ್ಯಕ್ತಿಯಾಗಿ, ಒಬ್ಬ ಹಿರಿಯ ಕಲಾವಿದರ ಸಾಲಿನಲ್ಲಿದ್ದು ಹಲವಾರು ಕಲಾವಿದರನ್ನು ನೂರಾರು ಕಲಾಶಿಕ್ಷಕರನ್ನು ಈ ನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ. ಅವರ ಈ ಚಟುವಟಿಕೆಯು ನಿತ್ಯ ನಿರಂತರವಾಗಿ ಸಾಗುತ್ತಿದೆ. ಇಂತಹ ಕಲಾಸಾಧಕರನ್ನು ಗುರುತಿಸುವುದು ಕಾರ್ಯವನ್ನು ಸಂಶೋಧನ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಕಲಾ ಕ್ಷೇತ್ರಕ್ಕೆ ಬಾಳೀಕಾಯಿ ಅವರ ಕಲಾ ಸಾಧನೆ ಕಲಾವಿದರಾಗಿ ಅವರ ಸ್ಥಾನಮಾನಗಳನ್ನು ಒಂದೆಡೆಗೆ ದಾಖಲಿಸುವ ಮಹತ್ವದ ಕಾರ್ಯವನ್ನು ಅಧ್ಯಯನದಲ್ಲಿ ಮಾಡಲಾಗಿದೆ. ಬಾಳೀಕಾಯಿ ಅವರ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು ಗುರುತಿಸಿ ಮತ್ತು ಅವರ ಕಲಾಕೃತಿಗಳು ಸಮಾಜದ ಮೇಲೆ ಮೂಡಿಸಿದ ಪರಿಣಾಮದ ಸೂಕ್ಷ್ಮವಾದ ಒಳನೋಟಗಳನ್ನು ಗುರುತಿಸುವ ಅಗತ್ಯವನ್ನು ಪೂರೈಸಲಾಗಿದೆ.

ಈ ಮೇಲಿನ ಉದ್ದೇಶದಂತೆ ಬಾಳೀಕಾಯಿ ಅವರ ಕಲಾಕೃತಿಗಳನ್ನು ವಿಶ್ಲೇಷಿಸಿದಾಗ ನಮ್ಮಲ್ಲಿಯ ಎಷ್ಟೋ ಕಲಾವಿದರು ಒಂದೇ ಶೈಲಿಗೆ ಅಂಟಿಕೊಂಡು ಮರೆ ಹೋಗಿರುತ್ತಾರೆ. ಆದರೆ ಬಾಳೀಕಾಯಿ ಅವರು ಪ್ರತಿದಿನ ಪ್ರತಿನಿತ್ಯ ಕ್ಷಣಕ್ಷಣಕ್ಕೂ ಹೊಸ ಹೊಸತ್ತನ್ನು ಆಲೋಚಿಸುವ ಮೂಲಕ ಅವರ ಕಲಾಕೃತಿಯಲ್ಲಿನ ವಿಭಿನ್ನ ನೋಟಗಳ ಶೈಲಿ ಅಭಿವ್ಯಕ್ತಿಯನ್ನೇ ಪ್ರತ್ಯೇಕವಾಗಿ ಗುರುತಿಸಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಸಂದರ್ಭದಲ್ಲಿ ಅನ್ನುವುದಕ್ಕಿಂತಲೂ ಸ್ವತಂತ್ರ ಪೂರ್ವದಲ್ಲಿ ಸಿಗುವ ಮುಂಚೆ ಜನಿಸಿದ ಇವರ ಜೀವನದ ಸಾಧನೆಗಳು ಅವರ ಕಲಾಕೃತಿಗಳ ವಸ್ತುವಿಷಯ ರಚನಾ, ವಿಧಿವಿಧಾನ, ತಂತ್ರಗಾರಿಕೆ ಶೈಲಿಗಳನ್ನು ಅಧ್ಯಯನ ನಡೆಸಿ ಮುಂದಿನ ಚಿತ್ರಕಲಾವಿದರಿಗೆ ಕಲಾವಮರ್ಶಕರಿಗೆ ಕಲಾ ಇತಿಹಾಸಕಾರರ ಹಾಗೂ ಕಲೆ ಚಿತ್ರಕಲಾ ಸಂಶೋಧಕರಿಗೆ ಕಲಾ ಸಂಸ್ಕೃತಿಯ ಕ್ಷೇತ್ರಕ್ಕೆ ಪರಿಚಯಿಸಿಕೊಡುವುದು ಪ್ರಸ್ತುತ ಅಧ್ಯಯನದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಪಡಿಸಿದ ಅಧ್ಯಯನವು "ಶ್ರೀ ಎಂ.ಆರ್. ಬಾಳೀಕಾಯಿ: ಬದುಕು ಮತ್ತು ಕಲಾಕೃತಿಗಳು ಎಂಬುದಾಗಿದೆ. ಈ ಪ್ರಬಂಧದಲ್ಲಿ ಒಟ್ಟು ಏಳು ಅಧ್ಯಾಗಳನ್ನಾಗಿ ವಿಂಗಡಿಸಿ ಈ ಸಂಪ್ರಬಂಧವನ್ನು ರಚಿಸಲಾಗಿದೆ. ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಕುರಿತಂತೆ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಶ್ರೀ ಎಂ.ಆರ್. ಬಾಳೀಕಾಯಿ ಅವರ ಬಾಲ್ಯದ ದಿನಗಳು ಅವರು ಕಲೆಗೆ ಒಲಿದ ಮನಸ್ಸು ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿಯ ಅನುಭವದ ಕುರಿತು ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಶ್ರೀ ಎಂ.ಆರ್. ಬಾಳೀಕಾಯಿ ಅವರ ವೃತ್ತಿ ಜೀವನವನ್ನು ಹೇಗೆ ನಿರ್ವಹಿಸಿದರು, ತಾವು ಕಂಡ ಕಲಾ ಬದುಕಿನ ಏಳು ಬಿಳುಗಳನ್ನು ಕುರಿತಾಗಿದೆ. ತಾವು ವೃತ್ತಿಯಲ್ಲಿ ಯಾವ ತರಹದ ಅನುಭವಗಳನ್ನು ಅನುಭವಿಸಿದರೆ ಜೊತೆಗೆ ತಾವು ಎಷ್ಟು ಕಲೆಯನ್ನು ಬೆಳೆಸಲು ಸಹಕಾರಿಯಾಗಿದ್ದಾರೆ. ನಿವೃತ್ತಿ ನಂತರ ತಮ್ಮ ಕಲಾ ಜೀವನವನ್ನು ಹೇಗೆ ಮುಂದುವರೆಸಿಕೊಂಡು ಬದುಕು ನಡೆಸಿದಾರೆಂಬುದನ್ನು ಕುರಿತು ಸಂಶೋಧನಾತ್ಮಕ ನೆಲೆಯಲ್ಲಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಶ್ರೀ ಎಂ.ಆರ್. ಬಾಳೀಕಾಯಿ ಅವರು ರಚಿಸಿದ ಕಲಾ ಪ್ರಕಾರಗಳಲ್ಲಿ ಯಾವ ಪ್ರಕಾರದ ಚಿತ್ರಗಳನ್ನು ಬಿಡಿಸಿದ್ದಾರೆ ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಅವುಗಳೆಂದರೆ ರೇಖಾಚಿತ್ರ ಹಾಗೂ ವರ್ಣಚಿತ್ರಗಳು ಇವು ಎಷ್ಟು ಮಾಧ್ಯಮದಲ್ಲಿ ರಚಿಸಿದ್ದಾರೆ. ಹಾಗೂ ರೇಖಾಚಿತ್ರಗಳಲ್ಲಿ ಯಾವ ತರಹದ ಚಿತ್ರಗಳನ್ನು ಬಿಡಿಸಿದ್ದಾರೆ ಎನ್ನುವುದರ ಕುರಿತು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯಲ್ಲಿ ಶ್ರೀ ಎಂ.ಆರ್. ಬಾಳೀಕಾಯಿ ಅವರ ಕಲಾಕೃತಿಗಳ ಸ್ವರೂಪದಲ್ಲಿ ವಸ್ತು ವಿಷಯ, ಪ್ರಭಾವ ಪ್ರೇರಣೆ, ತಂತ್ರಗಾರಿಕೆ ಹಾಗೂ ಶೈಲಿಗಳು ಯಾವ ತರಹದಲ್ಲಿವೆ ಎಂಬುದನ್ನು ದೃಶ್ಯಾತ್ಮಕ ನೆಲೆಯಲ್ಲಿ ವಿಮರ್ಶಾತ್ಮಕವಾಗಿ ಅಭ್ಯಾಸ ನಡೆಸಲಾಗಿದೆ.

ಆರನೆಯ ಆಧ್ಯಾಯದಲ್ಲಿ ಶ್ರೀ ಎಂ.ಆರ್. ಬಾಳೀಕಾಯಿಯವರ ಕಲಾ ಚಟುವಟಿಕೆಗಳಾದ ಕಲಾಕೃತಿಗಳ ಪ್ರದರ್ಶನ, ಭಾಗಿಯಾದ ಶಿಬಿರಗಳು, ಪ್ರಾತ್ಯಾಕ್ಷಿಕೆ, ಪ್ರಶಸ್ತಿ ಪುರಸ್ಕಾರಗಳು ದೊರೆತಿರುವ ಸಂಪೂರ್ಣ ಮಾಹಿತಿ ಹಾಗೂ ಕಲಾಕೃತಿಗಳ ಸಂಗ್ರಹಗೊಂಡ ನೆಲೆಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಮೇಲಿನ ಆರು ಅಧ್ಯಾಯಗಳಲ್ಲಿ ಕಂಡು ಬಂದತಹ ಮೌಖಿಕ ಅಂಶಗಳನ್ನು ಸಂಗ್ರಹಿಸಿ, ವಿಶಿಷ್ಟ ಫಲಿತಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ.

ಪ್ರಸ್ತುತ ಎಂ. ಆರ್. ಬಾಳೀಕಾಯಿ ಅವರ ಕುರಿತು ನಡೆದ ಅಧ್ಯಯನದ ಸಮೀಕ್ಷೆ :

ಕರ್ನಾಟಕದಲ್ಲಿ ಇನ್ನೂ ಚಿತ್ರಕಲೆಯ ಸಂಶೋಧನಾತ್ಮಕ ಅಧ್ಯಯನ ಸಮಗ್ರವಾಗಿ ನಡೆಯಬೇಕಾದುದರ ಹಿನ್ನೆಲೆಯಲ್ಲಿ ಶ್ರೀ ಎಂ. ಆರ್. ಬಾಳೀಕಾಯಿ ಅವರ ಬದುಕು ಮತ್ತು ಕಲಾಕೃತಿಗಳು ಕುರಿತು ಅಧ್ಯಯನ ನಡೆಸುವ ಅಗತ್ಯತೆ ಇದೆ. ಬಾಳೀಕಾಯಿ ಅವರ ಕುರಿತು ನಡೆದ ಅಧ್ಯಯನಗಳು ವಿರಳ ಅಂತವರ ಹಿರಿಯ ತಲೆಮಾರಿನ ಕಲಾ ಬದುಕು ಹಾಗೂ ಕಲಾಕೃತಿಗಳನ್ನು ಕುರಿತು ಅಧ್ಯಯನ ಮಾಡಬೇಕು. ಆದ್ದರಿಂದ ಕೆಲವು ಹಿಂದೆ ನಡೆದ ಅಧ್ಯಯನಗಳು ಬಳಸಿಕೊಳ್ಳುವ ಅಗತ್ಯತೆ ಇರುವುದಿರಂದ ಅವರ ಮಾಹಿತಿಗಳನ್ನು ಪತ್ರಿಕೆಗಳಲ್ಲಿ ಲೇಖನ ರೂಪಗಳಲ್ಲಿ ಕೆಲವು ಆಸಕ್ತರು ಗಮನಿಸಿದಂತಹ ಹಾಗೂ ಬರೆದಂತಹವುಗಳಣ್ನು ಈ ಕೆಳಗೆ ಸಮೀಕ್ಷೆ ರೂಪದಲ್ಲಿ ನೀಡಲಾಗಿದೆ.

೧) ಭರವಸೆಯ ಮುಂಬೆಳಕು ಎಂ. ಆರ್. ಬಾಳೀಕಾಯಿ ಎಂದು ಮಾರ್ಚ ೨೦, ೧೯೯೪ ರಲ್ಲಿ ಸಾಪ್ತಾಹಿಕ ಪ್ರಭದಲ್ಲಿ ಲೇಖನವು ಬಂದಿರುವುದು ಇದನ್ನು ಬ. ಸು. ಕೃಷ್ಣಶೆಟ್ಟಿಯವರು ಬರೆದಿರುತ್ತಾರೆ.

೨) ಮಹಾವೀರ ರಾಯಪ್ಪ ಬಾಳೀಕಾಯಿ–ಪ್ರಶಸ್ತಿ ಪ್ರಧಾನ ಸಮಾರಂಭದ ಲೇಖನವನ್ನು ೧೯೯೫ ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಅವರು ಪ್ರಕಟಿಸಿದ್ದಾರೆ.

೩) "ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಮಹೋತ್ಸವ ಸಮಿತಿ" ಎಂದು ೨೦ ಜನ ಸಮಕಾಲೀನ ಕಲಾವಿದರು ಎಂದು ೧೯೯೭ ರಲ್ಲಿ ಸಂಪಾದಕರು ಪ್ರಕಟಿಸಿದ್ದಾರೆ.

೪) ಅನುಪಮ ಕಲಾ ಶಿಕ್ಷಕ ಎಂ. ಆರ್. ಬಾಳೀಕಾಯಿ ಅಂತ ಹೇಳಿ ವಿಜಯಾನಂದ ಕಾಲವಾದ ಅವರು ೧೯೯೯ ರಲ್ಲ ಸಂಯುಕ್ತ ಕರ್ನಾಟಕಟದಲ್ಲಿ ಸಂಪಾದಕರು ಪ್ರಕಟಿಸಿದ್ದಾರೆ.

೫) ಅಕ್ಟೊಬರ್ ೧೯೯೯ ರಲ್ಲಿ "ತುಷಾರ ಸಿಂಚನ ಸಂಪುಟ"–೨೭, ಸಂಚಿಕೆ–೨ ರಲ್ಲಿ ಧಾರವಾಡ ಚಿತ್ರಕಲಾವಿದ ಎಂ. ಆರ್. ಬಾಳೀಕಾಯಿ ಅವರ ಬಗ್ಗೆ ವಿಜಯನಂದ ಬಿ. ಕಾಲವಾಡ ಅವರು ಬರೆದಿದ್ದಾರೆ.

೬) "ಎಂ. ಆರ್. ಬಾಳೀಕಾಯಿ" ಎಂಬ ಒಂದು ಚಿಕ್ಕ ಪುಸ್ತಕವನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿ ಅವರು ೨೦೦೪ ರಲ್ಲಿ ಸುರೇಶ ಡಿ. ಹಾಲಭಾವಿ ಅವರು ಈ ಒಂದು ಪ್ರಯತ್ನವನ್ನು ಮಾಡಿ ಪುಸ್ತಕ ಚಿಕ್ಕವಾದ್ದರೂ ವಿಷಯ ಆಸರೆ ಮೂಡಿಸುತ್ತದೆ ಮತ್ತು ಸರಳಿಕೃತವಾಗಿದೆ. ಕಲೆಯೇ ಜೀವನ, ಜೀವನವೇ ಕಲೆ ಎಂದು ಬದುಕಿದವರಲ್ಲಿ ಕರ್ನಾಟಕದ ಹಿರಿಯ ಕಲಾವಿದ ಎಂ. ಆರ್. ಬಾಳೀಕಾಯಿ ಅವರ ಜೀವನದ ಎಲ್ಲ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

೭) "ಮಹಾವೀರ ಬಾಳೀಕಾಯಿ ಕಲೆ ಮತ್ತು ಜೀವನ" ಎಂಬ ವಿಷಯವನ್ನು ಸಂಶೋಧಕರಾದ ಎಸ್.ಎಸ್. ಗಡ್ಡಿ ಅವರು ೨೦೦೫ ರಲ್ಲಿ ಆಯ್ಕೆ ಮಾಡಿಕೊಂಡು ಎಂ.ವ್ಹಿ.ಎ. ಸ್ನಾತಕೋತ್ತರ ಪದವಿಎಗೆ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಈ ಒಂದು ಲಘು ಶೋಧ ಪ್ರಬಂಧವನ್ನು ಸಲ್ಲಿಸಿರುತ್ತಾರೆ. ಇದರಲ್ಲಿ ಎಂ.ಆರ್.ಬಿ. ಅವರ ಜೀವನ ಕುರಿತು ಅವರ ಕಲಾಜೀವನ, ವೃತ್ತಿ ಜೀವನ ಮತ್ತು ಕಲಾಕೃತಿಗಳ ಸಂಕ್ಷಿಪ್ತ ವಿವರಣೆಯೊಂದಿಗೆ ಸಿದ್ಧಪಡಿಸಿರುತ್ತಾರೆ.

೮) "ಶ್ರೀಯುತ ಎಂ. ಆರ್. ಬಾಳೀಕಾಯಿಯವರ ಕಲೆ ಮತ್ತು ಜೀವನ" ಎಂಬ ವಿಷಯವನ್ನು ಆಯ್ಕೆ ನಜಮಾ ಅ. ಮಿರ್ಜಾ ಸಂಶೋಧನಾ ವಿದ್ಯಾರ್ಥಿ ಇವರು ಭಾರತೀಯ ಕಲಾಕೇಂದ್ರ ಕಿಲ್ಲೆ, ಧಾರವಾಡ ೨೦೦೬ ರಲ್ಲಿ ೫ನೇ ವರ್ಷದ ವಿಶೇಷ ಪರಿಣಿತ ಚಿತ್ರಕಲೆ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಈ ಕಿರು ಪ್ರಬಂಧವನ್ನು ಸಾದರ ಪಡಿಸಿದ್ದಾರೆ.

೯) "ಎಂ. ಆರ್. ಬಾಳೀಕಾಯಿಯವರ ಇತ್ತೀಚಿನ ಕಲಾಕೃತಿಗಳು" ಒಂದು ಅಧ್ಯಯನ ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧಕರಾದ ಮಹೇಶ ಪ. ಬೇವಿನಗಿಡದ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭ ರಲ್ಲಿ ಬಿ.ವ್ಹಿ.ಎ. ಪದವಿ ಸಲುವಾಗಿ ಈ ಕಿರು ಯೋಜನಾ ವರದಿಯನ್ನು ತುಂಬಾ ಸಂಕ್ಷಿಪ್ತವಾಗಿ ಬರೆದು ಸಾದರಪಡಿಸಿದ್ದಾರೆ.

೧೦) "ಕನ್ನಡ ದೃಶ್ಯಕಲೆಯ ಗಂಭೀರ ನೆಲೆಯ ಉತ್ತರ" ಎಂದು ಕೆ.ವಿ. ಸುಬ್ರಹ್ಮಂ ಅವರು ೨೦೦೭ ರಲ್ಲಿ ಕನ್ನಡ ಪ್ರಭದಲ್ಲಿ ಪ್ರಕಟಿಸಿದ್ದಾರೆ.

೧೧) "ಇದು ಸಾಂಸ್ಕೃತಿಕ ನಗರದ ಹಿರಿಮೆ" ೨೦೦೭ ರಲ್ಲಿ ಪ್ರಜಾವಾಣಿಯಲ್ಲಿ ಸಂಪಾದಕರು ಪ್ರಕಟಗೊಂಡಿದೆ.

೧೨) ಸಾಧನಕೇರಿಯ ಸಾಧಕರ ಸಾಲಿನಲ್ಲಿ ಕಲಾವಿದ ಎಂ. ಆರ್. ಬಾಳೀಕಾಯಿಯವರ ಕುರಿತು ನಾಗೇಂದ್ರ ಯಲ್ಲಾಪೂರ ಇವರು ೨೦೦೭ ರಲ್ಲಿ ತರಂಗದಲ್ಲಿ ಲೇಖನ ಬರೆದಿದ್ದಾರೆ.

೧೩) ಚಿತ್ರ ಶಾಲ್ಮನಾ ಪುಸ್ತಕದಲ್ಲಿ "ಎಂ. ಆರ್. ಬಾಳೀಕಾಯಿ" ಅವರ ಕುರಿತು ಸಂಪಾದಕರು, ಮದು ದೇಸಾಯಿ, ಸುರೇಶ ಕುಲಕರ್ಣಿ ಇವರು ೨೦೦೭ ರಲ್ಲಿ ಪ್ರಕಟಿಸಿದ್ದಾರೆ.

೧೪) "ಸಾಧಕರಿಗೆ ದೊರೆತ ಮನ್ನಣೆ": ೨೦೦೭ ರಲ್ಲಿ ಶ್ರೀಪಾದ ಯರೇಕುಪ್ಪಿ ಅವರು ಪ್ರಜಾವಾಣಿ ಮೆಟ್ರೋ ಇದರಲ್ಲಿ ಪ್ರಕಟಿಸಿದ್ದಾರೆ.

೧೫) ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಕಲಾ ಮಂದಿರದ ಕೊಡುಗೆ ಎಂಬ ವಿಷಯವನ್ನು ಪ್ರಕಾಶ ಬ. ಬಂಡಿ ಅವರು ಆಯ್ಕೆ ಮಾಡಿಕೊಂಡಿದ್ದು ಈ ಕಿರು ಪ್ರಬಂಧದಲ್ಲಿ "ಕಲಾವಿದ ಎಂ. ಆರ್. ಬಾಳೀಕಾಯಿ" ಅವರು ಅಲ್ಲಿಯ ಹಳೆಯ ವಿದ್ಯಾರ್ಥಿಗಳ ಸಾಲಿನಲ್ಲಿ ಇವರ ಕುರಿತು ಬರೆದಿರುತ್ತಾರೆ. ೨೦೦೭ ರಲ್ಲಿ ಎಂ.ವ್ಹಿ.ಎ. ಸ್ನಾತಕೋತ್ತರ ಪದವಿಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿರುತ್ತಾರೆ.

೧೬) ಘಟಪ್ರಭ ಸಿರಿ ೨೦೧೧ ಈ ಸ್ಮರಣ ಸಂಚಿಕೆ ಈ ಪುಸ್ತಕದಲ್ಲಿ "ಚಿತ್ರಕಲಾನಿಧಿ ಮಹಾವೀರ ಬಾಳೀಕಾಯಿ" ಅವರ ಕುರಿತು ಪ್ರೊ. ಶ್ರೀಶೈಲ ಮಠಪತಿ ಅವರು ಹುಕ್ಕೇರಿ ತಾಲೂಕ ೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಕೇಶ್ವರದಲ್ಲಿ ಪ್ರಕಟಗೊಂಡಿದೆ.

೧೭) "ಧಾರವಾಡ ಕೋಲಾಜ್ ಚಿತ್ರಕಲಾವಿದರು" ಎಂಬ ಕಿರುಯೋಜನಾ ವರದಿಯನ್ನು ೨೦೧೧ ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಈ ಕಿರು ಪ್ರಬಂಧವನ್ನು ಸಂಶೋಧಕರಾದ ಸುನೀಲ ಹೆಗಡೆ ಅವರು ಬಿ.ಫ್ಹಿ.ಎ. ಪದವಿ ಸಲುವಾಗಿ ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕೆಲಗೇರಿ ಧಾರವಾಡ ೨೦೧೧ ರಲ್ಲಿ ಸಲ್ಲಿಸಿರುತ್ತಾರೆ.

೧೮) ಚಿತ್ರಕಲಾ ಪ್ರಪಂಚಕ್ಕೆ ಧಾರವಾಡ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಕೊಡುಗೆ ಎಂಬ ವಿಷಯವನ್ನು ಎಂ.ಫ್ಹಿ.ಎ. ಸ್ನಾತಕೋತ್ತರ ಪದವಿಗೆ ಶ್ರೀ ಚನ್ನಪ್ಪ ಬಾರಕೇರ ಅವರು ೨೦೧೧ ರಲ್ಲಿ "ಎಂ. ಆರ್. ಬಾಳೀಕಾಯಿ" ಅವರು ಅಲ್ಲಿನ ನಿವೃತ್ತ ಗುರುಗಳು ಮತ್ತು ಹಿರಿಯ ಕಲಾವಿದರು ಎಂದು ಇದರಲ್ಲಿ ಇವರ ಬಗ್ಗೆ ಬರೆದಿರುತ್ತಾರೆ.

೧೯) ಕಲೆಯಿಂದ ಜ್ಞಾನ ಸಾಮರ್ಥ್ಯ ಹೆಚ್ಚಳ ಎಂಬ ವಿಷಯದಲ್ಲಿ ಬಾಗಲಕೋಟ ೨೦೧೨ ರಲ್ಲಿ ವಿಜಯ ಕರ್ನಾಟಕದಲ್ಲಿ ಪ್ರಕಟವಾಗಿದೆ.

೨೦) "ಎಂ. ಆರ್. ಬಾಳೀಕಾಯಿ" ಅವರಿಗೆ ಆರ್. ಎಂ. ಹಡಪದ ಪ್ರಶಸ್ತಿ ಪ್ರಧಾನ ೨೦೧೨ ಕನ್ನಡ ಪ್ರಭ.

ವ್ಯಾಪ್ತಿ :

ಕರ್ನಾಟಕದಲ್ಲಿ ಅನೇಕ ಹಿರಿಯ ಕಲಾವಿದರಗಳ ಸಾಲಿನಲ್ಲಿ ಶ್ರೀ ಎಂ. ಆರ್. ಬಾಳೀಕಾಯಿ ಅವರನ್ನು ಅಧ್ಯಯನದ ವ್ಯಾಪ್ತಿಗೆ ತಂದುಕೊಂಡು ಜೊತೆಗೆ ಕಲಾವಿದರ ನೆಲೆ-ಹಿನ್ನೆಲೆಯನ್ನು ಅನುಸರಿಸಿ ಅವರ ಕಲಾಕೃತಿ ಹಾಗೂ ಕಲಾ ಜೀವನದ ಪ್ರದೇಶಗಳ ವ್ಯಾಪ್ತಿಯನ್ನು ತೆಗೆದುಕೊಳ್ಳಲಾಗಿದೆ. ಶ್ರೀ ಎಂ. ಆರ್. ಬಾಳೀಕಾಯಿ ಅವರು ಬಹುಮುಖ ಪ್ರತಿಭೆಯನ್ನು ಹೊಂದಿರುವ ಕಲಾವಿದರು ಅವರು ಚಿತ್ರಕಲಾವಿದರಾಗಿ, ಕಲಾ ಸಾಹಿತಿಯಾಗಿ, ಧಾರವಾಡ ಕೋಲಾಜ ಕಲಾವಿದರಾಗಿ ಆಯಾ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಮಾಡಿದ ಸಾಧಕ. ಇಲ್ಲಿ ಪ್ರಸ್ತುತ ಅಧ್ಯಯನವು ಶ್ರೀ ಎಂ. ಆರ್. ಬಾಳೀಕಾಯಿಯವರ ಚಿತ್ರಕಲೆ ಸಾಧನೆ ಕುರಿತು ಕೇಂದ್ರಿಕೃತವಾಗಿದು, ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಅವರ ಇತರೆ ಕಲಾ ಪ್ರಕಾರಗಳನ್ನು ಸ್ಥೂಲವಾಗಿ ಹೇಳಲಾಗಿದೆ.

ಎಂ. ಆರ್. ಬಾಳೀಕಾಯಿ ಅವರು ತಮ್ಮ ಬದುಕಿನುದ್ದಕ್ಕೂ ಸತತವಾಗಿ ರಚಿಸುತ್ತಿರುವ ಕಲಾಕೃತಿಗಳು ಸಾಪಿರಾರು ಅನ್ನುವುದಕ್ಕಿಂತಲೂ ಅವು ವೈವಿಧ್ಯಮಯವಾಗಿದ್ದು, ಅಂತರಾಷ್ಟ್ರೀಯ, ರಾಷ್ಟ್ರ

ಮತ್ತು ರಾಜ್ಯ ಮಟ್ಟದಲ್ಲಿ ಸಂಗ್ರಹಗೊಂಡಿದೆ. ಶ್ರೀ ಎಂ. ಆರ್. ಬಾಳೀಕಾಯಿ ಅವರ ಅನೇಕ ಕಲಾಕೃತಿಗಳು ಮಾರಾಟವಾಗಿಯೋ ಇಲ್ಲವೋ ಕಳೆದುಹೋಗಿವೆಯೋ ಅಥವಾ ಇನ್ನಿತರ ಕಾರಣಗಳಿಂದಾಗಿಯೋ ಅವರ ಎಲ್ಲಾ ಕಲಾಕೃತಿಗಳು ಲಭ್ಯವಾಗಿಲ್ಲ.

ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಲಭ್ಯವಾದ ಕಲಾಕೃತಿಗಳ ಆಳವಾದ ಅಧ್ಯಯನ ಮಾಡುವ ಪ್ರಯತ್ನವಾಗಿದೆ. ೭೪ ವಯೋಮಾನದ ಎಂ. ಆರ್. ಬಾಳೀಕಾಯಿ ಅವರು ತಮ್ಮ ಬದುಕಿನುದ್ದಕ್ಕೂ ಅವಿರತವಾಗಿ ಬಿಡುವಿಲ್ಲದೆ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಈಗಲೂ ಕೂಡ ಅವರು ರಚಿಸುವದರಲ್ಲಿ ನಿತ್ಯ ನಿರಂತರವಾಗಿ ಕಂಡುಬರುವ ಹತ್ತು ಹಲವು ವಿಚಾರಗಳು ಹಾಗೂ ಅವರ ಸಂದರ್ಭದ ವ್ಯಕ್ತಿಗಳನ್ನು ಸಂದರ್ಶನದ ವ್ಯಾಪ್ತಿಗೆ ಬಳಸಿಕೊಳ್ಳುವುದು.

ಅಧ್ಯಯನ ವೈಧಾನಿಕತೆ :

ವ್ಯಕ್ತಿಗತ ಅಧ್ಯಯನದ ವಿಧಾನದಲ್ಲಿ ಕಲಾವಿದ ಶ್ರೀ ಎಂ. ಆರ್. ಬಾಳೀಕಾಯಿ ಅವರ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಇದರಲ್ಲಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧) ಮೂಲ ಆಕಾರ ಸಾಮಗ್ರಿ

೨) ಆನುಷಂಗಿಕ ಆಕರ ಸಾಮಗ್ರಿ

ಈ ಎರಡು ಮೂಲಗಳಿಂದ ವಿಷಯ ಸಂಗ್ರಹ ಮಾಡಿಕೊಳ್ಳಲಾಗಿದೆ

೧) ಮೂಲ ಆಕಾರ ಸಾಮಗ್ರಿ :

ಮೂಲ ಆಕಾರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರ ಕಾರ್ಯ, ಸ್ವತಃ ಕಲಾವಿದರನ್ನು ಪ್ರಶ್ನಾವಳಿಯನ್ನು ಇಟ್ಟುಕೊಂಡು ಸಂದರ್ಶನ ನಡೆಸಲಾಗಿದೆ. ಅವರೊಂದಿಗೆ ಚರ್ಚೆ, ಕಲಾಕೃತಿಗಳ ಛಾಯಾಚಿತ್ರಣ ಮಾಡುವುದು ಅವರ ಜೊತೆಗಾರರ ಮತ್ತು ಸಮಕಾಲೀನ ವ್ಯಕ್ತಿಗಳ ಸಂದರ್ಶನ ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ದಪಡಿಸಿ ವಿವಿಧ ರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ಅ) ಸಂದರ್ಶನ :

ಬೆಳಗಾಂವ ಜಿಲ್ಲೆಯ ಹೆಬ್ಬಾಳದಲ್ಲಿ ಜನಿಸಿದ ಕಲಾವಿದ ಶ್ರೀ ಎಂ. ಆರ್. ಬಾಳೀಕಾಯಿ ಅವರನ್ನು ಸಂದರ್ಶಿಸಿ ಅವರ ಬಾಲ್ಯ ಜೀವನ, ಪ್ರಾಥಮಿಕ ಶಿಕ್ಷಣ ಅಂದಿನ ಸನ್ನಿವೇಶದಲ್ಲಿ ಕಲೆಯ ಕಡೆ ಅವರ ಮನಸ್ಸು ಆಕರ್ಷಿತವಾದ ಬಗ್ಗೆ, ಪ್ರೇರಣೆ ನೀಡಿದ ವ್ಯಕ್ತಿಗಳ, ಹೆಬ್ಬಾಳ ಪರಿಸರ, ಅಲ್ಲಿನ ಆಚರಣೆಗಳು ಇವರ ಮೇಲೆ ಹೇಗೆ ಪ್ರಭಾವ ಬೀರಿದವು ಹಾಗೂ ಅವರ ಕೌಟುಂಬಿಕ ಹಿನ್ನಲೆಯನ್ನು

ಸಂಗ್ರಹಿಸಲಾಗಿದೆ. ನಂತರ ಪ್ರೌಢಶಾಲಾ ವ್ಯಾಸಂಗ, ಕಲಾಶಿಕ್ಷಣ ಮತ್ತು ಆ ಸಂದರ್ಭದಲ್ಲಿ ಕಲಾ ರಚನೆಗಳ ಹಿನ್ನಲೆಯ ಅನುಭವಗಳನ್ನು ಇಲ್ಲಿ ದಾಖಲಿಸಲಾಗಿದೆ. ಅನೇಕ ಪ್ರದರ್ಶನಗಳ ಕುರಿತು ಬಂದ ಟೀಕೆ–ಟಿಪ್ಪಣಿಗಳು, ಸಾರ್ವಜನಿಕ ಪ್ರತಿಕ್ರಿಯೆಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿಕೊಳ್ಳಲಾಗಿ, ಶ್ರೀ ಎಂ. ಆರ್. ಬಾಳೀಕಾಯಿ ಅವರ ಕುರಿತು ಅವರ ಸ್ನೇಹಿತರು, ಆಪ್ತ ವಲಯದ ಒಡನಾಡಿಗಳಿಂದ ಪ್ರಶ್ನಾವಳಿಗಳ ಮೂಲಕ ಅಭಿಪ್ರಾಯ ಸಂಗ್ರಹಿಸಿಕೊಳ್ಳಲಾಗಿದೆ. ಶಿಷ್ಯರ ಬಳಗ, ಹೆಚ್ಚಾಗಿ ಅವರ ಗುರುಗಳ ಮೂಲಕ ಸಂದರ್ಶನ ಮಾಡಿಕೊಂಡು ವಿಷಯಗಳನ್ನು ದಾಖಲಿಸಿಕೊಳ್ಳಲಾಗಿದೆ. ಎಂ. ಆರ್. ಬಾಳೀಕಾಯಿ ಅವರ ಕಲಾಕೃತಿಗಳ ಅಭಿವ್ಯಕ್ತಿಯ ಕುರಿತು ಅವರ ಅನಿಸಿಕೆಗಳನ್ನು ಮತ್ತು ರಚನೆಯ ಹಿನ್ನೆಲೆ, ಪ್ರೇರಣೆ ಪ್ರಭಾವಗಳನ್ನು ಸಂದರ್ಶನದ ಮೂಲಕ ಸಂಗ್ರಹಿಸಿ ಇಲ್ಲಿ ಬಳಸಿಕೊಳ್ಳಲಾಗಿದೆ.

ಬ) ಛಾಯಾಚಿತ್ರಣ :

ಶ್ರೀ ಎಂ. ಆರ್. ಬಾಳೀಕಾಯಿ ಅವರು ತಮ್ಮ ಬದುಕಿನುದ್ದಕ್ಕೂ ಹಲವು ಕಲಾಕೃತಿಗಳನ್ನು ರಚಿಸಿದ್ದಾರೆ, ರಚಿಸುತ್ತಲೆ ಇರುತ್ತಾರೆ. ಅವುಗಳಲ್ಲಿ ದೇಶ–ವಿದೇಶಗಳ ಸಂಗ್ರಹದಲ್ಲಿ ಕೆಲವು ಇದ್ದರೆ ಇನ್ನು ಕೆಲವು ಶ್ರೀ ಎಂ. ಆರ್. ಬಾಳೀಕಾಯಿಯವರ ಸಂಗ್ರಹದಲ್ಲಿವೆ. ವಿದ್ಯಾರ್ಜನೆಯ ಸಂದರ್ಭದಲ್ಲಿ ರಚಿಸಿದ್ದ ಕಲಾಕೃತಿಗಳು ನಂತರ ಶಿಕ್ಷಕ ವೃತಿಯೊಂದಿಗೆ ರಚಿಸಿದ ಕಲಾಕೃತಿಗಳು ಕಡಿಮೆ ಅನ್ನುತ್ತಾರೆ. ಏಕೆಂದರೆ ತುಂಬಾ ಕೆಲಸದ ಒತ್ತಡವಾದ್ದರಿಂದ ಕಲಾಕೃತಿಗಳ ರಚಿಸಲಿಕ್ಕೆ ಅವಕಾಶವಾಗಲಿಲ್ಲ. ಉಳಿದ ಎಲ್ಲವುಗಳನ್ನು ಛಾಯಾಚಿತ್ರಕರಣ ಮಾಡಿಕೊಂಡು ಗಣಕತಂತ್ರದ ಮೂಲಕ ಅವುಗಳನ್ನು ಪುನರ್ ಮುದ್ರಿಸಿ ಮಾಧ್ಯಮವಾರು, ವಿಷಯವಾರು ವಿಂಗಡನೆ ಮಾಡಿಕೊಂಡು ಸಂಶೋಧನ ಅಧ್ಯಾಯಗಳಿಗೆ ಬಳಸಿಕೊಳ್ಳಾಗಿದೆ.

೨) ಆನುಷಂಗಿಕ ಆಕಾರ ಸಾಮಗ್ರಿ :

ಕಲಾ ಸಂಶೋಧನಾ ಮಹಾಪ್ರಬಂಧಗಳು ಪ್ರಕಟಿತ ಮತ್ತು ಅಪ್ರಕಟಿತ ಕಲಾ ಸಾಹಿತ್ಯ ಕೃತಿಗಳು, ನಿಘಂಟಗಳು, ವಿಶ್ವಕೋಶಗಳು, ಪತ್ರಿಕೆಗಳು, ಕಲಾವಿದರ ಕಲಾಕೃತಿಗಳನ್ನುದ್ದೇಶಿಸಿ ಪ್ರಕಟವಾದ ಕಲಾವಿಮರ್ಶೆ ಮತ್ತು ಅಭಿಪಾಯಗಳು, ಲೇಖನಗಳು, ಅಭಿನಂದನಾ ಗ್ರಂಥಗಳು ಸಂಶೋಧನಾ ಲೇಖನಗಳು ಇತ್ಯಾದಿ ರೀತಿಯ ಆನುಷಂಗಿಕ ಆಕರ ಸಾಮಗ್ರಿಗಳನ್ನು ಸಂಶೋಧನ ವಷಿಯಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಟಿಪ್ಪಣಿಗಳು:

೧) ಆನಪದ ಕಲೆ: ಅವಲೋಕನ ಸು.ಡಾ. ಅಂಬಳಿಕೆ ಹಿರಿಯಣ್ಣ, ಡಾ. ಶಾಲಿನಿ ರಘುನಾಥ (ಕ.ಜಾ.ಅ. ಬೆಂಗಳೂರು) ಪುಟ ಸಂ.೮೩

೨) ಚಿತ್ರಕಲೆ ಅ.ನ.ಕೃ. ಪುಟ ಸಂ.೪, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

೩) ಭಾರತೀಯ ಚಿತ್ರಕಲೆ, ಬಿ. ಪಿ. ಬಾಯಿರಿ ಪುಟ ಸಂ.೧೫

೪) ಚಿತ್ರಕಲಾ ಪ್ರಪಂಚ ವಿ.ಆರ್.ತಿಪ್ಪೇಸ್ವಾಮಿ ಪುಟ ಸಂ.೯೦

೫) ಚಿತ್ರಕಲಾ ಪ್ರಪಂಚ ವಿ.ಆರ್.ತಿಪ್ಪೇಸ್ವಾಮಿ ಪುಟ ಸಂ.೧೨೨

೬) ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ, ಮಲ್ಲಿಕಾರ್ಜುನ ಬಾಗೋಡಿ ಪುಟ ಸಂ–೩

೭) ಕಲಾವಿದ ಎಂ. ಎ. ಚೆಟ್ಟಿ, ಜೀವನ, ಕಲಾಕೃತಿಗಳು, ಲಕ್ಷ್ಮೀದೇವಿ ಗವಾಯಿ, ಅ.ಪ್ರ.ಮ.ಪ್ರ. ಕ.ವಿ.ವಿ. ಹಂಪಿ ಪುಟ ಸಂ.೧೬೪

ಅಧ್ಯಾಯ : ಎರಡು


ಶ್ರೀ ಎಂ. ಆರ್. ಬಾಳೀಕಾಯಿ ಅವರ ಜೀವನ ಹಾಗೂ ಶಿಕ್ಷಣ

ಕಲಾವಿದ

ಶ್ರೀ ಎಂ. ಆರ್. ಬಾಳೀಕಾಯಿಯವರ ಕುಟುಂಬ



ಶ್ರೀ ಎಂ. ಆರ್. ಬಾಳೀಕಾಯಿಯವರ ಕುಟುಂಬದ ನಕ್ಷೆ



ಅಧ್ಯಾಯ-೨

ಶ್ರೀ ಎಂ. ಆರ್. ಬಾಳೀಕಾಯಿ ಅವರ ಜೀವನ ಹಾಗೂ ಶಿಕ್ಷಣ

"ಕಲೆಯು ಸಂಸ್ಕೃತಿಯ ಅಂಗ. ಆದರೆ ಸಂಸ್ಕೃತಿಯು ಅದರ ಆತ್ಮ" ಎಂಬುದು ತಜ್ಞರ ಮಾತು, ಜನತೆಗೆ ಕಲೆಯ ಜ್ಞಾನ, ಅದರಲ್ಲಿ ಆಸಕ್ತಿ ಅಭಿಮಾನಗಳು ಅಗತ್ಯ. ಈಗ ಕಲಾ ಪ್ರದರ್ಶನ ಹಾಗೂ ಕಲಾ ಸಂಗ್ರಹಾಲಯಗಳ ಬಗ್ಗೆ ಜನರಲ್ಲಿ ಆಸಕ್ತಿ ಹೆಚ್ಚುತ್ತಿದೆ ಎಂಬುದು ಸಂತೋಷದ ವಿಷಯವಾಗಿದೆ. ಅದರೊಡನೆ ಕಲೆಗಾರರ ಬದುಕಿನ ಅರಿವು ಕೊಡುತ್ತಾರೆ. ಕಲೆಗಾರರು ರಾಷ್ಟ್ರಗಳ ಸಂಸ್ಕೃತಿಗಳನ್ನು ರೂಪಿಸುವ ರೂವಾರಿಗಳು ಎಂದು ಹೇಳಬಹುದು.

ಒಂದು ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ, ಕಲೆಗಳು ಅದರ ಆತ್ಮ ಚರಿತ್ರೆ ಎನಿಸುತ್ತವೆ. ವ್ಯಾಪಕವಾದ ಅರ್ಥದಲ್ಲಿ "ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆ, ಜೀವನ ಮೌಲ್ಯ ಇತ್ಯಾದಿಗಳ ವಿವರಣೆಯೇ"[೧] ಇತಿಹಾಸವೆನಿಸುತ್ತದೆ. ಇ ಇತಿಹಾಸದ ಒಳ ಚೌಕಟ್ಟಿನಲ್ಲಿ ಬೆಳೆದು ಬಂದ ಕಲೆಗಳು, ಅದಕ್ಕೆ ಸುಂದರ ಸಂಸ್ಕಾರವನ್ನು ನೀಡುತ್ತವೆ. ನಿತ್ಯದ ಬದುಕು ಹಸನಾಗಿ ನಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಬಂದಿಸಿದೆಯೇ ಅದು ಧರ್ಮ, ಈ ಧರ್ಮ ಪ್ರಜ್ಞೆಯ ಆಚಾರ-ವಿಚಾರಗಳು ನೂರಾರು ಸಂಪಾದನೆಗಳಿಗೆ, ನಂಬಿಕೆಗಳಿಗೆ, ಮೌಲ್ಯಗಳಿಗೆ ಕಾರಣವಾಗಿ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳ ಹುಟ್ಟಿಗೆ ಕಾರಣವಾಗಿವೆ ಎನ್ನಬೇಕು. ಇದರ ಜೊತೆಗೆ ಕಲಾವಿದನು ಧರ್ಮ ಚೌಕಟ್ಟಿನಲ್ಲಿ ಬೆಳೆಯುವುದು ಸಹಜ. ಕಲೆಗಳ ಬೆಳವಣಿಗೆಯ ವಿಕಾಸಗಳೇ ಸಂಸ್ಕೃತಿಯ ವೈಭವವನ್ನು ಸೂಚಿಸುತ್ತವೆ. ಇಂತಹ ಕಲೆಗಳು ಕುರಿತು ಅನೇಕ

ಸಂಶೋಧನಾತ್ಮಕ ಬರಹಗಳು, ಸಂಶೋಧನೆಗಳು ನಡೆಯುತ್ತಿರುವುದು ಒಂದು ಪ್ರಗತಿಯ ಕಾರ್ಯ ಎನ್ನಬಹುದು.

ಕಲೆ ಸುಸಂಸ್ಕೃತ ಜೀನವದ ಪ್ರತಿಬಿಂಬ, ನಾಗರೀಕ ಜೀವನದ ಪ್ರತಿನಿಧಿ. ಒಂದು ದೇಶದ ಕಲೆಯು ಆ ದೇಶದ ಸಂಸ್ಕೃತಿಯ ಪಡಿನೆರಳಾಗಿರುತ್ತದೆ. ಸಂಸ್ಕೃತಿಯ ಅಂಶವಾಗಿರುವ ಈ ಅಭಿವ್ಯಕ್ತಿಯನ್ನು ಸಮೃದ್ಧಗೊಳಿಸುವಲ್ಲಿ ಕಲಾಶಿಕ್ಷಣವು ಪ್ರಮುಖ ಪಾತ್ರವಹಿಸುತ್ತದೆ. ಜಾಗತಿಕ ಇತಿಹಾಸ ಪುಟಗಳನ್ನು ತಿರುವಿದಾಗ ಭಾರತೀಯ ಸಂಸ್ಕೃತಿಯ ಹಿರಿಮೆ ಗಿರಿಮೆಗಳ ಅರಿವಾಗದಿರದು. ಜಗತ್ತಿನ ಇನ್ನಿತರ ಸಂಸ್ಕೃತಿಗಳು ಮೊಗ್ಗು-ಹೀಚು ಕಾಯಿಗಳು ಆಗಿರುವಾಗಲೆ ಭಾರತೀಯ ಸಂಸ್ಕೃತಿಯು ಹೂವಾಗಿ ಅರಳಿ ತನ್ನ ಸೌರಭವನ್ನು ವಿಶ್ವದಾದ್ಯಂತ ಹರಡಿ ತನ್ನ ಸಂಸ್ಕೃತಿಯ ಮಧುರ ಫಲಗಳನ್ನು ಜಗತ್ ಜನತೆಗೆ ಇತ್ತು ತಣಿಸುತ್ತಿತ್ತು. ಇಷ್ಟೊಂದು ಪುರಾತನವಾದ ಈ ಸಂಸ್ಕೃತಿಯ ಅಂತಃ ಸತ್ವ ಅದರ ಗುಣ ಗ್ರಾಹ್ಯತೆ ಈ ನಾಡಿನ ಮಣ್ಣಿನಲ್ಲಿ ಇಂದಿಗೂ ಜೀವಂತವಾಗಿರುವುದನ್ನು ನಾವು ಕಾಣುತ್ತೇವೆ[೩]. ಪ್ರಾಚೀನ ಕಾಲದಲ್ಲಿ ಇಷ್ಟೊಂದು ಉನ್ನತ ಸಂಸ್ಕೃತ, ಸಾಹಿತ್ಯ ಕಲೆಗಳನ್ನೊಳಗೊಂಡ ಭಾರತವು ಎಲ್ಲಾ ರಂಗಗಳಲ್ಲಿಯೂ ತನ್ನ ಹಿರಿಮೆಯನ್ನು ಮೆರೆದಿದೆ. "ವೇದ ಕಾಲದಿಂದ ಭಾರತೀಯ ಸಂಸ್ಕೃತಿಯ ಬೆಳವಣಿಗೆಯನ್ನು ಅವಲೋಕಿಸಿದಾಗ ವ್ಯಕ್ತಿಯ ಹುಟ್ಟು ಸಾವುಗಳವರೆಗೆ ನಿರಂತರವಾಗಿ ಕಲೆಗಳು ಬೆಳೆದು ಬಂದಿರುವುದು, ಬೆಳೆಯುತ್ತಿರುವುದು ಒಂದು ವೈಶಿಷ್ಟ್ಯಪೂರ್ಣ ಸಾಧನವಾಗಿದೆ"[೪]. ಇಂತಹವುಗಳನ್ನು ಕುರಿತು ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನ ಮಾಡುವುದು ಇಂದಿನ ಯುವ ಸಂಶೋಧಕರ ಕರ್ತವ್ಯವಾಗಿದೆ. "ಕಲಾವಿದನ ಮನಸ್ಸಿನ ನೆರಳೆ ಕಲೆ, ಕಲಾವಿದನ ಅಂತರಾತ್ಮದ ಪ್ರತಿಭೆಯೇ ಕಲೆ. ಕಲಾವಿದನು ಎಷ್ಟು ಸುಸಂಸ್ಕೃತನಾಗಿ, ವಿಚಾರಪರವಾಗಿ, ಧ್ಯಾನ ಮಗ್ನನಾಗಿದ್ದರೆ ಕಲೆಯು ಅಷ್ಟೇ ಸುಂದರವೂ ಶಕ್ತಿಯುತವೂ ಪ್ರಚೋದಕವು ಆಗಿರುತ್ತದೆ[೫]."

ಭಾರತೀಯ ಚಿತ್ರಕಲೆಯು ತನ್ನ ಕಣ್ಣಿಗೆ ಕಾಣುವ ವಿಷಯಗಳನ್ನು ಚಿತ್ರಿಸುವದರ ಕಡೆಗೆ ಮಾತ್ರವೇ ಲಕ್ಷಗೊಡಲಿಲ್ಲ. ಮನಸ್ಸಿಗೆ ತೋರುವ ವಿಚಾರಗಳನ್ನು ಚಿತ್ರಿಸುವುದರ ಕಡೆಗೂ ಲಕ್ಷ್ಯಗೊಟ್ಟಿತು. ಸತ್ಯ ಸೌಂದರ್ಯಗಳಿಗೆ ರೂಪಕೊಡುವುದೇ ಕಲೆ. ಗಗನದಲ್ಲಿ ಹಾರಿಹೋಗುವ ನೀಲಮೇಘಗಳನ್ನು ಕುಶಲ ಕುಂಚಿಗನು ಚಿತ್ರಿಸಿ ಸ್ಥಿರ ರೂಪವನ್ನು ಕೊಡುವಂತೆ ಅವ್ಯಕ್ತ ವಿಷಯಗಳ ಸುವರ್ಣ ಸರೋವರದಂತಿರುವ ಸತ್ಯ ಸೌಂದರ್ಯಗಳನ್ನು ಬಗೆಬಗೆಯ ಅಚ್ಚಿನಲ್ಲಿ ಹೊಯ್ದು ಬಗೆ-ಬಗೆಯ ಮೂರ್ತಿಗಳನ್ನು ಮಾಡಿಕೊಡುವುದೇ ಕಲೆ. ಗ್ರೀಕ್ ಮತ್ತು ಭಾರತೀಯ ಕಲೆಗಳ ವಿಚಾರ ಪ್ರಸ್ತಾಪಿಸುತ್ತ ಸ್ವಾಮಿ ವಿವೇಕಾನಂದರು ಗ್ರೀಕ್ ಕಲೆಯ ರಹಸ್ಯವೆಂದರೆ ನಿಸರ್ಗಾನುಕರಣ, ಭಾರತೀಯ ಕಲೆಯ ರಸ್ಯವೆಂದರೆ ಆದರ್ಶಗಳ ಪ್ರದರ್ಶನ, ನಿಜವಾದ ಕಲೆಯನ್ನು ಒಂದು ಕಮಲ ಪುಷ್ಪಕ್ಕೆ

ಹೋಲಿಸಬಹುದು. ಭೂಮಿಯಲ್ಲಿ ಜನಿಸಿ, ಅಲ್ಲೇ ಬೆಳೆದು ಪುಷ್ಪ ಹೊಂದಿದರೂ ಅದು ಭೂಮಿಯ ಮೇಲಿರುವುದಿಲ್ಲ. ಹಾಗೆಯೇ ಕಲೆಯು ನಿಸರ್ಗದ ಸಂಪರ್ಕದಲ್ಲಿರಬೇಕು ಎಂಬ ಮಾತನ್ನು ವಿವೇಚಿಸುವುದು ಅಗತ್ಯವಿದೆ.

ಪ್ರತಿಯೊಂದು ಕ್ಷಣವೂ ಮಾನವನ ಪ್ರಗತಿ ಜೀವನದಲ್ಲಿ ಅತ್ಯಮೂಲ್ಯವಾದದು ಪ್ರತಿಯೊಬ್ಬ ವ್ಯಕ್ತಿಯ ಕೃತಿಗಳು ಅವನ ಏಳು-ಬೀಳುಗಳನ್ನು ಕುರಿತು ಸೂಚಿಸುತ್ತವೆ. ಜೀವನದಲ್ಲಿ ಮಾನವನು ಬೆಳೆಯುತ್ತಾ ಬೆಳೆಯುತ್ತಾ ತನ್ನ ಮುಂದಿರುವ ತೆರೆಗಳನ್ನು ನಿವಾರಿಸುತ್ತಾ ಹಾರಾಡಲು ವಿಶಾಲವಾದ ಆಗಸವನ್ನು ಏರ್ಪಡಿಸಿಕೊಳ್ಳಬೇಕು. ಹಾಗೆ ಕಲೆಗಾರರ ಬದುಕು ವೈವಿಧ್ಯಮಯ. "ಕೃತಿ ರಚಿಸಿದಾತ ಭಿಕ್ಷಾದಿಪತಿಯಾಗಿದ್ದ ಒಂದು ಹಿಡಿ ಕೂಳಿಗಾಗಿ ಕೃತಿಯನ್ನು ಕೊಟ್ಟುಬಿಟ್ಟ. ಅದನ್ನು ಪಡೆದುಕೊಂಡು ವಿಕ್ರಯಿಸಿದಾತ ಲಕ್ಷಾಧಿಪತಿಯಾದ. ಒಂದು ಕಾಲದಲ್ಲಿ ಒಂದು ಕೃತಿಯು ಕಲೆಯೇ ಅಲ್ಲ. ಅದು ಒಂದು ಅಸಂಬದ್ಧ ಎಂದು ತಿರಸ್ಕೃತ. ಮತ್ತೊಂದು ಕಾಲದಲ್ಲಿ ಅದು ಒಂದು ಶ್ರೇಷ್ಠ ಕೃತಿಯೆಂದು ಪುರಸ್ಕೃತ. ಅದಕ್ಕೆ ವಜ್ರಕ್ಕಿಂತಲೂ ಅಧಿಕ ಬೆಲೆ... ಮಗನು ಅಧಿಕಾರಿಯಾಗಬೇಕು, ಧನಿಕನಾಗಬೇಕು ಅದಕ್ಕೆ ತಕ್ಕ ಶಿಕ್ಷಣ ಪಡೆಯಲೆಂದು ಹೆತ್ತವರ ಒತ್ತಾಯ. ಆ ಬಗ್ಗೆ ಪುತ್ರನಿಗೆ ಹಿಂಸೆಕೊಟ್ಟರು. ಆದರೆ ಕಲೋಪಾಸನೆಯು ಮಗನ ಆದರ್ಶವಾಗಿತ್ತು. ಆದರ್ಶವಾಗಿ ಬಾಳಿದ... ಎಂಭತ್ತು ವರುಷ ಕಾಲ ಮಹಾತ್ಸಾಧನೆ ಮಾಡಿ ಅಮರ ಕೃತಿಗಳನ್ನು ರಚಿಸಿದ್ದ ಆದಾಗ್ಯೂ ಅಂತ್ಯಕಾಲದಲ್ಲಿ ತಾನು ಕಲೆಯಲ್ಲಿ ಸಿದ್ದಿ ಪಡೆದುದ್ದು ಸಾಲದು ಎಂದು ದಿವ್ಯ ತೃಪ್ತಿಯಿಂದ ಶೋಕಿಸಿದ... ಬದುಕಿದ್ದಾಗ ಅವಮಾನಿತ, ಸತ್ತ ಬಳಿಕ ಬಹುಮಾನಿತ. ಹೀಗೆ ಜಗತ್ತಿನಾದ್ಯಂತ ಕಲೆಗಾರರ ಬಾಳು ನೋವು, ನಲಿವುಗಳಿಂದ ತುಂಬಿ ರಸಭರಿತವಾಗಿರುವ ಮೈಕಲ್ ಎಂಜಿಲೋ ಅವರ ಕೌಟುಂಬಿಕ ಜೀವನಕ್ಕೆ ಕಾಲಿಡದೇ ಕಲಾಕೃತಿಗಳೆ ನನ್ನ ಸಂಸಾರವೆಂದು ಬದಕಿದವರು. ಹಾಗೇನೇ ಶ್ರೀ ಎಂ. ಆರ್. ಬಾಳೀಕಾಯಿ ಅವರು ಕೌಟುಂಬಿಕ ಜೀವನಕ್ಕೆ ಕಾಲಿಟ್ಟರು ಸಹಿತ ಕಲಾಕೃತಿಗಳೇ ನನ್ನ ಜೀವ ಎಂದು ಬದುಕುತ್ತಿದ್ದಾರೆ ಎಂಬುವುದು ಸಂಶೋಧನಾ ಅಧ್ಯಯನ ನಡೆಸಿರುವುದರಿಂದ ತಿಳಿದುಬರುತ್ತದ.

"ಕಲಾವಿದರಾದ ಶ್ರೀ ಎಂ. ಆರ್. ಬಾಳೀಕಾಯಿ ಅವರ ಜೀವನದ ಕುರಿತು ಕೇಳಿದಾಗ ಮೊದಲು ಕಲೆ ಎಂದರೆ ಹೇಗಿರಬೇಕು ಎನ್ನುವುದನ್ನು ಕುರಿತು ಹೇಳಿದರು. ಅವರಿಂದ ತಿಳಿದುಕೊಂಡಿದ್ದು ಕಲಾ ಜಗತ್ತು ಹೇಗೆ ಅಂದರೆ ಹಳೆಯ ಜನಪದ ಶೈಲಿಯಾಗಲಿ ಅಥವಾ ಪರಂಪರೆಯಾಗಿ ಅವುಗಳನ್ನೆಲ್ಲ ರೂಢಿಸಿಕೊಂಡು ಉಳಿಸಿಕೊಳ್ಳುವುದರ ಜೊತೆಗೆ ಹಳೆಯ ಭಾವ, ರೂಪ ಹೊಸತು ಉದಾ: ಈಗ ರೇಣುಕಾ ಎಲ್ಲಮ್ಮ ಹೆಣ್ಣು ದೇವತೆ ಆಕೆಯ ಹೆಸರು ಮೇಲೆ ಬೇರೆ ಬೇರೆ ರೀತಿಯಾಗಿ ಪವಾಡಗಳು ಆಗುತ್ತಿರುತ್ತವೆ[೬]". ಹಾಗೇ ಬೇರೆ ಬೇರೆ ಅವಿಷ್ಕಾರಗಳನ್ನು ಇಟ್ಟುಕೊಂಡು ಇದರಲ್ಲಿ ಹೊಸತನವನ್ನು ನಾವು

ಹೇಗೆ ಕಂಡುಕೊಳ್ಳಬೇಕು ಎನ್ನುವ ಹಾಗೆ ಕಲಾವಿದ ಪರಿಜ್ಞಾನ ಬಂದ ಮೇಲೆ ಚಿಂತನಶೀಲ ನಡೆಸುವುದು ಬಹಳ ಮುಖ್ಯ, ಚಿಂತನಶೀಲ ಇದ್ದರೆ ಹೊಸ ಆಯಾಮಗಳು ಹುಟ್ಟಿಕೊಳ್ಳುತ್ತವೆ. ವಿಜ್ಞಾನವು ಒಂದು ಕ್ರಮಬದ್ಧಧವಾಗಿ ಇರುವಂತೆ ಇದು ಬದಲಾಗುವುದಿಲ್ಲ. ಸಾಮಾಜಿಕ ಪರಿವರ್ತನೆಗಳು ನಮ್ಮ ಇರುವಿಕೆಗೆ ಬೇಕಾದವು ಒಂದು ಮನೆ ಕಟ್ಟುತ್ತೇವೆ. ಆದರೆ ಮೊದಲು ಗುಹೆಗಳಲ್ಲಿ ಗುಡಿ-ಗುಂಡಾರಗಳಲ್ಲಿ ಅಥವಾ ಹಳ್ಳಿಗಳಲ್ಲಿಯ ವಾತಾವರಣದಲ್ಲಿ ಇದ್ದು, ಮುಂದೆ ಪರಿವರ್ತನೆಯಾದ ಆದಿ ಮಾನವನಿಂದ ಗವಿಮಾನವನವರೆಗೆ ಮನುಷ್ಯ ಹೇಗೆ ಸಾಮಾಜಿಕ ಪರಿಸರದ ಜೊತೆಗೆ ಇರುವ ಆಯಾ ಭಾವನೆಗಳನ್ನು ವ್ಯಕ್ತ ಪಡಿಸುವುದಕ್ಕೆ ಬಹಳ ಪ್ರಯತ್ನ ಮಾಡಿದ್ದಾನೆ. ಹೇಗೆ ವಿಜ್ಞಾನವೂ ಬೆಳೆಯಿತೋ ಹಾಗೆಯೇ ಸಾಹಿತ್ಯವು ಬೆಳೆಯಿತು. ಈಗ ನವಯುಗದ ಸಾಹಿತ್ಯ, ಹಳೆಗನ್ನಡ, ಸಂಸ್ಕೃತ ಹೇಗೆ ಭಾಷೆಗಳಲ್ಲಿ ಬದಲಾವಣೆ ಆಗತೊಡಗಿದವು. ಅದು ವೈಜ್ಞಾನಿಕವಾಗಿ ಪರಿವರ್ತನೆಯಾಗುತ್ತಿದೆ. ಆ ಸಂದರ್ಭದಲ್ಲಿ ಕಲಾವಿದನ ಹುಟ್ಟಿನಿಂದ ತನ್ನ ಪರಿಸರದ ಪ್ರಭಾವವನ್ನು ತೆಗೆದುಕೊಂಡು ಸಮಾಜಕ್ಕೆ ಅದರ ಅನುಭವವನ್ನೇ ಅಂಟಿಕೊಳ್ಳುತ್ತಾನೆ ಎನ್ನುವ ದೃಷ್ಟಿಯಿಂದ ಮುಂದೆ ಸಮಾಜ ಬಿಟ್ಟು ಕಲಾವಿದನಿಲ್ಲ. ಸಮಾಜ ಮತ್ತು ಕಲಾವಿದ ಎರಡು ಮುಖದ ಒಂದು ನಾಣ್ಯವಿದ್ದಂತೆ. ಕಲಾವಿದ ಎನ್ನುವುದು ವಿಶಿಷ್ಠವೆನಿಸಿದೆ. ಹೀಗೆ ಕಲಾವಿದ ಬೆಳವಣಿಗೆ ಆಗುತ್ತಾ ಒಳ್ಳೆಯ ಕೆಟ್ಟವುಗಳನ್ನು ತೆಗೆದುಕೊಂಡು ಅವುಗಳಿಗೆ ಹೊಸ ರೂಪವನ್ನು ಭಾವಾಭಿವ್ಯಕ್ತಿಗಳು ಕೊಟ್ಟು ಕಲಾಕೃತಿಗಳನ್ನು ಮಾಡುತ್ತಾನೆ. ಸಾಮಾಜಿಕ ಪರಿವರ್ತನೆಗಳ ಚಿಂತನೆ ಅವರಿಗಿದೆ. ಅನ್ಯಾಯಗಳು ಭ್ರಷ್ಟಾಚಾರಗಳು ಆಗುತ್ತಿರುವುದನ್ನು ಗಮನಿಸಿ ಕಲಾವಿದ ಅವುಗಳನ್ನೇ ತನ್ನ ಭಾವನೆಗಳ ಮುಖಾಂತರ ಕಲಾಕೃತಿಗಳಲ್ಲಿ ಎತ್ತಿ ತೋರಿಸುತ್ತಾನೆ. ಇಂತಹ ಮನೋಭಾವವು ಶ್ರೀ ಎಂ. ಆರ್. ಬಾಳೀಕಾಯಿಯವರ ಕಲಾಕೃತಿಗಳಲ್ಲಿ ಗಮನಿಸಬಹುದಾಗಿದೆ.

ಭಾವಗಳಲ್ಲಿ ಹತ್ತು ಹಲವಾರು ಭಾವಗಳು ಇದ್ದು ಸಾಹಿತ್ಯ ಭಾವ, ಸಂಗೀತಭಾಗ, ವಿಚಾರವಂತರ ಭಾವ, ವೈಜ್ಞಾನಿಕ ಭಾವ ಹೀಗೆ ಬೇರೆ ಬೇರೆ ಭಾವಗಳು ಉತ್ಪತ್ತಿಯಾಗಿವೆ. ಅವುಗಳನ್ನು ಮೀರಿ ನಿಲ್ಲುತ್ತಾನೆ ಕಲಾವಿದ. ಕಲಾವಿದ ಇನ್ನು ಏನಿದೆ ಏನಿದೆ ಅಂತ ಹುಡಕಿಕೊಂಡು ಹೋಗಿ ಚಿಂತನಶೀಲವಾಗಿ ಹುಡುಕುವ ಮನೋಭಾವ ಕಲಾವಿದನಲ್ಲಿರುತ್ತವೆ. ಕಲಾವಿದ ವಿಶೇಷ ಗುಣಗಳನ್ನು ಹೊಂದಿರುತ್ತಾನೆ. ಹಾಗೆ ಕಲಾವಿದ ಬೆಳೆಯಬೇಕಾದರೆ ನನಗೆ ಚಿಕ್ಕ ವಯಸ್ಸಿನಲ್ಲಿದ್ದಾಗ ಇವು ಯಾವವು ಗೊತ್ತಿರಲಿಲ್ಲ. ಸಾಮಾಜಿಕ ಚಿಂತನೆ ಎಂದರೆ ಗೊತ್ತಿಲ್ಲ. ಏನು ಮಾಡಬೇಕು ಅಂತ ಗೊತ್ತಿಲ್ಲ. ಆಗ ನನಗೆ ಕೇವಲ ಚಿತ್ರ ಬಿಡಿಸಬೇಕು, ಪರೀಕ್ಷೆ ಪಾಸಾಗಬೇಕು, ನೌಕರಿ ಮಾಡಬೇಕು. ಚಿತ್ರಕಲಾ ಪ್ರದರ್ಶನ ಮಾಡಬೇಕು, ಇದೊಂದಷ್ಟು ಬಿಟ್ಟರೆ ಮತ್ತೊಂದು ತನ್ನ ತಲೆಯಲ್ಲಿ ಇರಲಿಲ್ಲ. ಆದರೆ ಕಲಾವಿದನ ತನ್ನ

ಕಂಡಂತಹ ಅನುಭವ. ಸಾಮಾಜಿಕ ಪ್ರಭಾವಕ್ಕೆ ಚಿಂತನಶೀಲನಾಗಿ ತನ್ನ ಸೃಜನ ರೂಪಗಳನ್ನು ಚಿತ್ರಿಸುವ ಪ್ರಯತ್ನಿಸುತ್ತಾನೆ ಆ ದಾರಿಯಲ್ಲಿ ಇವರು ಒಬ್ಬರಾಗಿದ್ದಾರೆ.

ತನ್ನ ಕಣ್ಣಿಗೆ ಕಾಣುವ, ಗೋಚರಿಸುವ ಸುಂದರ ಪದಾರ್ಥಗಳನ್ನು ತಾನು ಸೃಷ್ಟಿಸಿ ನೋಡಬೇಕೆಂಬುದು ಮಾನವನಲ್ಲಿ ಲೀನವಾಗಿರುವ ಸಹಜಗುಣ. ಜಗತ್ತು ಎಂದು ಸೃಷ್ಟಿಯಾಯಿತೋ ಅಂದೇ ಈ ಭಾವನೆಯು ಸೃಷ್ಟಿಯಾಯಿತೆಂದು ನಾವು ಸ್ಥೂಲವಾಗಿ ಅರಿತುಕೊಳ್ಳಬಹುದು. ಭಾರತೀಯ ಚಿತ್ರಕಲೆಯು ತನ್ನ ಕಣ್ಣಿಗೆ ಕಾಣುವ ವಿಷಯಗಳನ್ನು ಚಿತ್ರಿಸುವವರ ಕಡೆಗೆ ಮಾತ್ರವೇ ಲಕ್ಷಗೊಡಲಿಲ್ಲ. ಮನಸ್ಸಿಗೆ ತೋರುವ ವಿಚಾರಗಳನ್ನು ಚಿತ್ರಿಸುವುದರ ಕಡೆಗೂ ಲಕ್ಷ್ಯಗೊಟ್ಟಿತು. ಸತ್ಯ ಸೌಂದರ್ಯಗಳಿಗೆ ರೂಪಕೊಡುವುದೇ ಕಲೆ. ಗಗನದಲ್ಲಿ ಹಾರಿಹೋಗುವ ನೀಲಮೇಘಗಳನ್ನು ಕುಶಲ ಕುಂಚಿಗನು ಚಿತ್ರಿಸಿ ಸ್ಥಿರ ರೂಪವನ್ನು ಕೊಡುವಂತೆ ಅವ್ಯಕ್ತ ವಿಷಯಗಳ ಸುವರ್ಣ ಸರೋವರದಂತಿರುವ ಸತ್ಯ ಸೌಂದರ್ಯಗಳನ್ನು ಬಗೆ ಬಗೆಯ ಅಚ್ಚಿನಲ್ಲಿ ಹೊಯ್ದು ತರತರಹದ ಮೂರ್ತಿಗಳನ್ನು, ಮಡಿಕೊಡುವುದೇ ಕಲೆ. ಗ್ರೀಕ್ ಮತ್ತು ಭಾರತೀಯ ಕಲೆಗಳ ವಿಚಾರ ಪ್ರಸ್ತಾಪಿಸುತ್ತ ಸ್ವಾಮಿ ವಿವೇಕಾನಂದರು ಗ್ರೀಕ್ ಕಲೆಯ ರಹಸ್ಯವೆಂದರೆ ನಿಸರ್ಗಾನುಕರಣ, ಭಾರತೀಯ ಕಲೆಯ ರಹಸ್ಯವೆಂದರೆ ಆದರ್ಶಗಳ ಪ್ರದರ್ಶನ[೭]. ನಿಜವಾದ ಕಲೆಯನ್ನು ಒಂದು ಕಮಲ ಪುಷ್ಪಕ್ಕೆ ಹೋಲಿಸಬಹುದು. ಭೂಮಿಯಲ್ಲಿಯೇ ಜನಿಸಿ, ಅಲ್ಲೇ ಬೆಳೆದು ಪುಷ್ಪ ಹೊಂದಿದರೂ ಅದು ಭೂಮಿಯ ಮೇಲಿರುವುದಿಲ್ಲ. ಹಾಗೆಯೇ ಕಲೆಯು ನಿಸರ್ಗದ ಸಂಪರ್ಕದಲ್ಲಿರಬೇಕು ಎಂಬ ಮಾತಿನಂತೆ ಇವರು ತಮ್ಮ ಕಲಾಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಹಾಗೂ ಧಾರ್ಮಿಕ ಪ್ರಜ್ಞೆಯನ್ನು ಇಟ್ಟುಕೊಂಡು ಆಧುನಿಕ ಕಲಾಶೈಲಿಯಲ್ಲಿ ಮನಸ್ಸಿಗೆ ಸಂಬಂಧಿಸಿದ ಅನೇಕ ಕಲಾಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ.

ಸಾಧನಕೇರಿ ಕಲಾ ಸಾಧಕ : ಶ್ರೀ ಎಂ. ಆರ್. ಬಾಳೀಕಾಯಿ

ವಿಶೇಷವಾಗಿ ಧಾರವಾಡದ ಸಾಧನಕೇರಿ ಯಾರಿಗೆ ಗೊತ್ತಿಲ್ಲ. ಅದು ಸಾಧನೆಯ ಹಾಗೆ ಹಿಡಿದ ಸಾಧಕರ ಕೇರಿ, ಇಂಥ ನೆಲದ ಕಲಾವಿದ ಶ್ರೀ ಎಂ. ಆರ್. ಬಾಳೀಕಾಯಿ ಚಿತ್ರಕಲಾ ಕ್ಷೇತ್ರದ ಒಬ್ಬ ಅಪರೂಪದ ಸಾಧಕ, ಸರಳ ಜೀವಿ, ವಿನಯಶೀಲತೆಗಳಿಗೆ ಮತ್ತೊಂದು ಹೆಸರಿನಂತಿರುವ ಬಾಳೀಕಾಯಿ ಕರ್ನಾಟಕ ಕಂಡ ಕೆಲವೇ ಕೆಲವು ಶ್ರೇಷ್ಠ ಕಲಾವಿದರಲ್ಲಿ ಒಬ್ಬರು. ಅಂದು ಯಾರು ಅಂದುಕೊಂಡಿದ್ದರು ಈ ಚಿಕ್ಕ ಪೋರ ಮುಂದೊಂದು ದಿನ ಚೊಕ್ಕ ಕಲಾವಿದ ಆಗುಬಹುದೆಂದು !! ವಿಧಿಯ ಪವಾಡವೇ ಹಾಗಲ್ಲವೇ? ಯಾರಿಂದ ಏನಾಗಬೇಕು ಅವರಿಂದ ಅದನ್ನು ಮಾಡಿಸುತ್ತಾನೆ. ಇಲ್ಲಿ ಆದಷ್ಟು ಅದೇ ಹಳ್ಳಿಯ ಹುಡುಗನೊಬ್ಬ ಮಣ್ಣಾಟವಾಡುತ್ತಿದ್ದ ಬರೀ ಮಣ್ಣಾಟವಲ್ಲ ಮಣ್ಣಿನೊಡನೆ ಕಲೆಯಾಟವಾಗಿತ್ತು. ಬೀದಿಯಲ್ಲಿ ಬಿದ್ದ ಕೋಲೇ ಪೆನ್ಸಿಲ್ ಆಗಿ, ಮಣ್ಣೆ ಕ್ಯಾನ್ವಾಸ್ ಆಗಿ ಕಲಾಕೃತಿಯೊಂದು ರೂಪು ತಳೆದಿತ್ತು.

ಅಷ್ಟರಲ್ಲೇ ಕೆಲವು ಜನ ಸೇರಿದವರು ಇವನದೇನು ಹುಚ್ಚಾಟವೆಂದು ಗೊಣಗುತ್ತ ಜಾಗ ಖಾಲಿ ಮಾಡಿದರು. ಆ ಪೋರನೇ ಇಂದು ಕರ್ನಾಟಕದ ಪ್ರಮುಖ ಚಿತ್ರಕಲಾವಿದರಲ್ಲಿ ಒಬ್ಬರಾಗಿ ಹೆಸರು ಪಡೆದಿರುವ ಮಹಾವೀರ ರಾಯಪ್ಪ ಬಾಳೀಕಾಯಿ[೮]" ಎಂಬುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ಅಲ್ಲದೇ ಇವರ ಹೆಸರೇ ಹೇಳಿದಂತೆ ಮಹಾವೀರ ಎಂದ ಕ್ಷಣ ಇವರು ಜೈನ ಸಮುದಾಯಕ್ಕೆ ಸೇರಿದವರು. ಮೂಲತಃ ಜೈನ ಧರ್ಮದಲ್ಲಿ ೨೪ ತೀರ್ಥಂಕರು ಆ ೨೪ನೇ ತೀರ್ಥಕಂತರೇ ಶ್ರೀ ಮಹಾವೀರ ಭಗವಾನರು. ಆತನ ಹೆಸರನ್ನು ಇವರಿಗೆ ಇಟ್ಟಿದ್ದು. ಮಹಾವೀರ ರಾಯಪ್ಪ ಬಾಳೀಕಾಯಿ ಇವರು ಬೆಳಗಾಂವ ಜಿಲ್ಲೆ ಹುಕ್ಕೇರಿ ತಾಲೂಕಿನ ಹೆಬ್ಬಾಳದಲ್ಲಿ ದಿನಾಂಕ ೧-೦೬-೧೯೪೧ ರಲ್ಲಿ ಅಂದರೆ ಸ್ವತಂತ್ರ್ಯ ಪೂರ್ವದಲ್ಲಿ ಜನಿಸಿದವರು. ಇವರ ತಾಯಿ ಅಮ್ಮವ್ವ ಹಾಗೂ ತಂದೆ ರಾಯಪ್ಪ ಬಡ ಕೃಷಿಕರು. ಇವರು ವಂಶಪರಂಪರೆಯಾಗಿ ಬಂದಿದ್ದ ಬಾಳೆ ತೋಟದ ಹಾಗೂ ಅದರ ವ್ಯಾಪಾರದಿಂದ ಮನೆತನಕ್ಕೆ 'ಬಾಳೀಕಾಯಿ' ಎಂಬ ಹೆಸರು ಬಂದಿತು. ಈಗಲೂ ಸಹಿತ ಅವರ ಹುಟ್ಟೂರಿನಲ್ಲಿ ಬಾಳೆತೋಟ ಇದೆ. ಭಾರತೀಯ ಚಿತ್ರ, ಶಿಲ್ಪ, ವಾಸ್ತು ಕಲಾಪ್ರಪಂಚಕ್ಕೆ ಜೈನ ಸಮುದಾಯದ ಕಾಣಿಕೆ ಅತ್ಯಂತ ಮಹತ್ತರವಾದದ್ದು ಶಿಕ್ಷಣ. ಶಿಕ್ಷಣ ಉಳಿದ ಬಹಳಷ್ಟು ಕಲಾವಿದರಂತೆ ಶ್ರೀ ಎಂ. ಆರ್. ಬಾಳೀಕಾಯಿ ಅವರಿಗೂ ಬಾಲ್ಯದಲ್ಲೇ ಕಲೆಯ ಬಗ್ಗೆ ಆಸಕ್ತಿ ಇದ್ದರೂ ಸಹಿತ ಕ್ರಮಬದ್ಧವಾಗಿ ಕಲಿಯಲಾರದಂತಹ ಪರಿಸ್ಥಿತಿ. ಆದರೆ ಅವರಿಗೆ ಹುಟ್ಟುತ್ತಾ ಕಲೆಯ ಬಗ್ಗೆ ಅಪಾರವಾದ ಅಭಿರುಚಿ ಇದ್ದರು ಸಹಿತ ಮನೆಯವರಿಗೆ ಅದು ಇಷ್ಟವಿರಲಿಲ್ಲ. ಅದರೂ ಸಹಿತ ತನ್ನ ಪ್ರಾಥಮಿಕ ಹಂತದಲ್ಲಿ ಸ್ವಲ್ಪ ತಿಳುವಳಿಕೆಯ ಹಂತದಲ್ಲಿ ಓದುತ್ತಿದ್ದಾಗ ತನ್ನ ಹುಟ್ಟೂರು ಹೆಬ್ಬಾಳ ಅದೊಂದು ಗ್ರಾಮೀಣ ಪ್ರದೇಶ ಹಳ್ಳಿಯ ವಾತಾವರಣ. ಆದರೂ ಅವರು ಚಿತ್ರ ಬಿಡಿಸುವುದು. ಚಾರ್ಟಗಳು ಮಾಡುವುದು ಈ ಆಸಕ್ತಿ ದಿನ ಕಳೆದಂತೆಲ್ಲ ಹೆಚ್ಚುತ್ತಾ ಹೋಯಿತು. ಆದರೆ ಅವರ ಮನೆಯಲ್ಲಿ ತಂದೆ-ತಾಯಿಗೆ ಮತ್ತು ಐದು ಜನ ಅಣ್ಣಂದಿರು, ಮೂರು ಜನ ಅಕ್ಕಂದಿರು ಇವರು ಕೊನೆಯ ಮಗ. ಕೊನೆಯ ಮಗ ಚೆನ್ನಾಗಿ ಓದಿ ಒಳ್ಳೆಯ ಕೆಲಸಕ್ಕೆ ಸೇರಿಸಬೇಕು ಅಂತಾ ಅವರ ಆಸೆ. ಆದರೆ ಅವರಿಗೆ ಚಿತ್ರ ಬಿಡಿಸುವ ಆಸೆ. ಅದಕ್ಕೆ ಅವರಿಗೆ ಯಾವುದಕ್ಕಾದರೂ ಹಣವನ್ನು ಕೊಟ್ಟರೆ, ಅದರಿಂದ ಪೇಪರ್ಸ್ ತರುವುದು ಕಲರ್ಸ್ ತರುವುದು, ಅದು ಇಲ್ಲವಾದರೆ ನಮ್ಮ ತೋಟಗಳಲ್ಲಿ ಮೆಣಸಿನ ಗಿಡಗಳು ಬಹಳಷ್ಟಿದ್ದು, ಅವರು ಅವುಗಳನ್ನು ತಂದು ಬೇರೆಯವರಿಗೆ ಮಾರಿಕೊಂಡು ಅದರಿಂದ ಬಂದ ಹಣದಿಂದ ಬಣ್ಣ-ಪೇಪರಗಳನ್ನು ತೆಗೆದುಕೊಳ್ಳುತ್ತಿದ್ದೆ. ನಂತರ ಮನೆಗೆ ಹೋದ ಮೇಲೆ ನಮ್ಮ ತಂದೆ-ತಾಯಿ ಅಣ್ಣಂದಿರು ಎಲ್ಲರು ಕೇಳುತ್ತಿದ್ದರು ಎಲ್ಲಿಂದ ತಂದೆ ಅಂತ ಇಲ್ಲ ಅವರಿವರು ಕೊಟ್ಟರು ಅಂತಾ ಸುಳ್ಳು ಹೇಳುತ್ತಲೇ ಬಂದೆ. ಅದೊಂದು ದಿವಸ ಅವರಿಗಲ್ಲ ಗೊತ್ತಾಯಿತು. ಒಬ್ಬ ಕಲಾವಿದನಾಗಬೇಕಾದರೆ ಕಲೆಯನ್ನು ಅಶಕ್ತಿಯಿಂದ ಕಲಿಯಬೇಕಾದರೆ

ಏನೆಲ್ಲ ಸುಳ್ಳುಗಳನ್ನು ಹೇಳಿ ಕಲೆಯನ್ನು ತನ್ನ ಕಲಿಕೆಯ ಒಂದು ಅಂಗವಾಗಿ ರೂಢಿಸಿಕೊಳ್ಳಲು ಪಟ್ಟ ಪ್ರಯತ್ನಗಳನ್ನು ಇಲ್ಲಿ ಸಂಶೋಧನಾತ್ಮಕ ಅಧ್ಯಯನಗಳಿಂದ ತಿಳಿದು ಬರುತ್ತದೆ.

ನಂತರ ಸಾಕಷ್ಟು ಸಲ ಹೊಡೆಯುವುದು, ಬೈಯುವುದು ಮಾಡಿದರು. ಸಹಿತ ಅವರು ಏನೆ ಮಾಡಿದರು ಬಾಳೀಕಾಯಿಯವರು ಹಾಗೆ ಮುಂದುವರೆಸಿಕೊಂಡು ಬಂದರು. ಅಂದರೆ ಕಲೆಯಲ್ಲಿ ಅವರಿಗೆ ಆಸಕ್ತಿ ಹುಟ್ಟಿದ್ದು ಇನ್ನು ಜಾಸ್ತಿ ಆಯಿತು. ಹೊರತಾಗಿ ಕಡಿಮೆಯಾಗಲಿಲ್ಲ. ಅವರಿಗೆ ಕೈಗೆ ಏನು ಸಿಕ್ಕರೂ ಸಹಿತ ಅದನ್ನು ತೆಗೆದುಕೊಂಡು ಚಿತ್ರ ಬಿಡಿಸುತ್ತಿದ್ದರು. ಅವುಗಳನ್ನು ನಮ್ಮ ತಾಯಿಯವರು ಎಲ್ಲವನ್ನು ಹರಿದು ಹಾಕುತ್ತಿದ್ದರು. ಅವರು ಅದನ್ನೇ ಮುಂದುವರೆಸಿಕೊಂಡು ಹೋಗುತ್ತಾರೆ. ಮುಂದೆ ಶಾಲೆ ಕಲೆಯುತ್ತಾನೆ ಇಲ್ಲವೋ ಎನ್ನುವ ಆತಂಕ ಅವರ ತಂದೆ-ತಾಯಿಗಳಿಗಿತ್ತು. ಆದರೆ ಅವರು ಬಾಳಿಕಾಯಿಯವರನ್ನು ಏನೇ ಮಾಡಿದರು ಸಹಿತ ಅದರಿಂದ ಹೊರ ಬರಲು ಸಾಧ್ಯವಿರಲಿಲ್ಲ. ಯಾಕೆಂದರೆ ಅವರ ಊರಿನಲ್ಲಿ ಏನೇ ಆಗಲಿ ಅಥವಾ ತಾಲೂಕ ಮತ್ತು ಜಿಲ್ಲಾ ಮಟ್ಟದಲ್ಲಿ ಚಿತ್ರಕಲಾ ಸ್ಪರ್ಧೆಗಳು, ವಿಜ್ಞಾನ ಪ್ರದರ್ಶನ ಹೀಗೆಲ್ಲಾ ಇದ್ದಾಗ ಅವುಗಳ ಮಾಡೆಲ್‌ಗಳನ್ನು ಮಾಡುವುದಕ್ಕೆ ಇವರ ಸಹಾಯ ತೆಗೆದುಕೊಳ್ಳುತ್ತಿದ್ದರು. ಕಾರಣ ಇವರು ಉತ್ತಮ ಮಟ್ಟದ ಚಿತ್ರ ಹಾಗೂ ಮಾಡೆಲ್‌ಗಳನ್ನು ಮಾಡುವುದರಲ್ಲಿ ಸಿದ್ಧ ಹಸ್ತರಾಗಿರುತ್ತಾರೆ.

ಅವರು ಏಳನೇ ತರಗತಿಗೆ ಬಂದಾಗ ಪ್ರಾಥಮಿಕ ಶಿಕ್ಷಣದಲ್ಲಿ ಶ್ರೀ ಶಂಕರ ಬಾವಾನವರು ಗುರುಗಳಾಗಿ ದೊರಕುತ್ತಾರೆ. ಈ ಗುರುಗಳೀಗೆ ಈಗ ೬೧ ವರ್ಷ ವಯಸ್ಸು. ಹಾಗಾಗಿ ಈಗಲೂ ಸಹಿತ ತುಂಬಾ ಚೆನ್ನಾಗಿದ್ದಾರೆ. ಇವರು ಆಗಾಗ ಅವರ ಮನೆಗೆ ಬಂದು ನಾವೆಲ್ಲ ಹಳ್ಳಿಯಲ್ಲಿ ಬೆಳೆದಂತವರು. ಈಗ ಹುಡುಗನಲ್ಲಿ ಚಿತ್ರಕಲೆಯ ಆಸಕ್ತಿ ಬಹಳಷ್ಟಿದೆ ಎನ್ನುವುದನ್ನು ಕಂಡುಕೊಂಡು ನಮ್ಮ ತಂದೆ-ತಾಯಿಗೆ ಹೇಳಿದರು. ಅವನು ಚಿತ್ರ ಬಿಡಿಸುವುದರಿಂದ ನಿಮಗೇನು ನಷ್ಟವಿಲ್ಲ. ಆದರೆ ಅವನು ಇದನ್ನು ಬಿಟ್ಟು ಬೇರೆ ಕಡೆಗೆ ಒಲವು ತೋರುವುದಿಲ್ಲ. ನೀವು ಅದನ್ನು ನೋಡಿ ಖುಷಿ ಪಡಿ ಅವುಗಳನ್ನೆಲ್ಲ ತಂದು ನಮಗೆ ತೋರಿಸುತ್ತಾನೆ. ಅವುಗಳನ್ನು ಹರಿಯಬೇಡಿರಿ ಆನಂದ ಪಟ್ಟು ಅವನಿಗೆ ಪ್ರೋತ್ಸಾಹ ಕೊಡಿ, ಅವನು ಅದರಲ್ಲಿಯೇ ಮುಂದುವರೆಯುವುದು ನೀವು ಎಷ್ಟೇ ತಡೆದರು, ಚಿತ್ರ ಬಿಡಿಸುವುದು ಮಾತ್ರ ಬಿಡುವುದಿಲ್ಲ. ಯಾವುದೇ ಶಿಕ್ಷಣ ಕೊಟ್ಟರು ಸಹಿತ ಯಾವುದು ಪೂರ್ಣವಾಗಲ್ಲ, ನೋಡ್ರಿ ನೀವು ಹೇಳಿದರು ಅದಕ್ಕೆ ನಾ ನನ್ನ ಅನುಭವ ಹೇಳುತ್ತೇನೆ, ಮಕ್ಕಳಿಗೆ ನಾವು ಕಲಿಸುತ್ತಿದ್ದೇವೆ. ಒಂದು ಹಂತದವರೆಗೆ ಅಂದರೆ ಎಸ್.ಎಸ್.ಎಲ್.ಸಿ. ಮುಗಿದ ನಂತರ ಆ ನನ್ನ ವಿದ್ಯಾರ್ಥಿ ಚಿತ್ರಕಲೆಯಲ್ಲಿ ಮುಂದುವರೆಯಲಿ. ಅವನಿಗೆ ಮೊದಲು ಸಾಮಾನ್ಯ ಶಿಕ್ಷಣದ ಅವಶ್ಯಕತೆ ಇದೆ. ಅದನ್ನು ಕಲಿಯಲಿ ನಾನು ಬೇಡ ಅಂತ ಹೇಳುವುದಿಲ್ಲ. ಆದರೆ ಎಸ್.ಎಸ್.ಎಲ್.ಸಿ. ಮುಗಿದ ಕೂಡಲೇ ಚಿತ್ರಕಲೆಗೆ ಹೆಸರು

ನೊಂದಾಯಿಸಿರಿ" ಅಂತ ಹೇಳಿದಾಗ ಸ್ವಲ್ಪ ಮನೆಯಲ್ಲಿ ಒಪ್ಪಿಕೊಂಡರು. ನಂತರ ಮುದಗೇರಿಯಲ್ಲಿ ಏಳನೇ ತರಗತಿಯಲ್ಲಿ ಅನುತ್ತೀರ್ಣರಾಗುತ್ತಾರೆ. ಇದು ಅವರಿಗೆ ದುಃಖದ ಸಂಗತಿ ಈ ಸಂದರ್ಭದಲ್ಲಿ ಇವರು ಅಳುತ್ತಿದ್ದರಂತೆ. ಅವರ ಮನೆಯವರೆಲ್ಲರೂ ಸಮಾಧಾನ ಮಾಡಿದರು. ಮುಂದೆ ಇನ್ನು ಸಿಹಿ-ಕಹಿ ಘಟನೆಗಳು ನಡೆದಿವೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಕ್ರಾಪ್ಟ್ ಅನ್ನೋ ಒಂದು ವಿಷಯವು ಅವರಿಗೆ ಅಧ್ಯಯನಕ್ಕೆ ಇದ್ದಿತು. ಅದು ಗಾಂಧೀಜಿಯವರ ತತ್ವಗಳ ಆಧಾರ ಮೇಲೆ. ಆಗ ಚರಕ ಅಂತ ಬಟ್ಟೆ ನೆಯುವುದು. ದಾರ ತೆಗೆಯುವ ಮಗ್ಗಗಳು ಇದ್ದು, ಆ ಸಂದರ್ಭದಲ್ಲಿ ಒಂದು ವಿಷಯ ನಾವು ತೆಗೆದುಕೊಳ್ಳಬೇಕಿತ್ತು. ಆದರೆ ಸಿದ್ಧಾಂತ ಪತ್ರಿಕೆ ಮತ್ತು ಪ್ರಾಯೋಗಿಕ ಪತ್ರಿಕೆ ಎರಡು ಇದ್ದು, ಮಗ್ಗದಲ್ಲಿ ಬಟ್ಟೆ ನೇಯಬೇಕು. ಎಲ್ಲವೂ ಜೋಡಿಸಬೇಕು. ಬಟ್ಟೆಯನ್ನು ಅಂದರೆ ಅವರೇ ನೇಯಿದಿರುವ ಬಟ್ಟೆಯನ್ನು ಅವರಿಗೆ ಮಾರಾಟ ಮಾಡುತ್ತಿದ್ದರು. ಅದರಿಂದ ಬಂದಂತಹ ಹಣವನ್ನು ಸರಕಾರಕ್ಕೆ ಜಮಾ ಮಾಡುತ್ತಿದ್ದರು. ಇದರಿಂದ ಇವರಿಗೆ ಸ್ವ-ಉದ್ಯೋಗದ ಪರಿಕಲ್ಪನೆ ಬೆರಳಿಗೆ ಹೆಚ್ಚಿನ ಕರಕೌಶಲ್ಯತೆ ಬೆಳೆದು ಬರುತ್ತದೆ.

ಚರಕಗಳಲ್ಲಿ ಎರಡು ರೀತಿಯಲ್ಲಲಿದ್ದು, ಒಂದು ದುಂಡಗೆನೆಯ ಚರಕ ಇನ್ನೊಂದು ಬಾಕ್ಸ್ ಚರಕ, ಇದಕ್ಕೆ ಇನ್ನೋಂದು ತಕಲಿ ಅಂತ ಅದಕ್ಕೆ ಜೋಡಿಸಿದಾಗ ಮಾತ್ರ ದಾರಬರುತ್ತದೆ. ಅದನ್ನು ತೆಗೆದುಕೊಂಡು ಮಗ್ಗಕ್ಕೆ ಜೋಡಿಸಿಕೊಳ್ಳಬೇಕಿತ್ತು. ನಂತರ ಅವರು ಹತ್ತಿ ಕೊಟ್ಟು ಅದರಿಂದ ಕಾಳುಗಳನ್ನು ಬೇರ್ಪಡೆ ಮಾಡುವುದು, ಅದರ ನಂತರ ಹತ್ತಿ ಸುರುಳಿ ಮಾಡುವುದು, ದಾರ ತೆಗೆಯುವುದು, ಅದಕ್ಕೆಲ್ಲ ಅಂಟು, ಅಂಬಲಿ ಎಲ್ಲವೂ ಹಚ್ಚಿ ಬಟ್ಟೆಯನ್ನು ನೇಯುತ್ತಿದ್ದರು. ಆಗ ಕೆಲವು ತಪ್ಪುಗಳು ನಡೆಯುತ್ತಿದ್ದವು. ದಪ್ಪ-ಸಣ್ಣ ಹರಿಯುವುದು ಹೀಗೆಲ್ಲ ಚಿಕ್ಕ ವಯಸ್ಸಿನಲ್ಲಿ ತುಂಬಾನೆ ಆಗುತ್ತಿದ್ದವು. ಅವರು ಅದೇ ಬಟ್ಟೆ ತೆಗೆದುಕೊಂಡು ಅಂಗಿ ಹೋಲಿಸುತ್ತಿದ್ದರು. ಆಗ ಒಂದೇ ಅಂಗಿ, ಒಂದೇ ಒಂದು ಹಾಫ್ ಪ್ಯಾಂಟ್ ಧರಿಸುತ್ತಿದ್ದರು. ಒಂದೇ ಜೊತೆಗೆ ಬಟ್ಟೆ ಇದ್ದದ್ದರಿಂದ ಅದೇ ತೊಳೆಯುವುದು ಒಣಗಿಸುವುದು, ಅದನ್ನೇ ಹಾಕಿಕೊಳ್ಳುವುದು. ಈ ತರಹದ ಬಡತನದ ಕಷ್ಟಗಳನ್ನು ಅನುಭವಿಸಿ ತನ್ನ ಬಾಲ್ಯ ಜೀವನ ನಡೆಸಿದರು. ಹಾಗೆ ಸ್ವತಃ ಅವರ ಬಟ್ಟೆ ಅವರೇ ನೇಯ್ದುಕೊಂಡು ಹಾಕಿಕೊಳ್ಳುವುದರ ಜೊತೆಗೆ ಹೊಲಿಯುವುದು ಕೂಡ ಅವರದೇ ಹತ್ತಿ ತೋಟವಿತ್ತು. ಹತ್ತಿಯನ್ನು ತಂದು ಅವರ ಇಷ್ಟಂದ ಕಾಳು ಅಥವಾ ಹಣವನ್ನು ಕೊಟ್ಟು ನೇಯ್ಗಿಯನ್ನು ಮಾಡಿ ತಂದು ಕೊಡುತ್ತಿದ್ದರು. ನೂಲು ಮತ್ತೇ ನೇಯ್ಗೆ ಎರಡನ್ನು ಕೊಟ್ಟು ಅವರಿಗೆ ಬಟ್ಟೆಯನ್ನು ಹೋಲಿಸುತ್ತಿದ್ದರು. ಆಗ ಎಲ್ಲವೂ ಕಾಟನ್ ಬಟ್ಟೆ, ಗಾಂಧೀಜಿಯವರ ಪ್ರಭಾವದಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕಡ್ಡಾಯವಾಗಿ ಬಟ್ಟೆ ನೇಯಬೇಕಿತ್ತು. ಇಷ್ಟು ಕಷ್ಟವಿದ್ದರೂ ಸಹಿತ ಆ ಕಷ್ಟದಲ್ಲಿ ತುಂಬಾ ಖುಷಿನು ಇತ್ತು ಎನ್ನುತ್ತಾರೆ ಕಲಾವಿದ ಎಂ. ಆರ್.

ಬಾಳೀಕಾಯಿ ಅವರು. ಅಂದರೆ ದುಡಿದು ತಿನ್ನು ಅದರಲ್ಲಿ ಸಂತೋಷವಿದೆ. ಕೈ ಕೆಸರಾದರೆ ಅವರ ಬಾಯಿ ಮೊಸರಾಗುತ್ತದೆ ಎಂಬ ಮಾತು ನೆನಪಿಗೆ ಬರುತ್ತದೆ.

ನಂತರ ಒಂದು ವರ್ಷ ಕಳೆಯಿತು ಮುಂದೆ ಏಳನೇ ತರಗತಿಯನ್ನು ಉತ್ತೀರ್ಣರಾದರು. ಎಂಟನೇ ತರಗತಿಗೆ ಹೆಸರು ನೊಂದಾಯಿಸಲು ಸಂಕೇಶ್ವರಕ್ಕೆ ಹೋಗುವಾಗ ಪ್ರಾಥಮಿಕ ಶಿಕ್ಷಕರು ಸಿದ್ಧಮಲ್ಲಯ್ಯ ಅಂತ ಅವರು 'ಎ' ಬಾಳೀಕಾಯಿ ಬಾ ಇಲ್ಲಿ ಎಂದರು. ಕರೆದರು ಅದಕ್ಕೆ ಅವರು ಅವರ ಹತ್ತಿರ ಹೇಳಿದರು. ಆಗ ಅವರು ಏನೋ ನಿನ್ನ ಗೆಳೆಯರೆಲ್ಲ ಮುಂದೆ ಹೋದರು. ನೀ ಈಗ ಏಂಟನೇ ತರಗತಿಗೆ ಹೋಗುತ್ತಿದ್ದಿಯಾ ಅದ್ ಎನ್ ಕಲಿತ್ತಿಯಾ ಅದೇನು ಬಿಡ್ತಿಯಾ ಅಂದು ಹೇಳಿದರು. ಸರಿ ಅಂತ ಸುಮ್ಮನಾದರು. ಮುಂದೆ ತರಗತಿಗಳು ಪ್ರಾರಂಭವಾದವು. ಆದರೆ ಅವರು ಆಡಿದಂತಹ ಮಾತುಗಳು ತಲೆಯಲ್ಲಿ ಹಾಗೆ ಉಳಿದುಕೊಂಡಿದ್ದವು. ಯಾವ ಉದ್ದೇಶಕ್ಕೆ ಈ ತರಹ ಅಂದರು ಅಂತ ಗೊತ್ತಿಲ್ಲವೆಂದು ತಿಳಿದು ನಂತರ ಅವರ ಮೊದಲೇ ಗಣಿತ ವಿಷಯದಲ್ಲಿ ಜೀರೋ (ಸೊನ್ನೆ) ಮತ್ತೇ ಎಂಟನೇ ತರಗತಿಯಲ್ಲೂ ಫೇಲಾದೆ. ಆಗ ಒಂದು ವಿಷಯದಲ್ಲಿ ಫೇಲಾದ್ರೆ ಒಂಭತ್ತನೇ ತರಗತಿಗೆ ಹೋಗಬಹುದಿತ್ತು. ಹಾಗೆ ಮುಂದಿನ ತರಗತಿಗೆ ಪ್ರವೇಶ ಪಡೆದರು. ಅಲ್ಲಿ ಗಣಿತ ಹೇಳುವಂತಹ ಶಿಕ್ಷಕರು ಒಬ್ಬರು ಕವರೆ ಮತ್ತೊಬ್ಬರು ಶ್ರೀ ಮಂಗಾವತಿ. ಇವರುಗಳಲ್ಲಿ ಶ್ರೀ ಕವರೆ ಗುರುಗಳು ಸಂಕೇಶ್ವರದಲ್ಲಿ ಹೈಸ್ಕೂಲ್ ಮಕ್ಕಳಿಗೆ ಟ್ಯೂಶನ್ ಹೇಳುತ್ತಿದ್ದರು. ಅವರು ಹೋದರು ಸರ್ ನಾನು ಕ್ಲಾಸಿಗೆ ಬರುತ್ತೇನೆ ಎಂದಾಗ ಎ ಹೋಗು ಎರಡು ವರ್ಷ ಫೇಲಾಗಿ ಬಂದು ಏನ್ ಕಲಿತಿ ನೀನು ಅಲ್ಲದೇ ಹೆಬ್ಬಾಳದಿಂದ ಬರುದು ಹೋಗುವುದು ಮಾಡ್ತಿ ಎ ಹೋಗು ಅಂತಾ ಬೈದು ಕಳುಹಿಸಿದರು. ಆಗ ಅವರ ಮನಸ್ಸಿಗೆ ತಂಬಾನೆ ನೋವಾಯಿತು ಅದಕ್ಕೆ ಮನೇಲಿ ಹೇಳಿಕೊಂಡರು. ಇನ್ನು ಮುಂದೆ ಸಂಕೇಶ್ವರದಲ್ಲಿ ಇರುತ್ತೇನೆ. ಅಲ್ಲೊಂದು ನಮ್ಮ ಸಮುದಾಯದ ಜೈನರ ಮಠವಿದೆ. ಅಲ್ಲಿ ಒಬ್ಬ ಪೂಜಾರಿ ಇರುತ್ತಾರೆ. ಅವರು ಏನು ಹೊಟ್ಟೆಗೆ ಹಾಕುತ್ತಾರೋ ಅಥವಾ ಬಿಡ್ತಾರೋ ಗೊತ್ತಿಲ್ಲ. ನೀವು ಏನ್ ಅಂದ್ರು ಸರಿ ಅಂತ ಹೇಳಿ ಹೋದರು. ಅವರು ಮತ್ತು ಅವರ ಅಣ್ಣನ ಮಗ ಇಬ್ಬರು ಇದ್ದು ಟ್ಯೂಶನ್‌ಗೆ ಹೋದರು. ಅಲ್ಲಿ ಶ್ರೀ ಕವರೆ ಸರ್ ಏನ್ ಹೇಳಿದ್ರು ಸಹಿತ ಒಳಗಡೆ ಕರೆದುಕೊಳ್ಳುತ್ತಿರಲಿಲ್ಲ. ಆದರೂ ನಾವುಗಳು ಬಿಡಲಿಲ್ಲ. ಅವರು ಒಳಗಡೆ ಹೇಳಿದ್ರೆ ನಾವು ಹೊರಗಡೆ ಕುಳಿತು ಅವರು ಹೇಳಿದವುಗಳನ್ನೆಲ್ಲವು ಬರೆದುಕೊಳ್ಳುತ್ತಿದ್ದೇವು. ಟ್ಯೂಶನ್ ಬಿಟ್ಟ ನಂತರ ಯಾಕೋ ಬಾಳೀಕಾಯಿ ಮತ್ತೇ ಯಾಕೆ ಬಂದಿ ಅಂದಾಗ ಇಲ್ಲ ಸರ್ ನೀವು ಏನೇ ಅಂದ್ರು ನಾನು ಬರ್ತಿನಿ ಮುಂದಿನ ವರ್ಷ ಪಬ್ಲಿಕ್ ಪರೀಕ್ಷೆ ಇದ್ದು, ಅದಕ್ಕೆ ಅಂದಾಗ ಹೋಗೋ ನಿನ್ನ ಹಣೆಬರಹ ಗೊತ್ತಿದೆ ಹೋಗು ಅಂದ್ರು ಸಹಿತ ಇಲ್ಲ ಸರ್ ನಾನು ಬರುತ್ತೇನೆ. ನನಗೆ ಹದಿನೈದು ದಿವಸ ಕ್ಲಾಸ್ ಹೇಳಿ ನಂತರ ಒಂದು ಪರೀಕ್ಷೆ ತೆಗೆದುಕೊಳ್ಳಿ ಅದರಲ್ಲಿ ಪಾಸಗದೇ ಇದ್ದರೆ ನೀವು ಹೇಳಿದ ಹಾಗೆ ಮಾಡುತ್ತೇನೆ ಅಂದಾಗ ಎನ್ ಹಠವಾದಿ ಇದೀ ನೀನು

ಅಂತ ಹೇಳಿ ಸರಿ ನಾಳೆಯಿಂದ ಬನ್ರಿ ಇಬ್ಬರು ಅಂತ ಹೇಳಿದರು. ಇದರಿಂದ ಇವರಿಗೆ ಸಂತೋಷವಾಯಿತು.

ಮರುದಿವಸ ಮಠದಲ್ಲಿ ಏನ್ ಅಡುಗೆ ಮಾಡಿದರು ಸರಿ ಬಿಟ್ಟರು ಸರಿ ಯಾವುದನ್ನು ನೋಡದೆ ಹದಿನೈದು ದಿವಸ ಏನ್ ಸಿಗುತ್ತೇ ಅವುಗಳ ಮೇಲೆಲ್ಲಾ ಲೆಕ್ಕ ಬಿಡಿಸಿ ಬಿಡಿಸಿ ಪಾಸ್ ಆಗಿ ತೋರಿಸಬೇಕು. ಇಲ್ಲಾದ್ರೆ ನಮ್ಮನ್ನು ಕ್ಲಾಸಿನಿಂದ ಹೊರಗೆ ಹಾಕುತ್ತಾರೆ. ಮತ್ತೇ ಸೇರಿಸಿಕೊಳ್ಳುವುದಿಲ್ಲ ಅಂತಾ ಚಾಲೆಂಜಾಗಿ ತೆಗೆದುಕೊಂಡು ನಂತರ ಪರೀಕ್ಷೆ ತೆಗೆದುಕೊಂಡು ಅದರಲ್ಲಿ ಪಾಸಾಗಿದ್ದೀರಾ ಅಂತಾ ಹೇಳಿ ನಾಳೆಯಿಂದ ದಿನಾಲು ಕ್ಲಾಸಗೆ ಬನ್ನಿರಿ ಅಂತ ಹೇಳಿದಾಗ ಹದಿನೈದು ದಿವಸದ ನೋವು ಒಂದು ಕ್ಷಣದಲ್ಲಿ ಮರೆತು ಹೋಯಿತು. ಗುರುಗಳು ಬೇಡ ಅಂದವರು ಈಗ ಬಾ ಅಂತಾ ಹೇಳುತ್ತಿದ್ದಾರೆ ಅಂತ ಹೇಳಿ ಅವರು ಹನ್ನೊಂದನೇ ತರಗತಿ ಮುಗಿಯುವರೆಗೆ ಹೋಗುವುದು ಬಿಡಲಿಲ್ಲ. ಆದರೆ ಇದೇ ಸಂದರ್ಭದಲ್ಲಿ ನಾವು ಹೈಸ್ಕೂಲ್ ಕಲಿಯಬೇಕಾದರೆ ಸಂಕೇಶ್ವರದಲ್ಲಿ ಒಂದು ಕಲಿಯುವ ಸಮಯದಲ್ಲಿ ಕೆಲವು ದಿನಗಳಲ್ಲೇ ಹೆಬ್ಬಾಳದಲ್ಲಿ ಹೈಸ್ಕೂಲ್ ಪ್ರಾರಂಭವಾಯಿತು. ಆಗ ನಿಪ್ಪಾಣಿಯಲ್ಲಿ ಲೋವರ್ & ಹೈಯರ್ ಗ್ರೇಡ್ ಪರೀಕ್ಷೆಗೆ ಕುಳಿತುಕೊಂಡು ಅದರಲ್ಲಿ ಉತ್ತೀರ್ಣರಾದರು. ಆಗ ಉಳಿದೆಲ್ಲ ವಿಷಯಗಳನ್ನು ಕಲಿಸುವ ಶಿಕ್ಷಕರು ಅವರಿಗೆ ಹೇಳಿದರು ನಿಮ್ಮ ಊರಲ್ಲಿ ಚಿತ್ರಕಲಾ ಶಿಕ್ಷಕರು ಯಾರಿಲ್ಲ ಅದಕ್ಕೆ ನೀನು ಹೋಗಿ ಕ್ಲಾಸು ಮಾಡು ಅಂತಾ ಹೇಳಿದರು. ಅಲ್ಲದೇ ಮೊದಲೇ ಅವರು ಊರಿನಲ್ಲಿ ಗಣೇಶನ ಹಬ್ಬದಲ್ಲಿ, ದೀಪಾವಳಿಯ, ಲಕ್ಷ್ಮೀ ಪೂಜಾ, ಮುಸ್ಲಿಂ ದೇವರು ಕೂಡಿಸುವ ಸಮಯಗಳಲ್ಲಿ ಅವರನ್ನು ಡೆಕೋರೆಟಿವ್ ಮಾಡುವ ಸಲುವಾಗಿ ಚಿಕ್ಕ ವಯಸ್ಸಿನಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಆಗಿನಿಂದ ಇವರಿಗೆ ನಗೆ ಚಿತ್ರ ಬಿಡಿಸುವ ಹುಚ್ಚು ಇನ್ನು ಜಾಸ್ತಿ ಆಗಿದ್ದು, ಆದ್ದರಿಂದ ಅವರು ಅದೇ ಊರಿಗೆ ಪಾಠ ಮಾಡಲಿಕ್ಕೆ ಹೋಗುವುದೆಂದರೆ ಇನ್ನು ಖುಷಿಯಾಯಿತು. ಅಲ್ಲದೇ ಅವರ ಅಣ್ಣ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾಗಿದ್ದರು. ಅಲ್ಲಿ ಏನಾದರೂ ಕಾರ್ಯಕ್ರಮಗಳು ಇದ್ದರೆ ಅವುಗಳನ್ನು ತಯಾರು ಮಾಡಲು ಕರೆದುಕೊಂಡು ಹೋಗಿ ಅವರಿಂದ ತಯಾರು ಮಾಡಲಿಕ್ಕೆ ಹೇಳುತ್ತಿದ್ದರಂತೆ. ಆ ತರಹದ ಮಾರ್ಗದರ್ಶನದಿಂದ ನಮ್ಮೂರಿನಲ್ಲಿ ಬಹಳಷ್ಟು ಪ್ರೋತ್ಸಾಹ ಸಿಕ್ಕಿತು. ಇಷ್ಟಕ್ಕೆ ಕಾರಣ ಪ್ರಾಥಮಿಕ ಹಂತದಲ್ಲಿ ಶ್ರೀ ಶಂಕರ ಬಾವಾನವರ ಗುರುಗಳು ಶ್ರೀ ನಾಡಗೌಡ ಅಂತ ಶಿಕ್ಷಕರು ಅವರಿಗೆ ವಾರಕ್ಕೆ ಮೂರು ಕ್ಲಾಸುಗಳನ್ನು ಮಾಡಲಿಕ್ಕೆ ಅನುಮತಿಕೊಟ್ಟು ಪ್ರೋತ್ಸಾಹ ನೀಡಿದರು.

ಅವರು ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆ ಕುಳಿತುಕೊಳ್ಳಲು ಬಹಳಷ್ಟು ಪ್ರೋತ್ಸಾಹ ಕೊಟ್ಟಂತಹ ಇಬ್ಬರು ಶಿಕ್ಷಕರುಗಳಾಗಿದ್ದಾರೆ. ಒಬ್ಬರು ಶ್ರೀ ರಾವ್ ಮತ್ತೊಬ್ಬರು ಶ್ರೀ ರವದೆ ಅಂತ ಇವರ ಒಂದು ಮಾರ್ಗದರ್ಶನದಿಂದಲೇ ಇವರಿಗೆ ಎಸ್.ಎಸ್.ಸಿ. ಗೆ ಬರಲು ಅನುಕೂಲವಾಯಿತು. ಇದರಲ್ಲಿ

ಐಚ್ಛಿಕ ವಿಷಯ ತೆಗೆದುಕೊಳ್ಳಲು ನೇರವಾದರು. ಅಲ್ಲಿ ಮೂರು ವಿಷಯಗಳು. ಒಂದು ಸ್ಟಿಲ್ ಲೈಫ್, ಎರಡು ಕಾಂಪೋಷನ್ ಮೂರು ಡಿಸೈನ್ ಹೀಗೆ ವಿಷಯಗಳನ್ನು ಆಯ್ಕೆ ಮಾಡಿಕೊಂಡು ನಂತರ ಆಗ ಎಸ್.ಎಸ್.ಸಿ. ಅಂತ ಅವರು ಕಲಿಯುವಾಗ ನಾಲ್ಕು ವರ್ಷದ ಕೋರ್ಸ. ಆಗ ಇನ್ನು ಎಸ್.ಎಸ್.ಎಲ್.ಸಿ. ಇರುವುದಿಲ್ಲ. ಆದ್ದರಿಂದ ಬಾಂಬೆ ಗೌರ್ನಮೆಂಟ್ ಸ್ಕೂಲನಲ್ಲಿತ್ತು. ಆಗ ಅವರು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ ಮೂರು ವಿಷಯಕ್ಕೆ ೨೦೦ ಅಂಕಗಳು ಇದಕ್ಕೆ ಅವರು ಶೇ.೯೯% ರಷ್ಟು ಅಂಕಗಳನ್ನು ತೆಗೆದುಕೊಂಡರು ಉಳಿದ ವಿಷಯಗಳಿಗಿಂತ ಇದರಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಂಡು ಪಾಸಾಗಿರುವರು. ಎಸ್.ಎಸ್.ಎಲ್.ಸಿ. ಬಾಂಬೆ ಸ್ಕೂಲ್ ವಿಷಯಕ್ಕನುಗುಣವಾಗಿ ಬೋರ್ಡ ಪರೀಕ್ಷೆಗಳಿದ್ದವು ನಂತರ ಮನೆಯಲ್ಲಿ ಅಂದರು ಎಲ್ಲಕ್ಕಿಂತಲೂ ಈ ವಿಷಯದಲ್ಲಿ ಆಸಕ್ತಿ ಹೆಚ್ಚು ಇರುವುದರಿಂದ ಚೆನ್ನಾಗಿ ಅಂಕಗಳಿಸಿದ್ದಾರೆ ಅಂತ ಶ್ರೀ ಶಂಕರ ಬಾವಾನವರ ಗುರುಗಳು ಬಂದು ಹೇಳಿದರು. ನಂತರ ಎಲಿಮೆಂಟರಿ ಮತ್ತು ಇಂಟರಮಿಡಿಯಟ್ ಗ್ರೇಡ್ ಪರೀಕ್ಷೆಯನ್ನು ತೆಗೆದುಕೊಂಡರು. ಅಲ್ಲಿಂದ ಪಾಸಾಗಿ ಮುಂದೆ ಎಸ್.ಎಸ್.ಸಿ. ಮುಗಿಯುವ ಮುಂಚೆ ಧಾರವಾಡದಲ್ಲಿ ಅವರ ಸೋದರ ಮಾವ ಬಿ.ಕಾಂ. ಮಾಡಲಿಕ್ಕೆ ಹೋಗಿದ್ದರು. ಅಲ್ಲಿ ಕರ್ನಾಟಕ ಕಾಲೇಜಿನ ಹಾಸ್ಟೆಲ್ ಒಂದಿತ್ತು. ಅಲ್ಲಿ ಇವರು ಉಳಿದಿದ್ದರು. ಅದಕ್ಕೆ ನಾನು ಯಾವುದೋ ಕಾರಣಕ್ಕೆ ಸಿಟ್ಟು ಮಾಡಿಕೊಂಡು ಧಾರವಾಡಕ್ಕೆ ಬಂದು ಆಗ ಬರಬೇಕಾದರೆ ಊರಿಂದ ರಸ್ತೆಗಳು ಚೆನ್ನಾಗಿ ಇರಲಿಲ್ಲ. ತುಂಬಾ ಕಲ್ಲು ಮುಳ್ಳುಗಳಿದ್ದವು. ಆದರೂ ಕೂಡ ಅಲ್ಲಿಂದ ಬಂದು ಅವರ ಮಾವನ ಹತ್ತಿರ ಉಳಿದುಕೊಂಡರು. ಧಾರವಾಡ ಹಾಲಭಾವಿ ಸ್ಕೂಲ್ ಆಫ್ ಆರ್ಟನಲ್ಲಿ ಕ್ಲಾಸಿಗೆ ಹೋದೆ ಇನ್ನು ಎಸ್.ಎಸ್.ಸಿ. ಮುಗಿಯುವುದಕ್ಕೆ ೫-೬ ತಿಂಗಳು ಇತ್ತು. ಅಲ್ಲಿಯವರಿಗೆ ಕಲಿತ ನಂತರ ಎಲಿಮೆಂಟರಿ ಡ್ರಾಯಿಂಗ್ ಮತ್ತು ಪೇಟಿಂಗ್ ಪರೀಕ್ಷೆಗೆ ಕುಳಿತುಕೊಂಡು ಪಾಸು ಮಾಡಿಕೊಂಡರು. ಆಗ ಅವರ ಗುರುಗಳು ಹೇಳಿದರು. ತಮ್ಮ ನೀನು ಇಷ್ಟೇ ಸಾಕು ಎಸ್.ಎಸ್.ಸಿ. ಸಂಪೂರ್ಣ ಮುಗಿಸಿಕೊಂಡು ಬಾ ನಿನಗೂ ಅನುಕೂಲವಾಗುತ್ತೇ ಮುಂದೆ ಇಲ್ಲಿಗೆ ಹೆಸರು ನೊಂದಾಯಿಸಲಿಕ್ಕೆ ಅಂತ ಹೇಳಿ ಕಳಿಸಿದರು. ಅಲ್ಲಿ ಆ ೫-೬ ತಿಂಗಳಿನಲ್ಲಿ ಪಡಬಾರದ ಕಷ್ಟಗಳನ್ನೆಲ್ಲ ಪಟ್ಟು ಊಟಕ್ಕೆ ಇರದೆ ಇದ್ದರು ಸರಿ ಅಂತ ವಿದ್ಯುತ್ ಸೌಕರ್ಯವಿರದೆ ಇದ್ದರೂ ಮೇಣದ ಬತ್ತಿ ಹಚ್ಚಿ ಚಿತ್ರ ಬಿಡಿಸುವುದನ್ನು ಕಲಿಯುತ್ತಿದ್ದರು. ನಂತರ ಮತ್ತೇ ಪರೀಕ್ಷೆಗೆ ಅಂತ ಊರಿಗೆ ಬಂದು ಎಸ್.ಎಸ್.ಸಿ. ಪರೀಕ್ಷೆ ಬರೆದು ಪಾಸಾದರು. ನಂತರ ಸ್ವೀಟ್ ತೆಗೆದುಕೊಂಡು ಊರಿಗೆ ಹೋದರು ಮೊದಲು ಸಿದ್ದಮಲ್ಲಯ್ಯ ಅಂತ ಗುರುಗಳು ಏನ್ ಬೈದಿದ್ದರಲ್ಲ ಅವರಿಗೆ ಹೋಗಿ ಕೊಟ್ಟು ಕಾಲು ನಮಸ್ಕಾರ ಮಾಡಿಕೊಂಡರು ಸರ್ ನಂದು ರೀಜಲ್ಟ್ ತುಂಬಾ ಚೆನ್ನಾಗಿ ಬಂದಿದೆ ಎಂದಾಗ ಅದಕ್ಕೆ ಅವರು ಹೇಳಿದರು ಆವಾಗ ಇದಕೋಸ್ಕರ ನಾನು ನಿನಗೆ ಬೈದು ನಿನ್ನಲ್ಲಿ ಛಲ ಹುಟ್ಟುವ ಸಲುವಾಗಿ ಹಾಗೆ ಮಾತನಾಡಿದೆ ಎಂದರು. ಆಗ ಎಂ. ಆರ್. ಬಾಳೀಕಾಯಿ ಅಂದುಕೊಂಡರು ಎಂಥವರನ್ನು ಎಂತಹ ಮನಸ್ಸನ್ನು ಗೆಲ್ಲಬಹುದು ಇದಕ್ಕೆಲ್ಲ ತಾಳ್ಮೆ ಮನುಷ್ಯನಿಗೆ ಬಹಳ ಮುಖ್ಯ ಎಂಬ ಅಂಶ ಕಂಡು

ಕೊಂಡರು. ಇದರ ಪ್ರಭಾವ-ಪ್ರೇರಣೆಗಳನ್ನು ಅರಿತುಕೊಂಡಿರುವುದಕ್ಕೆ ಇವರ ಕಲಾಕೃತಿಗಳಲ್ಲಿ ಹೆಚ್ಚಾಗಿ ಅತಿ ತಾಳ್ಮೆಯಿಂದ ರೇಖಾಚಿತ್ರಗಳನ್ನು ಚಿತ್ರಿಸುವುದಕ್ಕ ಸಾಕ್ಷಿಯಾಗಿದೆ ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

ಪರೀಕ್ಷೆ ಮುಗಿಸಿ ರಜೆ ಇದ್ದ ಸಮಯದಲ್ಲಿ ಅಂದರೆ ಆಗ ಸಂಯುಕ್ತ ಕರ್ನಾಟಕ ಒಂದೇ ಪೇಪರ್‌ವಿತ್ತು ಅದನ್ನು ದಿನಾಲು ನೋಡುತ್ತಿದ್ದರು. ಒಂದು ದಿವಸ ಗದಗ ಕಾಲೇಜಿನ ವಿಷಯ ಪೇಪರ್‌ನಲ್ಲಿ ಬಂದಿತ್ತು. ಏನಂದ್ರೆ ತುಂಬಾ ಜನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಅಂತ ಅದನ್ನು ತಕ್ಷಣ ನಿರ್ಧಾರ ಮಾಡಿ ಅವರು ಕೂಡ ಗದಗ ಕಾಲೇಜಿಗೆ ಹೋಗಬೇಕು. ಅವರು ಅಲ್ಲಿಯೇ ಕಲಿತ್ತೇನಿ ಅಂತ ಅಂದಾಗ ಮೊದಲು ಅವರ ಅಣ್ಣ ಒಪ್ಪಲಿಲ್ಲ. ನಂತರ ಅವರ ಸೋದರ ಮಾವ ಅವನು ಎಲ್ಲಿ ಕಲಿತಾನ ಅಲ್ಲಿ ಕಳುಹಿಸಿರಿ ಅಂತ ಅಂದಾಗ ಅವರು ೧೯೬೧ ಇಸ್ವಿಯಲ್ಲಿ ಗದಗ ವಿಜಯ ಕಲಾ ಮಂದಿರಕ್ಕೆ ಹೋದರು. ಅಲ್ಲಿ ಶ್ರೀ ಟಿ.ಪಿ.ಅಕ್ಕಿ ಗುರುಗಳು ಅವರ ಅಣ್ಣನೊಂದಿಗೆ ನೋಡಿ ಮೊದಲು ಹೆಸರು ನೊಂದಾಯಿಸಲು ಒಪ್ಪಲಿಲ್ಲ. ಯಾಕೆಂದರೆ ಈ ಹುಡುಗ ತುಂಬಾ ಕುಳ್ಳಗಿದ್ದಾನೆ. ಆದ್ದರಿಂದ ಇವನೇನು ಕಲಿಯುತ್ತಾನೆ ಎಂದರು. ಆಗ ಅವರ ಅಣ್ಣ ಹೇಳಿದರು ಇಲ್ಲ ಸರ್ ಸ್ವಲ್ಪ ದಿವಸಗಳವರೆಗೆ ನಂತರ ಬೇಕಿದ್ದರೆ ನಾನು ಕರೆದುಕೊಂಡು ಹೋಗುತ್ತೇನೆ ಎಂದಾಗ ಒಪ್ಪಿಕೊಂಡ ನಂತರ ಸರಿ ಅಂತ ಹೇಳಿ ಅವರ ಅಣ್ಣ ನನಗೆ ಒಬ್ಬ ಗೆಳೆಯನ ಜೊತೆಗೆ ರೂಮ್‌ನಲ್ಲಿ ಬಿಟ್ಟುಹೋದರು. ಆ ರೂಪಿನ ಗೆಳೆಯ ಹತ್ತಿ ಅಂತ, ಅವರು ಚೆನ್ನಾಗಿ ಚಿತ್ರ ಬಿಡಿಸುತ್ತಿದ್ದರು. ಕೆಲವು ದಿನಗಳ ನಂತರ ಅವರಿಗೆ ಮೊದಲೇ ನಾಟಕ ಹುಚ್ಚು ಇರುವುದರಿಂದ ರೂಮ್‌ನಲ್ಲಿ ಗೆಳೆಯನಿಗೆ ತಪ್ಪಿಸಿ ನಾಟಕ ನೋಡಲಿಕ್ಕೆ ಹೋಗುತ್ತಿದ್ದರು. ಗದಗನಲ್ಲಿ ಹಲವಾರು ನಾಟಕ ಕಂಪನಿಗಳಿದ್ದು, ದಿನಾಲು ಒಂದೊಂದು ನೋಡಿ ಬರುತ್ತಿದ್ದೆ. ಅವರ ಗೆಳೆಯನಿಗೆ ವಿಷಯ ತಿಳಿಯಿತು. ಬೈಯಲಿಕ್ಕೆ ಶುರ ಮಾಡಿದ ಯಾಕೋ ಬಾಳೀಕಾಯಿ ನೀನು ಬಂದಿರುವುದು ಏನಕ್ಕೆ ನೀನು ಮಾಡುತ್ತಿರುವುದೇನು. ನೀನು ಹೀಗೆ ಮಾಡಿದರೆ ನಿಮ್ಮ ಅಣ್ಣನಿಗೆ ಪತ್ರ ಬರೆದು ಹೇಳುತ್ತೇನೆ ಕರೆದುಕೊಂಡು ಹೋಗಿ ಅಂತ ಆಗ ಅವರು ಹೇಳಬೇಡ ಇನ್ನು ಮುಂದೆ ಹಾಗೆ ಮಾಡಲ್ಲ ಅಂದಾಗ ಸುಮ್ಮನ್ನೆ ಇದ್ದರು ಸ್ವಲ್ಪ ದಿವಸಗಳ ನಂತರ ಮತ್ತೆ ಶುರು ಮಾಡಿದೆ. ಆಗ ಅವರು ಗೊತ್ತಿಲ್ಲದ ಹಾಗೆ ನಮ್ಮ ಮನೆಗೆ ಪತ್ರ ಬರೆದು ಹಾಕಿದರು ತಕ್ಷಣ ನಮ್ಮ ಅಣ್ಣ ಬಂದು ನಡಿ ನೀನು ಊರಿಗೆ ನಿನ್ನ ಗಂಟು ಮೂಟೆ ಕಟ್ಟಿಕೊಂಡು ಅಂದಾಗ ಏಕೆ ಅಂತ ಕೇಳಿದಾಗ ಅವರ ಗೆಳೆಯ ಹೇಳಿದ ಹೌದು ನೀನು ಹೇಳಿದರೆ ಕೇಳಲಿಲ್ಲ. ಅದಕ್ಕೆ ನಾನೇ ಪತ್ರ ಬರೆದು ಹೇಳಿದೆ ಅಂದಾಗ ಅವರ ಇನ್ನೋಮ್ಮೆ ಈ ತರಹ ಮಾಡಲ್ಲ ಅಂತ ಕ್ಷಮೆ ಕೇಳಿದೆ ಮತ್ತೆ ಅವರ ಅಣ್ಣನು ಸರಿ ಅಂತ ಹೇಳಿ ಬಿಟ್ಟು ಹೋದರು.

ಅವರು ಹೋದ ನಂತರ ನನ್ನ ಗೆಳೆಯ ಹೇಳಿದ ಎ ಬಾಳೀಕಾಯಿ ನಾನು ಬಿಡಿಸಿದ ಚಿತ್ರಕ್ಕಿಂತಲೂ ನೀನು ಚೆನ್ನಾಗಿ ಉತ್ತಮ ಕಲಾಕೃತಿಗಳನ್ನು ಬಿಡಿಸಬೇಕು, ನಾನು ಒಂದು ಬಿಡಿಸಿದರೆ ನೀನು ಎರಡು ಬಿಡಿಸಬೇಕು. ನೀನು ಉತ್ತಮ ಕಲಾಕೃತಿಗಳನ್ನು ಬಿಡಿಸಿದಾಗ ಮಾತ್ರ ನನ್ನ ಜೊತೆಗಿದಿದದ್ದು ಸಾರ್ಥಕ, ಇಲ್ಲವಾದರೆ ಇಲ್ಲಿಗೇಕೆ ಬಂದೆ ಅಂದಾಗ ಅವರು ಆಗಲಿ ಇವತ್ತಿನಿಂದ ನೀ ಹೇಳಿದ ಹಾಗೆ ಕೇಳ್ತಿನಿ ಅಂತ ಹೇಳಿದರು. ಅಲ್ಲದೇ ನೀನು ತುಂಬಾ ಜಾಣನಿದಿ ಅದಕ್ಕೆ ಚೆನ್ನಾಗಿ ಅಭ್ಯಾಸ ಮಾಡಿ ನನಗಿಂತಲೂ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳಬೇಕು ಅಂದಾಗ ಆವತಿನಿಂದ ಅವರು ಹೇಳಿದ ಹಾಗೆ ಹೆಚ್ಚು ಹೆಚ್ಚು ಚಿತ್ರ ಬಿಡಿಸುವುದು ಡಿ.ಟಿ.ಸಿ. ಪರೀಕ್ಷೆಯಲ್ಲಿ ಅವರು ಹೇಳಿದ ಹಾಗೆ ಕ್ಲಾಸಿಗೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಆಗ ಅವರ ಗೆಳೆಯ ಅವರಿಗಿಂತಲೂ ಖುಷಿ ಪಟ್ಟರು. ಆದರೆ ಅವರನ್ನು ಇವರು ಯಾವತ್ತಿಗೂ ಮರೆಯುವುದಿಲ್ಲವೆಂದು ಆಗಾಗ ನೆನಪಿಸಿಕೊಳ್ಳುತ್ತಾರೆ. ಜೀವನದಲ್ಲಿ ಬದಲಾವಣೆ ಆದರು ಕೆಲವು ಜನ ಅವರಿಗೆ ಟೀಕೆ ಮಾಡಿದರೂ ಬಿಡಲಿಲ್ಲ. ಎ ಅವನೇನು ಮಾಡುತ್ತಾನೆ. ಇರೋದೆ ಇಷ್ಟು ಉದ್ದ ಎಂದು ರೇಗಿಸುತ್ತಿದ್ದರು. ಈ ರೀತಿಯಾಗಿ ಬಹಳ ಪ್ರಯತ್ನಪಟ್ಟು ತಮ್ಮ ಚಿತ್ರಕಲಾ ಶಿಕ್ಷಣವನ್ನು ಮುಗಿಸಿದ್ದಾರೆಂದು ತಿಳಿದುಬರುತ್ತದೆ.

ನಂತರ ಡಿ.ಟಿ.ಸಿ. ಕಲಿಯುವಾಗ ಅಕ್ಕಿ ಗುರುಗಳು ಒಂದು ನಿಮಿಷ ತಡವಾದರು ಸಹಿತ ಹೊರಗಡೆ ನಿಲ್ಲಬೇಕಾಗುತ್ತಿತ್ತು. ಅವರು ಮತ್ತು ಅವರ ಸ್ನೇಹಿತ ಒಂದು ದಿವಸ ತಡವಾಗಿ ಹೋದರು. ನಮಗಿಬ್ಬರಿಗೂ ಹೊರ ಹಾಕಿದರು. ಆಗ ಸಿ.ಎನ್. ಪಾಟೀಲ ಗುರುಗಳಿದ್ದರೂ ಆಗ ಅವರು ಹೇಳಿದ್ರು ಅಕ್ಕಿ ಸರ್ ಪರವಾನಿಗೆ ಇಲ್ಲದೇ ಒಳಗಡೆ ಬರೋ ಹಾಗಿಲ್ಲ ಎಂದರು ಏನು ಮಾಡೋಣ ಅಂತ ತಿಳಿದು ಅವರ ಮನೆಗೆ ಹೋದೇವು. ಅವರು ನಮ್ಮನ್ನು ನೋಡಿ ನೀವು ಇನ್ನೊಂದು ಸಲ ಬಂದ್ರೆ ನಿಮ್ಮ ಕಾಲ್ ಕಡೆದು ಕೈಯಲ್ಲಿ ಕೊಡ್ತಿನಿ ಅಂದರು ಆದರು ನೀವೇ ಮಾಡಿದರು. ಅವರು ನಿಮ್ಮನ್ನು ಬಿಟ್ಟು ಹೋಗುವುದಿಲ್ಲ ಅಂತ ಹೇಳಿದಾಗ ಆಯ್ತು ನಾಳೆ ಬರ್ರಿ ಅಂದಾಗ ಖುಷಿ ಪಟ್ಟು ಎಲ್ಲರಕ್ಕಿಂತಲೂ ಹೆಚ್ಚು ವರ್ಕಗಳನ್ನು ಮಾಡಿಕೊಂಡು ಮರು ದಿವಸ ಹೋಗಿ ತೋರಿಸಿದರು. ಆದರೂ ಒಪ್ಪಿಕೊಳ್ಳದೇ ಹೋದರು. ಮತ್ತೇ ಮನೆಗೆ ಹೋದಾಗ ಸ್ವಲ್ಪ ಬೈದು ನಂತರ ಕೈಕಾಲು ಮುಖ ತೊಳೆದುಕೊಂಡು ಬರ್ರಿ ಅಂತ ಹೇಳಿ ಊಟ ಮಾಡಿ ಕ್ಲಾಸಿಗೆ ಹೋಗ್ರಿ ಅಂತ ಹೇಳಿದರು. ಆಗ ಅವರ ಹೃದಯ ಎಂತಹದು ಅಂದರೆ ಹೇಳಲಿಕ್ಕೆ ಸಾಧ್ಯವಿಲ್ಲ. ಆವತ್ತಿನಿಂದ ಇವತ್ತಿನವರೆಗೂ ಆ ತಪ್ಪು ಮಾಡಲಿಲ್ಲ. ಅವರು ಹಾಗೆ ಮಾಡದಿದ್ದರೆ ಇವತ್ತು ಲ್ಲೋ ಇರುತ್ತಿದ್ದೇವೋ ಇಂತಹ ಒಂದು ಒಳ್ಳೆಯ ಗುಣ ಕಲಿಸುವುದರ ಜೊತೆಗೆ. ವೇಳೆಯ ಮಹತ್ವವನ್ನು ತಿಳಿಸಿಕೊಟ್ಟರು. ಇಂತಹ ಪ್ರಭಾವದಿಂದ ಹೆಚ್ಚು ಸಮಯವನ್ನು ಕಲಾಕೃತಿ ರಚಿಸುವಲ್ಲಿ ಬಳಸಿಕೊಂಡರು.

ಮುಂದೆ ಡಿ.ಟಿ.ಸಿ. ಎರಡನೇ ವರ್ಷ ಹೆಸರು ನೊಂದಾಯಿಸಿದರು. ಇಲ್ಲಿಯೇ ಕ್ಲಾಸ್, ಇಲ್ಲಿಯೇ ವರ್ಕಗಳನ್ನು ಮಾಡುತ್ತೇನೆ ಎಂದಾಗ ಆಗ ಅಕ್ಕಿ ಗುರುಗಳು ಕೇಳಿದರು ಏನೆಂದ್ರೆ ತಮ್ಮ ನಿನ್ನ ಎಂಪ್ಲಾಯಮೆಂಟರಿ ನಂಬರ ಎಲ್ಲಿದೆ ಅದು ವರ್ಗಾವಣೆ ಮಾಡಿಕೊಳ್ಳುದಕ್ಕೆ ಆಗುತ್ತೇನು ಅಂತ ಅಂದಾಗ ಸರ್ ಅದು ಬೆಳಗಾಂವ ಜಿಲ್ಲೆಯ ಕಚೇರಿಯಲ್ಲಿದೆ. ಸರ್ ನೀವು ಹೇಗೆ ಹೇಳುತ್ತಿರೋ ಹಾಗೆ ಮಾಡುತ್ತೇವೆ ಎಂದರು. ಅಂದಾಗ ಈಗ ನೀವು ಊರಿಗೆ ಹೋಗಿ ನಿಮ್ಮ ಅಣ್ಣನಿಗೆ ಹೇಳು. ಇಲ್ಲಿಂದ ನಂಬರ ತೆಗೆದುಕೊಂಡು ಹುಬ್ಬಳ್ಳಿ–ಧಾರವಾಡ ಜಿಲ್ಲೆ ಅಂತ ಹೇಳಿ ನಿನ್ನ ನಂಬರ ಕೊಟ್ಟು ಹೆಸರು ನೊಂದಾಯಿಸಿ ಬಾ ಎಂದಾಗ ಆಯ್ತು ಸರ್ ೨–೩ ದಿವಸ ಆಗುತ್ತೆ ಅಂದಾಗ ಬೇಡ ೪–೫ ದಿವಸ ತೆಗೆದುಕೊಂಡು ಮುಗಿಸಿಕೊಂಡು ಬಾ ಎಂದರು. ಸುಮ್ಮನ್ನೇ ನಿಂತೆ ಅವರಿಗೆ ಗೊತ್ತಾಯಿತು. ಇವನಲ್ಲಿ ಹಣವಿಲ್ಲ ಅಂತ ಆಗ ೨೦೦ ರೂ ಕೊಟ್ಟು ಹೋಗು ಅದನ್ನೆಲ್ಲ ಮುಗಿಸಿಕೊಂಡು ಬಾ ಎಂದು ಕಳುಹಿಸಿಕೊಟ್ಟರು. ಅವರು ಹೋಗಿ ಎಲ್ಲ ಕೆಲಸವನ್ನು ಮುಗಿಸಿ ಜೊತೆಗೆ ನಮ್ಮ ಅಣ್ಣನನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದೆ. ಇಲ್ಲಿಯೂ ನಂಬರ ಕೊಟ್ಟು ಬಂದ ಮರುದಿವಸವೇ ಸರಕಾರಿ ಮಾಧ್ಯಮಿಕ ಶಾಲೆಯ ಡ್ರಾಯಿಂಗ್ ಶಿಕ್ಷಕ ಅಂತ ಆದೇಶ ಪತ್ರ ಕೊಟ್ಟರು ಹೇಗೆ ಅಂತ ಕೇಳಿದಾಗ ಎಂಪ್ಲಾಯಮೆಂಟರಿ ಆದೇಶ ಕೊಟ್ಟಾಗ ಇವರ ಒಂದು ಮಾತಿನಿಂದ ಹುಡುಗ ಜಾಣನಿದ್ದಾನೆ ಅಂಥ ಇನ್ನೊಬ್ಬ ಸುಂಕದ ಅಂಥ ಅವರ ಸ್ನೇಹಿತ ಇಬ್ಬರಿಗೂ ಆದೇಶ ಪತ್ರ ಕೊಟ್ಟರು ಇಲ್ಲಿಗೆ ಕಲಾ ಶಿಕ್ಷಣ, ಮುಗಿದು, ಮುಂದೆ ವೃತ್ತಿ ಜೀವನಕ್ಕೆ ಕಾಲಿಡುತ್ತಾರೆ.

ಟಿಪ್ಪಣಿಗಳು :

೧) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ. ಎಂ. ಚಿದಾನಂದಮೂರ್ತಿ ಪುಟ-೧

೨) ಕರ್ನಾಟಕ ಜನಪದ ಚಿತ್ರಕಲೆ ಡಾ. ಎಸ್. ಸಿ. ಪಾಟೀಲ ಪುಟ-೩

೩) ವಿರ್ಣ ಸಂಜಯ ಚಿತ್ರಕಲೆ ಡಾ. ಎಸ್. ಸಿ. ಪಾಟೀಲ ಪುಟ-೩೮

೪) ಎಂ. ಆರ್. ಬಾಳೀಕಾಯಿ: ಸುರೇಶ ಡಿ. ಹಾಲಭಾವಿ, ಕ.ಲ.ಆ.ಬೆ ಪುಟ-೯

೫) ಕಲಾವಿದರೊಂದಿಗೆ ಸಂದರ್ಶನ, ದಿನಾಂಕ ೧೪-೦೩-೨೦೧೪ ರಂದು

೬) ಎಂ. ಆರ್. ಬಾಳೀಕಾಯಿ, ಸುರೇಶ ಡಿ. ಹಾಲಭಾವಿ ಕ.ಲ.ಕ.ಆ.ಬೆ ೨೦೦೪ ಪುಟ-೧೦

೭) ಸಾಧನಕೇರಿಯ ಸಾಧಕರ ಕಲಾವಿದ ಎಂ.ಆರ್.ಬಿ. ನಾಗೇಂದ್ರ ಯಲ್ಲಾಪೂರ

೮) ಶಂಕರ ಪುರಿ ಬಾವಾನವರ, ಶ್ರೀ ಎಂ. ಆರ್. ಬಾಳೀಕಾಯಿ ಅವರ ಪ್ರಾಥಮಿಕ ಗುರುಗಳೊಂದಿಗೆ ಸಂದರ್ಶನ

ಅಧ್ಯಾಯ : ಮೂರು

ಶ್ರೀ ಎಂ.ಆರ್.ಬಾಳೀಕಾಯಿ ಅವರ ವೃತ್ತಿ ಜೀವನ ಮತ್ತು ಕಲಾ ಜೀವನ

ಅಧ್ಯಾಯ–ಮೂರು

ಶ್ರೀ ಎಂ. ಆರ್. ಬಾಳೀಕಾಯಿ ಅವರ ವೃತ್ತಿ ಜೀವನ ಮತ್ತು ಕಲಾಜೀವನ

ಬಾಣಾವರದಲ್ಲಿ ಸೇವೆ :

ಎಂ. ಆರ್. ಬಾಳೀಕಾಯಿಯವರು ೧೯೬೨ ರ ಅಕ್ಟೋಬರ್ ೩೧ ರಂದು ಡಿ.ಟಿ.ಸಿ. ಮುಗಿಸಿ ಹಾಸನ ಜಿಲ್ಲೆಯ ಅರಸಿಕೇರಿ ತಾಲೂಕಿನ ಬಾಣಾವರದಲ್ಲಿ ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡರು. ಆನಂತರ ವೃತ್ತಿಯ ಜೊತೆಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೇಸಿಗೆ ರಜೆಯಲ್ಲಿ ಪರೀಕ್ಷೆ ತೆಗೆದುಕೊಳ್ಳುವ ವ್ಯವಸ್ಥೆ ಇರುವುದರಿಂದ ರಜಾ ದಿನಗಳಲ್ಲಿ ಊರಿಗೆ ಹೋಗಿ ಗದಗ ಕಾಲೇಜಿಗೆ ಬಂದು ಅಲ್ಲಿಯೇ ವರ್ಕಗಳನ್ನು ಮಾಡಿ, ಉಳಿದ ವಿಷಯಗಳನ್ನು ತಿಳಿದು ಪರೀಕ್ಷೆ ಬರೆದು ಮತ್ತೇ ವೃತ್ತಿಗೆ ಹೋದರು.

ವಿವಾಹ ಮತ್ತು ಕುಟುಂಬ :

ಹುಕ್ಕೇರಿ ತಾಲೂಕಿನ ವಿಲಿಮುನ್ನೋಳಿ ಗ್ರಾಮದ ನೇಮಗೌಡ ಮಲ್ಲಗೌಡನವರ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಚಂದ್ರವ್ವಾ (ಬಾಳೀಕಾಯಿಯವರ ಅಕ್ಕ) ಇವರ ಸುಪುತ್ರಿ ಚಿ.ಕಂ.ಸೌ. ಕಸ್ತೂರಿಬಾಯಿ ಇವರೊಂದಿಗೆ ೧೯೬೪ ರಲ್ಲಿ ವಿವಾಹವಾದರು. ಇವರು ಸ್ವಂತ ಅಕ್ಕನ ಮಗಳಾಗಿದ್ದರಿಂದ ಮಹಾವೀರರಿಗೆ ಎಲ್ಲಾ ರೀತಿಯಿಂದ ಸಹಾಯ ಸಹಕಾರ ನೀಡುವುದರ ಜೊತೆಗೆ ಇವರ ಏಳಿಗೆಗೆ ಕಾರಣರಾಗಿ ಕಲಾಜೀವನಕ್ಕೆ ಯಾವುದೇ ತೆರಾದ ನೋವುಂಟು ಮಾಡದೇ ಇನ್ನೂ ಹೆಚ್ಚಾಗಿ

ಪ್ರೋತ್ಸಾಹಿಸುತ್ತಾ ಬರುತ್ತಿದ್ದಾರೆ. ಇವರಿಗೆ ಮೂರು ಜನ ಮಕ್ಕಳು, ಹಿರಿಯ ಮಗನು ರಮೇಶ ಇವರು ಆರ್ಟ್ಸ್ ಮಾಸ್ಟರ್ ಹಾಗೂ ಪೇಂಟಿಂಗ್ ಡಿಪ್ಲೋಮಾ ಪದವೀದರರಾಗಿ ಒಳ್ಳೆಯ ಫೋಟೋಗ್ರಾಫರ ಕೂಡ ಆಗಿರುವುದರಿಂದ ಜೊತೆಗೆ ಧಾರವಾಡದಲ್ಲಿ ಚಿತ್ತಾರ ಆರ್ಟ್ ಗ್ಯಾಲರಿ ಮತ್ತು ಗ್ರಾಫೀಕ್ಸ್‌ನಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದಾರೆ. ಇವರ ಧರ್ಮಪತ್ನಿ ರೇಖಾ ಇವರಿಗೆ ಎರಡು ಮಕ್ಕಳು ಒಂದು ಸುಪ್ರೀತ್, ಇನ್ನೊಂದು ವೈಭವ, ಇನ್ನುಳಿದ ಬಾಳೀಕಾಯಿ ಅವರ ಇಬ್ಬರು ಹೆಣ್ಣು ಮಕ್ಕಳು ಗಂಗಾ ಮತ್ತು ಚಂದ್ರಕಲಾ ಇವರಿಬ್ಬರನ್ನು ಒಳ್ಳೆಯ ಸಂಬಂಧ ನೋಡಿ ಮದುವೆ ಮಾಡಿ ಕೊಟ್ಟಿದ್ದಾರೆ.

ಹೀಗೆ ೧೯೬೬ ರಲ್ಲಿ ಡಿಪ್ಲೋಮಾ ಡ್ರಾಯಿಂಗ್ ಹಾಗೂ ಪೇಂಟಿಂಗ್ ಪರೀಕ್ಷೆಯಲ್ಲಿ ವಿಜಯ ಕಲಾಮಂದಿರ ಗದಗ ಕಾಲೇಜಿನಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕನಲ್ಲಿ ತೇರ್ಗಡೆಯಾಗಿ, ಇವರು ಗುರುವೃಂದಕ್ಕೆ ಮತ್ತು ಕಲಾ ಸಂಸ್ಥೆಗೆ ಹಾಗೂ ಇವರ ಕುಟುಂಬಕ್ಕೆ ಕೀರ್ತಿ ತಂದರು. ಇಲ್ಲಿಗೆ ಅವರ ಶಿಕ್ಷಣ ನಿಂತು ಹೋಯಿತು. ಕಾರಣ ನಂತರದ ದಿನಗಳಲ್ಲಿ ರಜೆಗಳು ಸಿಗದೆ ಇರುವುದರಿಂದ ಅನಿವಾರ್ಯವಾಗಿ ಶಿಕ್ಷಣವನ್ನು ನಿಲ್ಲಿಸಿದರು. ಆಗ ಇನ್ನೂ ಅವರಿಗೆ ೫೦-೧೦೦ ರೂಗಳಷ್ಟೇ ಸಂಬಳವಿರುವುದು. ಇದು ಸತತವಾಗಿ ಮೂರು ವರ್ಷಗಳವರೆಗೆ ತೆಗೆದುಕೊಂಡು ನಂತರ ೧೨೦ ರಿಂದ ೨೮೦ ರವರೆಗೆ ಸಂಬಳ ತೆಗೆದುಕೊಳ್ಳುತ್ತಿದ್ದರು.

ಬಾಣಾವರದಲ್ಲಿ ೮ ರಿಂದ ೯ ವರ್ಷಗಳ ಕಾಲ ಅಲ್ಲಿದ್ದು ಅಲ್ಲಿಯ ವಾತಾವರಣ ಬಾಳೀಕಾಯಿ ಅವರಿಗೆ ತುಂಬಾ ಚೆನ್ನಾಗಿ ಹೊಂದಿಕೊಂಡಿರುವುದರಿಂದ ಅಲ್ಲಿಯ ಶಿಕ್ಷಕರ ಮನಸ್ಸನ್ನು ಗೆದ್ದು ಜೊತೆಗೆ ಸ್ಥಳೀಯ ವಿದ್ಯಾರ್ಥಿಗಳಲ್ಲದೇ ಸುತ್ತಮುತ್ತಲಿನ ವಿದ್ಯಾರ್ಥಿಗಳನ್ನು ತಮ್ಮ ಹೃದಯಕ್ಕೆ ಹತ್ತಿರವಾಗುವಂತೆ ಅವರುಗಳ ಮನಸ್ಸನ್ನು ಗೆದ್ದು, ಅವರಿಗೆ ಚಿತ್ರಕಲೆ ಎಂದರೆ ಏನು ಅಂತ ಕೇಳುವ ಜನರಿಗೆ ಅದರ ಬಗ್ಗೆ ಅರಿವು ಮೂಡಿಸಿ ಅವರುಗಳಿಂದ ಕಲಾಕೃತಿಗಳನ್ನು ಮೂಡಿಸುವುದು ಪ್ರದರ್ಶನ ನಂತರ ಬಹುಮಾನಗಳನ್ನು ಕೊಡಿಸುವುದರ ಮೂಲಕ ಅವರನ್ನು ಒಂದು ರೂಪಕ್ಕೆ ತರುವ ಪ್ರಯತ್ನ ಮಾಡಿದ್ದಾರೆ.

ಈ ಪ್ರಯತ್ನದ ಜೊತೆಗೆ ಹೆಣ್ಣು ಮಕ್ಕಳ ಪೋಷಕರನ್ನು ಮತ್ತು ಅಲ್ಲಿರುವಂತಹ ಸದಸ್ಯರನ್ನು ಕರೆಯಿಸಿ ಅವರಲ್ಲಿರುವಂತಹ ಕೌಶಲ್ಯ ಚಟುವಟಿಕೆಗಳನ್ನು ಕುರಿತು ಚರ್ಚಿಸುವುದು. ಜೊತೆಗೆ ಪ್ರದರ್ಶನ, ಪ್ರೋತ್ಸಾಹ, ಬಹುಮಾನ ಕೊಡಿಸುವುದರ ಮುಖಾಂತರ ಅವರಲ್ಲಿರುವಂತಹ ಕಲೆಗಳನ್ನು ಹೊರ ಹಾಕುವ ಪ್ರಯತ್ನ ಮಾಡಿಸಿದ್ದಾರೆ. ಹೀಗೆ ೨-೩ ವರ್ಷಗಳವರೆಗೆ ಮಾಡಿ ತದನಂತರ ಅಲ್ಲಿರುವಂತಹ ಮಕ್ಕಳಿಗೆ ಲೋವರ್ ಮತ್ತು ಹೈಯರ್ ಗ್ರೇಡ್ ಪರೀಕ್ಷಾ ಕೇಂದ್ರದ ಸೆಂಟರಗೆ ೧೦೦ ಜನ ವಿದ್ಯಾರ್ಥಿಗಳು

ಬೇಕಾಗಿರುವುದರಿಂದ ಸ್ವತಃ ಕಲಾವಿದರು ಆ ಊರಲ್ಲಿ ಇರುವಂತಹ ಇಂಜಿನಿಯರ್ಸ್, ಡಾಕ್ಟರ್ಸ್, ಟೀಚರ್ಸ್, ಇಂತಹನ್ನೆಲ್ಲ ಪರೀಕ್ಷೆಗೆ ಕುಳಿತುಕೊಳ್ಳುವ ಅವಕಾಶ ಕಲ್ಪಿಸಿ ಕೊಡುವುದರ ಜೊತೆಗೆ ಅವರವರ ಮನೆಗಳಿಗೆ ಹೋಗಿ ಚಿತ್ರಕಲಾ ವಿಷಯದ ಬಗ್ಗೆ ಪಾಠ ಬೋಧನೆ ಮಾಡಿ ಬರುವಂತಹ ವ್ಯಕ್ತಿ ಇವರಾಗಿದ್ದರು. ಇಂತಹ ಚಿತ್ರಕಲಾ ಕ್ಷೇತ್ರದಲ್ಲಿ ಬೆಳೆಸುವಲ್ಲಿ ತಮ್ಮ ಕಾರ್ಯ ನಿರ್ವಹಿಸಿದಂತವರಾಗಿದ್ದಾರೆ. ಜೊತೆಗೆ ಪ್ರತಿಯೊಬ್ಬರಿಗೂ ಚಿತ್ರಕಲೆಯ ಬಗ್ಗೆ ಮನೆ ಮನೆಗೆ ಪಾಠ ಬೋಧನೆ ಮಾಡಿರುವುದು ವಿಶೇಷವಾದ ಸಂಗತಿಯಾಗಿದೆ ಎಂಬುದು ತಿಳಿದುಬರುತ್ತದೆ.

ಒಳ್ಳೆಯ ಮನೋಭಾವ ಹೊಂದಿದ ಈ ಕಲಾವಿದರು ತಾವು ಅವರುಗಳ ಮನೆಗೆ ಅವರೆಲ್ಲರ ಸಮಯವನ್ನು ತಿಳಿದುಕೊಂಡು ಹೋಗಿ ಚಿತ್ರಕಲೆ ಕಲಿಸಿಕೊಟ್ಟು ಬರುತ್ತಿದ್ದರು. ಇದರಿಂದಾಗಿ ಇನ್ನು ಅವರ ಮೇಲೆ ಪ್ರತಿಯೊಬ್ಬರು ತುಂಬಾ ಒಳ್ಳೆಯ ಭಾವನೆಯಿಂದ ಕಾಣುತ್ತಾರೆ. ಇದರ ಜೊತೆಗೆ ಯಾವುದೇ ಒಂದು ವಸ್ತು ಬೇಕೆಂದರೆ ಸಾಕು ಮನೆಲಿ ಹಾಗೇ ತಂದಿಡುತ್ತಿದ್ದರಂತೆ. ಅಷ್ಟೊಂದು ಜನ ಅವರನ್ನು ತುಂಬಾ ಅಭಿಮಾನದಿಂದ ಮತ್ತು ಆತ್ಮೀಯತೆಯಿಂದ ಕಾಣುತ್ತಿದ್ದರು. ಇದರ ಜೊತೆಗೆ ಪರೀಕ್ಷೆ ಕೇಂದ್ರವನ್ನು ತೆಗೆದುಕೊಂಡು ಎಲ್ಲರೂ ಪರೀಕ್ಷೆಗೆ ಕುಳಿತುಕೊಂಡು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅವರಿಗೆ ಇದರಿಂದ ತುಂಬಾ ಖುಷಿಯಾಯಿತು. ಅದಕ್ಕೆ ಸರಳ ಸ್ನೇಹಮಯ ಸ್ವಭಾವ ಹಾಗೂ ನಿಸ್ವಾರ್ಥ ಸೇವೆಯಿಂದ ಅಲ್ಲಿಯ ವಿದ್ಯಾರ್ಥಿಗಳನ್ನು ಸಿಬ್ಬಂದಿಯವರನ್ನು ಮತ್ತು ಊರಲ್ಲಿನ ಕಲಾಸಕ್ತರನ್ನು ಪರೀಕ್ಷೆಗೆ ಕೂಡಿಸಿ ನೂರಕ್ಕೆ ನೂರರಷ್ಟು ಫಲಿತಾಂಶ ಬರುವಂತೆ ಮಾಡಿ ಇವರ ಉತ್ಸಾಹ ಕಾರ್ಯ ಮಾಡುವ ಪ್ರವೃತ್ತಿಯನ್ನು ನೋಡಿ ಊರ ಜನರು ಸಂತೋಷಪಟ್ಟು ಅವರನ್ನು ಅನೇಕ ಬಾರಿ ಸನ್ಮಾನಿಸಿ ಗೌರವಿಸಿದ್ದಾರೆ. ಆಗ ಕಲಾವಿದರಿಗೆ ಅನಿಸುವುದೆನೆಂದರೆ ನಾನು ಎಷ್ಟೊಂದು ಅಭಿವೃದ್ಧಿ ಪಡಿಸಿದನೆಂದು ಬಹಳ ಆನಂದದಾಯಕವಾಗಿ ಹೇಳಿಕೊಳ್ಳುವುದನ್ನು ಗಮನಿಸಲಾಗಿದೆ. ಅವರು ನೀಡಿದ ಅನೇಕ ನಿರೂಪಣೆಗಳಲ್ಲಿ ಮೂಲ ಸಂಶೋಧನೆ ಪೂರಕವಾಗಿವೆ.

ಬಾಳೀಕಾಯಿ ಅವರಿಗೆ ಮುಂದೆ ಅಲ್ಲಿಂದ ವರ್ಗ ಮಾಡಿಸಿಕೊಳ್ಳಲು ತಂಬಾ ಕಷ್ಟವಾಯಿತು. ಯಾಕೆಂದರೆ ಆ ವಾತಾವರಣದಲ್ಲಿ ಬೆಳೆದು ಬಿಟ್ಟು ಬೇರೆ ಊರಿಗೆ ಹೋಗುವುದೆಂದರೆ ಆ ಊರ ಜನರಿಗೆ ಇವರನ್ನು ಕಳುಹಿಸಿಕೊಡುವ ಮನಸ್ಸೆ ಇರಲಿಲ್ಲ. ಆಗ ಆದಂತಹ ನೋವು ಈಗಲೂ ಮರೆಯೋಕೆ ಆಗಲ್ಲ ಅಂತ ಹೇಳಿಕೊಳ್ಳುತ್ತಾರೆ. ಆದ್ದರಿಂದ ಕಲಾವಿದರನ್ನು ಅಲ್ಲಿಯ ಜನ ಮತ್ತು ವಿದ್ಯಾರ್ಥಿಗಳು ಬಹಳ ಗೌರವದಿಂದ ಕಾಣುತಲಿದ್ದಾರೆ. ಆದರೆ ಇಂತಹ ವಿಷಯ ತಿಳಿದುಕೊಳ್ಳುವುದು ಬಹಳಷ್ಟಿದೆ ಎಂಬ ಟೀಕೆಗೆ ಗುರಿಪಡಿಸುತ್ತಾರೆ. ಆದರೆ ಮೂಲ ಸಂಶೋಧನ ಸಮಯ ವ್ಯಾಪ್ತಿಗೆ ಸೀಮಿತಗೊಳಿಸಿಕೊಂಡು ಪ್ರಮುಖ ವಿಷಯಗಳನ್ನು ಮಾತ್ರ ಸಂಶೋಧನಾ ಪ್ರಬಂಧಕ್ಕೆ

ಬಳಸಿಕೊಳ್ಳಲಾಗಿದೆ. ಬಾಳೀಕಾಯಿ ಅಂತ ಒಬ್ಬ ಸರ್ ಅಪರೂಪಕ್ಕೆ ದೊರೆತವರಾದರು ಅನ್ನೋದಕ್ಕೆ ಕಾರಣ ಕೆಲವೊಂದು ಜನ ಚಿತ್ರಕಲಾ ಶಿಕ್ಷಕರೆಂದರೆ ಎನ್ ಒಂದೆರಡು ಗೆರೆ ಹಾಕಿ ಬರುತ್ತಾರೆ ಅದನ್ನು ಮೊದಲು ಹೊರ ಹಾಕಬೇಕು. ಒಬ್ಬ ಚಿತ್ರಕಲಾ ಶಿಕ್ಷಕ ಅವನೊಬ್ಬ ಕಲಾವಿದನೆಂದು ಅನಿಸಿಕೊಳ್ಳಬೇಕು. ಅದಕ್ಕೆ ಅವಕಾಶ ಸಿಕ್ಕಿದು ಈ ಧಾರವಾಡದ ಸರಕಾರಿ ಚಿತ್ರಕಲಾ ಶಾಲೆಯಲ್ಲಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಜೊತೆಗೆ ಸಂತೋಷದಿಂದ ಈ ಚಿತ್ರಕಲಾ ಶಿಕ್ಷಕರ ಸೇವೆ ಸಲ್ಲಿಸಲು ತಮ್ಮ ಬದುಕನ್ನು ಮುಡಿಪಾಗಿ ಇಟ್ಟಿರುವುದನ್ನು ಗಮನಿಸಬಹುದಾಗಿದೆ.

ಧಾರವಾಡದಲ್ಲಿ ಸೇವೆ :

ಧಾರವಾಡ ಸರಕಾರಿ ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜಿಗೆ ೧೯೭೦ ರ ಮೇ ತಿಂಗಳಲ್ಲಿ ಶ್ರೀ ಎಂ. ಆರ್. ಬಾಳೀಕಾಯಿಯವರಿಗೆ ವರ್ಗವಾಯಿತು. ಅಲ್ಲಿಯೂ ಅವರು ತಮ್ಮ ಕರ್ತವ್ಯ ನಿಷ್ಠೆಯನ್ನು ಚೆನ್ನಾಗಿ ಮಾಡುತ್ತಾ ಬಂದರು. ಹೆಣ್ಣು ಮಕ್ಕಳಿಗಾಗಿ ಡ್ರಾಯಿಂಗ್ ಲೋವರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳನ್ನು ನಡೆಸುವ ಪ್ರತ್ಯೇಕ ಪರೀಕ್ಷಾ ಕೇಂದ್ರವನ್ನು ಪ್ರಾರಂಭ ಮಾಡಿದರು. ಅಲ್ಲಿಯ ಸಿಬ್ಬಂದಿಯವರು ಕೂಡ ಇವರಿಂದ ಚಿತ್ರಕಲೆಯ ಬಗ್ಗೆ ತರಬೇತಿ ಪಡೆದು ಪರೀಕ್ಷೆಗಳಿಗೆ ಕುಳಿತು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಿದ್ದರು. ಹೀಗೆ ಇಲ್ಲಿಯೂ ತಮ್ಮ ಉತ್ತಮ ಸೇವೆಯನ್ನು ಸಲ್ಲಿಸುತ್ತ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ನಂತರ ಮಹಿಳಾ ಟ್ರೇನಿಂಗ್ ಕಾಲೇಜಿನ ಉಪನ್ಯಾಸಕರನ್ನು ಕೇಳಿ ಡ್ರಾಯಿಂಗ್ ಮಾಸ್ಟರ್ ಪರೀಕ್ಷೆಗೆ ಕುಳಿತುಕೊಳ್ಳಬೇಕು ಅಂತ ಮನವಿ ಮಾಡಿಕೊಂಡು, ಶಾಲೆ ಅವಧಿ ಬಿಟ್ಟು ಕಾಲೇಜಿನ ಯಾವ ವಿಷಯಗಳಿಗೆ ತೊಂದರೆಯಾಗದೆ ಅವರು ನೋಡಿಕೊಳ್ಳುತ್ತೇನೆ ಎಂದು ಹೇಳಿ ಒಂದು ಪತ್ರ ಬರೆದು ಕೊಟ್ಟ ನಂತರ ಅವರು ಡಿ.ಡಿ.ಪಿ.ಐ. ಕಛೇರಿಗೆ ಕರೆಸಿದರಂತೆ ಆಗ ಅವರು ಅನುಮತಿ ಕೊಟ್ಟರು. ನಂತರ ಇಲ್ಲಿ ಯಾರಿಗೂ ತಮ್ಮಿಂದ ತೊಂದರೆಯಾಗಬಾರದು ಎನ್ನುವ ಮನೋಭಾವನೆ ಹೊಂದಿದ ವ್ಯಕ್ತಿ ಇವರಾದರು. ಇಲ್ಲಿಯೂ ಕೂಡ ಉತ್ತಮ ಚಿತ್ರಕಲಾ ಶಿಕ್ಷಕರಾಗಿ ನಿರಂತರವಾಗಿ ಸೇವೆ ಸಲ್ಲಿಸಲು ತಮ್ಮ ಜೀವನ ಮುಡಿಪಾಗಿಟ್ಟವರಾಗಿದ್ದಾರೆ.

ಉತ್ತರ ಕರ್ನಾಟಕದಲ್ಲಿ ೧೯೩೩ ರಲ್ಲಿ ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟ ಧಾರವಾಡದ ಚಿತ್ರಕಲಾ ಶಾಲೆಯ ಸಂಸ್ಥಾಪಕರಾದ ಶ್ರೀ ಡಿ. ವ್ಹಿ. ಹಾಲಭಾವಿ ಗುರುಗಳ ಮಾರ್ಗದರ್ಶನದಲ್ಲಿ ೧೯೭೧ ರಲ್ಲಿ ಅವರ ಇಚ್ಛೆಯಂತೆ ಸ್ಕೂಲ್ ಆಫ್ ಆರ್ಟ್‌ನಲ್ಲಿ ಡ್ರಾಯಿಂಗ್ ಮಾಸ್ಟರ್ ಓದುವುದಕ್ಕೆ ಪ್ರಾರಂಭಿಸಿದರು. ಮುಂದೆ ಡಿ.ಟಿ.ಸಿ. ಆದ ಮೇಲೆ ನಾಲ್ಕು ವರ್ಷ ಡ್ರಾಯಿಂಗ್ ಸ್ಕೂಲ್‌ನಲ್ಲಿ ಸರ್ವಿಸ್ ಮಾಡಿದರೆ ಅಂತವರಿಗೆ ನೇರವಾಗಿ ಡಿ.ಎಂ. ಪರೀಕ್ಷೆ ಕುಳಿತುಕೊಳ್ಳಲು ಬರುವುದು ಎಂದು ಹೇಳಿದರು. ಆಗ ಡಿ.ಟಿ.ಸಿ. ಮತ್ತು ಎ.ಎಂ. ಮಧ್ಯದಲ್ಲಿ ಇರುವಂತಹ ಪರೀಕ್ಷೆ ಇದಾಗಿದ್ದು ಇದನ್ನು ಪಾಸ್ ಮಾಡುವ ಸಲುವಾಗಿ

ಸ್ಕೂಲ್ ಆಫ್ ಆರ್ಟ್‌ಗೆ ಕಲಿಯಲು ಅಲ್ಲಿಗೆ ಹೋದ ಮೇಲೆ ಅವರಿಗೆ ಶ್ರೀ ಡಿ. ವ್ಹಿ. ಹಾಲಭಾವಿ ಗುರುಗಳು ತುಂಬಾ ಚೆನ್ನಾಗಿ ಎಲ್ಲವನ್ನು ಕಲಿಸುತ್ತಿದ್ದರು. ಜೊತೆಗೆ ಅವರಿಗೆ ಹೊಸತನ ಹೇಗೆ ಬೆಳೆಸಬೇಕು ಅಂತ ಗೊತ್ತಿರಲಿಲ್ಲ. ಕೇವಲ ರಿಯಾಲಿಸ್ಟಿಕ್ ಪೇಂಟಿಂಗ್ ಬಿಟ್ಟರೆ ಬೇರೆ ಏನು ಮಾಡುತ್ತಿರಲಿಲ್ಲ. ಅವರಿಗೆ ಅದರಲ್ಲಿ ತುಂಬಾ ಅಭಿರುಚಿ ಮತ್ತು ಆಸಕ್ತಿ ಇಟ್ಟುಕೊಂಡಿದ್ದರು. ಅದರ ವಿಶೇಷವಾಗಿ ಜಲವರ್ಣದಲ್ಲಿ ಮಾಡುತ್ತಿದ್ದರು. ಇವುಗಳನ್ನು ಮಾಡುವುದಕ್ಕೆ ಕಾರಣ ನನಗೆ ಶ್ರೀ ಡಿ. ವ್ಹಿ. ಹಾಲಭಾವಿ ಸ್ಕೂಲಿನಲ್ಲಿ ಭಾವಚಿತ್ರವನ್ನು ಚಿತ್ರಿಸಲು ಬರುತ್ತಿರಲಿಲ್ಲ. ಆಗ ಗುರುಗಳು ಬಾಳೀಕಾಯಿ ಯಾವಾಗ ಕಲಿಯುತ್ತಿ ಭಾವಚಿತ್ರ ರಚಿಸುವುದು, ಮನಸ್ಸು ಯಾಕೆ ಮಾಡುತ್ತಿಲ್ಲ ಅಂತ ಹೇಳಿ ಚಿತ್ರಿಸಲು ಪ್ರಯತ್ನ ಪಡು ಎಂದು ಬೆನ್ನು ತಟ್ಟಿ ಹೇಳುತ್ತಿದ್ದರು. ಆಗ ಅವರಿಗೆ ಇವರ ಮಾತಿನಲ್ಲಿ ಏನೋ ಸತ್ಯತೇ ಅಡಗಿದೆ ಎಂದು ಅಲ್ಲಿ ಶ್ರೀ ಎಂ. ಆರ್. ಲಚ್ಚಾವರಕರ ಮತ್ತು ಶ್ರೀ ಚಿನ್ನಣ್ಣನವರ ಅಂತಾ ಇಬ್ಬರು ವ್ಯಕ್ತಿಗಳ ಭಾವಚಿತ್ರವನ್ನು ಚಿತ್ರಿಸಿದರು.. ದಿನಾಲು ನೋಡುತ್ತಿದ್ದರಂತೆ. ಆಗ ನಾನೇಕೆ ಹೀಗೆ ಮಾಡುತ್ತಿಲ್ಲ ಅಂತ ಅವರಿಗೆ ಅವರೇ ಪ್ರಶ್ನೆ ಮಾಡಿಕೊಂಡು ದಿನಾಲು ಮಾಡಿ ಮಾಡಿ ಮುಂದೆ ಜಲವರ್ಣದ ಒಂದು ಭಾವಚಿತ್ರ ರಚನೆಯ ಪರೀಕ್ಷೆ ೯೦% ರಷ್ಟು ಯಶಸ್ಸು ಅಂಕವು ಲಭಿಸಿತು.

ಈಗ ಕರ್ನಾಟಕದ ಎಲ್ಲಾ ಕಲಾ ಶಾಲೆಗಳಲ್ಲೂ ಮತ್ತು ಮಹಾರಾಷ್ಟ್ರದ ಎಲ್ಲ ಕಡೆಗೂ ಶಿರಭಾವಚಿತ್ರದ ಪ್ರಾತ್ಯಾಕ್ಷಿಕೆಗಳನ್ನು ಕೊಡುತ್ತಿದ್ದಾರೆ. ಈಗ ಎಷ್ಟರಮಟ್ಟಿಗೆ ಅಂದರೆ ೭೦-೮೦ರ ವಯಸ್ಸಾದರು ಕೂಡ ಹಾಲಭಾವಿ ಗುರುಗಳು ನಿಧನ ಹೊಂದುವಕ್ಕಿಂತಲೂ ಮುಂಚೆ 'ಏ' ಹುಡಗ ನಂದು ಒಂದು ಪೋಟ್ರೇಟ್ ಮಾಡು ಅಂತ ಹೇಳಿ ಕುತ್ಕೋಂಡ್ರು ಆಗ ಇವರ ಮುಂದೆ ಅವರು ಕುಳಿತರೆ, ಬಾಳೀಕಾಯಿ ಅವರು ನಿಂತುಕೊಂಡು ಎಲ್ಲರ ಎದುರಿಗೆ ಚಿತ್ರಿಸಿ ತೋರಿಸಿದರಂತೆ. ಅದಕ್ಕೆ ಅನಿಸಿದ್ದು ಮಾಡುತ್ತೇನೆ ಎನ್ನುವ ಛಲ ಒಂದಿರಬೇಕು ಎಲ್ಲವೂ ಚಿತ್ರಸಬಲ್ಲೆ ಎಂಬ ಪ್ರಯತ್ನಶೀಲರಾಗಬೇಕು. ಸಂಶೋಧಕರಾಗಬೇಕು. ಏನು ಮಾಡಿದರು ಸಹಿತ ಯಾವುದಕ್ಕು ಅಂತ್ಯವಿಲ್ಲ ಎನ್ನುತ್ತಾರೆ. ಅಲ್ಲದೇ ಅವರ ಜೀವನದಲ್ಲಿ ಅನುಭವಿಸಿದ ಅನುಭವದ ಮಾತು ಚಿಕ್ಕ ವಯಸ್ಸಿನಲ್ಲಿ ಶಿಕ್ಷಣ ತೆಗೆದುಕೊಳ್ಳುವಾಗ ಯಾವುದೇ ಆಗಲಿ ಕಷ್ಟಪಟ್ಟು ಮುಂದೆ ಬರಬೇಕು ಎನ್ನು ಆಸೆ ಅವರಿಗೆ ಅವು ಯಾವತ್ತು ನಿರುತ್ಸಾಹ ಕೊಡಲಿಲ್ಲ ಇನ್ನು ಉಚ್ಚಮಟ್ಟಕ್ಕೆ ತೆಗೆದುಕೊಂಡು ಹೋಗ ತೊಡಗಿದವು. ಇದರ ಸಿದ್ಧಾಂತ ಇಷ್ಟೇ ಶಿಕ್ಷಣ ಕಲಿಯಬೇಕಾದರೆ ಗುರುವಿನ ಗುಲಾಮರಾಗಿರಬೇಕು. ಸೌಜನ್ಯತೆ ಇರಬೇಕು. ಆಸಕ್ತಿ ಇರಬೇಕು. ಬೆನ್ನತ್ತಬೇಕು ಉಂಡು ರುಚಿ ನೋಡಬೇಕು ಕಷ್ಟ ಪಡಬೇಕು ಆಗ ಖುಷಿ ಎನ್ನುವುದು ತಾನಾಗಿಯೇ ಜೀವನಪೂರ್ತಿಯಾಗಿ ಬರುವುದು ಇದು ಅನುಭವಿಸಿದ ಅನುಭವದ ಮಾತಾಗಿದೆ ಎಂದು ಕಲಾವಿದ ತಮ್ಮ ಮಾತುಗಳಿಂದ ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳುತ್ತಾರೆ ಅಂದಾಗ ಮಾತ್ರ ಕಲಾ ಶಿಕ್ಷಣಕ್ಕೆ ಒಂದು ರೂಪ ಕೊಟ್ಟಂತೆ ಆಗುತ್ತದೆ.

ಈ ಅನುಭವದ ಮಾತು ಬರಬೇಕಾದರೆ ಇದರ ಹಿಂದೆ ಎಷ್ಟು ನೋವಿದೆ ಎಂದರೆ. ಮೂಲತಃ ಮನೆತನದ ಹೆಸರೆ ಹೇಳುವ ಹಾಗೆ ಬಾಳೆಹಣ್ಣಿನ ತೋಟ ಹತ್ತಾರು ತಲೆಮಾರಿನಿಂದ ಉಳಿಸಿಕೊಂಡು ಬೆಳೆಸಿಕೊಂಡು ಬಂದಂತಹ ಆ ತೋಟದಲ್ಲಿನ ಬಾಳೆಹಣ್ಣುಗಳನ್ನು ಮುಂಜಾನೆ ೪ ಗಂಟೆಗೆ ಅವರಿಗೂ ಎಬ್ಬಿಸಿ ನಿನಗೆ ನಾಲ್ಕಾಣೆ ಕೊಡ್ತಿನಿ ಅಂತ ಹೇಳಿ ಕರೆದುಕೊಂಡು ಹೋಗುವರು. ಅಗ ಅವರ ತಲೆ ಮೇಲೆ ಬಾಳೆಹಣ್ಣಿನ ಬುಟ್ಟಿ ಅದು ಬಿದಿರಿನಿಂದ ಹೆಣೆದು ಕೆಳಗಡೆ ನಾಲ್ಕು ಅಡ್ಡ ಕಡ್ಡಿಗಳನ್ನು ಇಟ್ಟು ಬುಟ್ಟಿ ತಯಾರಿಸುತ್ತಿದ್ದರು. ಅದು ದಿನಾಲು ಹೊತ್ಕೊಂಡು ಹೋಗಿರುವ ಗಾಯ ಇಂದಿಗೂ ಅವರ ತಲೆಯ ಮೇಲೆ ಹಾಗೆ ಉಳಿದಿವೆ. ಮತ್ತು ಅವರು ಬುಟ್ಟಿ ಇಳಿಸಿದ ತಕ್ಷಣ ಅವರ ಅಮ್ಮನ ಕಡೆ ಹಣವನ್ನು ಪಡೆದುಕೊಂಡು ಪುನಃ ನಡೆದು ಮನೆಗೆ ಬಂದು ಮತ್ತೇ ೩ ಕಿ. ಮೀ ದೂರ ನಡೆದುಕೊಂಡು ಹೈಸ್ಕೂಲಿಗೆ ಹೋಗಿ ಬರುತ್ತಿದ್ದರು. ಅವರ ತಾಯಿ ಕೊಟ್ಟಿರುವ ಹಣವನ್ನು ತಂದು ಡಬ್ಬಿಗೆ ಹಾಕುತ್ತಿದ್ದರು. ಇದು ಆವತ್ತು ಅವರ ತಾಯಿ ಕಲಿಸಿದ್ದು ಇವತ್ತು ನೆನಪು ಮಾಡಿಕೊಳ್ಳುತ್ತಾರೆ. ದುಡಿಬೇಕು, ದುಡಿದು ಕಷ್ಟಪಟ್ಟಾಗಲೇ ಎಲ್ಲವೂ ಸಿಗುವುದು ಅಂತ ಹೇಳುತ್ತಾರೆ. ಆ ನೋವಿನ ಮುಂದೆ ಅವರು ಮಾಡಲ್ಲ ಅಂತ ಹೇಳಿದರೆ ಇವತ್ತು ನಾ ಇಲ್ಲಿ ಇರುತ್ತಿರಲಿಲ್ಲ ಎಂದ ಹೇಳುತ್ತಾರೆ. ಹೀಗೆ ಅಲ್ಲಿ ಇನ್ನೊಬ್ಬರು ಶ್ರೀ ತರಾಫ್ ಎನ್ನುವಂತಹ ಗುರುಗಳು ಪ್ರಿನ್ಸಿಪಾಲರಾಗಿದ್ದರು. ಆಗ ಇನ್ನು ಸರಕಾರಿ ಚಿತ್ರಕಲಾ ಶಾಲೆ ಪ್ರಾರಂಭವಾಗಿರಲಿಲ್ಲ. ಆಗ ತರಾಫ್ ಗುರುಗಳು ಮನಸ್ಸಿಗೆ ತುಂಬಾ ನೋವುಂಟು ಮಾಡಿದರು ಎಂದು ದುಃಖದ ಸಂಗತಿಯನ್ನು ಸಂದರ್ಶನ ಮಾಡುವ ಸಮಯದಲ್ಲಿ ವ್ಯಕ್ತಪಡಿಸುತ್ತಾರೆ. ಬಾಳೀಕಾಯಿಯವರು ಡ್ರಾಯಿಂಗ್ ಶಿಕ್ಷಕರಾಗಿದ್ದು ಕೂಡ ಇವರಿಗೇಕೆ ಬೇಕು ಅದು ಇದು ಅಂಥ ಹೇಳಿ ಹೇಗಾದರೂ ಮಾಡಿ ದಾರಿಗೆ ತರಬೇಕು ಅಂತ ಹೇಳಿ ಶ್ರೀ ಟಿ. ಪಿ. ಅಕ್ಕಿ ಗುರುಗಳ ಸಂಬಂಧಿಕರು, ಎನ್.ಜಿ.ಬಡಿಗೇರ ಅವರು ಭಾರತೀಯ ಕಲಾ ಕೇಂದ್ರ ಎನ್ನುವ ಹೊಸದೊಂದು ಶಾಲೆಯನ್ನು ತೆರೆದರು. ಆಗ ಅವರು ಕೂಡ ಕಲಾವಿದರ ವಿರುದ್ಧವಾಗಿ ಬಾಳೀಕಾಯಿ ಅವರಿಗೆ ಏನೋ ಆತಂಕ ಯಾಕೆ ಸರ್ ಅವರನ್ನು ಕಂಡು ಹೀಗೆ ಹೇಳುತ್ತಿದ್ದರಂತೆ. ಅಂಥ ನೋವಾಯಿತು. ಸರಿ ಸರ್ ನೀವು ಹೇಳಿದ ಹಾಗೆ ಆಗಲಿ ಎಂದಾಗ ಈ ವರ್ಷ ನಿನಗೆ ಆರ್ಟ್ ಮಾಸ್ಟರ್ ಪರೀಕ್ಷೆಗೆ ಕುಳಿತುಕೊಳ್ಳಲು ಬರುವುದಿಲ್ಲ ಡಿ.ಎಂ. ಪರೀಕ್ಷೆ ಮಾತ್ರ ಕುಳಿತುಕೊಳ್ಳಲು ಬರುತ್ತೆ ಎಂದರು. ಸರಿ ಅಂತ ಹೇಳಿ ಡಿ.ಎಂ. ಪರೀಕ್ಷೆಗೆ ಕುಳಿತುಕೊಂಡರು. ಸಹಿತ ಕಲಾವಿದರು ಯಾರಿಗೂ ಯಾವತ್ತೂ ಬಾಯಿ ತೆರೆಯದೆ ಅವರ ಕಲಾಕೃತಿಗಳೇ ಮಾತಾಡುವ ಹಾಗೆ ಅವರಿಗೆ ಬದಲಾವಣೆಯನ್ನು ಮಾಡಿದವು ಅಂತ ಹೇಳುತ್ತಾರೆ. ಇದರಿಂದ ಎಲ್ಲ ವಿಷಯಗಳಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಂಡು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಬಂದು ಶಾಲೆಗೆ ಕೀರ್ತಿ ತಂದ ನಂತರ ಶ್ರೀ ತರಾಫ್ ಗುರುಗಳು ಖುಷಿ ಪಟ್ಟರು. ನಂತರ ಎನ್. ಜಿ. ಬಡಿಗೇರ ಅವರು ಬಾಳೀಕಾಯಿಗೆ ಏನು ಮಾಡೋದು ಅಂತ ಹೇಳಿ ಅಲ್ಲದೇ ನಾನು ಮಹಿಳಾ ಟ್ರೇನಿಂಗ್ ಸ್ಕೂಲ್‌ನಲ್ಲಿ ಅವರು ನಿವೃತ್ತಿಯಾದ

ನಂತರ ಆ ಸ್ಥಳಕ್ಕೆ ಅವರು ಹೋಗಿದ್ದರು. ಆಗ ಮಹಿಳಾ ಟ್ರೇನಿಂಗ್ ಸ್ಕೂಲ್ ಮುಖಾಂತರ ನಾನು ಹೊಸದಾಗಿ ಒಂದು ಶಾಲೆ ತೆಗೆಯುತ್ತಿದ್ದೇನೆ ಬಾಳೀಕಾಯಿಗೆ ಆರ್ಟ್ ಮಾಸ್ಟರ್ ಮಾಡಲಿಕ್ಕೆ ಇಲ್ಲಿಗೆ ಕಳುಹಿಸಬೇಕು ಅಂತ ಹೇಳಿದರು. ಅವರು ಇವರಿಗೆ ತಕ್ಷಣ ಹೇಳಿದರು. ಬಾಳೀಕಾಯಿ ಅವರು ಹಾಲಭಾವಿ ಗುರುಗಳಿಗೆ ಕೇಳಿದರಂತೆ, ಆಗ ಅವರು ಹೇಳಿದರು ಎಲ್ಲಿ ಆದರೂ ಕಲಿ ನೀನು ವರ್ಕ ಮಾಡ್ತಾ ಇದ್ದರೆ ಸಾಕು ಹೋಗು ಅಂತ ಹೇಳಿ ಅನುಮತಿ ಕೊಟ್ಟಾಗ ಇಲ್ಲಿಗೆ ಬಂದು ಹೆಸರು ನೊಂದಾಯಿಸಿದರಂತೆ. ಆಗ ಶ್ರೀ ತರಾಫ್ ಅವರಿಗೆ ಸಿಟ್ಟು ಬಂದು ಬೈಯೋದಕ್ಕೆ ಶುರು ಮಾಡಿದರಂತೆ ಸರಿ ಅಂತ ಹೇಳಿ ಕ್ಲಾಸಿಗೆ ಹೋದರು. ಅಲ್ಲಿ ಯಾರು ಇರಲಿಲ್ಲ. ಶ್ರೀ ಎನ್. ಜಿ. ಬಡಿಗೇರ ಒಬ್ಬರೇ ಇದ್ದರು ಅವರು ಮಾಡಿದ್ದೆ ಸರಿ ಪೂರ್ಣ ಭಾವಚಿತ್ರ, ಅರ್ಧ ಭಾವಚಿತ್ರ ಮತ್ತು ಶಿರಭಾವಚಿತ್ರ, ಸೃಜನ ಸಂಯೋಜನೆ ಏನೇ ಮಾಡಿದರು ಅವರೇನು ಹೇಳುತ್ತಿರಲಿಲ್ಲ. ಆದರೆ ಈಗ ಅವರು ಮೊದಲನೆ ರ್‍ಯಾಂಕ್ ಪಡೆದುಕೊಳ್ಳುತ್ತಾರೆ. ನಂತರ ಅದನ್ನು ಮತ್ತು ಕಡಿಮೆ ರ್‍ಯಾಂಕ್ ಪಡೆಯುವದು ಸರಿಯಲ್ಲ ಅಂತ ತಿಳಿದು ನಮ್ಮ ಮನೆಯವರಿಗೆಲ್ಲ ಊರಿಗೆ ಕಳುಹಿಸಿ ನಾನೊಬ್ಬನೇ ಇದ್ದು, ಶಾಲೆಯ ಬೀಗದ ಕೈ ತೆಗೆದುಕೊಂಡು ಚಿತ್ರ ರಚನೆ ಮಾಡುತ್ತಿದ್ದೆ. ಅವರು ಒಂದು ಹೇಳಿದರೆ ನಾನು ಹತ್ತು ಕಲಾಕೃತಿಗಳನ್ನು ಮಾಡಿ ತೋರಿಸುತ್ತಿದ್ದೆ. ಒಂದು ದೊಡ್ಡ ಫೈಲ್ ಮಾಡಿ ಇಟ್ಟೆ ಆಗ ಎನ್. ಜಿ. ಬಡಿಗೇರ ಅವರು ಖುಷಿ ಪಟ್ಟರು. ನಂತರ ಪರೀಕ್ಷೆ ಬರೆದು ಅವುಗಳನ್ನು ಪರೀಕ್ಷಿಸಲು ಶ್ರೀ ತರಾಫ್ ಗುರುಗಳು ಅವರು ಇದ್ದರಂತೆ ಅವರ ಮೇಲೆ ಮೊದಲೇ ಬಿಟ್ಟು ಬಂದಿದ್ದಕ್ಕೆ ಸಿಟ್ಟು ಬೇರೆ ಇತ್ತು.

ಶ್ರೀ ಎಂ. ಆರ್. ಬಾಯಿಕಾಯಿಗೆ ಹೇಗಾದರೂ ಮಾಡಿ ಫೇಲ್ ಮಾಡಬೇಕು ಅಂತ ಅಲ್ಲದೇ ಆಗ ಪೇಪರ್ ವ್ಯಾಲುವೇಷನ್ ಪರೀಕ್ಷೆ ಮುಗಿದ ಸ್ಥಳದಲ್ಲೇ ಕೊನೆಯ ದಿವಸ ಪರೀಕ್ಷೆ ಮುಗಿದ ನಂತರ ಎಲ್ಲರು ಬಂದು ಅವರ ಕೆಲಸ ಎಲ್ಲವನ್ನು ನೋಡಿದರು. ಆಗ ಧಾರವಾಡ ಕೇಂದ್ರದಲ್ಲಿ ಚೆನ್ನಾಗಿ ಪರೀಕ್ಷೆ ಆಗಿದ್ದವು. ಆದರೆ ಶ್ರೀ ತರಾಫ್ ಅವರು ಎರಡು ವಿಷಯಗಳು ಫೇಲ್ ಮಾಡಿದ್ದರು. ಅದು ನನಗೆ ಗೊತ್ತಿಲ್ಲ. ಆ ಐದು ಜನರಲ್ಲಿ ಒಬ್ಬರು ಬಂದು ಅವರಿಗೆ ಕಿವಿಗೆ ಹೇಳಿದರು. ಆದರೂ ನೀನು ಹೆದರಬೇಡ. ಅಂದಾಗ ಸರ್ ನಾನೊಬ್ಬ ವಿದ್ಯಾರ್ಥಿ ನನಗೆ ಎನು ಗೊತ್ತಿಲ್ಲ. ಏನು ಕೇಳಬೇಡರಿ ಎಲ್ಲ ನೀವೇ ಸರ್ ಎಂದರು. ಆಗ ಇನ್ನುಳಿದ ನಾಲ್ಕು ಜನರು ಸರಿ ತರಾಫ್ ಅವರು ಎಷ್ಟು ಅಂಕ ಕೊಟ್ಟರು ಸರಿ, ಅವರು ಹಾಕಿಲ್ಲ ಅಂತ ತಿಳಿದು ಇನ್ನುಳಿದ ವಿಷಯಗಳಿಗೆ ಹೆಚ್ಚಿನ ಅಂಕಗಳನ್ನು ಕೊಟ್ಟು ಮತ್ತೇ ಪ್ರಥಮ ರ್‍ಯಾಂಕ್ ಬರುವ ಹಾಗೆ ಮಾಡೋಣ ಅಂತ ಹೇಳಿ ಮುಂದೆ ಒಂದು ತಿಂಗಳ ನಂತರ ಬಂದಿದ್ದು, ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಆಗಲೂ ಕೂಡ ಕೆಲವು ಜನ ಪ್ರಶ್ನೆ ಮಾಡಿದರು. ಆಗ ಒಂದೇ ಮಾತು ನಮ್ಮ ಭವಿಷ್ಯವನ್ನು ನಿರ್ಮಾಣ ಮಾಡುತ್ತೇವೆ. ವಿನಃ ನಮ್ಮ ಬಾಯಿಮಾತು ಏನು ಮಾಡುವುದಿಲ್ಲ ನಮ್ಮ ಕಲಾಕೃತಿಗಳು ನಾವು ಮಾಡಿದ ಕೆಲಸ, ನಮ್ಮಲ್ಲಿ ಇರಬೇಕಾದ ಸೌಜನ್ಯತೆ ನಮ್ಮಲ್ಲಿ ಇರಬೇಕಾದಂತಹ

ಸಹನತೆ, ಕ್ರಿಯಾಶೀಲತೆ ಮತ್ತು ಪ್ರಯತ್ನ ಇವೆಲ್ಲ ಗುಣಗಳಿಂದ ನಮ್ಮ ಯಶಸ್ಸು ಖಂಡಿತ ಎನ್ನುವುದು ಹೈಸ್ಕೂಲ್ ಮಟ್ಟದಲ್ಲಿ ಕಂಡಿದ್ದೆ. ಅದು ಕೊನೆಯ ವರ್ಷಗಳವರೆಗೂ ನಿಜವಾಯಿತು ಮತ್ತು ಡಿಪ್ಲೊಮಾಕ್ಕೆ ಬಂದಾಗ ಅವರ ಕ್ಲಾಸಮೆಂಟ್ ಶ್ರೀ ಬಿ. ವ್ಹಿ. ಹಿರೇಗೌಡರ ಅವರು ಪ್ರಥಮ ರ್‍ಯಾಂಕ್, ನಾನು ದ್ವಿತೀಯ ರ್‍ಯಾಂಕ್ ಬಂದು ಆಗ ಕರ್ನಾಟಕದಲ್ಲಿ ಒಂದೇ ಒಂದು ಕೇಂದ್ರ ಅದು ಧಾರವಾಡ ಕೇಂದ್ರ ಅಂತ ಹೇಳಬಹುದಾಗಿದೆ. ಈಗ ಇವರ ಕಲಾ ಶಿಕ್ಷಣದ ಬದುಕಿನಲ್ಲಿ ಕೆಲವು ರಾಜಕೀಯ ಅಂಶ ಪ್ರವೇಶಿಸಿದರು. ಅದಕ್ಕೆ ತಲೆ ಕೆಡಿಸಿಕೊಳ್ಳದೆ ನಿತ್ಯ ಕಲಾಕೃತಿಯ ರಚನೆಯಲ್ಲಿ ತಮ್ಮ ಬದುಕು ನಡೆಸಿಕೊಂಡು ಬಂದವರಾದ್ದಾರೆ.

ನಂತರ ಬಾಳೀಕಾಯಿ ಅವರು ಆಗಸ್ಟ್ ೧೯೭೩ ರಲ್ಲಿ ಧಾರವಾಡದ ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನಿಂದ ಸರಕಾರಿ ಗಂಡು ಮಕ್ಕಳ ಕಾಲೇಜಿನ ಚಿತ್ರಕಲಾ ವಿಭಾಗಕ್ಕೆ ವರ್ಗವಾಗಿ ಬಂದರು. ಅಲ್ಲಿದ್ದ ಚಿತ್ರಕಲಾ ಶಿಕ್ಷಕರು ಮೊದಲೇ ನಿವೃತ್ತರಾಗಿದ್ದರು. ಹಾಗಾಗಿ ಅಲ್ಲಿ ಇವರೊಬ್ಬರೇ ಇದ್ದು ಈ ಶಾಲೆಯನ್ನು ಇಲ್ಲಿಯ ಸ್ಥಳೀಯ ಶಿಕ್ಷಕರ ಸಹಾಯ ಮತ್ತು ಕರ್ನಾಟಕ ಸರಕಾರದ ಸಹಕಾರವನ್ನು ಪಡೆದು ನಿಂತು ಹೋಗಿರುವ ಎಲ್ಲ ಕಲಾ ಚಟುವಟಿಕೆಗಳನ್ನು ಪುನಃ ಮುಂದುರೆವಸುವ ಕೆಲಸ ಮಾಡತೊಡಗಿದರು. ಇಲ್ಲಿ ಬಾಳೀಕಾಯಿಯವರಿಗೆ ತರಬೇತಿ ಕಾಲೇಜಿನಲ್ಲಿ ಹೆಚ್ಚು ಸಂಬಳ ಸಿಗುತ್ತಿತ್ತು. ಇಲ್ಲಿ ಕಡಿಮೆ ಆದರೂ ಸಹಿತ ಏನಾದರೂ ಬದಲಾವಣೆ ಮಾಡಬೇಕೆಂಬ ಇಚ್ಛೆಯಿಂದ ಮತ್ತು ಮನೋಧೈರ್ಯದಿಂದ ಕೆಲಸ ಮಾಡಲು ಒಪ್ಪಿಕೊಂಡರು. ಇಲ್ಲಿಯ ಪ್ರಾಚಾರ್ಯರಾಗಿದ್ದ ಶ್ರೀ ಜೋಶಿಯವರೊಂದಿಗೆ ಸೇರಿ ಸಮಾಲೋಚನೆ ಮಾಡಿ ವಿದ್ಯಾರ್ಥಿಗಳನ್ನು ಕೂಡಿಸುವುದು, ಸಮಸ್ಯೆ ಆಗಿದ್ದರಿಂದ ತರಬೇತಿ ಕಾಲೇಜಿನ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುತ್ತಮುತ್ತಲಿನ ಶಾಲೆಗಳ ವಿದ್ಯಾರ್ಥಿಗಳಿಗೂ ಚಿತ್ರಕಲೆಯನ್ನು ಕಲಿಸಬೇಕೆಂದು ನಿರ್ಧರಿಸಿದರು. ಅಲ್ಲದೇ ಇವರೇ ಬಣ್ಣ ಹಾಳೆಗಳನ್ನು ಕೊಟ್ಟು ತರಗತಿಗಳನ್ನು ಪ್ರಾರಂಭಿಸಿದರು. ಲೋವರ್ ಮತ್ತು ಹೈಯರ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಗಳಿಗೂ ವಿದ್ಯಾರ್ಥಿಗಳನ್ನು ಕೂಡಿಸುತ್ತಿದ್ದರು. ಸಾಕಷ್ಟು ವಿದ್ಯಾರ್ಥಿಗಳು ಉತ್ಸಾಹದಿಂದ ಬರುತ್ತಿದ್ದರು. ಆಗ ಜೋಶಿಯವರು ನಿವೃತ್ತರಾಗಿ ಆ ಸ್ಥಳಕ್ಕೆ ಶಿವಶಂಕರ ಹಿರೇಮಠ ಅವರು ಪ್ರಾಚಾರ್ಯರಾಗಿ ಬಂದರು. ಅವರಿಂದಲೂ ಬಾಳೀಕಾಯಿಯವರಿಗೆ ಒಳ್ಳೆಯ ಮಾರ್ಗದರ್ಶನ ದೊರೆತಿದೆ ಎಂದು ತಿಳಿಯಬಹುದಾಗಿದೆ.

ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ ಧಾರವಾಡ :

೧೯೭೫ರಿಂದ ಐದು ವರ್ಷಗಳ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸಿ ನಂತರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಬಂದಿತು. ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಮತ್ತು ಈ

ಇತ್ಯಾದಿಗಳಿಂದ ಸಜ್ಜುಗೊಳಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲು ಯೋಗ್ಯವಾದ ರೀತಿಯಲ್ಲಿ ಮಾಡಿಕೊಟ್ಟರು. ಅವರ ಉಸ್ತುವಾರಿಯನ್ನು ಸಹಿತ ಬಾಳೀಕಾಯಿಯವರಿಗೆ ವಹಿಸಿಕೊಟ್ಟರು. ಅವರು ನಿವೃತ್ತರಾಗುವವರೆಗೆ ಅದನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದು ಇಂದಿಗೂ ಮುಂದುವರೆಯುತ್ತದೆ. ಈ ರೀತಿ ತಮಗೆ ನಿರ್ವಹಿಸಿದ ಅನೇಕ ಜವಾಬ್ದಾರಿಗಳನ್ನು ತನ್ನ ಮೇಲೆ ಹಾಕಿಕೊಂಡು ನಿರಂತರವಾದ ಕಲಾ ಕ್ಷೇತ್ರದ ಬೆಳವಣಿಗೆಗೆ ತನ್ನನ್ನು ತಾನು ದುಡಿಸಿಕೊಂಡವರಲ್ಲಿ ಒಬ್ಬರಾಗಿದ್ದಾರೆ.

ಪ್ರತಿಯೊಂದರಲ್ಲಿ ಪ್ರತಿ ವಿಷಯಗಳಲ್ಲಿ ಎಲ್ಲ ತರಹದ ಕೆಲಸಗಳನ್ನು ತುಂಬಾ ಉತ್ಸುಹಕರಾಗಿ ಅನೇಕ ಕಷ್ಟಗಳನ್ನು ಎದುರಿಸಿ, ಎಲ್ಲರಿಗೂ ಒಳ್ಳೆಯದನ್ನು ಬಯಸುತ್ತಾ ಬಂದಿರುವ ಇವರಿಗೆ ಒಂದು ಸಲ ಇಕ್ಕಟ್ಟಿನ ಪರಿಸ್ಥಿತಿ ಬರುತ್ತೇ ಆಗ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ನೇರವಾಗಿ ಹೆಸರು ನೊಂದಾಯಿಸುತ್ತಿರಲಿಲ್ಲ. ಸಂದರ್ಶನದ ಮುಖಾಂತರ ಮಕ್ಕಳನ್ನು ಹೆಸರು ನೊಂದಾಯಿಸಲಿಕ್ಕೆ ಅವಕಾಶವಿತ್ತು. ಯಾವ ಹೊಳಸಂಚುಗಳು ನಡೆಯುತ್ತಿರಲಿಲ್ಲ. ಅಲ್ಲದೇ ತರಗತಿಗಳ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದರು. ಆದರೂ ಸಹಿತ ಮುದಗೋಡ ಅನ್ನೋ ಕಲಾವಿದರ ಅಳಿಯ ಈ ಶಾಲೆಗೆ ಸಂದರ್ಶನಕ್ಕೆ ಬಂದಾಗ ಆಯ್ಕೆ ಆಗಿರಲಿಲ್ಲ. ಆಗ ಅವರು ಬಂದು ಏನಾದ್ರು ಮಾಡಿ ಪ್ರವೇಶಕ್ಕೆ ಅವಕಾಶ ಮಾಡಿಕೊಡಿ ಅಂದರ. ಆಗ ಆ ಮಗು ಅಳುವುದಕ್ಕೆ ಶುರು ಮಾಡಿತು. ಅದನ್ನು ನೋಡಲಾರದೆ ಒಂದು ಆಶ್ವಾಸನೆಯ ಮೇರೆಗೆ ಎಸ್.ಸಿ. ಜಾಗ ಖಾಲಿ ಆದರೆ ಅಂತಹ ಸೀಟ್‌ಗೆ ಆ ಹುಡುಗನನ್ನು ಸೇರಿಸಿಕೊಳ್ಳಬಹುದು. ಅದಕ್ಕೋಸ್ಕರ ನೀನು ಒಂದೆರೆಡು ದಿನ ಬಿಟ್ಟು ಬಾ ಎಂದು ಕಳುಹಿಸಿದರೆ ಆ ಹುಡುಗ ದಿನ ಬೆಳಿಗ್ಗೆ ಮಧ್ಯಾಹ್ನ ಬರುತ್ತಿದ್ದನು. ಅದಕ್ಕೆ ಆ ಹುಡುಗನನ್ನು ಸೇರಿಸಿಕೊಂಡ್ವಿ ಆದರೆ ನಾವು ಒಂದು ಶಾಲೆ ತೆರೆದ್ವಿ ಅನ್ನೋಕ್ಕಿಂತ ಅದರಲ್ಲಿ ಎಷ್ಟರಮಟ್ಟಿಗೆ ಶಿಸ್ತು ರೂಢಿಸಿಕೊಂಡಿದ್ವಿ ಅನ್ನೋದು ಮುಖ್ಯ. ಹುಡುಗರಿಗೆ ಬುದ್ಧಿ ಮಾತನ್ನು ಹೇಳ್ತಿವೆ. ಆದರೆ ಒಬ್ಬ ಚಿತ್ರಕಲಾವಿದನಾಗಬಹುದು. ಏನೇ ಆಗಬಹುದು ಆದರೆ ಒಳ್ಳೆಯ ಸಂಸ್ಕಾರ ಶಿಕ್ಷಣ ಮುಖ್ಯ ಎನ್ನುವುದು ಕಲಾವಿದರು ನೀಡುವ ಒಂದಿ ಕಿವಿ ಮಾತಾಗಿದೆ. ವಿಶೇಷವಾಗಿ ಚಿತ್ರಕಲೆ ಕಲಿಯುವ ಎಲ್ಲರಿಗೂ ಸಲ್ಲುತ್ತದೆ.

ಆವತ್ತು ತಡವಾಗಿ ಬಂದ ಹುಡುಗ ಇವತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನಲ್ಲಿ ದೊಡ್ಡ ಕಲಾವಿದನಾಗಿದ್ದಾನೆ. ಮಾರ್ಡನ್ ಆರ್ಟ್ ಗ್ಯಾಲರಿಯ ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ ಇದ್ದು, ಈಗ ಅವನು ಇವತ್ತಿಗೂ ಅವರನ್ನು ನೆನಸುತ್ತಿರುತ್ತಾನೆ. ಸರ್ ಕಡೆಗೂನ ನನಗೆ ಅವಕಾಶ ಮಾಡಿಕೊಟ್ಟೀರಿ ಅಂತ ಹೇಳುವುದರ ಜೊತೆಗೆ ಅವನು ಎಷ್ಟೇ ಸಲ ಶಿಬಿರಗಳಿಗೆ ಹೋದರು ಸಹಿತ ಏನೇ ಪ್ರದರ್ಶನ ಮಾಡಿದರು ಸಹಿತ ಪ್ರತಿ ಸಲ ಒಂದು ಬಾರಿ ದೂರವಾಣಿಯಲ್ಲಿ ಮಾತನಡುತ್ತಾನೆ. ತಂಬಾ ಗೌರವದಿಂದ

ಸತ್ಕಾರ ಕೊಟ್ಟು ಗೌರವಿಸುತ್ತಾನೆ. ತಾನು ಪ್ರದರ್ಶನ ಮಾಡುವುದಲ್ಲದೇ ಗುರುಗಳಿಗೂ ಕೂಡ ಎಷ್ಟೋ ಪ್ರದರ್ಶನ ಮಾಡಿಸಿದ್ದಾರೆ. ಕಲಾಕೃತಿಗಳನ್ನು ಮಾರಾಟ ಮಾಡಿಸಿದ್ದೇನೆ. ಮನುಷ್ಯನಿಗೆ ನಮ್ಮ ಕೈಯಲ್ಲಿ ಆದಷ್ಟು ಸಹಾಯ ಮಾಡಿದರೆ ಸಾಕು. ಅವನು ನಿಷ್ಠಾವಂತನಾಗಿದ್ದರೆ, ನಾವು ಕೇಳುವುದೇ ಬೇಡ ತಾವೇ ಮಾಡುತ್ತಾರೆ. ಇಂತಹ ಗುಣಗಳನ್ನು ಅವರು ತಮ್ಮ ಶಿಷ್ಯಂದಿರಿಗೆ ಹೇಳಿಕೊಟ್ಟಿದ್ದಾರೆ. ಮಕ್ಕಳ ಬುದ್ಧಿಮಟ್ಟವನ್ನು ತಿಳಿದುಕೊಂಡು ನಾವು ಸರಿಯಾದ ಶಿಕ್ಷಣ ಕೊಟ್ಟರೆ ಆದರ್ಶ ವ್ಯಕ್ತಿಯಾಗಿ ಬೆಳೆಯುತ್ತಾರೆ. ಅದಕ್ಕೆ ಕಲಾಕ್ಷೇತ್ರದಲ್ಲಿ ಶಿಕ್ಷಕನಾದವನು ವಿದ್ಯಾರ್ಥಿಗಳಿಗೆ ಮೋಸಗೊಳಿಸದೆ ಸಂಪೂರ್ಣ ವಿದ್ಯಾದಾನ ಮಾಡಿ ಮಕ್ಕಳನ್ನು ಉನ್ನತ ಮಟ್ಟಕ್ಕೆ ಬೆಳೆಸಿದರೆ ಅವರು ನಮಗೆ ಮುಂದಿನ ಆಸ್ತಿಗಳೆಂದು ತಿಳಿಸುತ್ತಾರೆ.

ಆ ವಿದ್ಯಾರ್ಥಿ ಕ್ಯಾಮಲೀನ ಕಲಾಕೃತಿಗಳ ಪ್ರದರ್ಶನ ಸ್ಪರ್ಧೆಯಲ್ಲಿ ಸತತ ಮೂರು ಬಾರಿ ಪ್ರಶಸ್ತಿ ತೆಗೆದುಕೊಂಡರೇ ಆ ಕಂಪನಿಯವರೆ ವಿದೇಶಕ್ಕೆ ಯಾವ ರೀತಿ ಖರ್ಚು ವೆಚ್ಚವಿಲ್ಲದೆ ಕರೆದುಕೊಂಡು ಹೋಗಿದ್ದಾರೆ. ಇದರ ರೂಪರೇಷಗಳನ್ನು ಅವರ ಮಾರ್ಗದರ್ಶನದಿಂದ ಎಲ್ಲವೂ ಮಾಡುತ್ತಿದ್ದರು. ಆದರೆ ಇದಕ್ಕೆಲ್ಲ ಅವರಿಗೆ ಹಿನ್ನೆಲೆಯಾಗಿ ಹಿರಿಯ ಕಲಾವಿದರು ಮತ್ತು ಉತ್ತರ ಕರ್ನಾಟಕದಲ್ಲಿ ಜನಿಸಿ ಸಿಲಿಕಾನ್ ಸಿಟಿಯಲ್ಲಿ ಕಲೆಯನ್ನು ಹುಟ್ಟುಹಾಕಿದ ಶ್ರೀಯುತ ಆರ್. ಎಂ. ಹಡಪದ ಅವರು ಮಾಡುತ್ತಿದ್ದರು. ಅವರು ಇವರಿಗೆ ಹಿನ್ನೆಲೆಯಾಗಿ ಯಾವಾಗಲೂ ನೀನು ಸತತ ಪ್ರಯತ್ನ ಪಡುತ್ತಿರು ಆದರೆ ಮಕ್ಕಳ ಎದುರಿಗೆ ನನಗೆ ಅವಮಾನವಾಯಿತು ಎಂದು ಯಾವತ್ತಿಗೂ ಅನ್ನೋಕೆಬೇಡ, ಮಾಡಿತೋರಿಸು ಅದು ನಿನಗೆ ರುಚಿ ಹತ್ತುತ್ತೆ ಜೊತೆಗೆ ನನ್ನ ವಿದ್ಯಾರ್ಥಿಯಾಗಿ ನನಗಿಂತಲೂ ಚೆನ್ನಾಗಿ ಮಾಡಿದ್ದಾನೆ, ಶಿಕ್ಷಕನಾಗಿ ನಾನು ಹೆಚ್ಚು ಮಾಡಬೇಕಾ ಅಥವಾ ಕಡಿಮೆ ಮಾಡಬೇಕಾ ಅದು ನೀನೆ ಚಿಂತನೆ ಮಾಡು ಆಗ ನಿನ್ನ ಕಲಾಕೃತಿಗಳು ಸುಧಾರಿಸುತ್ತವೆ ಎಂದು ದಾರಿ ತೋರಿಸಿದರು. ಇಲ್ಲವಾದರೆ ನಾನು ಸಾಮಾನ್ಯ ಒಬ್ಬ ಕಲಾ ಶಿಕ್ಷಕನಾಗುತ್ತಿದ್ದೆ. ಮಾರ್ಗದರ್ಶಕರು ಇರುತ್ತಾರೆ. ಅವರು ಒಳ್ಳೆಯ ಶಿಕ್ಷಣವನ್ನೇ ಕೊಡುತ್ತಾರೆ ಎಂಬುವುದು ವೇದ ವಾಕ್ಯವಾಗಿದೆ. ಇಂತಹ ಕೆಲವರ ಸಹಕಾರದೊಂದಿಗೆ ಕ್ಷೇತ್ರ ಬೆಳೆಸಲು ಟೊಂಕ ಕಟ್ಟಿ ನಿಂತವರಲ್ಲಿ ಹಿರಿಯ ಕಲಾವಿದರಲ್ಲಿ ಇವರು ಒಬ್ಬರು.

ಶ್ರೀ ಆರ್. ಎಂ. ಹಡಪದ ಗುರುಗಳಿಗೂ ತಮಗೂ ತುಂಬಾನೆ ಹೋಲಿಕೆ ಮಾಡಿಕೊಂಡು ಹೇಳುತ್ತಾರೆ. ಕಾರಣ ಹಡಪದ ಅವರಿಗೂ ಸುಮಾರು ಹದಿನೈದು ವರ್ಷಗಳಿಂದ ಹಿರಿಯರಾದರೂ ಕೂಡ ಅವರ ಮತ್ತು ಇವರ ಸಂಪರ್ಕ ತುಂಬಾ ಚೆನ್ನಾಗಿತ್ತು. ಅಲ್ಲದೇ ಅವರು ಇವರಿಗೆ ಬಹಳಷ್ಟು ಸಲ ಪರೀಕ್ಷೆ ಮಾಡ್ತಿದ್ರು. ಯಾಕೆಂದರೆ ಹೇಗೆ ಕೆಲಸ ಮಾಡ್ತಿದ್ದಿರಾ ಗ್ರಂಥಾಲಯ ಪ್ರಾರಂಭ ಮಾಡಿ ಅನೇಕ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ತರಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಿ ಅಂತ

ಹೇಳಿ ಎಲ್ಲ ರೀತಿಯಿಂದ ಪ್ರೋತ್ಸಾಹ ಮಾಡುತ್ತಿದ್ದರು. ಮುಂದೆ ಕಲಾವಿದನಾಗಿ ತಾವು ಬೆಳೆಯುವುದರ ಜೊತೆ ತಮ್ಮ ಮಗನನ್ನು ಒಬ್ಬ ಕಲಾವಿದನಾಗಿ ಬೆಳೆಸಿದ್ದಾರೆ.

ಆಗ ಇವರ ಮಗ ಮತ್ತು ವಿದ್ಯಾರ್ಥಿ ಬೆಂಗಳೂರಿಗೆ ಹೋಗುವುದಾಗಿ ಹೇಳಿದರು. ಸರಿ ಅಂತ ಹೇಳಿ ಕಳುಹಿಸಿದೆ. ಅಲ್ಲಿ ಡಾ. ಶಿವಾನಂದ ಬಂಟನೂರ, ಶಿವಾಜಿ ಕಮ್ಮಾರ ಎಲ್ಲ ಬೆಂಗಳೂರಲ್ಲೇ ಇದ್ರು ಇಲ್ಲಿ ಇವರ ಬಟ್ಟೆ ಬರೆಗಳನ್ನೆಲ್ಲಾ ನೋಡಿ ಟೀಕೆ ಮಾಡಿದ್ದನ್ನು ಇಬ್ಬರು ಬಾಳೀಕಾಯಿ ಅವರಿಗೆ ಬಂದು ಹೇಳಿದ್ರು ಆಗ ಅವರು ಟೀಕೆ ಒಳ್ಳೆದು. ನಿನ್ನ ಅಭ್ಯಾಸ ಏನು, ಏನ್ ಕೆಲಸ ಮಾಡ್ತಿ ಅನ್ನೋದು ಎಲ್ಲಾನು ತೋರ್ಸು ನೀನು ಉತ್ತರ ಕೊಡಬೇಡ ಅಂತಾ ಹೇಳಿದರಂತೆ. ಆಗ ಆ ಮಕ್ಕಳಿಗೆ ಗಾಬರಿಯಾಗಿತ್ತು. ನಂತರ ಇವರಿಗೆ ಖುಷಿಯಾಯಿತು. ಆ ಮೂಲಕ ನಮ್ಮ ಶಾಲೆಯ ಹುಡುಗರು ಅಂತ ಗೊತ್ತಾಗಿ ಅದು ಬಾಳೀಕಾಯಿ ಸರ್ ಶಾಲೆ ಆ ಮೇಲೆ ಹಡಪದ ಅವರ ಹತ್ತಿರ ಕರೆದುಕೊಂಡು ಹೋದರು. ಆವಾಗ ಅವರು ಅವರ ಮತ್ತು ಈ ಹುಡುಗರ ನಡುವಳಿಕೆಯ ಬಗ್ಗೆ ಅಭ್ಯಾಸ ಮಾಡಿ ಕಲಾವಿದರು ಹೋದಾಗ ಹೇಳಿದರು. ಆ ಹುಡುಗರಿಗೆ ಒಳ್ಳೆಯ ಅಡಿಪಾಯ ಹಾಕಿ ಒಂದು ಒಳ್ಳೆಯ ಕೆಲಸ ಮಾಡಿರಿ ಇದನ್ನೇ ಮುಂದುವರೆಸುವುದನ್ನು ರೂಢಿಸಿಕೊಳ್ಳಿ ಮಕ್ಕಳ ಜೊತೆಗೆ ಇರ್ರಿ ಹಿಂದೆ ಬೀಳ ಬೇಡ್ರಿ ಅಂತ ಯಾವಾಗಲೂ ಪ್ರೋತ್ಸಾಹಿಸುತ್ತಿದ್ದರು.

ಅವರು ಕಲಿಯುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಚಿತ್ರಕಲೆಯ ಬಗ್ಗೆ ಏನು ಗೊತ್ತಿರಲಿಲ್ಲ. ಹುಡುಕಿದರು ಸಹಿತ ಒಬ್ಬ ಕಲಾವಿದನು ಸಿಗುತ್ತಿರಲಿಲ್ಲ ಒಂದು ಕಲಾ ಶಾಲೆಯೂ ಇರಲಿಲ್ಲ. ಆಗ ಉತ್ತರ ಕರ್ನಾಟಕದಲ್ಲಿ ಹುಟ್ಟಿದ ಕಲಾವಿದರು ಅಲ್ಲಿಗೆ ಹೋಗಿ ಅಲ್ಲಿಯೇ ನೆಲೆಸಿ ಕಲಾ ಶಾಲೆಯನ್ನು ಪ್ರಾರಂಭಿಸಿದರು. ಮಿಣಜಗಿ ಕಲಾವಿದರು ಇವರ ಶಿಷ್ಯರು ಮತ್ತು ಆರ್.ಎಂ. ಹಡಪದ ಅವರು ಕೂಡಿ ಸಂಸ್ಥೆಯನ್ನು ನಡೆಸುತ್ತಿರುವಾಗ ಅವರಿಬ್ಬರಲ್ಲಿ ಏನೋ ಘರ್ಷಣೆ ಬಂದಾಗ, ಆರ್. ಎಂ. ಹಡಪದ ಅವರು ತಮ್ಮ ಕುಟುಂಬ ಸಮೇತವಾಗಿ ಹೊರಬಂದು ಕೆನ್ ಕಲಾ ಶಾಲೆ ಪ್ರಾರಂಭ ಮಡಿ ಮನೆ ಮಕ್ಕಳು ಶಿಕ್ಷಣ ಹೀಗೆ ಎಲ್ಲವೂ ಒಂದರಲ್ಲಿಯೇ ನಡೆಸಿಕೊಂಡು ಬಂದು ಅನೇಕ ವಿದ್ಯಾರ್ಥಿಗಳನ್ನು ಹೊರತಂದರು. ಧನಲಕ್ಷ್ಮೀ ಜೆ.ಎಂ.ಎಸ್. ಮಣಿ, ಸಿ. ಚಂದ್ರಶೇಖರ, ಎನ್. ಮರಿಶಾಮಚಾರ, ಇವರೆಲ್ಲ ಹಡಪದ ಅವರ ವಿದ್ಯಾರ್ಥಿಗಳಾಗಿದ್ದರು. ಅವರು ಕರ್ನಾಟಕದ ಹೊಸ ಚೈತನ್ಯ, ನವ್ಯತೆಯ ಬಗ್ಗೆ ಕೆಲಸ ಮಾಡಿದಂತಹ ಪ್ರಪ್ರಥಮವಾಗಿ ಹೆಚ್ಚು ಕಾರಣ ಕೆ.ಕೆ. ಹೆಬ್ಬಾರ ಅವರು ಇವರಿಗಿಂತಲೂ ಹಿರಿಯ ಕಲಾವಿದರು ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಆಗಾಗ ಕಾರ್ಯಕ್ರಮಗಳು ನಡೆಸುತ್ತಿದ್ದರು. ಕರ್ನಾಟಕದಲ್ಲಿ ಚಿತ್ರಕಲೆಯ ಬಗ್ಗೆ ಹೆಚ್ಚು ಕೆಲಸ ಯಾರು ಮಾಡುತ್ತಿರಲಿಲ್ಲ. ಹೊಸ ವಿಚಾರಗಳು ಹೊಸ ಚಿಂತನೆಗಳು ಇದ್ದು ಅವುಗಳ ಬಗ್ಗೆ ಯಾರು ಲಕ್ಷ್ಯ ಕೊಡುವುದಿಲ್ಲ ಅನ್ನುವುದು ಪದೇ ಪದೇ ಹೇಳುತ್ತಿದ್ದರು.

ಅವುಗಳನ್ನು ಆರ್. ಎಂ. ಹಡಪದ ಅವರ ಶಾಲೆ ಬಡತನವಿದ್ದರು ಸಹಿತ ಶಿಕ್ಷಣ ಕ್ಷೇತ್ರದಲ್ಲಿ ಸಿರಿವಂತಿಕೆಯಿಂದ ಇಂದಿಗೂ ತಲೆ ಎತ್ತಿ ಮರೆಯುತ್ತಿದೆ. ನೋಡಲಿಕ್ಕೆ ಚಿಕ್ಕದಿದ್ದರೂ ಕೂಡ ಶಿಕ್ಷಣ ನೀಡುವ ಹೃದಯ ದೊಡ್ಡದಾಗಿದೆ. ಇದು ಸತ್ಯ ನಾನು ಇದ್ನು ಕಣ್ಣಾರೆ ಕಂಡುಕೊಂಡಿದ್ದಾರೆ. ಏಕೆಂದರೆ ಅವರು ಪ್ರತಿವರ್ಷ ಪರೀಕ್ಷೆ ಪರಿಷ್ಕರಣೆಗೆ ಹೋದಾಗ ಇಲ್ಲಿಗೆ ಬನ್ನಿರಿ ಬಾಳೀಕಾಯಿ ಅಂತ ಆರ್. ಎಂ. ಹಡಪದ ಗುರುಗಳು ಹೇಳುತ್ತಿದ್ದರಂತೆ. ಅಷ್ಟು ಅವರ ಮೇಲೆ ಹಿರಿಯರಾದರೂ ಸಹಿತ ತುಂಬಾ ಗೌರವದಿಂದ ಕಾಣುತ್ತಿದ್ದರು. ಈ ತರಹ ಉತ್ತರ ಕರ್ನಾಟಕದ ಕಲಾವಿದರಿಗೆ ಆಶ್ರಯದಾತರು ಹೌದು ಮತ್ತು ನವ್ಯ ಕಲೆಯ ಹೊಸ ಚೈತನ್ಯ ರೂಪಿಸಿ ಹೊಸ ವಾತಾವರಣವನ್ನು ನಿರ್ಮಿಸಿದವರು, ಅಲ್ಲದೇ ಮೊದಲು ಡಿಪ್ಲೋಮಾದಲ್ಲಿ ಕ್ಯಾನವಾಸ್ ಕೊಡುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ರಾತ್ರಿಯೆಲ್ಲ ಕುಳಿತು ಕರ್ನಾಟಕದ ಪರೀಕ್ಷಾ ವ್ಯವಸ್ಥೆಯನ್ನು ಬದಲಾಯಿಸಿ ಪರೀಕ್ಷಾ ಮಂಡಳಿಯ ನಿರ್ದೇಶಕರಿಗೆ ಒಂದು ಪತ್ರವನ್ನು ಬರೆದು ವಿದ್ಯಾರ್ಥಿಗಳಿಗೆ ಚಿಕ್ಕದೆಯಾಗಲಿ ಕ್ಯಾನವಾಸ್ ಕೊಡಿ ಚೆನ್ನಾಗಿ ಬಾಳಿಕೆ ಬರುತ್ತವೆ. ನೋಡುಗರಿಗೆ ಖುಷಿ ಕೊಡುತ್ತದೆ, ಮಾರಾಟವಾಗುತ್ತದೆ ಎಂದು ಪರೀಕ್ಷಾ ಮಂಡಳಿಯ ಎಲ್ಲ ಸದಸ್ಯರು ಕೂಡಿ ಪತ್ರವನ್ನು ಮುಂದಿಟ್ಟರು. ಆಗ ಅವರು ಇದರ ಬಗ್ಗೆ ನಮಗೆ ಯಾವುದು ಗೊತ್ತಿಲ್ಲ. ನೀವು ಮಾರ್ಗದರ್ಶನ ಮಾಡುತ್ತಾ ಹೋದರೆ ಮುಂದಿನ ವರ್ಷದಿಂದ ಕೊಡುತ್ತೇವೆ ಎಂದು ಆರ್. ಎಂ. ಹಡಪದ ಅವರಿಗೆ ಹೇಳಿದಂತೆ ಈ ಬದಲಾವಣೆಗೆ ಹಡಪದ ಅವರೇ ಕಾರಣ ಎಂದು ತಿಳಿಸಿದರೂ ಹೀಗೆ ಎಲ್ಲ ವಿಷಯಗಳಲ್ಲಿ ಹೊಸ ಬದಲಾವಣೆಗಳನ್ನು ತರುತ್ತಾ ಹೋದರು. ಇದರ ಜೊತೆಗೆ ಹೇಳುತ್ತಿದ್ದರು. ಗುಡಿಸಲೊಳಗೆ ಇರಲಿ ಒಳ್ಳೆಯ ಶಿಕ್ಷಣವಿರಬೇಕು. ಮಕ್ಕಳಿಗೆ ಸ್ವಾತಂತ್ರ್ಯವನ್ನು ಕೊಡಬೇಕು. ಸ್ವತಂತ್ರ್ಯವಾದ ಕಲಾಕೃತಿಗಳೆ ಬೇರೆ ನಾವು ಹೇಳಿ ಮಾಡಿಸಿದ ಕಲಾಕೃತಿಗಳಿಗೆ ಬೇರೆ ಎಂದು ತಿಳಿಸುತ್ತಿದ್ದರು. ಹೀಗೆ ಅನೇಕ ಕಾರಣಗಳಿಂದ ಸಂಸ್ಥೆಗಳು ಹುಟ್ಟಿಕೊಳ್ಳಲಿಕ್ಕೆ ಪ್ರಾರಂಭವಾದವು. ಇಂತಹ ಸಂಸ್ಥೆಗಳ ಸಹಯೋಗದ ಸಂಬಂಧವನ್ನು ಇಟ್ಟುಕೊಂಡು ಅನೇಕ ಮಾರ್ಗದರ್ಶನಗಳನ್ನು ನೀಡುತ್ತಾ ಬಂದಂತಹ ಕಲಾ ಶಿಕ್ಷಣ ತಜ್ಞರಲ್ಲಿಯೂ ಒಬ್ಬರಾಗಿ ಬೆಳೆದರು.

ನಂತರ ಧಾರವಾಡ ಕೇಂದ್ರದ ಉನ್ನತ ಕಲಾ ಶಿಕ್ಷಣ ಪರೀಕ್ಷೆ ಡಿ.ಟಿ.ಸಿ., ಡಿ.ಎಂ.ಸಿ. ಡಿಪ್ಲೋಮಾ ಇವುಗಳೆಲ್ಲವು ಬರುತ್ತಿದ್ದವು. ಬೆಂಗಳೂರಿನಿಂದ ಹಡಪದ ಅವರ ವಿದ್ಯಾರ್ಥಿಗಳು ಎಷ್ಟೋ ಜನ ಬರುತ್ತಿದ್ದರು. ಗುಲ್ಬರ್ಗಾದಿಂದ ಹೀಗೆಲ್ಲಾ ಇರುವುದರಿಂದ ಇವರ ಕಲಾ ಶಿಕ್ಷಣದ ವ್ಯವಸ್ಥೆ ಸತತವಾಗಿ ಗಲಾಟೆ ಇರುತ್ತಿತ್ತು. ನಂತರ ಬೆಂಗಳೂರಿಗೆ ಅದರ ನಂತರ ಮೈಸೂರು ಮತ್ತು ಗದಗ ಎರಡು ಒಂದೇ ಸಲ ಕೇಂದ್ರ ಮಾಡಿದರು. ಹೀಗೆ ಬೇರೆ ಬೇರೆ ಕಡೆಯ ಕೇಂದ್ರಗಳು ಒಡೆದು ಹೋಗಿ ಪರೀಕ್ಷೆ ಎಲ್ಲಿ ನಡೆಯುತ್ತವೆಯೋ ಅಲ್ಲಿಯೇ ಕೇಂದ್ರಗಳನ್ನು ಪ್ರಾರಂಭವಾದವು. ನಂತರ ಮೈಸೂರ ಮತ್ತು ಗದಗ ಆದಾಗ ಧಾರವಾಡ ಕೇಂದ್ರವನ್ನು ತೆಗೆದು ಹಾಕಿದರು. ಇಲ್ಲಿಯ ಮಕ್ಕಳು ಅಲ್ಲಿಗೆ ಹೋಗಿ ಪರೀಕ್ಷೆ

ಬರೆಯಲು ಪ್ರಾರಂಭಿಸಿದರು. ಅದರ ಸಲುವಾಗಿ ಅವರು ಮೇಲಾಧಿಕಾರಿಗಳ ಹತ್ತಿರ ಹೋಗಿ ಇರೋ ವಿಷಯವನ್ನು ಹೇಳಿಕೊಂಡರು. ಅಲ್ಲದೇ ಉತ್ತರ ಕರ್ನಾಟಕದ ಮೂಲತಃ ಚಿತ್ರಕಲೆಗೆ ಧಾರವಾಡ ಕೇಂದ್ರ ಮತ್ತು ಇಲ್ಲಿರುವಂತಹ ಎಲ್ಲ ಸಾಮಗ್ರಿಗಳನ್ನೆಲ್ಲ ಬೇರೆ ಬೇರೆ ಕಡೆ ತೆಗೆದುಕೊಂಡು ಹೋಗಿದ್ದಾರೆ. ವಿನಃ ಅವರ ಸ್ವಂತ ಸಾಮಗ್ರಿಗಳಲ್ಲ ಎಂದು ಮನವರಿಕೆ ಮಾಡಿಕೊಟ್ಟಿರುತ್ತಾರೆ.

ಮುಂದೆ ಸಿ. ವಿ. ಕಾಡಗಿ ಅಂತ ಡ್ರಾಯಿಂಗ್ ಇನ್ಸ್‌ಪೆಕ್ಟರ್ ಇದ್ದರು. ಅವರು ಧಾರವಾಡ ಕೇಂದ್ರದಲ್ಲಿ ನಡೆಯುವ ಪರೀಕ್ಷೆಗಳನ್ನು ಮಾತ್ರ ಇಲ್ಲಿಯೇ ಮೌಲ್ಯಮಾಪನ ಮಾಡುತ್ತಿದ್ದರು. ಸುಮಾರು ೫೯-೬೦ನೇ ವಯಸ್ಸಿನಲ್ಲಿ ಪ್ರಾರಂಭವಾದದ್ದು ಪಬ್ಲಿಕ ಸ್ಕೂಲನಲ್ಲಿ ಸಿ. ವಿ. ಕಾಡಗಿ ಅವರು ಸರಕಾರದಿಂದ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿಸಿಕೊಂಡು ಸಾಕು ಅನ್ನುವಷ್ಟು ಚಿತ್ರಕಲೆಗೆ ಬೇಕಾಗುವಂತಹ ಎಲ್ಲ ತರಹದ ಸಾಮಗ್ರಿಗಳನ್ನು ಬೆಲೆ ಬಾಳುವಂತಹವುಗಳನ್ನು ತೆಗೆದುಕೊಂಡು ಬಂದಿದ್ದರು. ನಂತರ ಇಲ್ಲಿರುವಂತಹ ಎಲ್ಲ ವಸ್ತುಗಳು ಹರಿದು ಹಂಚಿ ಹೋಗಿರುವವು ಎಂದು ಹೇಳಿ ಬೇಕಾದರೆ ಸಂಬಂಧಪಟ್ಟ ಎಲ್ಲ ದಾಖಲೆಗಳು ಅವರ ಹತ್ತಿರ ಇದ್ದಾವೆ ಸರ್ ಅಂದಾಗ ಆ ಒಂದು ಮಾತಿಗೆ ಮತ್ತೇ ಪುನಃ ಧಾರವಾಡ ಕೇಮದ್ರವನ್ನು ಪ್ರಾರಂಭಿಸಿದರು. ಅದಕ್ಕೆ ತುಂಬಾನೆ ಸಂತೋಷವಾಯಿತು. ಆದರೆ ಆ ಸಂತೋಷದ ಹಿಂದೆ ಎಷ್ಟೊಂದು ಕಷ್ಟ-ನಷ್ಟ, ನೋವು-ನಲಿವುಗಳು ಜೀವನದ ಚಕ್ರ ಮನಷ್ಯನಿಗೆ ಗುರಿ ಇರಬೇಕು. ತಾನು ಮುಟ್ಟುವುದರ ಜೊತೆಗೆ ಇನ್ನೊಬ್ಬರನ್ನು ಮುಟ್ಟಿಸಬೇಕು. ಜ್ಞಾನಕ್ಕೆ ವಯಸ್ಸು ಮುಖ್ಯವಲ್ಲ ಎಂದು ಇಂತಹ ವಿಷಯಗಳಿಗೆ ಇವರನ್ನು ಮತ್ತು ಹಿರಿಯರಾದ ಆರ್. ಎಂ. ಹಡಪದ ಅವರ ಜೊತೆಗೆ ಹೋಲಿಕೆ ಮಾಡಿಕೊಂಡು ವಿವರಣೆಗಳನ್ನು ನೀಡುತ್ತಿದ್ದರು.

ನಾವು ಕಲಿಯುವ ಸಂದರ್ಭದಲ್ಲಿ ಪ್ರಪ್ರಥಮವಾಗಿ ಶಿರಭಾವ ಚಿತ್ರ ಬಿಡಿಸಿರುವುದು ನಂತರ ಉಳಿದವು ಎಲಿಮೆಂಟರಿ ಪೇಂಟಿಂಗ್‌ಗೆ ಯಥಾದರ್ಶನವಿತ್ತು. ಎಲ್ಲಿ ನಮಗೆ ಅಂದರೆ ಹಾಲಭಾವಿ ಸ್ಕೂಲನಲ್ಲಿ ದೇಶಪಾಂಡೆ ಶಿಕ್ಷಕರು ಹೇಳುತ್ತಿದ್ದರು ಹಾಗೂ ಒಳ್ಳೆಯ ಶಿಕ್ಷಕರು ಹೌದು, ಇವರು ಅವರ ಮನೆಗೆ ಹೋಗುತ್ತಿದ್ದರು. ಅದು ರಾತ್ರಿ ೧೨ ಗಂಟೆಗೆ ಅಲ್ಲಿಯವರೆಗೂ ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗುತ್ತಿದ್ದರು. ಆಗ ಇವರು ಹೋಗಿ ಕೇಳುತ್ತಿದ್ದರು ಸರ್ ಯಥಾದರ್ಶನ ಅಂದರೆ ಏನು ಅದು ಯಾಕೆ ಕಲಿಯಬೇಕು? ಅಂತ ಕೇಳಿದಾಗ ಅವರು ಹೇಳಿದರು ಇದು ಎಲ್ಲದಕ್ಕೂ ಬೇಕು ಜೀವನದ ಎಲ್ಲ ರೀತಿಯಿಂದಲೂ ಅವಶ್ಯವಾಗಿ ಬೇಕು. ಜೀವನದ ಒಂದು ತೂಕ ಅಂತ ಹೇಳಿದರು. ನಂತರ ಯಾವುದೇ ವಿಷಯವಾಗಲಿ ಕ್ಲಾಸ್‌ನಲ್ಲಿ ತಿಳಿಯದಿದ್ದರೆ ರಾತ್ರಿ ೧೨ ಗಂಟೆಗೆ ಮನೆಗೆ ಹೋಗಿ ಕೇಳಿದಾಗ ತುಂಬಾ ಚೆನ್ನಾಗಿ ನಮ್ಮ ಜೀವನಕ್ಕೆ ಸಂಬಂಧಪಟ್ಟ ಉದಾಹರಣೆಗಳೊಂದಿಗೆ ಹೇಳಿಕೊಡುತ್ತಿದ್ದರು. ಮುಂದೆ ಬಾಳೀಕಾಯಿ ಅವರು ವರ್ಗವಾಗಿ ಬಂದು ೧೯೭೪ರಲ್ಲಿ ಚಿತ್ರಕಲಾ ಶಾಲೆ ಪ್ರಾರಂಭವಾದಾಗ ನಮ್ಮ

ಶಾಲೆಯಲ್ಲಿ ಯಥಾದರ್ಶನ ವಿಷಯವನ್ನು ಅವರೇ ಹೇಳಿ ಕೊಡುತ್ತಿದ್ದರು.. ಆದರೆ ಎಲ್ಲವನ್ನು ಮರೆತ್ತಿದೆ. ಆಗಿನ ಗುರುಗಳು ಇಲ್ಲ, ಗೆಳೆಯರಿಗೆ ಕೇಳೋದಕ್ಕೆ ಅವರು ಸಹಿತ ಅಷ್ಟೋಂದು ಸರಿಯಾಗಿ ಹೇಳುತ್ತಿರಲಿಲ್ಲ. ಅದಕ್ಕೆ ಹಂಚನಾಳ ಶಿಕ್ಷಕರೊಬ್ಬರಿದ್ದರು. ಅವರು ಹತ್ತಿರ ಹೋಗಿ ಸರ್ ನನ್ನ ಪರಿಸ್ಥಿತಿ ಹೀಗಿದೆ ಅಂದಾರ ಸರಿ ಹೆದರಬೇಡ ನಮ್ಮ ಮನೆಗೆ ಯಾವಾಗಲೂ ಬಾ ಹೇಳಿಕೊಡುತ್ತೇನೆ ಎಂದು ಹೇಳಿದಾಗ ಅಲ್ಲಿಗೆ ಹೋದರು. ಪ್ರತಿಯೊಂದು ಬಿಡದೆ ಎಲ್ಲ ವಿಷಯದ ತಳಪಾಯವನ್ನೆಲ್ಲ ಸುಲಭವಾಗಿ ಹೇಳಿದರು. ಅವರಷ್ಟು ನೆನಪು ನನಗಿರಲಿಲ್ಲ. ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿದ ಅವರು ಅವರಿಗೆ ಹೇಳಿದ ನಂತರ ಸ್ಕೂಲ್‌ನಲ್ಲಿ ಹೇಳಲು ಪ್ರಾರಂಭಿಸಿದೆ. ಆಗ ಮಕ್ಕಳೆಲ್ಲ ಶೇ ೯೦% ರಿಂದ ೯೫% ರಷ್ಟು ತೆಗೆದುಕೊಳ್ಳಲು ಅನುಕೂಲವಾಯಿತು. ಇದು ಅವರು ಮರೆತರು ಕೂಡ ಇನ್ನೋಬ್ಬರನ್ನು ಮೊರೆ ಹೋಗದಂತೆ ಉಳಿಯಿತು. ಅದು ಸೌಜನ್ಯದಿಂದ, ನಾನು ದೊಡ್ಡವನಲ್ಲ ನಾನು ಇನ್ನೂ ಚಿಕ್ಕವ್ವ ಎಂದು ಪ್ರತಿಯೊಂದು ವಿಷಯಕ್ಕೂ ಅವರ ಮಾರ್ಗದರ್ಶನ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ಪ್ರತಿಯೊಬ್ಬರ ಸಂಬಂಧ ಜೋಡಿಸುವ ಕೊಂಡಿ ಈ ಕಲೆ ಮಾಡುತ್ತದೆ. ನನ್ನ ಜೀವನದಲ್ಲಿ ಹುಟ್ಟಿದಾಗಿನಿಂದ ಇಲ್ಲಿಯವರೆಗೂ ಯಾವ ಯಾವ ತರಹದ ಕೊಂಡಿಗಳು ಅವರಿಗೆ ಸಿಕ್ಕದ್ದವು ಎನ್ನುವುದು ಈ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

ಒಬ್ಬ ವಿದ್ಯಾರ್ಥಿ ಕೊನೆಯವರೆಗೂ ವಿದ್ಯಾರ್ಥಿಯಾಗಿರಬೇಕಂತೆ ಅಂದಾಗ ಮಾತ್ರ ಅವರು ಉನ್ನತಿ ಹೊಂದಲು ಸಾಧ್ಯ ಎಂದು ಹಿರಿಯರು ಹೇಳುತ್ತಾರೆ. ಬೆಳೆಯುತ್ತ ಬೆಳೆಯುತ್ತ ಸಮಾಜದಿಂದ, ವಿಚಾರವಂತರಿಂದ ಮಾರ್ಗದರ್ಶನ ಪಡೆದರೆ ಮಾತ್ರ ಮನುಷ್ಯ ಒಂದು ಗುರಿ ಮುಟ್ಟಲು ಸಾಧ್ಯ. ಬಾಳೀಕಾಯಿ ಅವರು ಇದೆ ವಿಚಾರ ಹೇಳುತ್ತಾರೆ. ನಾನು ಇನ್ನೂ ಮಾಡಬೇಕಾದ್ದದ್ದು ಕಲಿಯಬೇಕಾದ್ದದ್ದು ಬಹಳಷ್ಟು ಇದೆ ಎಂದು ಹೇಳುತ್ತಾರೆ ಕಲಾವಿದರು. ಇದನ್ನು ಗಮನಿಸಿದರೆ ಕಲೆಯಲ್ಲಿ ಕಲಿಯುವ ಅಂಶ ಸಾಯುವವರೆಗೂ ಇರುತ್ತದೆ. ಅದನ್ನು ಅರ್ಥೈಸಿಕೊಳ್ಳಲು ಕಲಾತಪಸ್ಸು ಮಾಡಿದರೆ ಮಾತ್ರ ಸಾಧ್ಯ.

ಈ ವಿಚಾರಗಳನ್ನು ನಮ್ಮ ಗುರುಗಳಾದ ಟಿ. ಪಿ. ಅಕ್ಕಿ ಮತ್ತು ವಿ.ಟಿ. ಕಾಳೆ ಅವರು ತಮಾಷೆ ಮಾಡುತ್ತಿದ್ದರು. ಏನೆಂದರೆ "ಬಾಳೀಕಾಯಿ ನಿನಗೆ ಇಷ್ಟು ವಯಸ್ಸಾಗಿದೆ. ಅನುಭವವಿದೆ. ಇಷ್ಟೊಂದು ಡ್ರಾಯಿಂಗ್ಸ್ ಮಾಡಿದಿಯಾ ಮತ್ತು ಅನೇಕ ವಿದ್ಯಾರ್ಥಿಗಳನ್ನು ತಯಾರು ಮಾಡಿದಿಯಾ, ಕಲಾವಿದನಾಗಿ ಬೆಳೆದರು ಸಹಿತ ಬಾಳೆಹಣ್ಣು ಯಾಕೆ ಆಗಿಲ್ಲ ಅಂಥ ಕೇಳಿದರು? ಅದಕ್ಕೆ ನಾನು ಹೇಳಿದೆ ಬಾಳೆಹಣ್ಣು ಆದರೆ ಸಿಪ್ಪೆ ಸುಲಿದು ಅದನ್ನು ಎಸೆದು ತಿಂದು ಬಿಡುತ್ತಾರೆ. ಆದರೆ ಹಣ್ಣಾಗದೆ ಕಾಯಿ ಆಗಿ ಇನ್ನು ಹಣ್ಣಾಗುತ್ತೆ ಹಣ್ಣಾಗುತ್ತೆ ಅಂತ ಕಾಯುತ್ತಾರೆ ಎನ್ನುವ ಅರ್ಥದಲ್ಲಿ" ಸರ್ ನೀವೇ ಅರ್ಥ ಮಾಡಿಕೊಳ್ಳಿರಿ

ಅಂಥ ಹೇಳಿದೆ. ಎನ್ ಅಂದ್ರೆ ಮನುಷ್ಯ ಯಾವಾಗಲೂ ನಾನು ಹಣ್ಣಾಗಬೇಕು ನಿರಂತರವಾಗಿ ಆಗುತ್ತಲೇ ಇರಬೇಕು. ಹಸಿಕಾಯಿ ಹಸಿಯಾಗಿದ್ದರೆ ವಿಷಯ ತಿಳಿದುಕೊಳ್ಳಲಿಕ್ಕೆ ಬಹಳಷ್ಟಿದೆ. ಅವರು ಇನ್ನು ಚಿಕ್ಕವ ಅಂತ ಹೇಳಿ ಏನೋ ಸಾಧನೆ ಮಾಡಬೇಕು ಅಂಥ ಉತ್ಸಾಹ ಬರುತ್ತಿರುತ್ತದೆ. ಈ ಅರ್ಥವನ್ನು ಅವರು ಅದಕ್ಕೆ ಜೋಡಿಸಿದರು. ಬಹಳ ಖುಷಿ ಪಟ್ಟು ಎಷ್ಟು ವಿಚಾರವಂತಿಕೆ ಇದೆ ಎಂದು ಹೇಳಿ ಸರಿ ನೀನು ಬಾಳೆಹಣ್ಣು ಆಗೋದು ಬೇಡ ಬಾಳೀಕಾಯಿ ನೇ ಆಗಿರು ಎಂದು ಹೇಳಿದರು. ಆ ಮೇಲೆ ನನ್ನ ಗುಣಗಳನ್ನೆಲ್ಲ ತಿಳಿದುಕೊಂಡು ಕಾಳೆ ಮತ್ತು ಆಕ್ಕಿ ಗುರುಗಳು ಅವರಿಗೆ ತುಂಬಾ ಪ್ರೀತಿಯನ್ನು ಇಟ್ಟಿದ್ದರು. ಶ್ರೀ ವಿ.ಟಿ. ಕಾಳೆ ಅವರು ಸಾಹಿತಿಗಳು ಕಲಾವಿದರು ಮತ್ತು ನಾಟಕಕಾರ ಈ ಮೂರು ಗುಣಗಳಿಂದ ಅವರು ಕೆಲಸ ಮಾಡಿದ್ದರು. ಅವರೊಂದು ನಾಟಕ ಬರೆದಿದ್ದರು. ಕಲಾಮಂದಿರದಲ್ಲಿ ಅವರಿಗೊಂದು ಸ್ತ್ರೀ ಪಾತ್ರವನ್ನು ವಹಿಸಿದ್ದರು. ಅದನ್ನೆಲ್ಲ ನೋಡಿ ಖುಷಿ ಪಟ್ಟು ಅಕ್ಕಿ ಗುರುಗಳು ಬಹುಮಾನ ಕೊಡುವುದು ಈ ತರಹ ಕಲಾಮಂದಿರದಲ್ಲಿ ಅನೇಕ ಕಲಾಚಟುವಟಿಕೆಗಳನ್ನು ಮಾಡುತ್ತಿದ್ದರು. ಇಂತಹ ಹಿರಿಯ ಕಲಾವಿದರ ಸಂಬಂಧವು ಎಷ್ಟರ ಮಟ್ಟಿಗೆ ಇವರೊಂದಿಗೆ ಇತ್ತೆಂಬುಹುದು ಮೇಲಿನ ವಿಷಯಗಳಿಂದ ತಿಳಿದುಬರುತ್ತದೆ.

ಕಲಾ ಮಂದಿರವೆಂದರೆ ದೇವಸ್ಥಾನ ಮಂದಿರ ಅಲ್ಲಿ ನಾವು ಸೇವಕರು ಇದು ನಮ್ಮ ಮನೆ ಎನ್ನುವ ಭಾವನೆ ಇಟ್ಟುಕೊಂಡು ಒಳ್ಳೆಯ ವಾತಾವರಣ ಸೃಷ್ಟಿ ಮಾಡಿದವರು ಟಿ.ಪಿ. ಅಕ್ಕಿ ಗುರುಗಳು ಬಹಳಷ್ಟು ಖುಷಿಯಾದಾಗ ಅವರಿಗೆ ಬಾರೋ ಬಾಳೀಕಾಯಿ ಅನ್ನುವುದು ಅವರ ಬಾಯಿಂದ ಕೇಳಲಿಕ್ಕೆ ತುಂಬಾ ಮಧುರವಾಗಿರುತ್ತಿತ್ತು. ಆದರೂ ಇಷ್ಟೊಂದು ಅವಿನಾಭಾವ ಸಂಬಂಧವಿದ್ದರು ಕೂಡ ಅವರ ಎದುರಿಗೆ ಕುಳಿತು ಮಾತಾಡಿದವರಲ್ಲ. ಯಾಕೆಂದರೆ ದೊಡ್ಡವರು, ಗುರುಗಳು, ಕರ್ನಾಟಕದ ಕಲೆಯ ಆಗು-ಹೋಗುಗಳ ಬಗ್ಗೆ ತಿಳಿದುಕೊಂಡವರು ಅಂಥವರ ಎದುರಿಗೆ ಕೂಡುವುದು ಸರಿಯಲ್ಲ ಅಂತ ಹೀಗೆ ಗೌರವ ಕೊಡುವುದರ ಮೂಲಕ ನಿಂತುಕೊಂಡೆ ಇರುತ್ತಿದ್ದರು. ಆದರು ಒತ್ತಾಯದ ಮೇರೆಗೆ ನೀನು ಶಿಕ್ಷಕನಾಗಿಯೂ, ದೊಡ್ಡವನಾಗಿಯೂ ಕುಳಿತುಕೋ ಏನಾಗಲ್ಲ ಅಂದಾಗ ಕುಳಿತುಕೊಳ್ಳುತ್ತಿದ್ದೇವು. ಈ ತರಹ ಎಲ್ಲರಿಗೂ ಯಾವ ಬೇಧ ಭಾವವಿಲ್ಲದೆ ಒಂದೇ ಭಾವನೆಯಿಂದ ತಮ್ಮ ಮಕ್ಕಳಂತೆ ಕಾಣುತ್ತಿದ್ದರು. ಅವರು ಇವರ ಕಾಲೇಜಿನ ಜೀವನದಲ್ಲಿ ಸ್ವಲ್ಪ ದಿವಸಗಳು ಇದ್ದರು ಸಹಿತ ಬಹಳ ಚೆನ್ನಾಗಿ ನೋಡಿಕೊಂಡರು, ಅವರು ಏನೇ ಅಂದರು ಗೌರವ ಕೊಡುತ್ತಿದ್ದೇವು.

ಕಲಾವಿದರು ರಂಗೋಲಿಯನ್ನು ಬಹಳ ಹಾಕುತ್ತಿದ್ದರು. ಅಲ್ಲದೇ ಮೈಸೂರು ದಸರಾದಲ್ಲಿ ನಿರಂತರವಾಗಿ ಮೂರು ಸಲ ಪ್ರಥಮ ಬಹುಮಾನ ಪಡೆದುಕೊಂಡಿದ್ದರು. ಅದು ಅವರಿಗೆ ಗೊತ್ತಾಯಿತು. ಆಗ ಇವರನ್ನು ಕೇಳಿದರು ೬೦ ವರ್ಷದ ಇದೆ, ನೀನು ರಂಗೋಲಿ ಹಾಕಬೇಕು ಅಂದಾಗ ಸರಿ ಸರ್

ಎಂದು ರಂಗೋಲಿ ಹಾಕಿದರಂತೆ. ಇವತ್ತಿಗೂ ಅವರು ಸ್ವರ್ಗದಲ್ಲಿ ಇದ್ದಾರೆ ಅವರನ್ನು ನೆನಪಿಸಿಕೊಳ್ಳುತ್ತಾರೆ. ಅವರು ಕಲಾವಿದರ ಬಗ್ಗೆ ಬಹಳಷ್ಟು ಗೌರವ ಇಟ್ಟಿದ್ದರು. ಬಾಳೀಕಾಯಿ "ಎಲ್ಲಿ ಹೋಗಿದ್ದಾನೆ, ಏನ್ ಮಾಡಿದ್ದಾನೆ. ಎಲ್ಲರ ಮನಸ್ಸನ್ನು ಹೇಗೆ ಗೆದ್ದಿದ್ದಾನೆ". ಅವರಿಗೆ ಒಂದು ತರಹದ ಒಲಿದ ಆನಂದ ಅವರ ಮುಖದಲ್ಲಿ ಉಕ್ಕಿ ಹರಿದು ಬರುವುದನ್ನು ಇವರು ಕಣ್ಣಾರೆ ನೋಡುತ್ತಿದ್ದರಂತೆ. ಅವರ ಹಾವ ಭಾವಗಳನ್ನು ನೋಡಿ ಇಂತಹ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿದಂತಹ ದೊಡ್ಡ ವ್ಯಕ್ತಿ. ಅವರನ್ನು ಜೀವನದಲ್ಲಿ ಮರೆಯೋದಕ್ಕೆ ಸಾಧ್ಯವಿಲ್ಲ. ಹಾಗೇ ಅವರ ಪ್ರಾಥಮಿಕ ಗುರುಗಳಾದ ಶ್ರೀ ಬಾವಾನವರ ಗುರುಗಳು ಬಹಳಷ್ಟು ಪ್ರೀತಿ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ಈಗಲೂ ಸಹಿತ ಅವರ ಮತ್ತು ಇವರ ಒಡನಾಟ ತುಂಬಾನೆ ಇಟ್ಟುಕೊಂಡಿದ್ದಾರೆ. ಇದರ ಒಂದೇ ಒಂದು ಉದ್ದೇಶ ಎಂದರೆ ನಾವು ವಿದ್ಯಾರ್ಥಿಗಳು ವಿದ್ಯೆಯನ್ನು ಸ್ವೀಕಾರ ಮಾಡಿಕೊಳ್ಳಬೇಕು. ವಿದ್ಯೆಯೆನ್ನುವ ಊಟವನ್ನು ತಿಂದು ಅದರ ರುಚಿಯನ್ನು ಇನ್ನುಳಿದವರಿಗೆ ತಿಳಿಸಬೇಕು. ಅಂಥ ವಿದ್ಯಾರ್ಥಿಗಳು ಗುರುವಿನ ಮೇಲೆ ತಂದೆ ತಾಯಿಗಳ ಮೇಲೆ ಮತ್ತು ಗುರುಹಿರಿಯರ ಮೇಲೆ ಶ್ರದ್ಧಾಭಕ್ತಿ ಇಡಬೇಕು ಅಂದಾಗ ಮಾತ್ರ ದೇವರು ಇವತ್ತಿವರೆಗೂ ಯಾವುದನ್ನು ಯಾವತ್ತೂ ಕಡಿಮೆ ಮಾಡಿಲ್ಲ. ಇದು ಅವರ ಜೀವನದಲ್ಲಿ ಕಂಡು ಕೊಂಡಂತಹ ಅನುಭವ ಇವರಲ್ಲದೇ ಧಾರವಾಡದಲ್ಲಿ ದಂಡಾವತಿಮಠ, ಡಿ. ವ್ಹಿ. ಹಾಲಭಾವಿ, ಗದಗಿನಲ್ಲಿ ಚೆಟ್ಟಿ, ಎಂ. ವ್ಹಿ. ಮಿಣಜಗಿ ಇವರೆಲ್ಲ ಒಳ್ಳೆಯ ತಜ್ಞರಂತೆ ಇರುವ ಉತ್ತರ ಕರ್ನಾಟಕದ ಚಿತ್ರಕಲೆಯ ಬಗ್ಗೆ ಸಾಕಷ್ಟು ನಿಲುವುಗಳನ್ನು ಕಂಡುಕೊಂಡಂತಹ ಕಲಾವಿದರು.

ನಾವು ಕಲಿಯಬೇಕಾದರೆ ಬಹಳಷ್ಟು ತೊಂದರೆಗಳು ಬಂದರು ಸಹಿತ ಅವುಗಳಿಗೆ ಹೆಚ್ಚು ಆಸ್ಪದ ಕೊಡದೆ ಅಭಿವೃದ್ಧಿ ಹೊಂದಲು ಪ್ರಯತ್ನಪಟ್ಟುರು ಒಬ್ಬ ಅಧಿಕಾರಿ ನಮಗಿಂತಲೂ ಚಿಕ್ಕವನಿದ್ದರೂ ಸಹಿತ ಕೆಲಸಗಳು ಆಗಬೇಕಾದರೆ ಕೃತಜ್ಞತೆ ಭಾವನೆಯಿಂದ ನಡೆದುಕೊಳ್ಳಬೇಕು. ಆದರೆ ಇವತ್ತಿನ ವಾತಾವರಣದಲ್ಲಿ "ಸೇರಿಗೆ ಸವಾ ಸೇರು ಅಂತಾ" ಹೇಳಿ ಆವೇಶಕ್ಕೆ ಒಳಗಾಗುತ್ತಾರೆ.

ಬಾನಾವರದಲ್ಲಿಯೂ ಒಳ್ಳೆಯ ಹೆಸರುಗಳಿಸಿ ಧಾರವಾಡದಲ್ಲಿಯೂ ಸಹಿತ ಅದೇ ರೀತಿ ಇದ್ದು, ಅವರು ಬೆಳೆಯುವುದರ ಜೊತೆಗೆ ವಿದ್ಯಾರ್ಥಿಗಳನ್ನು, ಅವರ ಮಕ್ಕಳನ್ನು, ಅಲ್ಲದೆ ಅವರ ಅಣ್ಣನ ಮಕ್ಕಳನ್ನು ಸಹಿತ ಬೆಳೆಸಿ ಈಗ ಅಣ್ಣನ ಮಕ್ಕಳು ದೊಡ್ಡ ದೊಡ್ಡ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರುಗಳ ಜೊತೆಗೆ ನಮ್ಮ ಅಳಿಯನನ್ನು ಕರೆದುಕೊಂಡು ಬಂದು ನವೋದಯ ಸ್ಕೂಲನಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಹೇಳಬೇಕಾದರೆ ಅವರೊಬ್ಬರೇ ಲಾಭವನ್ನು ತೆಗೆದುಕೊಳ್ಳದೆ ಶ್ರೀ ಎಂ. ಆರ್. ಬಾಳೀಕಾಯಿ ಅವರು ತಮ್ಮ ಕಲಾ ಜೀವನವನ್ನು ತಮ್ಮಗಷ್ಟೇ ಸೀಮಿತಗೊಳಿಸದೇ ತಮ್ಮ ಮಗನಿಗೂ ಹಂಚಿದ್ದಾರೆ. ರಮೇಶ ಬಾಳೀಕಾಯಿ ಇವರ ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಎಂ.ಎಂ.

ಜಿ.ಡಿ.ಯನ್ನು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಕೂಡ ಕಲಾಕ್ಷೇತ್ರದಲ್ಲಿ ಹೆಸರು ಗಳಿಸುತ್ತಿರುವುದು ಕಲಾವಿದರಿಗೆ ಸಂತೋಷದ ಜೊತೆಗೆ ತಂದೆಗೆ ತಕ್ಕ ಮಗನಾಗಿ ರೂಪುಗೊಳ್ಳುತ್ತಿದ್ದಾರೆ. ಮಕ್ಕಳು, ಅವರ ಅಣ್ಣನ ಮಕ್ಕಳು, ಒಟ್ಟಾರೆಯಾಗಿ ಧಾರವಾಡದ ಲಾಭವನ್ನು ಅವರ ಕುಟುಂಬವೇ ಪಡೆದುಕೊಂಡಿದೆ. ಇನ್ನೊಂದು ಅವರಿಗೆ ಲಾಭವೆಂದರೆ ಹೆಚ್ಚು ಸಂಸ್ಕಾರ ಬೆಳೆಸುವುದಕ್ಕೆ ಸಾಹಿತ್ಯಮಯದ ಮತ್ತು ಜಾನಪದ ವಲಯದ ಸಂಸ್ಕಾರ ಹೆಚ್ಚು ಸಿಕ್ಕಿದೆ. ದ.ರಾ.ಬೇಂದ್ರೆ, ಚನ್ನವೀರ ಕಣವಿಯವರ ಸಂಪರ್ಕ, ಅನೇಕ ಜನ ಸಾಹಿತ್ಯಕಾರರ ಸಂಪರ್ಕ ಬೆಳೆಯುವದುರ ಜೊತೆಗೆ ಚಿತ್ರಕಲಾ ಬೆಳೆಸುವುದಕ್ಕೆ ಎಷ್ಟು ವಿಷಯ ಇದೆ ಎನ್ನುವುದನ್ನು ತಿಳಿಸಿಕೊಡುವುದರ ಜೊತೆಗೆ ಎಷ್ಟೊಂದು ಖುಷಿ ಇದೆ ಎನ್ನುತ್ತಿದ್ದರು ಮತ್ತು ಆಶ್ಚರ್ಯ ಪಡುತ್ತಿದ್ದರು. ಅನೇಕ ಸಾಹಿತ್ಯ ಚಟುವಟಿಕೆಗಳನ್ನು ಸಂಗ್ರಹಿಸುವುದು ಕೂಡ ಅವರ ಹವ್ಯಾಸ. ಉದಾ: ಅವರ ಮನೆಯ ಹತ್ತಿರವೇ ಬೇಂದ್ರೆ ಪಾರ್ಕ ಇದೆ. ಅಲ್ಲಿ ಅನೇಕ ಚುಟುಕುಗಳನ್ನು ಬರೆದಿದ್ದಾರೆ. ನೋಡಿದ ಕ್ಷಣ ಬರೆದಿಟ್ಟುಕೊಳ್ಳಬೇಕೆಂದರೆ ಸಾಕು ಏನು ಸಿಗುತ್ತೆ ಅದರ ಮೇಲೆ ಬರೆದುಕೊಂಡು ಬರುವುದು. ಇಲ್ಲವಾದರೆ ಏನು ಸಿಗದ ಇದ್ದ ಪಕ್ಷದಲ್ಲಿ ಸಾಮಾನ್ಯವಾಗಿ ಎಲ್ಲರ ಹತ್ತಿರ ಬಸ್ ಟಿಕೆಟ್ ಇದ್ದೆ ಇರುತ್ತೆ ಅವುಗಳ ಮೇಲೆ ಬರೆದುಕೊಂಡು ಬರುತ್ತೇನೆ. ಹೀಗೆ ಸಾಹಿತ್ಯ ಒಂದು ನೆರಳು ಪ್ರಭಾವ ಅವರ ಮೇಲೆ ಬಹಳ ಪ್ರಭಾವ ಬೀರಿರುವುದರಿಂದ ಮನೆಯಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಪುಸ್ತಕಗಳು ಸಂಗ್ರಹಗೊಂಡಿವೆ. ಅಶ್ಲೀಲ ಕ್ಷೇತ್ರವೊಂದನ್ನು ಬಿಟ್ಟರೆ ಉಳಿದೆಲ್ಲ ಕ್ಷೇತ್ರಗಳ ಪುಸ್ತಕಗಳು, ಮಕ್ಕಳಿಗೆ ಉಪಯೋಗವಾಗುವಂತೆ ಮತ್ತು ಅವರ ಮನಸ್ಸಿಗೆ ಸಮಾಧಾನವಾಗುವಂತಹ ಅವರ ಜೀವನಕ್ಕೆ ಉಪಯುಕ್ತವಾಗುವಂತಹ ಇವುಗಳ ಜೊತೆಗೆ ಕಲೆಗೆ ಸಂಬಂಧಿಸಿದಂತಹ ಪುಸ್ತಕಗಳು ಸಂಗ್ರಹ ಮಾಡಿದ್ದಾರೆ. ಆದರೂ ಕೂಡ ಸಾಲದು ಲೆಕ್ಕಕ್ಕೆ ಸುಮಾರು ೩–೪ ಲಕ್ಷದಷ್ಟು ಬೆಲೆ ಬಾಳುವ ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಅವರು ಯಾವತ್ತಿಗೂ ದುಡ್ಡಿಗೆ ಬೆಲೆ ಕಟ್ಟಿಲ್ಲ. ಆದರೆ ದುಡ್ಡೆ ದೊಡ್ಡಪ್ಪ ಅಂತಾರೆ ಆದರೆ ವಿದ್ಯೆ ಇದರ ಅಪ್ಪ ಅನ್ನುವುದು ಜ್ಞಾನ ವ್ಯವಹಾರ, ಶಕ್ತಿ, ನಡತೆ ಇವುಗಳನ್ನೆಲ್ಲ ಒಳಗೊಂಡಿರಬೇಕು. ಸತ್ತ ಮೇಲೆ ಅಂತಾ ಎಲ್ಲ ರೀತಿಯಿಂದ ಹೆಸರು ಗಳಿಸಿಕೊಂಡು ಮಕ್ಕಳಿಗೆ ಏನು ಮಾಡಿಲ್ಲ, ಇದ್ದರೆ ಎಷ್ಟು ಸತ್ತರೆ ಎಷ್ಟು, ಅದೇ ತಾನು ಒಳ್ಳೆಯ ಇತರರಿಗೂ ಬೆಳೆಸಿ ಮಕ್ಕಳಿಗೆ ಎಲ್ಲವನ್ನು ಮಾಡಿಟ್ಟು ಹೋದರೆ, ಇನ್ನು ಇರಬೇಕಿತ್ತು. ಅಲ್ಲದೇ ವ್ಯಾಪಾರಸ್ಥನಾಗಿದ್ದರೆ, ಹೇಗೆ ದುಡ್ಡು ಮಾಡಬೇಕು ಎಷ್ಟು ತಿನ್ನಬೇಕು ಅನ್ನುವ ಭಾವನೆ ಬರುತ್ತದೆ. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಕಲಾಕ್ಷೇತ್ರದಲ್ಲಿ ಮಾನವೀಯ ಮೌಲ್ಯಗಳನ್ನು ತೆಗೆದುಕೊಂಡು ಹೋಗುವ ಜ್ಞಾನವೇ ಬೇರೆ ನೆಮ್ಮದಿ ಕೊಡುವ ಜ್ಞಾನ ಯಾವುದೆಂದರೆ ಲಲಿತ ಕಲೆಗಳು, ಜೀವನದಲ್ಲಿ ಶಾಶ್ವತವಾಗಿ ಮಾಡಿದ ಕೆಲಸ, ಮಾಡಿದ ಕಾರ್ಯ ಇವುಗಳೇ ಉಳಿಯುವವು ಎನ್ನುತ್ತಾರೆ ಶ್ರೀ ಬಾಳೀಕಾಯಿಯವರು. ಅದಕ್ಕೋಸ್ಕರ ಅನೇಕ ಮಹಾನುಭಾವರ ಲೇಖನಗಳನ್ನು, ಮಾತುಗಳನ್ನು ಕೂಡ ಇವರು ಸಂಗ್ರಹಿಸದಲ್ಲದೇ ಮನೆಯಲ್ಲಿ ಒಂದು ಚಿಕ್ಕ ಗ್ರಂಥಾಲಯವನ್ನು ಸಿದ್ಧಪಡಿಸಿಕೊಂಡಿರುವುದನ್ನು ಇಂದಿಗೂ

ನಮಗೆ ನೋಡಲು ಹಾಗೂ ಅಭ್ಯಾಸ ನಡೆಸಲು ದೊರೆಯುತ್ತವೆ. ಕಲಾ ಪುಸ್ತಕ ಸಂಗ್ರಹಕಾರೆಂದು ಇವರನ್ನು ಹೇಳಿದರೆ ತಪ್ಪೇನಿಲ್ಲ.

ವೃತ್ತಿಯಿಂದ ನಿವೃತಿ :

ತಮ್ಮ ಶಿಕ್ಷಕ ವೃತ್ತಿಯಿಂದ ದಿನಾಂಕ ೩೧-೦೫-೧೯೯೯ ರಂದು ನಿವೃತ್ತಿ ಹೊಂದಿರುತ್ತಾರೆ. ನಿವೃತ್ತಿ ಹೊಂದಿದರು ಸಹಿತ ಕಲೆಯ ಕೆಲಸದಿಂದ ನಿವೃತ್ತಿ ಹೊಂದಿಲ್ಲ ಎನ್ನುತ್ತಾರೆ. ಈ ವೃತ್ತಿ ಬದುಕಿನಲ್ಲಿ ನಿಮಗೆ ಆಗಿರುವಂತಹ ಅನುಭವ ಏನು ಅಂತ ಕೇಳಿದಾಗ ಅವರಿಗೆ ಈ ಕಲಾ ಶಿಕ್ಷಕ ವೃತ್ತಿ ಬಹಳಷ್ಟು ತೃಪ್ತಿ ಕೊಟ್ಟಿದೆ ಎಂದು ಹೇಳುವುದರ ಜೊತೆಗೆ ವಿದ್ಯಾರ್ಥಿಗಳ ಜೊತೆಗೆ ಅವರು ಬಹಳಷ್ಟು ಹೊಸ ವಿಷಯವನ್ನು ಒಬ್ಬರಿಂದ ಮತ್ತೊಬ್ಬರು ಕಲಿಯುವುದು ಬಹಳಷ್ಟಿದೆ. ಇದರಲ್ಲಿ ಯಾರು ದೊಡ್ಡವರಲ್ಲ ಎಂಬ ಮಾತು ವ್ಯಕ್ತಪಡಿಸುತ್ತಾರೆ.

ನಿವೃತ್ತಿ ಬದುಕು :

ಚಿತ್ರಕಲಾ ನಿಪುಣರಾದ ಬಾಳೀಕಾಯಿಯವರು ಜೀವನದಲ್ಲಿ ಕಲೆಗೆ ಸಂಬಂಧಪಟ್ಟ ಹಾಗೆ ರಚನಾತ್ಮಕ ಕೆಲಸಗಳನ್ನು ಸಾಕಷ್ಟು ಮಾಡಿದ್ದಾರೆ. ಕ್ರೀಯಾಶೀಲತೆ, ಸೃಜನಶೀಲತೆ ಎರಡನ್ನು ಮೈಗೂಡಿಸಿಕೊಂಡು ಕಲೆಯ ಉಪಾಸನೆ ಮಾಡುತ್ತಾ ಕಲಾ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಬೀರುತ್ತಾ ತಾನು ತಮ್ಮನ್ನು ತೊಡಿಗಿಸಿಕೊಂಡು ಹೆಸರಾಂತ ಕಲಾವಿದರಾಗಿ ಚಿತ್ರ ರಸಿಕರ ಗಮನ ಸೆಳೆದಿದ್ದಾರೆ. ಇದರ ಜೊತೆ ಜೊತೆಗೆ ಮಕ್ಕಳ ಜೊತೆ ಮಕ್ಕಳಾಗಿ ಬೆರೆತು ಚಿತ್ರ ಬಿಡಿಸಿ ಅವುಗಳ ಬಗ್ಗೆ ವಿವರಿಸುವುದು ಹೀಗೇಲ್ಲ ಮಾಡುವುದರಿಂದ ಈಗ ಇವರ ಕೈಯಲ್ಲಿ ಕಲೆತ ಅನೇಕ ವಿದ್ಯಾರ್ಥಿಗಳು ಹೆಸರಾಂತ ಕಲಾವಿದರಾಗಿ ಬೆಳೆದಿದ್ದಾರೆ, ಬೆಳೆಯುತ್ತಿದ್ದಾರೆ. ಆದರೆ ತಾವು ಬೆಳೆಯುವುದನ್ನು ಬಿಟ್ಟು "ನನ್ನ ವಿದ್ಯಾರ್ಥಿಗಳು ಬೆಳೆದರೆ ಅದೇ ನಾನು ಬೆಳೆದ ಹಾಗೆ" ಎನ್ನುವ ಮಾತುಗಳನ್ನು ಬಹು ಹೆಮ್ಮೆಯಿಂದ ಹೇಳಿಕೊಳ್ಳುವಾಗ ಅವರ ಭಾವದಲ್ಲಿ ಸಂತೋಷ ತುಂಬಿ ಬರುವುದನ್ನು ಸಂದರ್ಶನದ ಸಂದರ್ಭದಲ್ಲಿ ಗಮನಿಸಲಾಗಿತ್ತು.

ಕಲಾವಿದರು ನಿಂತ ನೀರಾಗದೇ ನೀರಿನಂತೆ ನಿರಂತರವಾಗಿ ಸೃಜನಾತ್ಮಕ, ರಚನಾತ್ಮಕ ಚಟುವಟಿಕೆಗಳಿಂದ ನಿತ್ಯ ನಿರಂತರವಾಗಿ ಕಲಾ ರಚನೆಯಲ್ಲಿ ಯಾವಾಗಲೂ ನಮ್ಮಂತಹ ಯುವ ಕಲಾವಿದರಿಗೆ ಮಾರ್ಗದರ್ಶನ ಮಾಡುತ್ತಾ ಸದಾ ಕಾಲ ಬದುಕುಳಿಯಲಿ ಎನ್ನುವ ಆಶೆ ಶ್ರೀ ಎಂ. ಆರ್. ಬಾಳೀಕಾಯಿ ಅವರುದಾಗಿದೆ.

ನಾವು ಆಶೆ ಪಡುವ ಹಾಗೆ ಅವರ ಪ್ರಾಥಮಿಕ ಶಾಲಾ ಶಿಕ್ಷಕರು ಈಗ ಅವರಿಗೆ ಸುಮಾರು ೬೦ ರಿಂದ ೬೫ ರವರೆಗೆ ವಯಸ್ಸು ಇರಬಹುದು. ಅವರು ಕೂಡ ಇವರ ಬಗ್ಗೆ ತುಂಬಾನೆ ಆಶಯ ಇಟ್ಟುಕೊಂಡಿದ್ದರು. ಒಬ್ಬ ಶಿಕ್ಷಕರಾಗಿ ತನ್ನ ವಿದ್ಯಾರ್ಥಿಯನ್ನು ಯಾವ ರೀತಿ ನೋಡಬಹುದು ಎನ್ನುವುದನ್ನು ಸಂದರ್ಶನ ಮಾಡಿದಾಗ ತಿಳಿದು ಬಂದಿದೆ. ಒಬ್ಬ ಗುರು–ಶಿಷ್ಯರ ಸಂಬಂಧ ಹೇಗಿರುತ್ತೇ ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ತುಂಬಾ ವ್ಯತ್ಯಾಸವಾಗುತ್ತದೆ ಎಂಬವುದು ಇವತ್ತಿನ ಕಲಾ ಶಾಲೆಯ ಅನೇಕ ಪ್ರಾಚಾರ್ಯರ ಅಭಿಪ್ರಾಯವು ಸಹ ವ್ಯಕ್ತಗೊಳ್ಳುವುದನ್ನು ಮೂಲ ಸಂದರ್ಶನದಿಂದ ತಿಳಿದು ಬಂದಿದೆ.

ತಮ್ಮ ಸಾಧನೆಯನ್ನು ಮೆಲುಕು ಹಾಕುತ್ತಾ ತಮ್ಮನ್ನು ತಆವು ಪುನರ್ ವಿಮರ್ಶಿಸಿಕೊಳ್ಳುತ್ತಿರುವ ಶ್ರೀ ಎಂ. ಆರ್. ಬಾಳೀಕಾಯಿಯವರು ನಿವೃತ್ತಿ ಜೀವನದ ವಿಶ್ರಾಂತ ಬದುಕು ಎಲ್ಲರಲ್ಲೂ ಒಂದೇ ತೆರನಾಗಿರುವದಿಲ್ಲ ಅವರ ಆರ್ಥಿಕ ಸ್ಥಿತಿಗತಿ ಕೌಟುಂಬಿಕ ಪರಿಸರ ಸಾಮಾಜಿಕ ಸ್ಥಾನಮಾನ ಮುಂತಾದವುಗಳನ್ನು ಅವಲಂಬಿಸಿರುತ್ತದೆ. ಕಲಾವಿದರಾಗಿ ಪ್ರಸಿದ್ಧಿ ಪಡೆದು ಅಪಾರ ಶಿಷ್ಯ ವೃಂದವನ್ನು ಗಳಿಸಿ, ಅಸಂಖ್ಯಾತ ಕಲಾ ಸ್ನೇಹಿತರನ್ನು ಹೊಂದಿರುವ ಇವರಿಗೆ ವಿಶ್ರಾಂತ ಬದುಕು ಸ್ವಲ್ಪ ಭಿನ್ನವಾಗಿದೆ.

ಗೌರವ ಉಪನ್ಯಾಸಕರಾಗಿ ಸೇವೆ:

ಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದರು ಸಹಿತ ಪ್ರಾಮಾಣಿಕ ಸೇವೆಯಿಂದಾಗಿ ಕನ್ನಡ ವಿಶ್ವವಿದ್ಯಾಲಯ ಗೌರವ ಶಿಕ್ಷಕರಾಗಿ ಕಾರ್ಯ ನಿರ್ವಹಿಸಲು ಆಹ್ವಾನ ನೀಡಿದರು. ಇದನ್ನು ಸ್ವೀಕರಿಸಿ ಇದು ಅವರ ಪ್ರತಿಭೆಗೆ ಸಂದ ಗೌರವ ಎಂದು ಹೇಳಬಹುದು. ಇದರಿಂದಾಗಿ ೨೦೦೧ ರಲ್ಲಿ ಶಿಲ್ಪಕಲಾ ಮತ್ತು ಚಿತ್ರಕಲಾ ವಿಭಾಗದಲ್ಲಿ ಮುಖ್ಯಸ್ಥರಾದ ಡಾ. ಎಸ್. ಸಿ. ಪಾಟಿಲರ ಜೊತೆಗೂಡಿ ಕೆಲಸ ಮಾಡಿ ನಾಲ್ಕು ವರ್ಷಗಳವರೆಗೆ ಗೌರವ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

ಶ್ರೀ ಎಂ. ಆರ್. ಬಾಳೀಕಾಯಿ ಅವರು ಬದಾಮಿಯಲ್ಲಿಯೂ ಹೊಸ ಹೊಸ ಅನುಭವಗಳನ್ನು ಕಂಡು ಆ ಅನುಭವ ಅವರ ಹೊಸ ಚಿಂತನೆಗೆ ಮುಖ ಮಾಡಿದವು. ಹೀಗಾಗಿ ಕೇವಲ ಪದವಿಹಂತದ ವಿದ್ಯಾರ್ಥಿಗಳ ಜೊತೆಗಿದ್ದ ಇವರಿಗೆ ಇಲ್ಲಿನ ಅಕಾಡೆಮಿಕ್ ಶಿಸ್ತಿನ ಪರಿಚಯವಾಯಿತು. ಅನೇಕ ವಿಷಯಗಳೊಡನೆ ವಿಶ್ರಾಂತ ಜೀವನವನ್ನು ನಡೆಸುತ್ತಾ ಕಲೆಯೇ ದೇವರು ಎಂದು ನಂಬಿದವರು. ದಿನವು ಬಿಡುವಿಲ್ಲದೇ ಕಲಾಕೃತಿಗಳನ್ನು ರಚಿಸುವುದರಲ್ಲಿ ನಿರತರಾಗಿರುತ್ತಾರೆ. ಈಗಲೂ ತಾವೊಬ್ಬ ಹಿರಿಯ ಕಲಾವಿದರು ಎನ್ನುವುದನ್ನು ಬಿಟ್ಟು ಯಾವ ಅಹಂಕಾರವಿಲ್ಲದೆ ಕಿರಿಯ ಕಲಾವಿದರ ಜೊತೆಗೆ ಕಲಾ ಪ್ರದರ್ಶನ ಮಾಡುತ್ತಾರೆ. ಈ ಕುರಿತು ಕೇಳಿದಾಗ ಇದು ಮಹಾಸಾಗರವಿದ್ದಂತೆ ಇಲ್ಲಿ ಯಾರು

ದೊಡ್ಡವರಲ್ಲ. ಯಾರು ಚಿಕ್ಕವರಲ್ಲ ಎಲ್ಲರು ಸಮಾನರೇ ಕಲಿಯಬೇಕಾದದ್ದು ಇನ್ನೂ ಬೇಕಾದಷ್ಟು ಇದೆ. ಆದರೆ ಒಂದೆರೆಡು ಪ್ರಶಸ್ತಿ ಗೌರವಗಳು ಸಿಕ್ಕರೆ ದೊಡ್ಡವರಾಗಲ್ಲ. ಹಾಗೆಂದುಕೊಂಡರೆ ಏನನ್ನು ಕಲಿಯಲಾರ, ನಾನು ಚಿಕ್ಕವ ಎಂದು ಕಲಿಯುವುದು ಬಹಳಷ್ಟಿದೆ. ಆಗ ಮಾತ್ರ ಕಲಿಕೆ ಮಾಡುವುದಕ್ಕೆ ಸಾಧ್ಯ.

ಯಾವುದೇ ವ್ಯಕ್ತಿಯು ತನ್ನ ಕ್ಷೇತ್ರದ ಹಿರಿಯ ಸಾಧಕನನ್ನು ನೋಡಿದಾಗ ಮಾತ್ರ ನಾನಿನ್ನು ಕಲಿಯುವುದು ಸಾಧಿಸುವುದು ತುಂಬಾ ಇದೆ. ನಾನಿನ್ನೂ ಚಿಕ್ಕವ ಎನ್ನುವ ಆಶಯ ಬಾಳೀಕಾಯಿಯವರಲ್ಲಿ ಹಾಸು ಹೊಕ್ಕಾಗಿದೆ. ಅನೇಕ ಶ್ರೇಷ್ಠ ಕಲಾವಿದರಿದ್ದಾರೆ. ಅವರನ್ನೆಲ್ಲಾ ನೆನಪಿಸಿಕೊಂಡಾಗ ನಾವು ಸಾಧಿಸಬೇಕಾದದ್ದು ಬಹಳಷ್ಟಿದೆ ಎಂಬ ವಿಷಾದ ಕಾಡುತ್ತಿದೆ. ಆ ವಿಷಾದವೇ ಹೊಸ ಕಲಾಕೃತಿ ರಚಿಸಲು ಪ್ರೇರಣೆ ನೀಡುತ್ತದೆ. ಈ ಮಾತನ್ನು ಗಮನಿಸಿದರೆ ನಿವೃತ್ತಿ ಬದುಕಿನಲ್ಲಿಯೂ ಅವರ ಕಲಾದೃಷ್ಟಿ ಜೀವನೋತ್ಸಾಹ ಕಂಡು ಬಂದಿರುವುದನ್ನು ವಿಶೇಷವಾಗಿ ಗಮನಿಸಬಹುದು.

ಕಲಾವಿದರು ಈಗಲೂ ನಿತ್ಯವೂ ಹೊಸ ಕಲಾಕೃತಿಯನ್ನು ರಚಿಸಿ ತಮ್ಮನ್ನು ತಾವೇ ಅದರಲ್ಲಿ ತೊಡಗಿಸಿಕೊಂಡು, ನಾನು ಇನ್ನಷ್ಟು ದಿನ ಬದುಕುತ್ತೇನೋ ಗೊತ್ತಿಲ್ಲ. ಇರುವವರೆಗೂ ಹೊಸ ಹೊಸ ಕಲಾಕೃತಿಗಳನ್ನು ರಚಿಸಬೇಕು ಎಂದು ಸದಾ ಕ್ರಿಯಾಶೀಲರಾಗಿರುತ್ತಾರೆ. ಒಂದು ಕಲಾಕೃತಿ ರಚಿಸಿದಾಗ ಕೊಡುವ ಖುಷಿ ವರ್ಣಿಸುವುದಕ್ಕೆ ಸಾಧ್ಯವಿಲ್ಲ. ಅವರು ಜೀವನದಲ್ಲಿ ಸಂತೋಷದ ತುತ್ತ ತುದಿಗೆ ಹೋಗಿದ್ದೇನೆಮದರೆ ಯಾವುದೇ ಪ್ರಶಸ್ತಿ ಪುರಸ್ಕಾರಗಳಿಂದಲ್ಲ. ಒಂದು ಕಲಾಕೃತಿ ರಚಿಸಿದಾಗ ಎನ್ನುವುದು. ಅವರ ಅಳಿಯ ಅಲ್ಲದೇ ಅವರ ಮೊಮ್ಮಕ್ಕಳೊಂದಿಗೆ ಆಟವಾಡುತ್ತಾ ಅವರೊಂದಿಗೆ ಚಿತ್ರ ರಚನೆಯಲ್ಲಿಯೂ ಉತ್ಸಾಹದಿಂದ ಭಾಗವಹಿಸಿ ಹಳೇ ಬೇರು ಹೊಸ ಚಿಗುರು ಎನ್ನುವಂತೆ ಮೊಮ್ಮಕ್ಕಳು ರಚಿಸಿದ ಬಣ್ಣ ಬಣ್ಣದ ಚಿತ್ರಗಳನ್ನು ನೋಡುತ್ತಾ ತಮ್ಮ ಬಾಲ್ಯದ ನೆನಪುಗಳನ್ನು ಮರು ನೆನಪು ಮಾಡಿಕೊಳ್ಳುತ್ತಾ ನಿವೃತಯ್ತ ಜೀವನವನ್ನು ಸಹ ಮೊಮ್ಮಕ್ಕಳಿಗೆ ಚಿತ್ರ ರಚಿಸುವುದರಲ್ಲಿ ಸಂತೋಷದ ಜೀವನ ನಡೆಸುತ್ತಿದ್ದಾರೆ.

ಶ್ರೀ ಎಂ. ಆರ್. ಬಾಳೀಕಾಯಿ ಅವರು ಕೇವಲ ಕಲಾ ಜಗತ್ತಿಗೆ ಮಾತ್ರ ಸೀಮಿತವಾಗಿರದೇ ಸಾಮಾಜಿಕ ಕಳಕಳಿಯ ಮಾನವೀಯ ಅಂತಃಕರಣದ ಮನಸ್ಸು ಇದ್ದು, ಸಾಮಾಜಿಕ ಅಸಮಾನತೆಯ ಬಗೆಗೆ ಸಮಾಜದ ಒಂದು ತುಣುಕು ನಾವಾಗಿರವುದರಿಂದ ನಮ್ಮ ಜೊತೆಗೆ ಇರುವವರನ್ನು ಹಿಂದಕ್ಕೆ ತಳ್ಳದೆ, ಮುನ್ನಡಿಸಿಕೊಂಡು ಹೋಗೋಣ ಎಂದು ತಮ್ಮ ಸ್ನೇಹಿತನೊಳಗೊಂಡಂತೆ ಒಂದು ಸಾಮಾಜಿಕ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಅದರ ಮುಖಾಂತರ ಕಲಿಕೆಯಲ್ಲಿ ಅಪಾರ ಆಸಕ್ತಿಯನ್ನು ಹೊಂದಿ

ಬಡ ಮಕ್ಕಳಿಗೆ ಸಂಸ್ಥೆಯಿಂದ ಧನಸಹಾಯವನ್ನು ಮಾಡುತ್ತಾರೆ. ಈಗಲೂ ಸಹಿತ ಅನೇಕ ಕನಸುಗಳನ್ನು ಕಟ್ಟಿಕೊಂಡು ವಿಶ್ರಾಂತ ಜೀವನವನ್ನು ಅವಿಶ್ರಾಂತವಾಗಿ ಕಳೆಯುತ್ತಿದ್ದಾರೆ. ಇಂತಹವರು ನಮ್ಮ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ ಅನೇಕ ಅಂಶಗಳನ್ನು ಸಂಶೋಧನೆ ಮಾಡುವುದು ಅತಿ ಮುಖ್ಯವೆನಿಸುತ್ತಿದೆ.

ಈ ವಯಸ್ಸಿನಲ್ಲಿಯೂ ಅವರನ್ನು ಉಪನ್ಯಾಸಕ್ಕಾಗಲಿ, ಪ್ರಾತ್ಯಕ್ಷಿಕೆಗಾಗಲಿ ಅತ್ಯಂತ ಖುಷಿಯಿಂದ ಹೋಗುತ್ತಾರೆ. ಜೊತೆಗೆ ಯಾವುದೇ ಒಬ್ಬ ಪುರುಷನ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎನ್ನುವುದು ಜನಪ್ರೀಯ ಆಶಯ ಅದು ಶ್ರೀ ಎಂ. ಆರ್. ಬಾಳೀಕಾಯಿ ಅವರ ಜೀವನದಲ್ಲಿಯೂ ಅವರ ಶ್ರೀಮತಿಯವರಾದ ಕಸ್ತೂರಿಬಾಯಿ ಅವರ ತಮ್ಮ ಕಲಾಕೃತಿಗೆ ಪ್ರೇರಕ ಶಕ್ತಿಯಾಗಿದ್ದಾರೆ. ಅವರ ಕಲಾ ಜಗತ್ತಿಗೆ ಯಾವತ್ತೂ ಅಡ್ಡಿ ಆತಂಕಗಳನ್ನು ಮಾಡದೆ ನನ್ನ ಮನೋಸ್ಥಿತಿಯನ್ನು ಅರ್ಥ ಮಾಡಿಕೊಂಡು ನೀವಿನ್ನೂ ದೊಡ್ಡ ಕಲಾವಿದರಾಗಬೇಕು, ಹೆಸರು ಗಳಿಸಬೇಕು ಎಂದು ಸ್ಫೂರ್ತಿ ನೀಡುತ್ತಿದ್ದರೆಂದು ತಮ್ಮ ಪತ್ನಿಯ ಬಗ್ಗೆ ಅಪಾರ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ. ಇದು ಕುಟುಂಬದ ಮೇಲಿರುವ ಗೌರವ, ಪ್ರೀತಿ, ವಿಶ್ವಾಸ, ಪರಸ್ಪರ ಆತ್ಮೀಯವೆನಿಸುತ್ತದೆ ಇದು ಇವರ ಎಲ್ಲ ಕ್ರಿಯಾಶೀಲತೆಯ ಪ್ರತೀಕವಾಗಿದೆ. ಈಗ ಎಲ್ಲಾ ಮೇಲಿನ ಅಂಶಗಳನ್ನು ಗಮನಿಸಿ ಹೇಳುವುದಾದರೆ ಇವರು ಒಬ್ಬ ಆದರ್ಶ ಕಲಾ ಶಿಕ್ಷಕ, ಶಿಕ್ಷಣ ತಜ್ಞರ ಕಲಾ ತಜ್ಞರೆಂದದು ನಾವು ಗುರುತಿಸಬಹುದಾಗಿದೆ.

ಟಿಪ್ಪಣಿಗಳು

೧) ಎಂ. ಆರ್. ಬಾಳೀಕಾಯಿ ಅವರನ್ನು ಸಂದರ್ಶಿಸಿದಾಗ ನೀಡಿದ ವಿವರ ೧೫-೦೩-೨೦೧೪

೨) ಕಲಾವಿದರೊಂದಿಗೆ ಸಂದರ್ಶನ

೩) ಕಲಾವಿದ ಎಂ. ಆರ್. ಬಾಳೀಕಾಯಿ ಅವರ ಜೊತೆ ಸಂದರ್ಶನ ದಿನಾಂಕ ೧೫-೦೩-೨೦೧೪

ಅಧ್ಯಾಯ : ನಾಲ್ಕು

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾ ಪ್ರಕಾರಗಳು

ಅಧ್ಯಾಯ–೪

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾ ಪ್ರಕಾರಗಳು

ಒಂದು ಚಿತ್ರ ಕಲಾಕೃತಿಗೆ ಅರ್ಥ ಕಟ್ಟುವುದು ಹಿಮಾಲಯ ಪರ್ವತಕ್ಕೆ ಎಷ್ಟು ಮುಖಗಳೆಂದು ಏಣಿಸುವುದು ಒಂದೇ. ಹಾಗೇ ಕಲಾಕೃತಿಯ ಅರ್ಥ ಅನೇಕ ವಿಷಯಗಳ ಮೇಲೆ ಹೊಂದಿಕೊಂಡಿರುತ್ತದೆ. ಪ್ರಕೃತಿ ನೀಡುವ ಒಂದು ಸುಂದರ ದೃಶ್ಯವನ್ನು ಕಲಾಕೃತಿ ಎನ್ನಬಹುದೇ? ಅಥವಾ ಪ್ರತಿಭಾ ಸಂಪನ್ನನಾದ ಮಾನವನು ತನ್ನ ಭಾವನೆ ಅಥವಾ ಅನುಭವವನ್ನು ವ್ಯಕ್ತ ಮಾಡುವ ಉದ್ದೇಶದಿಂದ ನೀಡುವ ಚಿತ್ರ ವಾಸ್ತು, ಶಿಲ್ಪ ಮುಂತಾದವು ಕಲಾಕೃತಿಗಳೇ[೧] ಎಂಬುವುದು ಸಂಶೋಧನಾತ್ಮಕ ಪ್ರಶ್ನೆಯ ಎನ್ನಿಸಿಕೊಳ್ಳುವ ಕಲಾಕ್ಷೇತ್ರಕ್ಕೆ ಒಂದು ಸವಾಲಾಗಿದೆ.

ವಿಮರ್ಶಕರು ಅನೇಕ ಅಭಿಪ್ರಾಯಗಳಲ್ಲಿ ಪ್ರಕೃತಿದತ್ತವಾದ ದೃಶ್ಯ ಎಷ್ಟೇ ಆನಂದವಾವಾಗಿದ್ದರೂ ಕಲಾಕೃತಿಯಲ್ಲಿ ಕಲಾಕೃತಿಯೆನ್ನುವುದು ಮುಖ್ಯವಾಗಿ ಮಾನವನಿಂದ ನಿರ್ಮಿತವಾದ ಕೃತಿ ವಿಶೇಷ. ಒಂದು ಮಾಧ್ಯಮ ಬಳಸುವಿಕೆಯಿಂದ ಉತ್ಪನ್ನವಾದ ಭೌತಿಕ ಶೈಲಿಯ ಸೃಷ್ಟಿ ರವಿವರ್ಮನ ಒಂದು ಚಿತ್ರ. ಒಂದು ಕವನ ತ್ಯಾಗರಾಜನ ಸಂಗೀತ, ಹೆನ್ರಿನಾರನ ಒಂದು ಶಿಲ್ಪ ಇವುಗಳನ್ನು ನಾವು ಸಾಂಪ್ರದಾಯಕವಾಗಿ ಕಲಾಕೃತಿಗಳೆಂದು ಇಟಲಿಯ ಕ್ರೋಚೆಯ ಪ್ರಕಾರ ಇವು ಯಾವುವು. ಕಲಾಕೃತಿಗಳು ಆತನ ದೃಷ್ಟಿಯಲ್ಲಿ ತತ್ವಶಾಸ್ತ್ರಜ್ಞಗಳ ಆಧ್ಯಾತ್ಮಿಕ ಅನುಭವವೇ ಒಂದು ಕಲಾಕೃತಿ[೨] ಆಗಿರುತ್ತದೆ ಎಂಬುವುದು ಕಲಾ ತತ್ವಜ್ಞಾನಿಗಳ ಅಭಿಪ್ರಾಯವಾಗಿರುತ್ತದೆ.

ಕ್ರೋಚೆಯ ಭೌತಿಕ ಕೃತಿಯ ನಿರಾಕರಣೆಯನ್ನು ನಾವು ಅನುಮೋದಿಸದೆ ಇದ್ದರೂ ಅವನ ವಾದದಿಂದ ಸೂಚಿತವಾದ ಸಂಶಯಗಳಿಗೆ ಉತ್ತರ ಪಡೆಯದೆ ಒಂದು ಕಲಾಕೃತಿಯ ಅರ್ಥವನ್ನು ನಿರ್ಣಯಿಸಲಾಗದು. ಕಲಾಕೃತಿಯ ಸ್ವರೂಪ ಬದಲಾಗುತ್ತ ಸಹೃದಯನ ದೇಶ, ಕಾಲ, ಅನುಭವ, ಸಂಸ್ಕಾರ ಮುಂತಾದವು ಬದಲಾದಂತೆ ಆತನ ಅರ್ಥವು ಬದಲಾವಣೆಯಾಗುತ್ತದೆ. ಹಾಗೆ ಎಲ್ಲ ಕಲೆಗಳಿಗೂ ಸಾಮಾನ್ಯವಾಗಿ ಅನ್ವಯವಾಗುವಂತೆ ಈ ವಿಚಾರಗಳು ಚಿತ್ರಕಲೆಗೂ ಅನ್ವಯವಾಗುತ್ತದೆ.

ಚಿತ್ರಕಲೆ 'ಲಲಿತಕಲೆ'ಗಳಲ್ಲೊಂದು ಇಲ್ಲಿ ಬಳಸುವ ಮಾಧ್ಯಮಗಳಾದ ಬಣ್ಣ, ಭಿತ್ತಿ, ಕಲ್ಲು, ಮಣ್ಣು ಮುಂತಾದವು ಕೌಶಲ್ಯಯುತ ಕಲಾವಿದನಿಗೆ ಬಿಟ್ಟಿರುತ್ತದೆ. ಇವುಗಳನ್ನು ಉಪಯೋಗಿಸಿಕೊಂಡು ಬ್ರಹ್ಮ ಸೃಷ್ಟಿಗೆ ಎದುರಾದ ಒಂದು ಸೃಷ್ಟಿಯನ್ನು ಕಲಾವಿದ ಮಾಡುತ್ತಾನೆ.

ಚಿತ್ರಕಲೆಯಲ್ಲಿ ಎರಡು ಮುಖ್ಯ ಅಂಗಗಳಿವೆ. ಒಂದು ಆಕಾರ ಸೃಷ್ಟಿಯಲ್ಲಿ ವರ್ಣಚಿತ್ರಕಲೆ ಮತ್ತೊಂದು ರೇಖಾ ಚಿತ್ರಕಲೆ, ವರ್ಣಚಿತ್ರಕಲೆಯಲ್ಲಿ ವಸ್ತುಗಳ ನೆರಳು-ಬೆಳಕು ಮುಂತಾದ ದೃಶ್ಯ ಲಕ್ಷಣಗಳನ್ನು ಸೃಷ್ಟಿಸುತ್ತಾನೆ. ಇಲ್ಲಿ ಬಣ್ಣಗಳ ತೀಕ್ಷ್ಣತೆಯನ್ನು ವ್ಯತ್ಯಾಸಗೊಳಿಸುವುದರಿಂದ ದೃಶ್ಯವಿನ್ಯಾಸದ ಪರಿಣಾಮವನ್ನು ತರಲಾಗುತ್ತದೆ. ರೇಖಾಚಿತ್ರ ವಿನ್ಯಾಸ ಮತ್ತು ಉದ್ದ ಅಗಲಗಳೆಂಬ ಎರಡು ಮಾಪನಗಳಿಂದ ವಸ್ತುವಿನ ರೂಪವನ್ನು ಚಿತ್ರಿಸುವುದಕ್ಕೆ ರೇಖಾಚಿತ್ರ ಎನ್ನುತ್ತಾರೆ. ಚಿತ್ರಕಲೆಯ ಈ ಎರಡು ಅಂಗಗಳು ಪರಸ್ಪರ ವಿರೋಧಿಗಳಲ್ಲ. ಪೂರಕವಾಗಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಆದಿಮಾನವ ಮೊದಲು ರೇಖಾಚಿತ್ರಗಳನ್ನು ರಚಿಸಿದ ನಂತರದ ಮುಂದುವರಿದ ದಿನಗಳಲ್ಲಿ ಅಜಂತಾ ಎಲ್ಲೋರಾದಲ್ಲಿ ವರ್ಣಚಿತ್ರಗಳು ಕಂಡುಬಂದವು. ರಾಜರ ಅವಧಿಯಲ್ಲಿ ಧಾರ್ಮಿಕ ಆಚರಣೆಯ ಕಲಾಕೃತಿಗಳಾದ ಬೌದ್ಧ, ಜೈನ, ವೈಷ್ಣವ, ಶೈವ ಧರ್ಮಗಳು ಇತ್ಯಾದಿ ಧರ್ಮಗಳ ಧಾರ್ಮಿಕ ಭಾವನೆಗಳಿಗೆ ಸ್ಪಂದಿಸುವಂತಹ ಕಲಾಕೃತಿಗಳು ಬೆಳದು ಬಂದವು. ನಂತರ ರಜಪೂತ ಶೈಲಿ, ಮಾಳವ ಶೈಲಿ, ಮೈಸೂರು ಶೈಲಿ ಇತ್ಯಾದಿ ಶೈಲಿಗಳು ಧರ್ಮ ಪ್ರಚಾರ ಮಾಡಲಿಕ್ಕೆ ರಾಜರುಗಳು ತಮ್ಮ ಆಡಳಿತಾವಧಿಯಲ್ಲಿ ತಮ್ಮದೆ ಒಂದೊಂದು ಧರ್ಮವನ್ನು ಸ್ವೀಕರಾ ಮಾಡುತ್ತಾ ತಮ್ಮ ಧರ್ಮಕ್ಕನುಗುಣವಾಗಿ ಚಿತ್ರಗಳನ್ನು ಬಿಡಿಸಲಿಕ್ಕೆ ವಿಚಾರಗಳನ್ನು ಮಾಡುತ್ತಾರೆ. ಒಬ್ಬ ಸಾಹಿತಿ ಇದ್ದು ಅವುಗಳ ನಿರೂಪಣೆ ಮಾಡುತ್ತ ಹೋದಂತೆಲ್ಲ ಕಲಾವಿದನು ಚಿತ್ರ ಬಿಡಿಸುತ್ತಿದ್ದನು. ಧಾರ್ಮಿಕ ತತ್ವಗಳ ಮೇಲೆ ಧರ್ಮ ಪ್ರಚಾರ ಮಾಡುವುದಕ್ಕೆ ಸಮಾಜದ ಬದಲಾವಣೆಯ ಸಲುವಾಗಿ ಚಿತ್ರಗಳನ್ನು ರಚಿಸುತ್ತಾರೆ. ಮುಸ್ಲಿಂ ಆಳ್ವಿಕೆಯಲ್ಲಿ ಹೆಚ್ಚಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಭಾವಚಿತ್ರಗಳನ್ನು ರಚಿಸಿಕೊಳ್ಳುವುದು ಈ ರೀತಿಯ ಧರ್ಮ ಮತ್ತು ರಾಜಾಡಳಿತಾವಧಿಯಲ್ಲಿ ಅನೇಕ ಧಾರ್ಮಿಕ ಆಧಾರಿತ

ಕಲಾ ಶೈಲಿಗಳು ಪ್ರಾಂತ್ಯಗಳಿಗೆ ತಕ್ಕಂತೆ ಹಲವು ಶೈಲಿಗಳಾಗಿ ಭಾರತೀಯ ಚಿತ್ರಕಲಾ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದಿರುವಂತಹ ಮೇಲಿನ ಹೇಳಿಕೆಯನ್ನು ಗಮನಿಸುವುದರಿಂದ ತಿಳಿದುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಅನೇಕ ಕಲಾವಿದರುಗಳು ಬೆಳಕಿಗೆ ಬಂದು ಕರ್ನಾಟಕ ಕಲಾ ಸಂಸ್ಕೃತಿಯಲ್ಲಿ ಅನೇಕ ಪ್ರಸಿದ್ಧ ಕಲಾವಿದರ ಕಲಾ ಪ್ರಕಾರಗಳನ್ನು ಇಂದಿನವರೆಗೂ ಅವರದೆಯಾದ ಶೈಲಿಯಲ್ಲಿ ಕಲಾಕೃತಿ ರಚಿಸುತ್ತಿರುವುದನ್ನು ಕಾಣಬಹುದು. ಅಂತವರಲ್ಲಿ ಕರ್ನಾಟಕದ ಹಿರಿಯ ಕಲಾವಿದರು ಹಾಗೂ ಶ್ರೇಷ್ಠ ಚಿತ್ರಕಲಾ ಶಿಕ್ಷಕರು ಎನ್ನಿಸಿಕೊಂಡು ಶ್ರೀ ಎಂ. ಆರ್. ಬಾಳೀಕಾಯಿ ಅವರು ಒಬ್ಬರು ಅವರ ಕಲಾಕೃತಿಗಳ ಕಲಾ ಪ್ರಕಾರಗಳನ್ನು ಕೆಳಗಿನಂತೆ ವರ್ಗಿಕರಿಸಿ ವಿಶ್ಲೇಷಣೆ ಮಾಡಲಾಗಿದೆ.

ರೇಖಾ ಚಿತ್ರಗಳು :

ರೇಖೆ ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು, ತನ್ನ ನಿಘಂಟಿನಲ್ಲಿ ಮಾನವನ ಉಗಮದೊಂದಿಗೆ ರೇಖೆಯೂ ಉಗಮವಾಗಿರುವುದು. ರೇಖೆಗಳಿಲ್ಲದ ಮಾಧ್ಯಮವಿಲ್ಲ. ಈ ಹಿನ್ನೆಲೆಯಲ್ಲಿ ಕಲಾವಿದನೋರ್ವನ ಬೌದ್ಧಿಕ ಶ್ರಮ, ದೃಶ್ಯ ಪ್ರಜ್ಞೆ ಅನಾವರಣಗೊಳ್ಳುವದೇ ರೇಖಾಚಿತ್ರಗಳ ಮೂಲಕ ಎನ್ನುವದು ಇಂದಿನ ಸಂದರ್ಭದಲ್ಲಿ ಮಹತ್ವ ಕಳೆದುಕೊಳ್ಳುವ ಆತಂಕ ಕಲಾಶಿಕ್ಷಣ ಕ್ಷೇತ್ರವನ್ನು ಬಾಧಿಸತೊಡಗಿರುವುದು ವಿಶೇಷವಾಗಿದೆ. ಏಕೆಂದರೆ ಇಂದಿನ ಕಲಾವಿದ್ಯಾರ್ಥಿಗಳಲ್ಲಿ ಅಷ್ಟೇ ಏಕೆ ಹಿರಿಯ ತಲೆಮಾರಿನ ಕಲಾವಿದರಲ್ಲೂ ಕೂಡ ರೇಖಾಚಿತ್ರ ಮಾಧ್ಯಮ ಅವಜ್ಞೆಗೆ ಒಳಗಾಗಿದೆ. ಅದಕ್ಕೆ ಕಾರಣಗಳನ್ನು ಹುಡುಕತೊಡಗಿದಾಗ ಆಶ್ಚರ್ಯವೆನಿಸುವ ಸಂಗತಿಗಳು ಕಲಾಕ್ಷೇತ್ರವನ್ನು ದಿಗ್ಭ್ರಮೆಗೊಳಿಸುತ್ತದೆ. ಮೂಲವಾಗಿ ರೇಖಾಚಿತ್ರಗಳಿಗೆ ಮಾರುಕಟ್ಟೆಯ ಬೆಂಬಲ ಇಲ್ಲದ್ದಿರುವುದು ಒಂದು ಕಾರಣವಾದರೆ, ಎರಡನೆಯದು ಜನರ ಮಾನಸದಲ್ಲಿ ವರ್ಣಚಿತ್ರಕ್ಕೆ ಇರುವಷ್ಟು ಮಾನ್ಯತೆ ರೇಖಾ ಚಿತ್ರಕ್ಕೆ ಇರದೇ ಇರುವುದು ಕೂಡ ಕಾರಣವಾಗಿದೆ. ಇವೆರಡೂ ಅಂಶಗಳು ವೃತ್ತಿ ಪರತೆಗೆ ಸಂಬಂಧಪಟ್ಟಿದ್ದರೂ ಕಲಾ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಸಂದರ್ಭದಲ್ಲಿಯೇ ರೇಖಾಚಿತ್ರವನ್ನು ಅವಜ್ಞೆಗೊಳಪಡಿಸಿ ಕೇವಲ ವರ್ಣಚಿತ್ರ ರಚನೆಗೆ ಹೆಚ್ಚು ಒತ್ತು ತೋರ್ಪಡಿಸುವ ಬಗೆಯಿಂದ ಇಂದು ನಮ್ಮ ದೇಶದಲ್ಲಿ ರೇಖಾ ಚಿತ್ರಕಲಾವಿದರು ಅಪರೂಪವಾಗುತ್ತಿದ್ದಾರೆ.

ವಿಷ್ಣು ಧರ್ಮೋತ್ತರ ಪುರಾಣದಲ್ಲಿ "ರೇಖಾಂ ಪ್ರಶಂಸತಾಚಾರ್ಯ:" ಎನ್ನುವ ಸಂಸ್ಕೃತ ಮಾತೊಂದು ಇದೆ. ದೃಶ್ಯ ಕಲಾವಿದನ ಪರಿಮಿತಿಯನ್ನು ಅಳಿಯಲು ಅವನು ಮೂಡಿಸಿರುವ ರೇಖೆಗಳೇ ಸಾಕು. ರೇಖೆಗಳು ದೃಶ್ಯಕಲೆಯ ತಾಯಿ ಬೇರು ಇದ್ದಂತೆ ರೇಖೆಗಳೇ ಚಿತ್ರ, ಶಿಲ್ಪ, ವಾಸ್ತುಶಿಲ್ಪಕ್ಕೆ ಮೂಲ.

ಚಿತ್ರವೊಂದರ ನಿರ್ಮಾಣ ರೇಖೆಯಿಂದ ಮೊದಲ್ಗೊಂಡು ವರ್ಣ ಲೇಪನವಾದ ಮೇಲೂ ತನ್ನ ಅಸ್ತಿತ್ವವನ್ನು ಸದಾಕಾಲ ಕಾದಿಟ್ಟುಕೊಂಡಿರುತ್ತದೆ.

ಈ ಒಂದು ವಿಷಯಕ್ಕೆ ಹೊರತಾಗಿರುವ ಶ್ರೀ ಎಂ. ಆರ್. ಬಾಳೀಕಾಯಿ ಅವರು ಕರ್ನಾಟಕದ ಕೆಲವೇ ಕೆಲವು ರೇಖಾಚಿತ್ರಕಾರರಲ್ಲಿ ಇವರೂ ಕೂಡ ಒಬ್ಬರು. ಅಷ್ಟೇ ಅಲ್ಲದೇ ಒಬ್ಬ ವರ್ಣ ಚಿತ್ರಕಾರರಾಗಿಯೂ ಕೂಡ. ಇವರು ರೇಖಾಚಿತ್ರಗಳಲ್ಲಿ ಕಾಣುವ ತನ್ಮಯತೆ, ಲಾಲಿತ್ಯ, ಬಹುವಾಗಿಯೂ ಸುಮಾರು ಏಳರಿಂದ ಹತ್ತು ಸಾವಿರಕ್ಕೂ ಮೀರಿ ಅವರ ರೇಖಾಚಿತ್ರಗಳು ಇದ್ದು, ನೋಡಲಿಕ್ಕೆ ಎರಡು ಕಣ್ಣು ಸಾಲದು. ಏಕೆಂದರೆ ಒಂದರಕ್ಕಿಂತಲೂ ಮತ್ತೊಂದು ಸುಂದರವಾಗಿರುವುದಲ್ಲದೇ ಜೊತೆಗೆ ಎಷ್ಟೂ ನೋಡಿದರು, ಬೇಸರವಾಗದೆ ಇನ್ನು ನೋಡಬೇಕೆನ್ನುವ ಹಂಬಲ ಉಂಟಾಗುತ್ತದೆ. ಇವರ ರೇಖಾಕೃತಿಗಳ ಬಗ್ಗೆ ಎಷ್ಟು ಹೇಳಿದರು ಕಡಿಮೆಯೇ ಹೊರತು ಹೆಚ್ಚಲ್ಲ, ಅಲ್ಲದೇ ವರ್ಣಚಿತ್ರಗಳಲ್ಲೂ ಹೇರಳವಾಗಿ ಗೋಚರವಾಗುವ ಬಗೆ ಅನೂಹ್ಯವಾದುದು. ಇದರಿಂದಾಗಿಯೇ ಬಾಳೀಕಾಯಿ ಅವರು ಕನ್ನಡ ಕಲಾವಿದರ ಮಧ್ಯ ವಿಶಿಷ್ಯ ವ್ಯಕ್ತಿತ್ವದ ಕಲಾವಿದರಾಗಿ, ಕಲಾಶಿಕ್ಷಕರಾಗಿ ವೃತ್ತಿಯಿಂದ ನಿವೃತ್ತಿಯಾದರೂ ಕೂಡ ತಾವು ದಿನಕ್ಕೆ ಒಂದಾದರೂ ರೇಖಾಚಿತ್ರ ರಚಿಸಿಯೇ ಮಲಗುವುದು ಎನ್ನುವುದನ್ನು ತಿಳಿದುಕೊಳ್ಳಲಾಗಿದೆ. ಇಲ್ಲವಾದರೆ ನಿದ್ದೆ ಬರೋದಿಲ್ಲ ಎನ್ನುತ್ತಾರೆ.

ಆಕ್ಸಫರ್ಡ್ ಯೂನಿವರ್ಸಲ್ ಡಿಕ್ಷನರಿಯ ಪ್ರಕಾರ ರೇಖಾಚಿತ್ರಗಳೆಂದರೆ ಲೇಖನಿ, ಪೆನ್ಸಿಲ್ ಅಥವಾ ಕ್ರೇಯಾನ್‌ನಿಂದ ರೂಪಿಸಿರುವುದು ಎಂದು ಹೇಳುತ್ತಾ ಮುಂದೆ ವರ್ಣ ಚಿತ್ರಣದಿಂದ ಭಿನ್ನವಾದ ರೀತಿಯಲ್ಲಿ ರೂಪಣೆ ಎನ್ನುತ್ತಾರೆ. ಹೀಗೆ ಲೇಖನಿ ಪೆನ್ಸಿಲ್ ಅಥವಾ ಕ್ರೆಯಾನ್‌ನಿಂದ ಸಾವಿರಾರು ರೇಖಾ ಚಿತ್ರಗಳನ್ನು ರಚಿಸಿರುವ ಶ್ರೀ ಎಂ. ಆರ್. ಬಾಳೀಕಾಯಿ ಅವರು ವರ್ಣಚಿತ್ರಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ನಿರಂತರವಾಗಿ ರಚಿಸಿದ್ದು ರೇಖಾ ಚಿತ್ರಗಳು. ಕೇವಲ ರೇಖಾ ಚಿತ್ರಗಳ ಕುರಿತು ಪ್ರತ್ಯೇಕವಾದ ಅಧ್ಯಯನ ನಡೆಸುವಷ್ಟು ಸಾಮಗ್ರಿ ಅವರಲ್ಲಿದ್ದರೂ ಈ ಅಧ್ಯಯನ ಒಂದು ಬಗೆಯಲ್ಲಿ ಕನ್ನೆ ನೆಲವಿದ್ದಂತೆ. ಹತ್ತಾರು ಸಾವಿರ ರೇಖಾ ಚಿತ್ರಗಳಲ್ಲಿ ಕೆಲವು ರೇಖಾಚಿತ್ರ ಆಯ್ದುಕೊಂಡು ಈ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ರೇಖಾಚಿತ್ರವು ಕಲೆಯ ಒಂದು ಪ್ರಕಾರ, ಅಲ್ಲದೇ ಅದು ಸಹಾಯಕ ಕಲೆ ಕೆಲವರಿಗೆ. ಅದು ಮೂಲಭೂತವಾದ ಕಲೆಯು ಆಗಿದೆ. ರೇಖಾಚಿತ್ರ ಪ್ರತ್ಯೇಕವಾದ ಸೃಜನಶೀಲ ಅಭಿವ್ಯಕ್ತಿಯ ಕ್ಷೇತ್ರವಾಗಿದ್ದು, ಅದು ವಿವಿಧ ಮಾಧ್ಯಮದ ವಿಧಾನಗಳ ಕಾರ್ಯವಾಗಿದೆ. ರೇಖಾಚಿತ್ರಗಳು ಮುಖ್ಯವಾಗಿ ರೇಖೆಗಳಿಂದ ರೂಪಿತವಾಗಿರುತ್ತದೆ. ಚಿತ್ರಕ್ಕೆ ರೇಖೆಗಳು ಜೀವಂತಿಕೆಯನ್ನು ನೀಡುತ್ತವೆ. ಹೀಗೆ ಹಿಂದಿನ ಅನೇಕ

ಚಿತ್ರಗಳು, ಕ್ರೇನ್ ಜಲವಣ, ಶಾಯಿ ಅಥವಾ ಲೇಖನಿಯಿಂದ ರಚಿಸಲ್ಪಡುತ್ತಿದ್ದವು. ಬಣ್ಣದ ಬಳಪದಿಂದ ರಚಿಸಿದಂತವು ರೇಖಾಚಿತ್ರ ಮತ್ತು ವರ್ಣಚಿತ್ರದ ಪಾರ್ಶ್ವಕಲೆಯೆನಿಸಿತು. ಆಧುನಿಕ ರೇಖಾಚಿತ್ರ ಕಲಾವಿದ ಸ್ವತಃ ರಚಿಸಿದ ಸೃಜನಶೀಲ ಕಲಾಕೃತಿಯನ್ನು ಹೆಸರಿಸುವ ಬಗ್ಗೆ ತನ್ನದೇ ಆದ ಅನಿಸಿಕೆಯನ್ನು ಕಾದಿರಿಸಿಕೊಂಡಿರುತ್ತಾರೆ.

ರೇಖಾಚಿತ್ರದ ವಿಷಯ ಅತಿ ಸೂಕ್ಷ್ಮ ವಿವರಣಾತ್ಮಕವಾದ ರೇಖೆಗಳಿಂದ ಕೂಡಿರಬಹುದು. ಯಥೇಚ್ಛವಾಗಿ ನಿರೂಪಿತವಾದ ಸಂಗತಿಯಾಗಿರಬಹುದು. ಇಂಥ ರೇಖಾಚಿತ್ರದ ವಿಧಾನವನ್ನು ವಾಸ್ತವಿಕತೆ ಎನ್ನಬಹುದು. ಏಕೆಂದರೆ ಇದು ಹೆಚ್ಚಾಗಿ ವಸ್ತು ವಿಷಯದತ್ತಲೇ ವಾಲಿರುತ್ತದೆ ಎಂಬುವುದನ್ನು ಇವರ ಚಿತ್ರಗಳಿಂದ ಗಮನಿಸಬಹುದು.

ಶ್ರೀ ಎಂ. ಆರ್. ಬಾಳೀಕಾಯಿ ಅವರು ಒಬ್ಬ ಉತ್ತಮ ವರ್ಣಚಿತ್ರ ಕಲಾವಿದರಲ್ಲದೇ ಜೊತೆಗೆ ರೇಖಾಚಿತ್ರ ಕಲಾವಿದರಲ್ಲದೇ ಕೋಲಾಜ್ ಕಲಾವಿದರು ಹೌದು. ನಾಡಿನ ಪ್ರಮುಖ ರೇಖಾಚಿತ್ರ ಕಲಾವಿದರಲ್ಲಿ ಇವರು ಕೂಡ ಒಬ್ಬರು ಎಂದು ಹೇಳಬಹುದು. ರೇಖೆಯು ಅವರ ಕಲೆಯ ಜೀವಾಳ ಕೂಡ ಆಗಿದೆ. ಭಾರತೀಯ ಅಂತಃಸತ್ವವನ್ನು ಅಭ್ಯಸಿಸಿ ತಿಳಿದುಕೊಂಡು ಅದರ ಜೊತೆಗೆ ಜನಪದ ಲೋಕಕ್ಕೆ ತಿರುಗಿ ಕಲಾಕೃತಿಗಳನ್ನು ರಚಿಸುವ ಬಾಳೀಕಾಯಿ ಅವರು ಜೊತೆಗೆ ಭಾರತೀಯ ಕಲೆಯ ಗುಣಲಕ್ಷಣಗಳನ್ನು ಮತ್ತು ದಿನನಿತ್ಯ ನಡೆಯುವ ಘಟನಾವಳಿಗಳ ಆಗು ಹೋಗುಗಳನ್ನು ಸಹಜವಾಗಿ ತಮ್ಮ ಕಲಾಕೃತಿಯಲ್ಲಿ ಇನ್ನು ಏನನ್ನು ಮಾಡಿದರೆ ಇವುಗಳಿಗೆ ಹೊಸ ರೂಪ ಕೊಡಬಹುದು ನಂತರ ರೇಖೆಗಳು ಕಡಿಮೆ ಹೊಂದಿ ಚಿತ್ರ ಮಾತ್ರ ಪೂರ್ಣಗೊಂಡಿರಬೇಕು ಎನ್ನುವ ಹಾಗೆ ರೇಖಾ ಚಿತ್ರಗಳನ್ನು ಹೊರಹಾಕುತ್ತಾರೆ.

ವಿ. ಟಿ. ಕಾಳೆಯವರು ರೇಖಾಚಿತ್ರದ ಕುರಿತು ಹೇಳುತ್ತಾರೆ ನಾವು ರೇಖಾಚಿತ್ರವನ್ನು ಎಷ್ಟು ತ್ವರಿತಗತಿಯಲ್ಲಿ ಮೂಡುತ್ತೇವೊ ಅಷ್ಟು ಪರಿಪೂರ್ಣತೆ ನಮ್ಮ ಕೈಗೆ ಬರುತ್ತದೆ. ನಾವು ಹೇಳಿದ ಹಾಗೆ ನಮ್ಮ ಕೈಗಳು ಕೇಳುತ್ತವೆ. ಯಾವುದೇ ಪ್ರಕಾರದ ಕಲೆಗೂ ರೇಖಾಚಿತ್ರವೇ ಮೂಲಾಧಾರ. ನಾನಾ ವಿಧದ ವಸ್ತುಗಳು ಹಲವು ಭಂಗಿಗಳಲ್ಲಿರುವ ಜನರನ್ನು ನೋಡಿ ರೇಖಾಚಿತ್ರಗಳನ್ನು ಬಿಡಿಸುವುದರಲ್ಲಿಯೂ ಕೂಡ ಆಳವಾದ ಅಧ್ಯಯನವಿರುತ್ತದೆ. ರೇಖೆಗಳು ಚಿತ್ರಕಲೆಯ ಮೂಲಭೂತ ಬುನಾದಿ, ಈ ರೇಖೆಗಳ ಬುನಾದಿಯ ಮೇಲೆಯೇ ತನ್ನ ಕಲಾಕೃತಿಯ ಕಟ್ಟಡವನ್ನು ನಿರ್ಮಿಸುತ್ತಾನೆ. ತೀವ್ರಗತಿಯಲ್ಲಿ ರಚಿಸಿರುವ ರೇಖಾ ಕರಡು ಚಿತ್ರಗಳು ಕಲಾವಿದನೊಬ್ಬನ ಸಾಮರ್ಥ್ಯದ ದ್ಯೋತಕವೂ ಆಗಿರುತ್ತದೆ. ಒಂದು ರೇಖಾಚಿತ್ರದಿಂದ ಒಬ್ಬ ಕಲಾವಿದನ ನಿಜವಾದ ಯೋಗ್ಯತೆ ಗೊತ್ತಾಗುತ್ತದೆ. ಅವರ ಸಂಯೋಜನೆಯನ್ನು

ನೋಡುವ ಅಗತ್ಯವಿಲ್ಲ. ಅವರ ಒಂದು ರೇಖಾಚಿತ್ರ ನೋಡಿದರೆ ಸಾಕು. ಇವರು ಉತ್ತಮ ಕಲಾವಿದರು ಅಂತ ಹೇಳಬಹುದು. ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ವರ್ಣಚಿತ್ರ ಬೇರೆ, ರೇಖಾಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂತಹ ಅವಿನಾಭಾವ ಸಂಬಂಧವಿರುತ್ತದೆ ಎಂದು ತಿಳಿಯಬಹುದು. ಕಲಾವಿದರಾದ ವಿ.ಟಿ. ಕಾಳೆಯವರು ಹಾಗೆನೇ ರೇಖಾಚಿತ್ರಗಳ ಕುರಿತು ತುಂಬಾನೆ ಆಲೋಚನೆಯಲ್ಲಿ ನಿರಂತರವಾಗಿ ತೊಡಗುವ ನಾಡಿನ ಕಲಾಕ್ಷೇತ್ರಕ್ಕೆ ಸಾವಿರಾರು ರೇಖಾಚಿತ್ರಗಳನ್ನು ರಚಿಸಿಕೊಟ್ಟು ರೇಖಾಚಿತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾಧನೆ ಮಾಡಿದ ನಾಡಿನ ಕಲಾವಿದರುಗಳಲ್ಲಿ ಪ್ರಮುಖವಾಗಿ ಇವರು ಕಂಡುಬರುತ್ತಾರೆ ಎಂದು ಹೇಳಬಹುದಾಗಿದೆ.

ಅವರ ರೇಖಾಚಿತ್ರಗಳ ಒಂದು ವಿಶೇಷವಾದ ಅಧ್ಯಯನವಾಗುವಂತಹ ವಿಷಯ ವಸ್ತುವನ್ನು ಹೊಂದಿದೆ ಎಂದು ಹೇಳಬಹುದು. ಸಾವಿರಾರು ವೈವಿಧ್ಯಮಯ ರೇಖಾಚಿತ್ರಗಳನ್ನು ವಿವಿಧ ಮಾಧ್ಯಮಗಳಲ್ಲಿ ವಿವಿಧ ವಿಷಯಗಳನ್ನು ಕುರಿತು ಚಿತ್ರಿಸಿದ್ದಾರೆ. ಬಾಳೀಕಾಯಿ ಅವರು ದಿನನಿತ್ಯದ ಅಭ್ಯಾಸಕ್ಕಾಗಿ ರಚಿಸಿರುವ ರೇಖಾಚಿತ್ರ, ವರ್ಣ ಚಿತ್ರ ಕಲಾಕೃತಿ ನಿರ್ಮಾಣದ ಸಲುವಾಗಿ ಪೂರ್ವಭಾವಿಯಾಗಿ ಮಾಡಿಕೊಳ್ಳುವ ರೇಖಾಚಿತ್ರಗಳು, ಅಲ್ಲದೇ ಹಲವಾರು ಗ್ರಂಥಗಳಿಗೆ ಸಂದರ್ಭಕ್ಕೆ ತಕ್ಕಂತೆ ರೇಖಾ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಈಗಲೂ ನಿತ್ಯ ನಿರಂತರವಾಗಿ ರೇಖಾಚಿತ್ರಗಳನ್ನು ರಚಿಸುವುದರಲ್ಲಿ ನಿರತರಾಗಿರುವುದನ್ನು ಸಂಶೋಧನೆ ಅಧ್ಯಯನದ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ರೇಖಾಚಿತ್ರ ಎಂದಾಗ ರೇಖೆಗಳಿಂದ ಮೂಡಿಸಿದ ಚಿತ್ರ, ಯಾವುದೇ ವಸ್ತುವಿನ ಆಧಾರ ಭೂಮಿಕೆಯ ಮೇಲ್ಮೈ ಅದರ ಹಿನ್ನೆಲೆಯಾಗಿ ಮೂಡಿಸುವ ಗುರುತುಗಳು ಅದು ಗೆರೆಯೂ ಆಗಬಹುದು, ಬರೆದ ಹಾಗೂ ಕೊರೆದದ್ದಾಗಬಹುದು. ಹಾಗೆ ಮಾಡಿದ ಗುರುತುಗಳು ಸರಳವಾಗಿರಬಹುದು, ವಿವರ ಪೂರ್ಣವಾಗಿರಬಹುದು. ಆದರೆ ತನ್ನದೇ ಆಯಾಮವನ್ನು ಹೊಂದಿರುತ್ತದೆ. ರೇಖೆಯ ಸಮತಲದ ಮೇಲೆ ಮೂರು ಆಯಾಮಗಳ ಸೂಚನೆ ಇಲ್ಲದೆಯೂ ರೂಪ ತಳೆಯಬಹುದು. ಲಯಬದ್ಧವಾಗಿ ಹರಿಯುವ ಮೂಲಕ ಅಥವಾ ಅಂಕುಡೊಂಕಾಗಿ, ವಕ್ರವಾಗಿ ತಡೆತೆಡೆದು ನಿಂತು ಹೋಗಬಹುದು. ದಪ್ಪ, ತೆಳು, ನವಿರಾಗಬಹುದು ಅಥವಾ ನೆರಳು, ಬೆಳಗಿನ ಸೂಚನೆಯನ್ನು ನೀಡುವಂತೆ ಕಾಣಿಸಿ ಮರೆಯಾಗಬಹುದು. ಹೀಗಾಗಿ ರೇಖೆಗೆ ಅದರದೆ ಆದ ಚೈತನ್ಯವಿದೆ. ವೈವಿಧ್ಯಮಯ ವರ್ತನೆಯಿಂದೆ. ಸ್ವತಂತ್ರ ವ್ಯಕ್ತಿತ್ವವಿದೆ. ಅದು ಸ್ವತಂತ್ರ ಕಲೆಯಾಗಿ ಕಲಾತ್ಮಕ ಸೌಂದರ್ಯಾತ್ಮಕ ಮೌಲ್ಯವನ್ನು ಒಳಗೊಂಡಿರುತ್ತದೆ ಎಂಬುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಕಲೆಯು ರಸಾನುಭವ ಎಂಬುದು ತುಂಬ ಸಂಕೀರ್ಣವಾದದ್ದು, ಕಲೆ ಎಂದರೇನು ಎಂಬುದನ್ನು ಎರಡು ರೀತಿಯಿಂದ ನೋಡಬಹುದು. ಒಂದು ಕಲೆಯ ದೃಷ್ಟಿಯಿಂದ ಎನ್ನುವುದು. ಕಲಾಕೃತಿ ನೀಡುವ ಅನುಭವಗಳ ಅಪೇಕ್ಷೆಯಿಂದಲ್ಲ ಕಲಾವಿದನ ದೃಷ್ಟಿಯಿಂದ ಮೊದಲು ಕಲೆ ಎಂದಾಗುತ್ತದೆ. ಕಲೆ ಮತ್ತು ಕಲೆಗಾರ ಎರಡೂ ಒಂದೇ ಆಗಿಬಿಡುತ್ತದೆ. ಎರಡನೆಯದು ಕಲಾಕೃತಿಯಿಂದ ಅನುಭವಗಳನ್ನು ಅಪೇಕ್ಷೆ ಪಡುತ್ತಾನಲ್ಲ ಎಂಬುವುದು ಹಾಗೂ ಕಲಾವಿದನ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಯನ್ನು ಕಲೆ ಎನ್ನಬಹುದೇನೋ ಈ ಸಂದರ್ಭದಲ್ಲಿ ತೀ.ನಂ.ಶ್ರೀ ಅವರು ತಮ್ಮ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಹೇಳಿದ ಮಾತು ನೆನಪಿಗೆ ಬೀರುತ್ತದೆ. ಕಾವ್ಯ ಎಂದರೆ ಏನು ಎಂದು ಅನುಭವಕ್ಕೆ ಗೊತ್ತು ಅದನ್ನು ಬಾಯಿ ಮಾತಿನಲ್ಲಿ ವಿವರಿಸುವುದು ಕಷ್ಟ. ಅದರ ಎಲ್ಲ ಲಕ್ಷಣಗಳನ್ನು ಒಂದು ಸೂತ್ರದ ರೂಪದಲ್ಲಿ ಹೇಳಲು ಆಗುವುದಿಲ್ಲ. ಅವರ ಈ ಮಾತುಗಳನ್ನು ನಮ್ಮ ಚಿತ್ರಕಲೆಗೂ ಸಂಬಂಧಿಸಿದ್ದಾಗಿದೆ.

ಸಂಗೀತ ಹೇಗೆ ಕಿವಿಗೆ ಸಂಬಂಧಿಸಿದ್ದೋ ಹಾಗೆಯೇ ಚಿತ್ರಕಲೆ ಗೋಚರ ಜಗತ್ತಿಗೆ ಸಂಬಂಧಿಸಿದ ಮಾಧ್ಯಮ. ಇಲ್ಲಿನ ಅನುಭವ ಮಾತಿಗೆ ಮೀರಿದ ಅನುಭವ ಮಾತಿನಲ್ಲಿ ಹಿಡಿದಿಡಲಾಗದ್ದನ್ನು ಕಲಾವಿದ ಕಲಾಕೃತಿಯ ಮೂಲಕ ಅಭಿವ್ಯಕ್ತಿಸುತ್ತಾನೆ. ಆ ಅನುಭವ ಮಾತಿನ ಮೂಲಕ ಹೇಳಬಹುದಾಗಿದ್ದರೆ, ಆ ಕಲಾಕೃತಿ ರಚಿಸುವ ಅಗತ್ಯ ಬೀಳುತ್ತಿರಲಿಲ್ಲ. ಒಂದು ಕಲಾಕೃತಿಯನ್ನು ನೋಡುವಾಗ ಒಂದು ಸಾಹಿತ್ಯ ಕೃತಿಯನ್ನು ಓದುವಾಗ ಇರುವುದಕ್ಕಿಂತ ಬೇರೆಯದೇ ಆದ ಮನಃಸ್ಥಿತಿ ಇರಬೇಕು. ಹೇಗೆ ಸಾಹಿತ್ಯ ಕೃತಿಯನ್ನು ಓದಲು ಆ ಭಾಷೆಯ ಅಕ್ಷರಗಳು ವ್ಯಾಕರಣ ಮುಂತಾದ ಸಂಗತಿಗಳನ್ನು ತಿಳಿದಿರಬೇಕೋ ಅಂತೆಯೇ ಚಿತ್ರಕಲಾಕೃತಿಗಳನ್ನು ಅರ್ಥಮಾಡಿಕೊಳ್ಳಲು ಚಿತ್ರಕಲೆಯ ಭಾಷೆಯನ್ನು ಮೊದಲು ತಿಳಿಯಬೇಕು. ಇದು ಸಾಹಿತ್ಯದ ಭಾಷೆಗಿಂತ ಭಿನ್ನವಾದದು ಎನ್ನುವುದನ್ನು ಅರಿಯಬಹುದಾಗಿದೆ.

ಯಾವುದೇ ಕಲಾಕೃತಿ ನೋಡುಗನಿಂದ ತಕ್ಕಮಟ್ಟಿನ ಪೂರ್ವಸಿದ್ಧತೆಯನ್ನು ಬಯಸುತ್ತದೆ. ಹಾಗೆ ಸಿದ್ಧನಾದವನನ್ನು ಭಾರತೀಯ ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಸಹೃದಯ ಎಂದು ಕರೆಯಲಾಗಿದೆ. ಲೌಕಿಕ ಪ್ರತಿಕ್ರಿಯೆಯಿಂದ ವಿಮುಕ್ತನಾಗಿ ವೈಯಕ್ತಿಕತೆಯನ್ನು ಕಳೆದುಕೊಂಡು ಸಾಧಾರಣೀಕೃತವಾದಾಗ ಮಾತ್ರ ಲೋಕಭಾವ ಆಸ್ವಾದವಾಗಿ ರಸವಾಗುತ್ತದೆ ಎಂಬುದನ್ನು ನಮ್ಮ ಸೌಂದರ್ಯ ಮೀಮಾಂಸಕ ಅಭಿನವಗುಪ್ತ ಗಮನಿದಂತಹ ಅಭಿಪ್ರಾಯವಾಗಿದೆ. ಇದರಿಂದ ಲೋಕ ಭಾವದ ಸಂಬಂಧ ಈ ಕಲಾವಿದನ ಕಲಾಕೃತಿಯಲ್ಲಿ ತೋರುತ್ತಿರುವುದು ಪ್ರಮುಖವಾಗಿ ಕಂಡುಬರುತ್ತದೆ.

ಕಲಾಕೃತಿಗಳಲ್ಲಿ ಕಲಾವಿದರು ಸಂಕೇತಗಳನ್ನು ಬಳಸುತ್ತಾರೆ. ಒಮ್ಮೆ ಒಂದಕ್ಕೆ ಸಂಕೇತವಾದದು ಎಲ್ಲ ಸಂದರ್ಭಗಳಲ್ಲೂ ಒಂದೇ ಆಗಿರುವುದಿಲ್ಲ. ಬೇರೆ ಬೇರೆಯ ಕೃತಿಗಳಲ್ಲಿ ಬೇರೆಯದೇ

ಆಗಿರಬಹುದು. ಹಾಗೆ ಶ್ರೀ ಎಂ. ಆರ್. ಬಾಳೀಕಾಯಿಯವರ ಪ್ರತಿಯೊಂದು ಕಲಾಕೃತಿಗಳಲ್ಲಿ ಅದು ವರ್ಣ ಚಿತ್ರವಾಗಿರಬಹುದು. ಇಲ್ಲವೇ ರೇಖಾಚಿತ್ರವಾಗಿರಬಹುದು. ಅವುಗಳಲ್ಲಿ ಎಲ್ಲವೂ ಹೊಸತನವನ್ನು ಬಳಸಿಕೊಂಡು ಕಲಾಕೃತಿ ರಚಿಸುತ್ತಾರೆ ಎಂಬ ಅಂಶವು ಬೆಳಕಿಗೆ ಬರುತ್ತದೆ.

ಕೆಲವೊಮ್ಮೆ ಕಲಾಕೃತಿಗಳಲ್ಲಿ ಅರ್ಥವೇ ಮುಖ್ಯವಾಗಿರುವುದಿಲ್ಲ. ಮನಸ್ಸಿಗೆ ಹಿತವನ್ನು ಕೊಡುವಂತಹ ಆಕಾರಗಳ ವರ್ಣಗಳ ಸಂಯೋಜನೆಯೇ ಕಲಾವಿದನ ಆಶಯವಾಗಿರುತ್ತದೆ. ಅಲ್ಲದೇ ಕಲೆಯ ಕುರಿತು ಡಾ. ಶಿವರಾಮ ಕಾರಂತರು ಕಲಾಪ್ರಪಂಚದಲ್ಲಿ ಹೀಗೆ ಬರೆಯುತ್ತಾರೆ. ನಮಗೆ ತೃಪ್ತಿಯನ್ನು ಸಂತಸವನ್ನು ಕೊಡುವ ಅನೇಕ ಅನುಭವಗಳು ಜೀವನದ ಉದ್ದಕ್ಕೂ ಆಗುತ್ತಿರುತ್ತವೆ. ಹಸಿದವನಿಗೆ ಸರಿಯಾದ ಆಹಾರ ದೊರಕಿದಾಗ ತೃಪ್ತಿ ಉಂಟಾಗಬಹುದು. ಪ್ರಕೃತಿಯ ಯಾವುದೋ ಒಂದು ಅದ್ಭುತ ಘಟನೆ ಇಲ್ಲವೇ ಸುಂದರ ದೃಶ್ಯ ಮನಸ್ಸಿಗೆ ಆನಂದವನ್ನು ತೃಪ್ತಿಯನ್ನು ತಂದು ಕೊಡಬಹುದು. ಆದಿ ಮಾನವನಂತಹ ಮುಗ್ಧ ಜೀವಿಯೇ ಆಗಿರಲಿ ಆಧುನಿಕ ಬುದ್ಧಿ ಶೀಲ ಜ್ಞಾನ ಸಂಪನ್ನ ವ್ಯಕ್ತಿಯೇ ಆಗಿರಲಿ, ತನ್ನಲ್ಲಿ ಹುಟ್ಟಿಕೊಂಡ ಭಾವನೆ ಅನಿಸಿಕೆಗಳ ಒತ್ತಡಗಳ ದೆಸೆಯಿಂದ ಉದ್ದೇಶಪಟ್ಟು ಮೃತ್ತಿಕೆ ಕಲ್ಲು ಕಾಗದ, ಬಣ್ಣ, ಕುಂಚ ಉಳಿ ಈ ವಸ್ತುಗಳನ್ನು ಬಳಸಿ ತನ್ನ ಮನಸ್ಸಿನಲ್ಲಿಯೇ ತುಂಬಿಕೊಂಡ ಭಾವನೆ ಕಲ್ಪನೆಗಳಿಗೆ ಅನ್ಯರು ಗುರುತಿಸಬಲ್ಲ ದೃಗೋಚರ ರೂಪವನ್ನು ಅಥವಾ ಬಿಂಬವನ್ನು ಸೃಷ್ಟಿ ಮಾಡಿ ಇರಿಸಿದಾಗ ಮಾತ್ರವೇ ಅದಕ್ಕೆ ಕಲಾಕೃತಿ ಎಂಬ ಹೆಸರು ಬರುವ ಸಾಧ್ಯತೆಯಿದೆ ಅಂಥದು ಕಲಾಕೃತಿ ಎನಿಸಲೇಬೇಕು ಎಂಬ ನಿಯಮವಿಲ್ಲ. ಈ ಸೃಷ್ಟಿ ಕಾರ್ಯದಲ್ಲಿ ಒಬ್ಬ ವ್ಯಕ್ತಿ ತನ್ನಲ್ಲಿ ತುಂಬಿಕೊಂಡ ಭಾವನೆ, ಕಲ್ಪನೆಗಳನ್ನು ಮೂರ್ತ ರೂಪದಲ್ಲಿ ತೋರಿಸಲೇಬೇಕು ಎನ್ನುವ ಒತ್ತಡ ಅವನಲ್ಲಿ ಮೊದಲಿಗೆ ಕಾಣಿಸಬೇಕು. ಅದಕ್ಕೆ ಆತ ಮೂರ್ತರೂಪವನ್ನು ಕೊಡಬೇಕು. ಕೊಡುವ ಸಲುವಾಗಿ ಯೋಗ್ಯ ಸಾಧನ ಸಲಕರಣೆಗಳನ್ನು ಆತ ತಂದುಕೊಳ್ಳಬೇಕು. ಅಂಥ ಸಾಧನ ಸಲಕರಣೆ ಮತ್ತು ಯಾವುದೇ ಮಾಧ್ಯಮದ ಸಹಾಯದಿಂದ ಆತ ನಿರ್ಮಿಸಿದಂತಹ ಒಂದು ಕೃತಿಯ ಸುತ್ತಣದಲ್ಲಿ ಜನರಿಗೆ ಅವನಲ್ಲುಂಟಾದ ನೋವನ್ನೋ, ಸಂತೋಷವನೋ, ಆನಂದವನ್ನೋ, ಇನ್ನಾವುದೋ ನಿಶ್ಚಿತ ಭಾವನೆಯನ್ನೋ ತಿಳಿಸಿದಾಗ ಅವುಗಳಿಂದ ಅವರು ಪುಳಕಿತರಾಗಿ ತೃಪ್ತಿಯನ್ನು ಪಡುವ ಪ್ರಸಂಗ ಉಂಟಾಗಬೇಕು ಅಂಥ ಗುಣವುಳ್ಳ ಕೃತಿ ಮಾತ್ರವೇ ಕಲಾಕೃತಿ ಎನಿಸುತ್ತದೆ. ಅದನ್ನು ನಿರ್ಮಿಸಿದಂತವರನ್ನು ಕಲಾವಿದ ಎಂಬ ಬಿರುದಿಗೆ ಪಾತ್ರನಾಗುತ್ತಾನೆ ಎಂಬುವುದು ವಿಶೇಷ ಪೂರ್ಣವಾದಂತಹ ಸಂಗತಿಯಾಗಿದೆ.

ಚಿತ್ರಕ್ಕೆ ರೇಖೆಯೇ ಜೀವಾಳ, ಅದಕ್ಕೆ ತನ್ನದೇ ಆದ ಮಹತ್ವವಿದ್ದು ಅದು ಕಲಾವಿದನ ಮಾನಸಿಕ ಉದ್ದೇಶವನ್ನು ಅದರ ತೀವ್ರತೆಯೊಂದಿಗೆ ಪರಿಶುದ್ಧ ಸ್ಥಿತಿಯಲ್ಲಿ ವ್ಯಕ್ತ ಪಡಿಸುವುದಷ್ಟೇ ಅಲ್ಲದೇ ಚಿತ್ರ

ಸೃಷ್ಟಿಕಾಲದ ಅವನ ಮನಸ್ಥಿತಿಯನ್ನು ಚಿತ್ತ ವೃತ್ತಿಯ ಭಾವನೆಗಳನ್ನು ಆ ಕ್ಷಣಕ್ಕೆ ನಮ್ಮ ಮುಂದೆ ತೆರೆದಿಡಿವುದೆ ಈ ಕಲಾವಿದರ ಉದ್ದೇಶವಾಗಿದೆ ಎಂಬುದನ್ನು ಸಂಶೋಧನೆಯಿಂದ ತಿಳಿದು ಬರುತ್ತದೆ.

ಕಲಾವಿದನನ್ನು ನಿಜಕ್ಕೂ ಬಯಲು ಮಾಡುವುದು ರೇಖಾಚಿತ್ರಗಳೇ ಅದು ಅವನ ಸಹಿ ಇದ್ದಂತೆ ಎನ್ನುವ ಹಾಗೆ ವ್ಯಕ್ತಿಯೊಬ್ಬನ ಕೈಬರವಣಿಗೆಯಂತೆಯೇ ರೇಖಾಚಿತ್ರವೊಂದು ಕಲಾವಿದನ ಆ ಸಂದರ್ಭದ ಚಿಂತನೆ ಮತ್ತು ಮನಸ್ಥಿತಿಗಳನ್ನು ಪ್ರತಿಬಿಂಬಿಸುತ್ತದೆ. ಕಲಾವಿದನನ್ನು ಅರ್ಥಮಾಡಿಕೊಳ್ಳಲು ಅವನ ರೇಖಾಚಿತ್ರಗಳನ್ನು ವಿಶ್ಲೇಷಿಸಬೇಕು. ಹಾಗೆ ಬಾಳೀಕಾಯಿ ಅವರ ರೇಖಾಚಿತ್ರಗಳಲ್ಲಿನ ಲಾಲಿನ್ಯತೆ, ತನ್ಮಯತೆ, ಬಹುಛಾಯೆಗಳು ಅವರ ರೇಖಾಚಿತ್ರಗಳಲ್ಲಿ ಕಾಣಬಹುದು. ಇದರಿಂದಾಗಿಯೇ ಶ್ರೀ ಬಾಳೀಕಾಯಿಯವರು ಕಲೆಯ ಕ್ಷೇತ್ರದಲ್ಲಿ ಕಲಾವಿದರ ಕಲಾವಿದ್ಯಾರ್ಥಿಗಳ ಮಧ್ಯ, ಕಲಾಶಿಕ್ಷಕರಾಗಿ ಸೃಜನಶೀಲ ಕಲಾವಿದರಾಗಿ, ಪ್ರತಿಯೊಂದು ಕಲಾಕೃತಿಯಲ್ಲಿ ಹೊಸತನವನ್ನು ಕಂಡುಹಿಡಿಯುವದರಲ್ಲಿ ಅವರು ಗುರುತಿಸಿಕೊಂಡಿದ್ದಾರೆ ಎಂದು ತಿಳಿದು ಬರುತ್ತದೆ.

ಇಂತಹ ಸ್ವತಂತ್ರ ವ್ಯಕ್ತಿತ್ವ ಹೊಂದಿದ ರೇಖೆಗಳನ್ನು ಬಾಳೀಕಾಯಿ ಅವರು ಪ್ರತಿಭೆಗೆ ತಕ್ಕಂತೆ ತಮ್ಮ ಕೈಚಳಕದಿಂದ ರೇಖಾಚಿತ್ರಗಳನ್ನು ಪೆನ್ಸಿಲ್, ಶಾಹಿ (ಇಂಕ್) ನಿಸರ್ಗದಲ್ಲಿ ಸಿಗುವ ಇನ್ನಿತರ ಮಾಧ್ಯಮಗಳಿಂದ ರಚಿಸಲ್ಪಟ್ಟಿವೆ. ಈ ರೀತಿಯಾಗಿ ರಚಿಸಿದ ರೇಖಾಚಿತ್ರಗಳಲ್ಲಿ ಭಾವಚಿತ್ರ, ನಿಸರ್ಗ ಚಿತ್ರ, ಸಂಯೋಜನಾ ಚಿತ್ರಗಳು, ಪ್ರಾಣಿ ಪಕ್ಷಿಗಳ ಚಿತ್ರಗಳು ಇದ್ದು, ಹೀಗೆ ವೈವಿಧ್ಯಮಯ ವಿಷಯಗಳನ್ನು ಒಳಗೊಂಡ ರೇಖಾಚಿತ್ರಗಳನ್ನು ಕಾಣಬಹುದು. ಕಲಾವಿದನ ಕಲೆಯ ಅಭಿವ್ಯಕ್ತಿ ಕುರಿತು ತುಡಿತಕ್ಕೆ ಸಮಯ ಪರಿಸರದ ನಿರ್ಬಂಧವಿಲ್ಲ. ಒಂದು ಕ್ಷಣ ಗಮನ ಸೆಳೆಯುವ ಯಾವುದೇ ವಸ್ತು ವಿಷಯವಿರಲಿ ಆಗ ಕಲಾವಿದನಲ್ಲಿಯ ಸೃಜನಶೀಲ ಪ್ರಜ್ಞೆ ಜಾಗೃತವಾಗಿ ತನ್ನಷ್ಟಕ್ಕೆ ತಾನೇ ರೇಖೆಗಳ ಮುಖಾಂತರ ಅಭಿವ್ಯಕ್ತಿಗೊಳ್ಳುತ್ತಾರೆ ಎಂಬುವುದನ್ನು ಮೇಲಿನ ಸಂಶೋಧನಾತ್ಮಕ ಅಧ್ಯಯನಗಳಿಂದ ತಿಳಿದುಕೊಳ್ಳಬಹುದಾಗಿದೆ.

ರೇಖಾಚಿತ್ರಗಳ ವಿಶ್ಲೇಷಣೆ :

ಪಕ್ಷಿಯ ಜೊತೆ ಸ್ತ್ರೀ

ಇದು ಒಂದು ರೇಖಾಚಿತ್ರವಾಗಿದ್ದು, ಇದರಲ್ಲಿ ಒಂದು ಪಕ್ಷಿ ಇದೆ, ಚಿತ್ರ ನೋಡಿದರೆ, ಇದರಲ್ಲಿ ಏನೋ ಒಂದು ಸಂದೇಶವಿದೆ. ಆ ಪಕ್ಷಿಯ ಜೊತೆ ಒಬ್ಬ ಸ್ತ್ರೀ ಇದ್ದಾಳೆ. ಅದರ ಜೊತೆಗೆ ಸಂತೋಷವಾಗಿದ್ದರು ಸಹಿತ ಪಕ್ಷಿಯ ಮೇಲೆ ಒಂದು ಕೈ ಇಟ್ಟು ಏನೋ ಒಂದು ಗುಂಗಿನಲ್ಲಿ ನಿಂತುಕೊಂಡಿದ್ದಾಳೆ. ತನ್ನ ಸೌಂದರ್ಯವನ್ನು ಆ ನಿಸರ್ಗಕ್ಕೆ ಹೋಲಿಸಿಕೊಂಡು ಶೃಂಗಾರ ರೂಪವನ್ನು

ತಾಳಿ. ನಿಸರ್ಗವು ನನ್ನಂತೆ ಸೌಂದರ್ಯವಾಗಿದೆ ಅಂತ ಒಂದು ಕಲ್ಪನೆ ಅವಳಿಗಿದೆ. ಒಂದು ನವಿಲು ಹೇಗೆ ಸುಂದರವಾಗಿದೆಯೋ ಅದರ ಕಾರ್ಯ ಹೇಗೇ ಹಾಗೆ ನಾನು ಯಾವುದಕ್ಕೂ ಕಡಿಮೆ ಇಲ್ಲ ಅವಳ ದೃಷ್ಟಿಕೋನ ಹೀಗಿ ಹರಿಯುತ್ತಿದೆಯೋ ಎಂಬಂತೆ ಚಿತ್ರ ಸಂಯೋಜನೆ ಮಾಡಲಾಗಿದೆ.

ಬಾಲಕಾರ್ಮಿಕ ಪರಿಸ್ಥಿತಿ

ಈ ಒಂದು ಚಿತ್ರದಲ್ಲಿ ಉತ್ತಮವಾದ ಪರಿಸರವಿದೆ. ಇದರಲ್ಲಿ ನಾಯಿಗಳು ಇದ್ದು, ಕಾಗದಗಳನ್ನೆಲ್ಲ ತಿಂದು ಪರಿಸರವನ್ನೆಲ್ಲ ಹಾಳು ಮಾಡುತ್ತಿದ್ದು, ಜೊತೆಗೆ ಮಕ್ಕಳು ಆಟವಾಡುತ್ತಿದ್ದಾರೆ. ಅವು ಬಡವರ ಮಕ್ಕಳು ಕಸ–ಕಡ್ಡಿಗಳನ್ನೆಲ್ಲ ಆರಿಸುತ್ತಾರೆ. ನಾಯಿಗಳು ಬಂದರೆ ಕಲ್ಲು ಎಸೆಯುತ್ತಾರೆ. ಇವರ ಗುಂಪಿನಲ್ಲಿ ಶಿಕ್ಷಣ ಆಕಾಶವಿದ್ದ ಹಾಗೆ, ಎಲ್ಲ ಶಿಕ್ಷಣ ಮೇಲೆರುತ್ತಿದೆ. ನಮ್ಮ ಶಿಕ್ಷಣ ಕೈಗೆ ನಿಲುಕಲಾರದಷ್ಟು ಎತ್ತರಕ್ಕೆ ಹಾರಿಹೋಗುತ್ತಿದೆ. ಬಾಲಕಾರ್ಮಿಕ ಪದ್ಧತಿ ಅಭಿವ್ಯಕ್ತಿಸುವಂತಿದ್ದದ್ದು ಏನು ಪ್ರಯೋಜನವಿಲ್ಲ ಅವರವರ ಪಾಡಿಗೆ ಅವರಿದ್ದಾರೆ. ಇದಕ್ಕೆ ಸಾಕ್ಷಿ ಸೂರ್ಯ ಎನ್ನುವಂತಹ ವಿಷಯವನ್ನು ಸಂಯೋಜಿಇಸಿದ ದೃಶ್ಯವಾಗಿದೆ. ಇದು ಬಾಲಕಾರ್ಮಿಕರ ನಿರ್ಮೂಲನೆವಾಗಬೇಕೆಂಬುವುದು ಇವರ ಉದ್ದೇಶವಾಗಿದೆ.

ಶಿರ್ಷಿಕೆ ರಹಿತ

ಈ ರೇಖಾಚಿತ್ರಗಳು ಸುಮಾರು ಒಂದೇ ಸರಣಿಯ ಹತ್ತು ಚಿತ್ರಗಳೆಂದು ಹೇಳಬಹುದು. ಅಲ್ಲದೇ ೨೦೧೪ ಜನವರಿಯಲ್ಲಿ ಮಾಡಿದ ಈ ಹತ್ತು ಕಲಾಕೃತಿಗಳು ಏನನ್ನು ಸೂಚಿಸುತ್ತವೆಂದರೆ ಇವುಗಳಲ್ಲಿ ಮುಖಗಳನ್ನು ಉದ್ದವಾಗಿ ಮತ್ತು ಬಡಕುತನವನ್ನು ತೋರಿಸುತ್ತವೆ. ಸ್ವಲ್ಪ ಅಗಲವಿದೆ. ಆದರೆ ಮುಖ್ಯವಾಗಿ ಧೂಮಪಾನ ಮಾಡುತ್ತಿರುವುದು ಕಂಡುಬರುತ್ತದೆ. ಹೋಗೆ ಹೋಗುತ್ತಿದೆ ಎಂಬಂತೆ ಎಲ್ಲ ರೋಗಗಳು ಸ್ವೀಕಾರವಾಗುತ್ತವೆ. ಆದರೂ ಲಕ್ಷವಿಲ್ಲ ಇದು ಅವನಲ್ಲಿ ಎದ್ದು ಕಾಣುತ್ತಿದೆ. ಆದರೆ ಅವನು ಈಗಿನ ತಾತ್ಕಾಲಿಕ ಸಂತೋಷವನ್ನು ಮಾತ್ರ ಸ್ಪಂದನೆ ಮಾಡಿಕೊಳ್ಳುತ್ತಿದ್ದಾನೆ. ಅಲ್ಲದೆ ಪರಿಸರದ ಮೇಲೆಯೂ ಇದರ ಪರಿಣಾಮ ಬೀರುವುದರ ಜೊತೆ ತಾನು ಹಾಳಾಗುವುದರೊಂದಿಗೆ ನಿಸರ್ಗದ ತುಂಬೆಲ್ಲ ಹರಡುತ್ತಿದ್ದಾನೆ. ಇವುಗಳೆಲ್ಲವುದರ ಜೊತೆಗೆ ತನ್ನ ಭಾವನೆಗಳು ಮತ್ತು ವಯಸ್ಸು ಕಳೆದುಕೊಳ್ಳುತ್ತಿದ್ದಾನೆ. ಹೊಸ ಹೊಸ ವಿಚಾರಗಳು ಚಿಂತನೆಗಳು, ಅವಿಸ್ಕಾರಗಳು ಕಡಿಮೆಯಾಗಿ ಜೀವನದಲ್ಲಿ ನಿರುತ್ಸಾಹ ಭಾವನೆ ಬರುವುದಕ್ಕೆ ಕಾರಣಗಳಾಗುತ್ತಿವೆ ಎನ್ನುವುದು ಈ ಕಲಾಕೃತಿಗಳಲ್ಲಿ ಕಂಡು ಬರುವಂತಹ ಆರೋಗ್ಯಕರ ಸಂದೇಶವನ್ನು ತನ್ನ ಚಿತ್ರದಿಂದ ತೋರಿಕೊಡುವ ಉದ್ದೇಶವನ್ನು ಹೊಂದಲಾಗಿದೆ.

ಬಲೂನ್ಸ್ ಮಾರುತ್ತಿರುವ ಮನುಷ್ಯ

ಈ ಚಿತ್ರದಲ್ಲಿ ಮುಸ್ಲಿಂ ಒಬ್ಬ ಮನುಷ್ಯ ಬಲೂನ್ಸ್‌ಗಳನ್ನು ಮಾರುತ್ತಿರುವ ದೃಶ್ಯ ಇದಾಗಿದೆ. ಇದು ಕೂಡ ಸೃಜನ ಸಂಯೋಜನೆ ಚಿತ್ರವಾಗಿದೆ. ಈ ಮನುಷ್ಯ ಓರೆಯಾಗಿ ನಿಂತುಕೊಂಡಿದ್ದಾನೆ. ಬಲಗೈಯಲ್ಲಿ ಬಲೂನ್ಸ್ ಹಿಡಿದು ತನ್ನ ಹೆಗಲ ಮೇಲಿಂದ ಹಿಂದಕ್ಕೆ ಹಾರಾಡುತ್ತಿರುವ ಹಾಗೆ ಇದ್ದು ನಂತರ ಹಣದ ಚೀಲವನ್ನು ಬಗಲಿಗೆ ಹಾಕಿಕೊಂಡಿದ್ದರು ಸಹಿತ ಅದು ಕೂಡ ಹಿಂದಕ್ಕೆ ಹೋಗಿ ಹಾರಾಡುತ್ತಿದೆ. ಈ ಮನುಷ್ಯನನ್ನು ನೋಡಿದ ಕ್ಷಣ ಇವನು ಮುಸ್ಲಿಂ ಎಂದು ಗೊತ್ತಾಗುತ್ತದೆ. ಅವನ ಕೋರೆ ಮೀಸೆ ಮತ್ತು ನೀಳವಾದ ಗಡ್ಡ, ಉದ್ದನೇಯ ಟೋಪಿ ಇರುವುದನ್ನು ಚಿತ್ರಿಸಿದ್ದು, ತನ್ನ ಬಾಲ್ಯದಲ್ಲಿ ಕಂಡ ಬಲೂನ ಮಾರುವ ವ್ಯಕ್ತಿಯ ಚಿತ್ರವನ್ನು ಅಭಿವ್ಯಕ್ತಿಸಿದ್ದಾರೆ.

ಪ್ಲೆನ್ ಬರ್ಡ್ಸ್

ಈ ಚಿತ್ರ ಏನನ್ನು ಹೇಳುತ್ತಿದೆ ಎಂದರೆ ಇದು ನಮ್ಮ ಭೂಮಿ ಆದರೆ ಇನ್ನೊಂದು ಲೋಕ ಯಾವುದೇ ಆಗಿರಲಿ, ಏಣಿ ಹಚ್ಚಿ ಹೋಗುತ್ತಿರುವಂತಹ ವ್ಯವಸ್ಥೆಗೆ ಮೆಟ್ಟಿಲುಗಳಿವೆ. ವಿಜ್ಞಾನ ಎನ್ನುವುದು ನಿಂತ ನೀರಲ್ಲ ಅದು ಅದರ ಪಾಡಿಗೆ ಏನೆಲ್ಲ ಬೆಳವಣಿಗೆ ಆಗುತ್ತಿರುತ್ತದೆ. ಇದಕ್ಕೆ ಆಧಾರವಾಗಿರುವುದು ಪ್ರಕೃತಿ. ಹಾಗೆ ಇದರಲ್ಲಿ ಭೂಮಿ, ನೀರು ಪ್ರಕೃತಿ ಎಲ್ಲವು ಇದೆ. ಮೇಲಿನ ಭಾಗದಲ್ಲಿ ಆಕಾಶ ತೋರಿಸಿದ್ದಾರೆ. ಅಲ್ಲದೇ ಯಾವುದೋ ಒಂದು ಗ್ರಹವಿದೆ. ಆ ಗ್ರಹಕ್ಕೆ ಹೋಗುವ ಮನುಷ್ಯನ ಚಿಂತನಗಳು ಹಲವಾರು ಹಾಗೆ ಒಬ್ಬ ವಿಜ್ಞಾನಿಗೂ ಒಬ್ಬ ಸಾಮಾನ್ಯ ಮನುಷ್ಯನಿಗೂ ತುಂಬಾ ವ್ಯತ್ಯಾಸವಿದೆ. ಅವರವರ ಚಿಂತನೆ ಆಕಾಶಕ್ಕೆ ಏಣಿ ಹಚ್ಚಿ ಹೋಗಬಹುದ. ಇಲ್ಲವೆ ಪ್ಲೆನ್ ಬರ್ಡ್ಸ್ ಈ ಚಿತ್ರದಲ್ಲಿ ಕಾಣುತ್ತಿರುವಂತಹ ಚಿತ್ರ ಸಂಯೋಜಿಸಲಾಗಿದೆ ಇದರಿಂದ ಮಾನವನು ತಂತ್ರಜ್ಞಾನದಲ್ಲಿ ಮುಂದುವರೆಯುತ್ತಿರುವ ಭಾವಾಭಿವ್ಯಕ್ತವಾಗಿ ಚಿತ್ರಿಸಲಾಗಿದೆ.

ಬಸವ

ಈ ಚಿತ್ರವು ಜನಪದ ಅಂದರೆ ಗ್ರಾಮೀಣ ಪ್ರದೇಶದಲ್ಲಿ ಕಾರಹುಣ್ಣಿಮೆಗೆ ಮಣ್ಣಿನ ಎತ್ತುಗಳನ್ನು ಪೂಜೆ ಮಾಡುತ್ತಾರೆ. ಜನಪದ ಆಚರಣೆಯಲ್ಲಿ ಬಣ್ಣಗಳನ್ನು ಹಚ್ಚುವುದು, ಅನೇಕ ತರಹದ ವಿನ್ಯಾಸಗಳನ್ನು ಮಾಡುವುದು ಅದರ ಕೋಡುಗಳಿಗೆ ದಾರದ ಜುಲ್ಲಾ ಕಟ್ಟುವುದು ಕೆಲವೊಂದು ಕಡೆ ಬೇರೆ ಬೇರೆ ಸಂಪ್ರದಾಯಗಳಿದ್ದು ಅದರ ಪ್ರಕಾರ ಎತ್ತುಗಳನ್ನು ಶೃಂಗಾರ ಮಾಡಿ ಮೆರವಣಿಗೆ ಮಾಡುತ್ತಾರೆ. ಅಲ್ಲದೇ ರೈತನಿಗೆ ಮುಖ್ಯವಾಗಿ ಬೇಕಾಗಿರುವುದು, ಎತ್ತುಗಳು ರೈತನಿಗಷ್ಟೇ ಅಲ್ಲದೇ ಇಡಿ ನಾಡಿಗೆ ಬದುಕುಳಿಯುವುದು ಇವುಗಳಿಂದ ಎಲ್ಲವೂ ಹಾಗೆ ಈ ಅಲಂಕಾರಿಕ ಎತ್ತುಗಳ ಹಿಂದೆ ನೀರು, ಬಾತುಕೋಳಿ ಎಲ್ಲವೂ ಇದ್ದು ಮುಖ ಕೆಳಗೆ ಮಾಡಿ ನಿಂತುಕೊಂಡಿರುವಂತೆ ಚಿತ್ರ ಸಂಯೋಜನೆಯನ್ನು

ರೇಖಾ ಚಿತ್ರಗಳಿಂದ ಮಾಡಿದ್ದಾರೆ. ಇದರಿಂದ ಕಲಾವಿದನು ಕಾರಹುಣ್ಣಿಮೆಯ ದೃಶ್ಯಗಳಿಗೆ ಮಾರು ಹೋಗಿ ಅವರು ಕಂಡ ನೆನಪಿನ ದೃಶ್ಯಗಳಲ್ಲಿ ಇದೊಂದು ಉತ್ತಮ ಚಿತ್ರವಾಗಿ ಅಭಿವ್ಯಕ್ತಿಸಿದ್ದಾರೆ. ಇದಕ್ಕೆ ಅವರು ಬದುಕಿನ ಪರಿಸರ ಪ್ರಭಾವಗಳೆಂದು ಹೇಳಬಹುದು.

ಈಶ್ವರನ ವಾಹನ ನಂದಿ:

ಈ ಕಲಾಕೃತಿಯು ಈಶ್ವರ ಪರಿಕಲ್ಪನೆಯಿಂದ ರಚಿತವಾದ ಕಲಾಕೃತಿಯಾಗಿದೆ ಭಾರತೀಯ ನಂಬಿಕೆಯ ಪ್ರಕಾರ ಈಶ್ವರನ ವಾಹನ ನಂದಿ ಅಂದರೆ 'ಬಸವ'. ಸಾಮಾನ್ಯವಾಗಿ ಈಶ್ವರನ ಪೂಜೆಯ ಪರಿಕಲ್ಪನೆ ಇರುವುದು ಈಶ್ವರನನ್ನು ವಿಷಕಂಠ ಎಂದು ಕರೆಯುತ್ತಾರೆ. ಆದ್ದರಿಂದಲೇ ಅವನ ಕೊರಳಿನಲ್ಲಿ ಸರ್ಪವಿರುವುದು ಒಂದು ನಂಬಿಕೆಯಾಗಿದೆ. ಶೈವರಲ್ಲಿ ಈಶ್ವರನ ಪೂಜೆಯನ್ನು 'ಲಿಂಗ' ರೂಪದಲ್ಲಿಯೂ ಮಾಡುತ್ತಾರೆ. ಪ್ರಸ್ತುತ ಈ ಕಲಾಕೃತಿಯನ್ನು ಗಮನಿಸಿದಾಗ ಮೇಲ್ನೋಟಕ್ಕೆ ತಿಳಿಯುತ್ತದೆ. ಇದು ಶೈವ ಕಲಾಕೃತಿಯೆಂದು ತಿಳಿಯುತ್ತದೆ ಕಾರಣ ಈ ಕಲಾಕೃತಿ ಬಸವನದಾಗಿದ್ದು ಬಸವನ ಇನ್ನೊಂದು ಹೆಸರು ನಂದಿ ಇರುವ ಸರ್ಪ, ಬಸವನ ಹೊಟ್ಟೆಯ ಮೇಲೆ ಇರುವ ಲಿಂಗ ಸಾಂಕೇತಿಕವಾಗಿ ಈಶ್ವರನೆ ಆಗಿದೆ. ಅನ್ನುವುದರ ಜೊತೆಗೆ ಸಂಪ್ರದಾಯಿಕವಾಗಿ ಕಾರಹುಣ್ಣಿಮೆಗೆ ಅಲಂಕಾರ ಮಾಡಿರುವುದು ಕಂಡು ಬಂದರು ಸಹಿತ ಈ ಕೃತಿಯು ಈಶ್ವರ ಪರಿಕಲ್ಪನೆಯಿಂದ ರಚಿತವಾದ ಕಲಾಕೃತಿಯಾಗಿದೆ.

ಜೋಕಾಲಿ ಆಡುತ್ತಿರುವ ಮಹಿಳೆಯರು

ಈ ಚಿತ್ರವು ಜನಪದ ಕಲೆಗಳನ್ನು ಅನ್ವಯಿಸುತ್ತದೆ. ಇದರಲ್ಲಿ ಜೋಕಾಲಿ ಆಡುತ್ತಿರುವ ಮಹಿಳೆಯರು, ಹುಡುಗಿಯರು, ಎಲ್ಲರೂ ಇದ್ದಾರೆ. ಸುತ್ತಲೂ ಸುಂದರವಾದ ನಿಸರ್ಗದಲ್ಲಿ ಒಂದೆ ಗಿಡಕ್ಕೆ ಹಲವಾರು ಜೋಕಾಲಿಗಳನ್ನು ಕಟ್ಟಿ ತಮ್ಮದೇ ಆದರ ಲೋಕದಲ್ಲಿ ಅವರಿದ್ದಾರೆ. ಕೆಳಗೆ ಮಹಿಳೆಯರು ನಿಂತುಕೊಂಡು ನೋಡುತ್ತಿದ್ದಾರೆ. ಸುತ್ತಲ್ಲು ಗಿಡ, ಹೂ, ಬಳ್ಳಿ ಎಲ್ಲವೂ ಸುಂದರವಾಗಿದೆ ಹೇಗೆ ಆಡುತ್ತಿದ್ದಾರೆ. ಪಕ್ಷಿಗಳು ಗಿಡದ ಮೇಲೆಲ್ಲಾ ಹಾರಾಡುತ್ತಿದ್ದರು ಅವುಗಳಿಗೆ ಭಯ ಏನ್ನುವುದೇ ಇಲ್ಲ ಎಂಬಂತೆ ಚಿತ್ರ ಸಂಯೋಜನೆ ಮಾಡಿದ್ದಾರೆ. ಇದಕ್ಕೆ ಕಾರಣವೆಂದರೆ ಅವರು ಶ್ರಾವಣ ಮಾಸದ ಜೋಕಾಲಿ ಹಬ್ಬವನ್ನು ಪ್ರತಿಬಿಂಬಿಸುವಂತಹ ಗ್ರಾಮೀಣ ಸೊಗಡನ್ನು ಚಿತ್ರಣ ರೂಪದಲ್ಲಿ ಅಭಿವ್ಯಕ್ತಿಸಿದ್ದಾರೆ.

ಮೌನವಾಗಿ ಕುಳಿತಿರುವ ಅಣ್ಣಾ ಹಜಾರೆ

ಈ ಚಿತ್ರವು ಒಂದು ದೇಶದ ಪ್ರಗತಿಯತ್ತ ಸಾಗಲು ಹೋರಾಟಕ್ಕೆ ನಿಂತುಕೊಂಡಿರುವ ಅಣ್ಣಾ ಹಜಾರೆ ಅವರ ಕುರಿತು ಕಲಾವಿದರು ಕೂಡ ಅದರ ಜೊತೆ ಸತ್ಯಾಗ್ರಹಕ್ಕೆ ಕುಳಿತುಕೊಂಡಾಗ

ರಚಿಸಿದಂತಹ ಚಿತ್ರ ಇದು. ಇದರಲ್ಲಿ ಅಣ್ಣಾಜಿ ಅವರು ಮೌನವಾಗಿ ಕುಳಿತಿರುವುದನ್ನು ನೋಡಿ ಅಣ್ಣಾ ಅಣ್ಣಾಜಿ ಹೆದರದಿರಿ ಭ್ರಷ್ಟಾಚಾರ ನಿರ್ಮೂಲನಕ್ಕೆ ನಿಮ್ಮ ಬಲಕ್ಕೆ ನಾವಿದ್ದೇವೆ. ೧೨೦ ಕೋಟಿ ಜನ ಭಾರತ ಮಾತೆಯ ಮಕ್ಕಳು ಎಂದು ಚಿತ್ರದಲ್ಲಿ ಸ್ಪಷ್ಟ ಪಡಿಸಿದ್ದಾರೆ. ಈ ಚಿತ್ರದಿಂದ ನಾಡಿನ ಸಮಸ್ತ ಜನತೆಗೆ ಭ್ರಷ್ಟಾಚಾರ ವಿರೋಧವಾಗಿ ಕಲಾವಿದ ನಾನು ಭಾಗವಹಿಸುತ್ತೇನೆ ಸತ್ಯಕ್ಕೆ ಎಂದು ಜಯವಿದೆ ಎಂದು ತೋರಿಸಿದ ಅಭಿವ್ಯಕ್ತಿಯ ಚಿತ್ರವಾಗಿದೆ.

ಮೀನು ಮಾರುತ್ತಿರುವ ಮಹಿಳೆ

ಈ ಚಿತ್ರವು ಒಬ್ಬ ಮಹಿಳೆಯ ಭಾವ ಚಿತ್ರವಾಗಿದ್ದು, ಇದರಲ್ಲಿ ಒಬ್ಬ ಮಹಿಳೆ ಎಷ್ಟು ಅಲಂಕಾರಿಯುತವಾಗಿ ಶೃಂಗಾರಕ್ಕೆ ಮರೆ ಹೋಗಿ ತನ್ನ ತಲೆಯಲ್ಲಿ ಮೀನುಗಳನ್ನೇ ತುಂಬಿಕೊಂಡು ತಲೆಯ ಮೇಲೆ ಮೀನಿನ ಬುಟ್ಟಿಯನ್ನು ಹೊತ್ತುಕೊಂಡು ನಿಂತಿದ್ದಾಳೆ ಆದರೆ ಅವಳ ಕಿವಿಯ ಓಲೆ ಎಷ್ಟೊಂದು ಸುಂದರಾಗಿ ಅವಳ ಮುಖದ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆಗೆ ಕೊರಳಿಗೆ ನಾನಾ ರೀತಿಯ ಸರಗಳನ್ನು ಹಾಕಿಕೊಂಡಿರುವಂತೆ ಚಿತ್ರಿಸಿದ್ದಾರೆ. ಅವರು ಕಂಡ ಮೀನಗಾರಿಕೆಯ ಚಿತ್ರವಾಗಿದೆ.

ಕೊಳಲಿನ ನಾದಕ್ಕೆ ಹಾತೊರೆದು ಬರುತ್ತಿರುವ ಗೋವುಗಳು:

ಪ್ರಸ್ತುತ ಈ ಕಲಾಕೃತಿಗಳು ಒಂದೇ ವಸ್ತುವನ್ನು ಆದರಿಸುವತಂಹವು. ಗೋಪಾಲಕೃಷ್ಣ ಕೊಳಲನು ಊದುತ್ತಿರುವ ಸಂದರ್ಭ, ಗೋವುಗಳು ಅವನನ್ನು ಅರಸುತ್ತಾ ಅವನ ಸಾನಿಪ್ಯಕ್ಕೆ ಬಂದು ಸೇರುವಂತಹ ದೃಶ್ಯಾವಳಿಗಳು ಕಂಡುಬರುತ್ತವೆ. ಹಾಗೆ ಕೃಷ್ಣನ ಕೊಳಲ ಗಾನಕ್ಕೆ ಕಿವಿಗೊಡುತ್ತಿರುವ ಗೋಪಿಕೆಯನ್ನು ಕಾಣಬಹುದು ಹಾಗೆಯೇ ಮೊದಲೆರೆಡು ಕಲಾಕೃತಿಗಳಲ್ಲಿ ಗೋವುಗಳು ಯಾವುದೊ ಒಂದು ಕರೆಗೆ ಹೊಗೊಟ್ಟು ತನ್ನ ಒಡೆಯನನ್ನು ಸೇರುವ ತವಕವನ್ನು ಬರುವಿಕೆಯಲ್ಲಿ ಗುರುತಿಸಬಹುದು ಈ ಕಲಾಕೃತಿಯನ್ನು ನೋಡಿದ ಕೂಡಲೆ ನನ್ನ ಸ್ಮರ್ತಿಗೆ ಬರುವಂತಹ ಕವಿತೆ.

ಉದಯ ಕಾಲದಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮುದದಿ ತಿಲಕವ ಹಣೆಯೊಳಿಟ್ಟು
ಚತುರ ಶೀಕೆಯನ್ನು ಹಾಕಿದ
ಗೊಲ್ಲ ಕರೆದ ಧ್ವನಿಯು ಕೇಳಿ......
ಎಲ್ಲ ಹಸುಗಳು ಬಂದು ನಿಂತು......

ಈ ಕವಿತೆಯೂ ಪ್ರಸ್ತುತ ಕವಿತೆಗೂ ಸಾಮ್ಯತೆ ಇರುವುದನ್ನು ಗುರುತಿಸಬಹುದು ಕಲಾಕೃತಿಯಲ್ಲಿ ಕೃಷ್ಣನ ಕೊಳಲ ನಾದಕ್ಕೆ ಹಸುಗಳು ಹರಸುತ್ತಾ ಬರುವುದನ್ನು ಸೂಚಿಸಿದಂತೆ ಈ ಕವಿತೆಯು ಗೊಲ್ಲಿನ ಶಿಕೆಗೆ ಬರುವ ಗೋವುಗಳನ್ನು ಕಾಣಬಹುದು. ಶಿಕೆಯನ್ನು ನಾವು ಕೊಳಲು ಎಂದು ಇಟ್ಟುಕೊಳ್ಳುವುದಾದರೆ ಮಹಾಭಾರತದ ಉದ್ಯೋಗ ಪರ್ವದಲ್ಲಿ ದುರ್ಯೋಧನನು ಸಂದಾನಕ್ಕೆ ಬಂದ ಕೃಷ್ಣನನ್ನು ಗೊಲ್ಲ, ಗೋವಾಳಿಗ ಎಂದು ಅವಮಾನಿಸುವ ಮಾತನ್ನು ಗಮನಿಸಿದಾಗ ಕವಿತೆಯಲ್ಲಿನ ಗೊಲ್ಲ, ಕೃಷ್ಣ ಎಂದೆ ಹೇಳಬಹುದು.

ನನ್ನ ಮಗು ನನ್ನ ಬೆನ್ನಿಗೆ:

ಈ ರೇಖಾಚಿತ್ರವು ತಾಯಿ ಮತ್ತು ಮಗು ಎಂಬುದಾಗಿಯೂ ಇದರಲ್ಲಿ ಒಬ್ಬ ತಾಯಿಯು ತನ್ನ ಕಂದನನ್ನು ಎಷ್ಟೊಂದು ಜೋಪಾನ ಮಾಡುತ್ತಾಳೆ ಎನ್ನುವುದು ತಿಳಿಯುತ್ತದೆ ತನಗೆ ಎಷ್ಟೆ ಕಷ್ಟ ಬಂದರು. ಸಹಿತ ಕರುಳಿನ ಕುಡಿಯನ್ನು ಯಾವತ್ತೂ ಕೈ ಬಿಡುವುದಿಲ್ಲ, ಹಾಗೆ ಈ ತಾಯಿಯು ತಾನು ಎಲ್ಲೋ, ಅವಸರದಿಂದ ಹೋಗುತ್ತಿರುವ ಹಾಗೆ ಎದ್ದು ಕಾಣುತ್ತದೆ ಆದರೂ ತನ್ನ ಕಂದನನ್ನು ತನ್ನ ಬೆನ್ನಿಗೆ ಜೋಳಿಗೆ ಹಾಕಿಕೊಂಡು ನನ್ನ ಮಗು ನನ್ನ ಬೆನ್ನಿಗೆ ಎನ್ನುವ ಹಾಗೆ ಆ ಮಗುವನ್ನು ಹೊತ್ತುಕೊಂಡು ಹೋಗುತ್ತಿದ್ದಾಳೆ. ಮಗುವಿನ ಭಾರವಿದ್ದರೂ ಸಹಿತ ತಾನು ಓರೆಯಾಗಿ ನಡೆದುಕೊಂಡು ಹೋಗುತ್ತಿದ್ದಾಳೆ ಹಿಂದೆ ಒಂದು ಗಿಡದ ಕೊಂಬಿಗಳು ಸ್ವಲ್ಪ ಎಲೆಗಳಿಂದ ಕೂಡಿದ್ದು ಕಂಡುಬರುತ್ತದೆ. ಈ ಸಂಯೋಜನೆಯಿಂದ ಕೂಡಿರುವ ಈ ಚಿತ್ರವು ಕಡಿಮೆ ರೇಖೆಗಳಿಂದ ಕೂಡಿದ್ದರು ಸಹಿತ ಒಂದು ಸುಂದರವಾದ ರೇಖಾಚಿತ್ರವಾಗಿದೆ. ಆದರೆ ಇದು ನೋಡುಗರಿಗೆ ಸುಂದರವಾದ ಮುಖವು ಕಂಡುಬರುತ್ತದೆ. ಹಾಗೆ ಇಂತಹ ಅನೇಕ ರೇಖಾಚಿತ್ರಗಳನ್ನು ಮಾಡಿದ್ದಾರೆ. ಈಗ ಈ ಚಿತ್ರದಲ್ಲಿಯೂ ತಾಯಿ ಮತ್ತು ಮಗು ಇದ್ದರೂ ಸಹಿತ, ರೇಖೆಗಳು ಇಲಲಿಯೂ ಪೂರ್ಣಗೊಂಡಿಲ್ಲ ಆದರೂ ಈ ಚಿತ್ರದ ಶೈಲಿಯೇ ಬೇರೆಯಾಗಿದೆ. ಈ ಮಹಿಳೆಯೂ ಕೂಡ ತನ್ನ ಮಗುವನ್ನು ಬೆನ್ನಿಗೆ ಜೋಳಿಗೆ ಕಟ್ಟಿಕೊಂಡು ಹೊರಡಲು ಸಿದ್ಧವಾಗಿದ್ದಾಳೆ. ಈ ಮಹಿಳೆಯ ಮುಖವು ಚೌಕಾಕಾರದಲ್ಲಿದ್ದು ಕಂಡುಬರುತ್ತದೆ. ಆಕೆಯ ಎಡಗಡೆಯ ಕಿವಿಯು ದೊಡ್ಡದಾಗಿಯೂ ಅದಕ್ಕೆ ತಕ್ಕಂತೆ ಕಿವಿ ಓಲೆಯು ಇನ್ನೂ ದೊಡ್ಡದಾಗಿ ಕಂಡುಬರುತ್ತದೆ ಇನ್ನೊಂದು ಕಿವಿಯ ಬದಿಗೆ ಇರುವಂತಹ ತನ್ನ ಕೇಶಗಳನ್ನೆಲ್ಲ ಕಿವಿ ಕಾಣದ ಹಾಗೆ ಬಾಚಿಕೊಂಡು ಅದಕ್ಕೆ ಅದರದೆ ಆದಂತಹ ಒಂದು ರೂಪವನ್ನು ಕೊಟ್ಟಿದ್ದಾಳೆ. ನಂತರ ಆಕೆಯ ಮೊಳಕಾಲಿನವರೆಗೆ ಮಾತ್ರ ಬಟ್ಟೆ ಹಾಕಿದ್ದು ಸೊಂಟಕ್ಕೆ ಇನ್ನೊಂದು ಬಟ್ಟೆಯನ್ನು ಕಟ್ಟಿಕೊಂಡಿದ್ದಾಳೆ. ನಂತರ ಒಂದು ಕೈ ಹಿಂದಕ್ಕೆ ಇನ್ನೊಂದು ಕೈ ಮುಂದಕ್ಕೆ ಮಾಡಿಕೊಂಡು ಸಿದ್ಧಳಾಗಿ ನಿಂತಿದ್ದಾಳೆ.

ತಾಯಿ ಮತ್ತು ಮಗು:

ಈ ರೇಖಾಚಿತ್ರದಲ್ಲಿ ತಾಯಿ ಮತ್ತು ಮಗು ಇದ್ದು, ಇದರ ಒಂದು ಪರಿಕಲ್ಪನೆಯೆಂದರೆ ಒಂದು ಮನೆಯ ಮುಂದೆ ತನ್ನ ಮಗುವನ್ನು ಹೊತ್ತಕೊಂಡು ಮಗುವಿನ ಮುಖ ತಾಯಿ, ತಾಯಿ ಮುಖ ಮಗು ನೋಡುತ್ತಿರುವ. ಈ ದೃಶ್ಯವು ಮಗುವಿಗೆ ಏನೋ ಹೇಳುತ್ತಿರುವ ಹಾಗೆ ಇಲ್ಲವೇ ತನ್ನ ಮುದ್ದು ಕಂದಮ್ಮನ ಮುಖ ನೋಡಿ ಆನಂದ ಪಡುತ್ತಿರುವಳು ಗೊತ್ತಿಲ್ಲ, ನಂತರ ಆ ತಾಯಿಯ ಮಗುವನ್ನು ತನ್ನ ಮನೆಯ ಮುಂದೆ ಹೊತ್ತುಕೊಂಡು ಹೊರಗಡೆಯಿಂದ ಬರುವ ತನ್ನ ಗಂಡನ ದಾರಿ ಕಾಯುತ್ತಿರುವಳೊ ಹಾಗೆ ಅಲಂಕಾರ ಮಾಡಿಕೊಂಡು ಗಂಡನನ್ನು ಮಗುವಿನೊಂದಿಗೆ ಬರಮಾಡಿಕೊಂಳ್ಳಲು ನಿಂತಿರುವ ಹಾಗಿದೆ. ಆಕೆಯ ಬಟ್ಟೆಯು ತುಂಬಾ ಚೆನ್ನಾಗಿ ರೇಖೆಗಳಿಂದ ಅಲಂಕರಿಸಿದ್ದು. ಮೊಳಕಾಲಿನಿಂದ ಸೊಂಟದವರೆಗೆ ಒಂದೇ ರೇಖೆಯಿಂದ ಎಲ್ಲಿಯೂ ನಿಲ್ಲದೆ, ರಚಿತವಾಗಿದೆ. ಆಕೆಯ ಕೊರಳಿಗೆ ಆಕೆಯು ದುಪ್ಪಟ್ಟಾ ಹಾಕಿಕೊಂಡು ಅದರ ಎರಡು ಕೊನೆಯ ಅಂಚುಗಳನ್ನು ಎಡಗೈ ಮತ್ತು ಬಲಗೈಯಿಂದ ಮುಂದಕ್ಕೆ ತಗೆದುಕೊಂಡು ನಿಂತಿದ್ದಾಳೆ ಮನೆಯು ಕೂಡ ಚೆನ್ನಾಗಿ ಇದೆ. ಅಲ್ಲದೆ ಅಲಂಕೃತವಾಗಿದೆ.

ಮಾತಿನಲ್ಲಿ ನಿರತರಾಗಿರುವ ಮಹಿಳೆಯರು:

ಈ ರೇಖಾಚಿತ್ರವು ಇಬ್ಬರು ಮಹಿಳೆಯರು ಮನೆಯ ಮುಂದೆ ನಿಂತುಕೊಂಡು ಯಾವುದೊ ವಿಷಯದ ಕುರಿತು ಮಾತನಾಡಿಕೊಂಡು ನಿಂತಿದ್ದಾರೆ. ಅವರ ಹಾವ-ಭಾವಗಳು ನೊಡಲಿಕ್ಕೆ ತುಂಬಾ ಸುಂದರವಾಗಿದ್ದು, ಅವರು ಹಾಕಿಕೊಂಡಿರುವ ಬಟ್ಟೆಯ ಸೆರಗಿನ ನೆರಿಗೆಗಳು ತಮ್ಮ ಎಡಗೈಯಿಂದ ಹಿಡಿದುಕೊಂಡು ಇಬ್ಬರು ತಲೆಗೆ ತುರುಬಿನ ಜಡೆಯನ್ನು ಹಾಕಿಕೊಂಡು ಅಲಂಕಾರ ಮಾಡಿಕೊಂಡಿದ್ದಾರೆ. ಹಾಕಿಕೊಂಡಿರುವ ಕುಬುಸವನ್ನು ಸಹಿತ ತುಂಬಾ ಡಿಸೈನ್‌ಗಳಿಂದ ತುಂಬಿದೆ. ಕಿವಿಗೆ ದೊಡ್ಡದಾದ ಓಲೆಗಳು ಹಾಕಿಕೊಂಡಿರುತ್ತಾರೆ. ಹೀಗೆ ಈ ಸಂಯೋಜನೆ ಚಿತ್ರವು ನೋಡಲು ಸುಂದರವಾಗಿದೆ.

ಮುಖವಾಡಗಳ ಬದುಕು:

ಈ ರೇಖಾಚಿತ್ರವು ಹಲವಾರು ಆಯಾಮಗಳಿಂದ ಕೂಡಿರುವ ಮಹಿಳೆಯರ ಮುಖವಾಡಗಳು ಅನೇಕ ರೀತಿಯ ಬದಲಾವಣೆಗಳನ್ನು ಹೊಂದಿವೆ. ಮೊದಲನೆಯ ಒಂದು ಸಾಲಿನಲ್ಲಿ ಎಂಟು ಮುಖಗಳನ್ನು ಹೊಂದಿದ್ದು ಒಂದು ಇನ್ನೊಂದರ ಹಾಗೆ ಇಲ್ಲ. ಎಲ್ಲವೂ ಬೇರೆ ಬೇರೆಯಾಗಿದ್ದು ಅದೇ ತೆರನಾಗಿ ಇನ್ನೂಳಿದ ಈ ಎರಡು ಸಾಲುಗಳಲ್ಲಿಯೂ ಕೂಡ ದೃಶ್ಯಗಳು ತುಂಬಾ ವಿಚಿತ್ರವಾಗಿವೆ. ನೇರವಾದ ರೇಖೆಗಳು ಮತ್ತು ವಕ್ರವಾದ ರೇಖೆಗಳು ಸಹಿತ ಇದ್ದು, ಎಲ್ಲವೂ ಸುಂದರವಾಗಿ ಇದ್ದು, ಕಲಾವಿದರು ಹೇಳಿದಂತೆ, ಹೆಚ್ಚು ವಕ್ರರೇಖೆಗಳು ಸುಂದರವಾಗಿ ಇರುವುದು ಆದರೆ ಇಲ್ಲಿ ಎರಡು

ರೇಖೆಗಳಿಂದ ರಚಿತವಾಗಿದೆ. ಈ ಒಟ್ಟು ಮುಖವಾಡಗಳು ಭಾವನಾತ್ಮಕವಾದ ಸೌಂದರ್ಯವನ್ನು ಹೊಂದಿದೆ.

ಜೊತೆಯಲ್ಲಿ ಕುಳಿತಿರುವ ಗಿಳಿಗಳು:

ಈ ದೃಶ್ಯವು ಎರಡು ಗಿಳಿಗಳು ಯಾವುದೊ ಒಂದು ಬಳ್ಳಿಯಲ್ಲಿ ಕುಳಿತುಕೊಂಡಿವೆ. ಒಂದು ಗಿಳಿಯು ಆತುರತೆಯಿಂದ ಹಿಂದಕ್ಕೆ ತಿರುಗಿ ನೋಡುತ್ತದೆ. ಇನ್ನೊಂದು ಅದರ ಮೇಲೆ ಕುಳಿತುಕೊಂಡು ಇನ್ನೊಂದು ಗಿಳಿಯನ್ನು ನೋಡುತ್ತಿದೆ. ಆ ಬಳ್ಳಿಯ ತುಂಬೆಲ್ಲ ಎಲೆಗಳು ತುಂಬಿವೆ. ಅವುಗಳ ಮಧ್ಯೆ ಈ ಜೋಡಿ ಗಿಳಿಗಳು ಕುಳಿತುಕೊಂಡಿರುವ ಚಿತ್ರ ಇದಾಗಿದೆ.


ಮಗುವಿಗೆ ಹಾಲುಣಿಸುತ್ತಿರುವ ತಾಯಿ:

ಈ ಎರಡು ಚಿತ್ರವು ತಾಯಿ ಮತ್ತು ಮಗುವಿನ ನಡುವೆ ಇರುವ ಸಂಬಂಧ ಕುರಿತು ಹೇಳಲಾಗುತ್ತದೆ. ತಾಯಿಗೆ ತನ್ನ ಕರುಳಿನ ಕುಡಿಗಳು ಎಷ್ಟೆ ದೊಡ್ಡವರಾದರು ಸಹಿತ ಚಿಕ್ಕವರಾಗಿಯೇ ಕಾಣುತ್ತಾರೆ. ಆ ತಾಯ್ತನದ ಕರಳು ಬಳ್ಳಿಯೇ ಹಾಗೆ ಅಲ್ಲದೇ ಆ ಮಗು ತಾಯಿಯನ್ನು ಎಷ್ಟೆ ಬೈದರು ಅವಮಾನಿಸಿದರು ಸಹಿತ ಆ ತಾಯಿಗೆ ತನ್ನ ಪ್ರೀತಿಯ ಮುಂದೆ ಯಾವುದು ಅಲ್ಲ ಅನಿಸುತ್ತೆ. ಈ ಚಿತ್ರಗಳಲ್ಲಿ ಸಹಿತ ತನ್ನ ಮಗುವನ್ನು ಮಡಿಲಿನಲ್ಲಿ ಇರಿಸಿಕೊಂಡು ಮಗುವಿನ ಮುಖವನ್ನು ನೋಡುತ್ತಾ ಕುಳಿತುರುವುದಾದರೆ ಇನ್ನೊಂದು ಚಿತ್ರದಲ್ಲಿ ತನ್ನ ಮನೆಯ ಬಾಗಿಲಿನ ಮುಂದೆ ಕುಳಿತುಕೊಂಡು ಮಗುವಿಗೆ ಹಾಲು ಕುಡಿಸುತ್ತಿರುವ ಈ ದೃಶ್ಯಗಳು ತಾಯಿಯ ಪ್ರೀತಿ, ವಾತ್ಸಲ್ಯ, ಮಮತೆಯ ಮುಂದೆ ಬೇರೆ ಯಾವುದು ಇಲ್ಲ ಎನ್ನುವುದು ಸೂಚಿಸುತ್ತದೆ ಈ ಐದು ಚಿತ್ರಗಳು ಸರಣಿ ರೇಖಾಚಿತ್ರಗಳಾಗಿವೆ.

ಕಲಾವಿದರಾದ ಶ್ರೀ ಎಂ. ಆರ್. ಬಾಳೀಕಾಯಿಯವರು ಅನೇಕ ರೇಖಾಚಿತ್ರಗಳನ್ನು ಬಿಡಿಸಿದ್ದಾರೆ. ಆದರೆ ಎಲ್ಲವನ್ನು ಅಧ್ಯಯನ ವ್ಯಾಪ್ತಿಗೆ ತಂದುಕೊಳ್ಳಬೇಕಾಗಿದೆ. ಅಧ್ಯಾಯಕ್ಕೆ ಬೇಕಾಗುವಷ್ಟು ರೇಖಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಅಲ್ಲದೇ ಇವುಗಳನ್ನೇ ನೋಡಿದ ಮಾದರಿಯಲ್ಲಿ ಎಷ್ಟು ಇರಬಹುದು ಎನ್ನುವುದನ್ನು ಅವರ ರೇಖೆಗಳಲ್ಲಿ ಅಲ್ಲದೆ ಹೆಚ್ಚಾಗಿ ಇವರು ಚಿತ್ರ ರಚಿಸಿದ ಮುಖ ಚಿತ್ರ, ಕಲಾಕೃತಿಗಳಲ್ಲಿ ಕಾಣಬಹುದು. ಕಾರಣ ಕೇಳಿದಾಗ ನಮ್ಮ ದೇಹಕ್ಕೆ ಮುಖ್ಯವಾಗಿ ಇರವುದು ಶಿರ, ಅದಕೋಸ್ಕರ ಹೆಚ್ಚಾಗಿ ಶಿರಕ್ಕೆ ಮಹತ್ವ ಕೊಟ್ಟಿದ್ದಾರೆ ಎಂದು ಒಟ್ಟಾರೆ ಅವರು ರಚಿಸಿದ ರೇಖಾ ಚಿತ್ರಗಳಿಂದ ತಿಳಿದುಬರುತ್ತದೆ.















15-05-05
M.R.B.




M.R. Balikai
30 07 2009






ನಿಮ್ಮ ಬಂಕ್ಕೆ ನಾವಿದ್ದೇವೆ
120 ಕೋಟಿ ಜನರು
ಭಾರತಮಾತೆಯ
ಮಕ್ಕಳು







M.R.B. 16-10-2006


M.R. Balikai
31-07-09


M.R.Balikai






















M.R. Balikai 30-07-09





ವರ್ಣ ಚಿತ್ರಗಳು :

ವರ್ಣ ಚಿತ್ರಗಳಿಗೆ ತುಂಬ ಪ್ರಾಚೀನವಾದ ಇತಿಹಾಸವಿದೆ. ಕ್ರಿ.ಪೂ.ಕ್ಕಿಂತ ಮೊದಲು ಗುಹೆಗಳಲ್ಲಿ ಆದಿಮಾನವರಿಂದ ರೇಖಾ ಚಿತ್ರಗಳ ಮತ್ತು ವರ್ಣಚಿತ್ರಗಳ ರಚನೆ ಆಗಿವೆ. ಮುಂದುವರೆದು ವರ್ಣಚಿತ್ರ ಕಲೆ ಧಾರ್ಮಿಕ ಸಾಮಾಜಿಕ ಮತ್ತು ರಾಜಾಶ್ರಯವನ್ನು ಪಡೆದದ್ದು ಅಗ್ರಗಣ್ಯ. ಮಾಧ್ಯಮವಾಗಿ ಮೇಳೈಸಿರುವುದನ್ನು ಈ ಹಿಂದಿನ ಕಲಾ ಚರಿತ್ರೆಯ ದಾಖಲೆಗಳು ಹೇಳುತ್ತವೆ. ನಂತರದ ದಿನಗಳಲ್ಲಿ ಅದು ಅಂತರಂಗ ಮತ್ತು ಬಹಿರಂಗದ ಸ್ವರೂಪವನ್ನು ತನ್ನಿಂದ ತಾನಾಗಿಯೇ ಕಾಲಾನುಕ್ರಮವಾಗಿ ಬದಲಾವಣೆಯಾಗುತ್ತ ಕಲೆ ಎಂದರೇನು? ಎಂಬ ಪ್ರಶ್ನೆಯನ್ನು ಹುಟ್ಟು ಹಾಕಿದಲ್ಲದೇ ಯಾವುದೇ ಬಗೆಯ ಸ್ಪಂದನೆಯನ್ನು ನೀಡಿಲ್ಲವೆಂಬುದಕ್ಕೆ ಇಂದಿನ ಕಲಾ ಸೃಷ್ಟಿಗಳು ಕಾರಣವೆಂದು ಹೇಳಬಹುದು.

ಚಿತ್ರ ಒಂದು ದೇಶ ಬದ್ಧ ಕಲೆ ಎಂದು ಗುರುತಿಸಲಾಗುತ್ತದೆ. ಅದರಂತೆಯೇ ಸಂಗೀತ ನಾಟಕಗಳನ್ನು ಕಲಾಬದ್ಧ ಎಂದೂ ಗುರುತಿಸುತ್ತೇವೆ. ಚಲನರಹಿತವಾದ ಚಿತ್ರ ದೇಶಬದ್ಧ ಕಲೆಗಿಂತ ಪ್ರಭಾವಿ ಎಂಬುವುದನ್ನು ಪ್ರಪಂಚದಲ್ಲಿನ ಪ್ರಮುಖ ಚಿತ್ರ ಶಿಲ್ಪ ಮತ್ತು ವಾಸ್ತು ನೆಲೆಗಳನ್ನು ಆಧರಿಸಿ ಹೇಳಬಹುದಾಗಿದೆ. ಗ್ರೀಕ್ ಕವಿ ಪ್ಲೂಟಾರ್ಕ ಅದಕ್ಕೆಂದೆ ಚಿತ್ರವನ್ನು ನಿಶಬ್ಧವಾದ ಕವಿತೆ ಎಂದು ವರ್ಣಿಸುತ್ತಾನೆ. ಒಂದು ಚಿತ್ರ ಒಬ್ಬೊಬ್ಬ ನೋಡುಗನಿಗೆ ವೈವಿಧ್ಯಮಯ ಅನುಭವವನ್ನು ನೀಡಬಹುದಾದ ಸಾಧ್ಯತೆಗಳೇ ಹೆಚ್ಚು ಅದರಲ್ಲೂ ಇತ್ತೀಚಿಗೆ ಆಧುನಿಕ ಚಿತ್ರಗಳ ಒಲವು ವಿಭಿನ್ನ ಅನುಭವಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿವೆ ಎಂಬುವುದನ್ನು ಹೇಳುವುದಕ್ಕಿಂತ ಮುಂಚೆ ಪಿಕಾಸೋವಿನ ಒಂದು ಮಾತು ಪರಿಶೀಲನಾರ್ಹವಾಗುತ್ತದೆ. ಒಂದು ಕಲಾಕೃತಿ ತನ್ನ ವರ್ತಮಾನದಲ್ಲಿ ಸಂಪೂರ್ಣವಾಗಿ ಜೀವಿಸದೇ ಆ ಪ್ರಸ್ತುತವಾದದಲ್ಲಿ ಅದನ್ನು ಗಮನಿಸಲೇಬಾರದು. ಆಧುನಿಕ ಕಲಾಕೃತಿಗಳ ಭರಾಟೆಯ ಭರದಲ್ಲಿ ಎಷ್ಟೋ ಕಲಾಕೃತಿಗಳು ಪಿಕಾಸೋವಿನ ಸಂದೇಶವನ್ನು ಮುಟ್ಟದೇ ಇರುವುದು ವಿಶೇಷವಾಗಿ ಕಾಣಬಹುದು. ಆದರೆ ಬಾಳೀಕಾಯಿ ಅವರ ಕಲಾಕೃತಿಗಳು ಪಿಕಾಸೋವಿನ ಕಲಾಕೃತಿಗಳಿಗೆ ಸಮೀಪವಾಗಿರುವಂತೆ ಸಂಶೋಧನೆಯಿಂದ ಕಂಡುಬರುತ್ತದೆ.

ನಮ್ಮ ಪ್ರಾಚೀನ ಚಿತ್ರಕಲೆಯ ಸ್ವರೂಪವು ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾ ಶೈಲಿಯನ್ನು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಆಗಾಗ ಪುನರಾವರ್ತಿಸಿಕೊಳ್ಳುತ್ತೇವೆ. ನಮ್ಮ ನಡುವಿನ ಆಧುನಿಕೋತ್ತರ ಕಲಾ ಚಳುವಳಿಯಲ್ಲಿ ಪ್ರಕಟಗೊಳ್ಳುತ್ತಿರುವ ಚಿತ್ರಗಳಲ್ಲಿ ಪ್ರಾಚೀನ ಎನ್ನುವಂತಹ ಸಂಪ್ರದಾಯಿಕ ರೂಪಾಂಶಗಳು ವಿಕೃತತೆಯ ರೂಪದಲ್ಲಿ ಆಧುನಿಕ ಸಂವೇದನೆಗಳನ್ನು ಹೊತ್ತು ಬರುತ್ತಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಚಿತ್ರಕಲೆಯ ರಚನೆಗಳಲ್ಲಿ ಕಾಣಬಹುದಾಗಿದೆ.

ಕಲಾವಿದರು ನಿರ್ಮಿಸಿದ ಕಲಾಕೃತಿಯ ಸಂಯೋಜನೆಯಲ್ಲಿ ತಮ್ಮ ಮೇಲಾದ ಆಕಾರ ಸೃಷ್ಟಿಯಲ್ಲಿ ರೇಖೆಗಳು ಮತ್ತು ವರ್ಣಗಳು ಆಟವಾಡುತ್ತವೆ. ಕಲಾಕೃತಿಯೊಂದು ತನ್ನ ಇನ್ನಿತರ ಅಂಶಗಳಿಗಿಂತಲೂ ವರ್ಣ ಸಂಯೋಜನೆಯ ತೀವ್ರತೆಯಿಂದ ನೋಡುಗರ ಪ್ರಜ್ಞೆಯನ್ನು ಕ್ಷಣ ಮಾತ್ರದಲ್ಲಿ ಆಕರ್ಷಿಸಬಲ್ಲದು. ನಮ್ಮ ಪಂಚೇಂದ್ರಿಯಗಳಲ್ಲಿ ಕಣ್ಣು ಅತ್ಯಂತ ದೃಶ್ಯ ಸಂವೇದನಾಶೀಲತೆಯನ್ನು ಹೊಂದಿದೆ. ಕಲಾವಿದನೊಬ್ಬನು ತನ್ನ ಅಭಿವ್ಯಕ್ತಿಗೆ ಆರಿಸಿಕೊಳ್ಳುವ ಬಣ್ಣಗಳ ಛಾಯೆಗಳು ಅವನು ನೋಡುವ ಅನುಭವ. ಅಭ್ಯಾಸ ಮನಸ್ಸಿನ ಪಕ್ವತೆ ಭಾವನೆಗಳ ತೀವ್ರತೆಯನ್ನು ಅವಲಂಬಿಸಿರುತ್ತವೆ[೧೨] ಎಂಬ ಮಾತು ಕಲಾವಿದರಿಗೆ ತುಂಬಾ ಅನ್ವಯಿಸುತ್ತದೆ.

ವರ್ಣಗಳು ತಮ್ಮದೇ ಆದ ಸಾಂಕೇತಿಕ ಅರ್ಥವನ್ನು ಹೊಂದಿದೆ. ಒಂದೊಂದು ಬಣ್ಣವು ಒಂದೊಂದು ಬಗೆಯ ಭಾವೋದ್ವೇಗವನ್ನು ಮನಸ್ಸಿನಲ್ಲಿ ಮೂಡಿಸುತವೆದೆ. ಬಣ್ಣ ಆಕಾರಗಳು ಸೃಷ್ಟಿಯ ಅತ್ಯವಶ್ಯಕವಾದ ಅಂಶಗಳು ಬಣ್ಣಗಳ ವಿವಿಧ ಛಾಯೆಗಳು ಕಲಾವಿದನ ಭಾವೋದ್ರೇಕಗಳೊಂದಿಗೆ ಹೊಂದಿಕೊಳ್ಳಬಲ್ಲವು. ಕೆಂಪು ಆಕ್ರೋಶಕ್ಕೆ ಹಳದಿ ಸಂತೋಷಕ್ಕೆ, ನೀಲಿ ಹಾತೊರಯುವಿಕೆಗೆ,[೧೩] ಈ ಬಣ್ಣಗಳ ಗುಣಲಕ್ಷಣಗಳನ್ನು ಗುರುತಿಸಲಾಗುತ್ತದೆ. ಹೀಗಿ ಕಲಾವಿದನು ತನ್ನ ಕಲಾಕೃತಿಗಳಲ್ಲಿ ವರ್ಣ ಸಂಯೋಜನೆಯ ಪ್ರಖರತೆ ಹಾಗೂ ನೆರಳು ಬೆಳಕುಗಳ ವಿನ್ಯಾಸಕ್ಕನುಸಾರವಾಗಿ ಭಾವನೆಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ದುಡಿಸಿಕೊಳ್ಳುತ್ತೇವೆ ಎಂಬುವುದು ಶ್ರೀ ಎಂ. ಆರ್. ಬಾಳೀಕಾಯಿ ಅವರ ಅಭಿಪ್ರಾಯಗಳಾಗಿರುತ್ತವೆ ಎಂಬುವುದನ್ನು ತಿಳಿಯಬಹುದಾಗಿದೆ.

ಕಲೆ ಎಲ್ಲರನ್ನು ಕೈ ಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬುದು ಲೋಕ ಪ್ರಸಿದ್ಧ ಗಾದೆಯಾಗಿದೆ. ಈ ಮಾತು ಕಲೆಯ ಮಹತ್ವದ ವ್ಯಾಪ್ತಿಯ ವೈಶಿಷ್ಟ್ಯವನ್ನು ಮತ್ತು ಅದ್ಭುತ ಪರಿಣಾಮಕಾರಿ ತತ್ವವನ್ನು ಶಕ್ತಿಯುತವಾಗಿ ಅಭಿವ್ಯಕ್ತಿಸುತ್ತದೆ. ಈ ಕಲೆ ವ್ಯಕ್ತಿಗಳಲ್ಲಿ ಬಡವ, ಬಲ್ಲಿದರೆಂಬ ಆಳರಸರೆಂಬ, ಸುಂದರ, ಅಸುಂದರರೆಂಬ ಯಾವ ತಾರತಮ್ಯತೆಯನ್ನು ಮಾಡುವುದಿಲ್ಲ. ಒಬ್ಬೊಬ್ಬ ವ್ಯಕ್ತಿಯು ತಾನು ತನ್ನ ಕಲೆಯ ಅಭಿವ್ಯಕ್ತಿಗಾಗಿ ಆರಿಸಿಕೊಂಡ ಮಾಧ್ಯಮ ಬೆಳೆಸಿಕೊಂಡ ಪ್ರವೃತ್ತಿ ಆಧರಿಸಿದ ವೃತ್ತಿ ಗ್ರಹಿಸಿಕೊಂಡ ಅನುಭವ. ಪ್ರಪಂಚ ರೂಢಿಸಿಕೊಂಡ ಅಭ್ಯಾಸ ಕ್ರಮ ಹೊಸತನಗಳ ಮೂಲಕ ಕಲಾ ವೈಶಿಷ್ಟ್ಯವನ್ನು ಮೆರೆಯುತ್ತಾರೆ ಎಂಬುವುದು ಸಂಶೋಧನಾತ್ಮಕವಾಗಿ ಅಭ್ಯಾಸ ನಡೆಸಿರುವುದರಿಂದ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಶ್ರೀ ಎಂ. ಆರ್. ಬಾಳೀಕಾಯಿಯವರು ರಚಿಸಿದ ಕಲಾಕೃತಿಗಳಲ್ಲಿ ಭಾರತೀಯ ಸಂಪ್ರದಾಯದ ವಿವಿಧ ಮಾದರಿಯ ಸಂದೇಶಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸಿರುವುದು ಅವರ ಕಲಾಕೃತಿಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನ ನಡೆಸಿರುವುದರಿಂದ ತಿಳಿದುಕೊಳ್ಳಬಹುದಾಗಿದೆ.

ಇಂದು ಪ್ರಾಚೀನ ಚಿತ್ರಕಲೆಯ ವಿವರಣೆ ಹೇರಳವಾಗಿ ಇಲ್ಲದಿದ್ದರು ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾಶೈಲಿಯನ್ನು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಆಗಾಗ ಪುನರಾವರ್ತನೆಯಾಗುವುದನ್ನು ಸಾಮಾನ್ಯವಾಗಿ ನಾವು ಹಲವಾರು ಕಲಾವಿದರ ಕಲಾಕೃತಿಗಳಲ್ಲಿ ಕಂಡಿದ್ದೇವೆ. ಇನ್ನು ಸರಳವಾಗಿ ಅರ್ಥೈಸಬೇಕಾದರೆ ಅತ್ಯಂತ ಪ್ರಾಚೀನ ಪ್ರಾಗೈತಿಹಾಸದ ಚಿತ್ರಕಲೆಯ ಕೆಲವು ರೂಪಾಂಶಗಳು ಇಂದಿನ ಆಧುನಿಕ ಕಲಾಕೃತಿಗಳಲ್ಲಿ ಕಂಡುಬರುತ್ತವೆ. ಇದೇ ರೀತಿಯಾಗಿ ಗ್ರಾಮೀಣ ಪರಿಸರದ ಜನಪದ ಕಲೆಗಳ ಕೆಲವು ದೃಶ್ಯಗಳು ಕೂಡ ಇಂದಿನ ಆಧುನಿಕ ಕಲೆಯಲ್ಲಿ ಕಂಡುಕೊಳ್ಳುವುದರ ಜೊತೆಗೆ ಆ ಕಾಲದ ಪುನರಾರ್ತನೆ ಇಂದಿನ ಕಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ನಡೆದಿದೆ. ಹೀಗೆ ತಮ್ಮನ್ನು ತಾವು ತೊಡಗಿಸಿಕೊಂಡು ಶ್ರೀ ಎಂ. ಆರ್. ಬಾಳೀಕಾಯಿ ಅವರು ಅನೇಕ ಕಲಾಕೃತಿಗಳನ್ನು ರಚಿಸಿರುವುದು ಕಂಡು ಬರುತ್ತದೆ.

ಲಲಿತಕಲೆಗಳಲ್ಲೊಂದಾದ ಚಿತ್ರಕಲೆ ತಕ್ಷಣಕ್ಕೆ ಕಣ್ಣಿಗೆ ಸೌಂದರ್ಯ ನೀಡುತ್ತದ. ನಮ್ಮದೇಯಾದ ಭಾವ ಪ್ರಪಂಚವನ್ನು ಸೇರಿಕೊಳ್ಳುತ್ತದೆ. ಅಂತರಂಗದಲ್ಲಿ ಅದರ ಬಾಹ್ಯ ಸೌಂದರ್ಯ ಮತ್ತು ಆಂತರಿಕ ಅರ್ಥಗಳು ಬಹುಕಾಲದವರೆಗೆ ಉಳಿದುಬಿಡುತ್ತವೆ. ಈ ದೃಶ್ಯ ಪ್ರಪಂಚವೆಲ್ಲ ಸೃಷ್ಟಿಕರ್ತನ ಒಂದು ಚಿತ್ರಕಲಾ ಶಾಲೆಯೇ ಆಗಿದ್ದು, ನಾವು ಕಣ್ಣು ತೆರೆದರೆ ಸಾಕು ಚಿತ್ರವೊಂದು ಕಣ್ಣು ಮುಂದೆ ಬಂದು ನಿಂತುಬಿಡುತ್ತದೆ. ಚಿತ್ರಕಲಾವಿದನು ರೇಖೆ ಹಾಗೂ ಬಣ್ಣಗಳಿಂದ ಒಂದು ವಿಶಿಷ್ಟವಾದ ವಸ್ತುವನ್ನು ಅನುಭವವನ್ನು ನಮ್ಮ ಮುಂದಿಟ್ಟು ಅಚ್ಚರಿಗೊಳಿಸುತ್ತಾನೆ. ಕೆಲವು ಚಿತ್ರಗಳು ನಮ್ಮನ್ನು ತನ್ಮಯಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ.[೧೪]

ಇಂದು ವರ್ಣ ಕಲಾಕೃತಿಗಳನ್ನು ನಾವು ರಾಜರವಿವರ್ಮನಿಂದಲೇ ಹೆಸರಿಸಬಹುದು ಇವರು ಹೆಚ್ಚಾಗಿ ವಾಸ್ತವ ಸಂಪ್ರದಾಯದ ಚಿತ್ರಗಳ ಪ್ರಭಾವದಿಂದ ಅನೇಕ ವರ್ಣಕಲಾಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಪಾಶ್ಚಾತ್ಯರ ಪ್ರಭಾವವನ್ನು ಅಳವಡಿಸಿಕೊಂಡಿರುವುದನ್ನು ನಾವು ಕಾಣಬಹುದು. ಅಲ್ಲದೇ ಶ್ರೀ ಎಸ್. ಎಂ. ಪಂಡಿತ ವರ್ಣಶಿಲ್ಪಿ ಕೆ. ವೆಂಕಪ್ಪನವರನ್ನು ವರ್ಣ ಕಲೆಯ ಮಾಂತ್ರಿಕರೆಂದು ಹೇಳಬಹುದು. ಇವರೆಲ್ಲರೂ ಹೆಚ್ಚಾಗಿ ವಾಸ್ತವ ರೀತಿಯಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಶ್ರೀ ಎಂ.ಆರ್. ಶ್ರೀ ಎಂ. ಆರ್. ಬಾಳೀಕಾಯಿಯವರು ಕರ್ನಾಟಕ ಸಮಕಾಲೀನ ಕಲೆಯ ಹೃದಯ ಪ್ರಧಾನ ಕಲಾವಿದರು, ಬೇರೆ ಬೇರೆ ಶೈಲಿಯಲ್ಲಿ ತಮ್ಮ ಛಾಪು ಮೂಡಿಸಿ ಒಂದೇ ಶೈಲಿಗೆ ಒಳಗಾಗದೇ ಭಾವಚಿತ್ರ, ನಿಸರ್ಗಚಿತ್ರಗಳ ರಚನೆಯಲ್ಲಿ ಅವರ ಕುಂಚದ ಸೆಳೆತಗಳು ವಿಸ್ಮಯವನ್ನು ಹುಟ್ಟಿಸುತ್ತವೆ ಎಂಬುದು ತಿಳಿದುಬರುತ್ತದೆ.

ಜಲವರ್ಣ, ತೈಲವರ್ಣ ಮತ್ತು ಪೇಸ್ಟಲ್ ವರ್ಣಗಳಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದು ತಿಳಿದುಬರುತ್ತವೆ. ಅವರು ರಚಿಸುವ ವರ್ಣಗಾರಿಕೆಯ ಪ್ರಭಾವದಿಂದ ಇವರು ಹೆಚ್ಚು ನಿಸರ್ಗ ಚಿತ್ರಗಳನ್ನು ರಚಿಸಿದ್ದು ಕಂಡುಬರುತ್ತದೆ. ಜೊತೆಗೆ ಭಾವಚಿತ್ರ ಇವುಗಳಲ್ಲದೇ ಎಲ್ಲವನ್ನು ಕೂಡಿಸಿ ಕೋಲಾಜ್ ಕಲಾಕೃತಿಗಳನ್ನು ಮಾಡಿದ್ದಾರೆ. ಇಂದು ಇವರಿಗೆ ನಾಡಿನ ಎಲ್ಲ ಕಡೆಗೂ ಇನ್ನಿತರ ಕಲಾ ಚಟುವಟಿಕೆಗಳಿಗೆ ಆಹ್ವಾನಿತರನ್ನಾಗಿ ಕರೆಯಿಸುತ್ತಾರೆ. ಆದರೆ ಇದರ ಹಿಂದೆ ಉದ್ದೇಶಪೂರ್ವಕವಾಗಿ ಅವರನ್ನು ಬರಮಾಡಿಕೊಂಡು ಕಲಾ ಪ್ರಾತ್ಯಾಕ್ಷಿಕೆ ವಿಚಾರ ಸಂಕೀರ್ಣ ವಿದ್ಯಾರ್ಥಿಗಳಿಗೆ ಅನುಕೂಲಕ್ಕಾಗಿ ವಿನಂತಿಸಿಕೊಳ್ಳುತ್ತಾರೆ. ಆದರೆ ಶ್ರೀ ಎಂ. ಆರ್. ಬಾಳೀಕಾಯಿಯವರು ಯಾವುದೇ ತರಹದ ಸಂಕೋಚ ಮನೋಭಾವನೆಯನ್ನು ಇಟ್ಟುಕೊಳ್ಳದೆ ಆಹ್ವಾನ ನೀಡಿದ ಸ್ಥಳಕ್ಕೆ ಹೋಗುತ್ತಾರೆ. ಹೀಗೆ ಬಾಳೀಕಾಯಿಯವರ ಸಾರ್ಥಕತೆಯ ಬದುಕಿನ ವ್ಯಕ್ತಿತ್ವ ಇವರದಾಗಿದೆ ಎಂಬುದನ್ನು ಗಮನಿಸಬಹುದು.

ಶ್ರೀ ಎಂ. ಆರ್. ಬಾಳೀಕಾಯಿಯವರ ವರ್ಣ ಚಿತ್ರಗಳಲ್ಲಿ ಎರಡು ಭಾಗಗಳಾಗಿ ಅಧ್ಯಯನ ಮಾಡಿಕೊಂಡು ನಡೆಸಲಾಗಿದೆ.

೧) ಜಲವರ್ಣ

೨) ತೈಲವರ್ಣ

೧) ಜಲವರ್ಣ ಚಿತ್ರಗಳು :

ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದದ ಮೇಲೆ ಕೆಲವು ಇನ್ನೀತರ ವಸ್ತುಗಳ ಮೇಲೆ ಚಿತ್ರಿಸುತ್ತಾರೆ. ಹೆಸರೆ ಹೇಳುವ ಹಾಗೆ ಜಲ ಅಂದರೆ ನೀರು, ವರ್ಣ, ಎಂದರೆ ಬಣ್ಣ ಇದನ್ನು ನೀರಿನಲ್ಲಿ ಮಿಶ್ರಣ ಮಾಡಿ ರಚಿಸುವುದಕ್ಕೆ ಜಲವರ್ಣ ಚಿತ್ರಗಳು ಮತ್ತು ರೇಖಾಚಿತ್ರಗಳಿಗೆ (ಡ್ರಾಯಿಂಗ್) ಜಲವರ್ಣಗಳಿಂದ ಮುಕ್ತಾಯ ಸ್ಪರ್ಶ (Finishing Touches) ಗಳನ್ನು ಕೊಡಲಾಗುತ್ತೆ ಎಂಬುದನ್ನು ಲಿಯೋನಾರ್ಡೋ‌ಡಾಲ್ ಡಾವಿನ್ಸಿ ಅವರ ಅಸಂಖ್ಯಾತ ರೇಖಾಚಿತ್ರಗಳಿಂದ ತಿಳಿಯಬಹುದಾಗಿದೆ. ಇದಕ್ಕೆ ಬಳಸುವ ಕಾಗದವನ್ನು ಚಿಂದಿಯಾದ ಬಟ್ಟೆಯ ರುಬ್ಬಿದ ತಿರುಳನ್ನು ತನ್ನ ಬಂಡವಾಳವನ್ನಾಗಿಸಿಕೊಂಡಿರುವ ಒಂದು ಬಗೆಯ ಕಾಗದ, ಜಲವರ್ಣ ಮಾಧ್ಯಮಕ್ಕೆಂದೆ ವಿಶೇಷವಾಗಿ ತಯಾರಿಸಲ್ಪಡುವ ಈ ಕಾಗದವು ಸಾಕಷ್ಟು ತೂಕವನ್ನು ಹೊಂದಿರುವುದಷ್ಟೇ ಅಲ್ಲದೇ ಬಹಳ ನೀರಾದ ಜಲವರ್ಣವನ್ನು ಅದರ ಮೇಲೆ ಬಳಸಿದ್ದಾಗ್ಯೂ ಶಿಥಿಲಗೊಳ್ಳುವುದಿಲ್ಲ ಕೈ ಕಾಗದ (Hand Made paper) ಎಂದು ಕರೆಯಿಸಿಕೊಳ್ಳುವ ಈ ಬಗೆಯ ಕಾಗದದಲ್ಲಿ ಜಲದೊಂದಿಗೆ ವರ್ಣಗಳು ಬಳ ಪದರಗಳಿಗೆ ಇಳಿದು ಸ್ಥಿರವಾಗಿ ನಿಲ್ಲುವಂತಾಗುತ್ತದೆ[೧೫].

ಶ್ರೀ ಎಂ. ಆರ್. ಬಾಳೀಕಾಯಿಯವರ ಜಲವರ್ಣ ಕಲಾಕೃತಿಗಳಲ್ಲಿ ಭಾವಚಿತ್ರಗಳು, ನಿಸರ್ಗ ಚಿತ್ರಗಳು, ಭಿತ್ತಿ ಚಿತ್ರಗಳು, ಸ್ಥಿರಚಿತ್ರಗಳು ಮುಂತಾದವುಗಳನ್ನು ಹೆಸರಿಸಬಹುದು. ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಮಾಧ್ಯಮದಲ್ಲಿ ನಿಸರ್ಗಚಿತ್ರಗಳನ್ನು ಮತ್ತು ಭಾವಚಿತ್ರಗಳ ಜೊತೆಗೆ ಮಿಶ್ರ ಮಾಧ್ಯಮದ ಚಿತ್ರಗಳನ್ನು ರಚಿಸಿದ್ದು ಕಂಡುಬರುತ್ತದೆ. ಕಲಾವಿದರ ಅಧ್ಯಯನ ಕಾಲದಲ್ಲಿ ದಿನವು ನಿಸರ್ಗ ಚಿತ್ರಗಳನ್ನು ತಮ್ಮ ಜೊತೆಗೆ ವಿದ್ಯಾರ್ಥಿಗಳನ್ನು ಐತಿಹಾಸಿಕ ಸ್ಥಳಗಳಿಗೆ ಹಾಗೂ ಬೇರೆ ಬೇರೆ ಕಡೆ ಕರೆದುಕೊಂಡು ಹೋಗಿ ಒಂದು ವಾರದವರೆಗೂ ಇದ್ದು ಕಲಾಕೃತಿಗಳನ್ನು ಮಾಡಿಕೊಂಡು ಬರುತ್ತಿದ್ದರು ಉದಾ: ಹಂಪೆ, ಬಾದಾಮಿ, ಬೇಲೂರು, ಹಳೇಬೀಡು ಇತ್ಯಾದಿ ಸ್ಥಳಗಳೆಂದು ಅವರ ಕಲಾಕೃತಿಗಳನ್ನು ಅಧ್ಯಯನ ಮಡುವುದರಿಂದ ತಿಳಿದು ಬರುತ್ತದೆ.

ನಿಸರ್ಗವು ಎಂಥವರನ್ನು ಮಂತ್ರಮುಗ್ಧರನ್ನಾಗಿಸಿ ಬಿಡುತ್ತದೆ. ನಿಸರ್ಗ ಚಿತ್ರ ರಚನೆಗೆ ಬಳಸಿಕೊಂಡು, ಜಲವರ್ಣ, ಜಲವರ್ಣವೆಂಬುದು ಸರಳವಲ್ಲ. ಪಾರದರ್ಶಕ ವರ್ಣವಾದರೂ ಬಳಸುವಾಗ ಮಾತ್ರ ಎಚ್ಚರ ವಹಿಸಬೇಕು. ಕಾರಣ ಒಂದು ಸಾರಿ ನಾವು ವರ್ಣವನ್ನು ಬಳಸುವಾಗ ಹೆಚ್ಚು ಕಡಿಮೆ ಮಾಡಿದರೆ ಸರಿಪಡಿಸಲಾಗುವುದಿಲ್ಲ. ಆದರೆ ತೈಲವರ್ಣದಲ್ಲಿ ಬೇಕಾದ ಹಾಗೆ ಆಟವಾಡಬಹುದು. ಜಲವರ್ಣದಲ್ಲಿ ನಾವೇನೆ ಮಾಡಿದರೂ ಅದು ಅಂತಿಮವಾಗಿರುತ್ತದೆ. ಆದರೆ ಇದರಲ್ಲಿ ಬರುವ ನೈಜತೆಯ ಪರಿಣಾಮ ತೈಲವರ್ಣದಲ್ಲಿ ಬರಲು ಸಾಧ್ಯವಿಲ್ಲ. ಇದು ಪಾರದರ್ಶಕವಾಗಿ ಕಂಡರೂ ಚಿತ್ರದಲ್ಲಿ ವಿಶೇಷತೆಯನ್ನು ಮೂಡಿಸಬಲ್ಲ ಮಾಧ್ಯಮವಾಗಿದೆ. ಇಂತಹ ಹತ್ತು ಹಲವು ವಿಚಾರಗಳನ್ನು ಮಕ್ಕಳಿಗೆ ತಿಳಿಸುತ್ತ ಕೆಲವೊಂತು ವಿಚಾರವನ್ನು ತಾವು ಬಳಸಿಕೊಳ್ಳುತ್ತ ಚಿತ್ರಗಳನ್ನು ರಚಿಸುತ್ತಿದ್ದರು.

ನಿಸರ್ಗ ಚಿತ್ರಗಳು :

ನಿಸರ್ಗವು ಎಂಥವರನ್ನು ಮಂತ್ರ ಮುಗ್ಧರನ್ನಾಗಿಸಿ ಬೀಡುತ್ತದೆ. ನಿಸರ್ಗದಲ್ಲಿ ಮನುಷ್ಯನಿಗೆ ಅಂತಃಕರಣೆಯನ್ನು ತುಂಬುವ ಶಕ್ತಿ ಇದೆ. ಕಲಾವಿದನಾದವನು ಹೆಚ್ಚಾಗಿ ನಿಸರ್ಗದಿಂದಲೇ ಪ್ರಭಾವಿತಗೊಂಡಿರುತ್ತಾನೆ. ನಿಸರ್ಗವನ್ನು ಇಷ್ಟಪಡದ ಕಲಾವಿದನಿಲ್ಲ. ಪ್ರಪಂಚದಲ್ಲಿ ನಾವು ಕಾಣದ ಬಣ್ಣವಿಲ್ಲ, ಕಾಣದ ಆಕೃತಿಗಳಿಲ್ಲ. ಇವುಗಳೆಲ್ಲವೂ ಎಲ್ಲರಿಗೂ ಎಲ್ಲದರಲ್ಲೂ ಆಸಕ್ತಿ ಇರದು. ಅವರ ಭಾವನೆಗಳಿಗೆ ತಕ್ಕಂತೆ ಕಲಾಕೃತಿಗಳು ಹುಟ್ಟುತ್ತದೆ.

ನಿಸರ್ಗವು ಕಲಾವಿದನಿಗೆ ಪ್ರಭಾವ ಬೀರುವ ಉತ್ತಮ ಅಭ್ಯಾಸ ಮಾಡುವ ಮೊದಲ ಸಾಧನವಾಗಿದೆ. ಈ ನಿಸರ್ಗದಿಂದ ಹಾಗೂ ಜಲವರ್ಣ ಮಾಧ್ಯಮದಿಂದ ತುಂಬಾನೆ ಪ್ರಭಾವಿತರಾಗಿರುವ ಶ್ರೀ ಎಂ. ಆರ್. ಬಾಳೀಕಾಯಿ ಅವರು ಒಬ್ಬರಾಗಿದ್ದಾರೆ.

ಈ ಕಲಾಕೃತಿಯ ಒಂದು ಮುಖವನ್ನು ಹೊಂದಿದೆ ಅಂದರೆ ಶಿರಭಾವಚಿತ್ರವು ಎನ್ನಬಹುದು. ಆದರೆ ಕಲಾವಿದರು ಎಲ್ಲ ಮಾಧ್ಯಮದಲ್ಲಿಯೂ ಕೂಡ ಮನುಷ್ಯನ ಮುಖ ತಲೆ ಇವುಗಳನ್ನು ಇಟ್ಟುಕೊಂಡು ಹೆಚ್ಚಾಗಿ ಚಿತ್ರ ರಚಿಸಿರುವುದು ಕಂಡುಬರುತ್ತದೆ. ಇಲ್ಲಿ ಒಬ್ಬ ಮನುಷ್ಯನ ಮುಖಗಳು ಎಷ್ಟು ರೀತಿಯಾಗಿ ಇರುವುದು ಆ ಸೃಷ್ಟಿಕರ್ತ ದೇವರು ಹೇಗೆ ರೂಪಿಸಿದ್ದಾರೆ ಎನ್ನುವುದು ಸಹಿತ ಇಲ್ಲಿ ಕಾಣಬಹುದು. ಇವರಲ್ಲಿ ನೇರವಾದ ಬಣ್ಣಗಳನ್ನು ಅಂದರೆ ಪ್ರಥಮ ವರ್ಗದ ಬಣ್ಣಗಳಾದ ಕೆಂಪು, ಹಳದಿ, ಹಸಿರು, ಅಲ್ಲಲ್ಲಿ ಕಪ್ಪು, ನೀಲಿ, ಮಧ್ಯ ಮಧ್ಯ ಬಿಳಿ ವರ್ಣವನ್ನು ಲೇಪಿಸಿದ್ದಾರೆ. ಇದು ಕೂಡ ನಿಸರ್ಗದ ಒಂದು ಭಾಗವಾಗಿ ಕಾಣುತ್ತದೆ ಎಂಬುದನ್ನು ಚಿತ್ರವನ್ನು ವಿಮರ್ಶಾತಮ್ಮಕವಾಗಿ ಅಧ್ಯಯನದಿಂದ ತಿಳಿದುಬರುತ್ತದೆ. ಇಂತಹ ಚಿತ್ರವು ಒಂದು ವಿಶಿಷ್ಟವಾದ ರೀತಿಯ ಅಧ್ಯಯನದಿಂದ ಬೆಳಕಿಗೆ ಬಂದಿರುವುದು ಚಿತ್ರಕಲಾವಿದರ ಕೈಚಳಕವೆ ಎಂದು ಹೇಳಬಹುದಾಗಿದೆ.

ಕಲಾಕೃತಿಗಳ ವಿಶ್ಲೇಷಣೆ :

ಅಕ್ರ್ಯಾಲಿಕ್ ಮಾಧ್ಯಮದ ಚಿತ್ರಗಳು (ಜಲವರ್ಣ)

ಕಲಾ ಮಾಧ್ಯಮಗಳಲ್ಲಿ ಅಕ್ರ್ಯಾಲಿಕ್ ಮಾಧ್ಯಮವು ಸಹ ವಿಶೇಷವಾಗಿ ಬಳಕೆಯಾಗುತ್ತದೆ. ಒರಟಾದ ಅಥವಾ ನುಣುಪಾದ ಯಾವುದೇ ಮೇಲ್ಮೈಯ ಮೇಲೆ ಲೇಪಿಸಲು ಬರುವಂತಹ ಒಂದು ಸಿಂಥೇಟಿಕ ಬಣ್ಣದ ಮಾಧ್ಯಮವಾಗಿದೆ. ವರ್ಣಗಳನ್ನು ತೆಳುವಾಗಿ ಲೇಫಿಸುವುದಾಗಲಿ ಅಥವಾ ದಪ್ಪವಾಗಿ ಲೇಪಿಸುವುದಕ್ಕೆ ಅಕ್ರ್ಯಾಲಿಕ್ ವರ್ಣವು ಅತ್ಯುತ್ತಮ ಮಾಧ್ಯಮವಾಗಿದೆ. ಈ ಮಾಧ್ಯಮಗಳಲ್ಲಿ ಹೊಸ ಹೊಸ ಪ್ರಯೋಗ ವಿವಿಧ ತಂತ್ರಗಾರಿಕೆ ಎಲ್ಲವೂ ಮಾಡಲು ಕಲಾವಿದರಾದ ಶ್ರೀ ಎಂ. ಆರ್. ಬಾಳೀಕಾಯಿ ಅವರು ತುಂಬಾ ಚಾಣಾಕ್ಷತನದಿಂದ ಹಲವಾರು ರೀತಿಯಲ್ಲಿ ಹೊಸತನವನ್ನು ಕಡಿಮೆ ಅವಧಿಯಲ್ಲಿ ಒಣಗಿವುದರಿಂದ ಒಂದು ಕಲಾಕೃತಿಯ ರಚನೆಯ ಸಮಯವನ್ನು ಉಳಿಸಿಕೊಡುತ್ತದೆ ಹಾಗೂ ಬಹುಬೇಗ ಕಲಾಕೃತಿ ರಚಿಸಲು ಕಲಾವಿದನಿಗೆ ಸಹಕಾರಿಯಾಗಿ ನಿಲ್ಲಬಲ್ಲದಾಗಿರುತ್ತದೆ.

ನಿಸರ್ಗದೊಂದಿಗೆ ಮುಖವಾಡಗಳು

ಈ ಕಲಾಕೃತಿ ಹಲವಾರು ಸರಣಿ ಚಿತ್ರಗಳನ್ನು ಮಾಡಿದ್ದಾರೆ ಎಲ್ಲವೂ ತಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆದಕ್ಕೋಸ್ಕರ ಒಂದು ಕಲಾಕೃತಿ ಜೊತೆಗೆ ಮನುಷ್ಯನ ಮುಖಗಳ ಚಿತ್ರ ಅಂದರೆ ಸುಮಾರು

ಏಳು ಮುಖಗಳಿದ್ದು, ನಂತರ ಕಮಲದ ಹೂ, ರಾಷ್ಟ್ರಿಯತೆಯ ಮತ್ತು ಧಾರ್ಮಿಕ ಈ ಎರಡು ಉದ್ದೇಶಗಳನ್ನು ಇಟ್ಟುಕೊಂಡು ವಸ್ತುವಿಷಯದ ಚಿತ್ರವನ್ನು ರಚಿಸುವುದರ ಜೊತೆಗೆ, ಪ್ರಾಣಿ ಚಿತ್ರಗಳು ನಿಸರ್ಗ ಹುಟ್ಟುವುದರದ್ದು ಹಾಗೂ ಮನುಷ್ಯರ ಭಾವನೆಯ ಬಗ್ಗೆ ಹೋಲಿಸಬಹುದು. ಅಲ್ಲದೇ ಹೆಚ್ಚು ಬಣ್ಣಗಳನ್ನು ಉಪಯೋಗಿಸದೆ ಕಪ್ಪು ಬಿಳುಪಿನ ಕೇಶವಿನ್ಯಾಸ ಕಂಡುಬಂದರೂ ಸಹಿತ ಕೆಂಪು ಬಣ್ಣವನ್ನು ಹಿತವಾಗಿ ಬಳಸಿಕೊಂಡಿರುವುದನ್ನು ಈ ಚಿತ್ರ ಸಂಯೋಜನೆಯಲ್ಲಿ ಕಾಣಬಹುದು.

ಚಿಂದಿ ಆಯುತ್ತಿರುವ ಮಗು:

ಪ್ರಸ್ತುತ ಈ ಕಲಾಕೃತಿಯು ಸಾಮಾಜಿಕ ಕಲಾಕೃತಿಯಾಗಿದೆ. ಶ್ರೀಮಂತ ರಾಷ್ಟ್ರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ ಆದರೂ ಕೂಡ, ಬಡತನ ಎನ್ನುವಂತಹದ್ದನ್ನು ತನ್ನ ಬೆನ್ನಿನಲ್ಲಿಯೇ ಕಟ್ಟಿಕೊಂಡು ಸಾಗುತ್ತಿದೆ. ಈ ಕಲಾಕೃತಿಯಲ್ಲಿ ಈ ರೀತಿಯ ಮಾದರಿ ಕಾಣಬಹುದು. ಚಿಂದಿ ಆಯುವ ಮಗು ಅಥವಾ ಅನ್ನಕ್ಕಾಗಿ ಪರದಾಡುತ್ತಿರುವ ಮಗು, ಎರಡು ಆಯಾಮಗಳನ್ನು ಕೊಡಬಹುದು. ಸಾಮಾಜಿಕ ವರ್ಗ ವ್ಯವಸ್ಥೆಯಲ್ಲಿ ಒಂದು ಊಟ ಹೆಚ್ಚಾಗಿ ಸಾಯುವವರಿದ್ದಾರೆ ಹಾಗೆ ಊಟ ಇಲ್ಲದೆಯೂ ಸಾಯುವವರಿದ್ದಾರೆ. ಈ ರೂಪದಲ್ಲಿರುವ ಮಹಿಳೆಯನ್ನು ನಾವು ಅನ್ನ ಚೆಲ್ಲುತ್ತಿರುವ (ಕಸ) ಮಹಿಳೆ ಹಾಗೂ ಅನ್ನ ಅಥವಾ ಚಿಂದಿಗಾಗಿ ಕಾಯುತ್ತಿರುವ ಬಡತನ ವ್ಯವಸ್ಥೆಗಳನ್ನು ಗುರುತಿಸಬಹುದು.

ಲಂಬಾಣಿ ಮಹಿಳೆ

ಈ ಕಲಾಕೃತಿ ಒಬ್ಬ ಲಂಬಾಣಿ ಮಹಿಳೆಯ ಚಿತ್ರವಾಗಿದ್ದು, ಇದರಲ್ಲಿ ಆಕೆಯ ಹಾವ-ಭಾವ ಉಡುಗೆ-ತೊಡುಗೆಗಳು, ಎಲ್ಲವು ನೋಡಿದರೆ ಒಬ್ಬ ಲಂಬಾಣಿ ಮಹಿಳೆಯ ವೇಷಕ್ಕೂ ಸಾಮಾನ್ಯ ಮಹಿಳೆಯ ವೇಷಕ್ಕೂ ನೋಡಿದರೆ ಅದರ ಸುಂದರತೆ ಗೊತ್ತಾಗುವುದು. ಅಲ್ಲದೆ ಈ ಮಹಿಳೆಯು ತನ್ನ ತಲೆಯ ಮೇಲೆ ಒಂದು ಬುಟ್ಟಿಯಲ್ಲಿ ಬುತ್ತಿಯನ್ನು ಕಟ್ಟಿಕೊಂಡು ತನ್ನ ಎಡಗಡೆಗೆ ಎರಡು ಕೈಯಗಳಲ್ಲಿ ಒಂದು ಹುಂಜವನ್ನು ಹಿಡಿದುಕೊಂಡು ನಿಸರ್ಗದ ಮಡಿಲಲ್ಲಿ ಹೊರಡಲು ಸಿದ್ಧಳಾಗಿ ನಿಂತಿದ್ದಾಳೆ ಎಂಬ ದೃಶ್ಯವು ಗೋಚರವಾಗಿ ಕಾಣುವಂತೆ ಚಿತ್ರಿಸಿರುವುದನ್ನು ಗಮನಿಸಬಹುದಾಗಿದೆ.

ಶಿರ್ಷಿಕೆ ರಹಿತ-೧

ಈ ಚಿತ್ರವು ಹೇಗೆ ನೋಡಿದರು ಒಂದು ಆಕೃತಿ ಕಾಣುತ್ತದೆ. ಇಂತಹ ಹಲವಾರು ಕಲಾಕೃತಿಗಳನ್ನು ಮಾಡುವುದರ ಜೊತೆಗೆ ಕೇವಲ ಪೇಪರ್ ಮೇಲೆ ಅಷ್ಟೇ ಅಲ್ಲದೇ ಕ್ಯಾನವಾಸ ಮೇಲೆಯೂ ಈ ಪ್ರಯೋಗ ಮಾಡಿದ್ದಾರೆ. ಇದರಲ್ಲಿಯೂ ನೀಲಿ, ಕೆಂಪು, ಹಳದಿ ಎಲ್ಲವೂ ಮಿಶ್ರವಾಗಿ ಬಳಸಿಕೊಂಡು ನೀರಿನ ಅಲೆಗಳು ಇಲ್ಲವೇ ನಿಸರ್ಗದ ಮಡಿಲಲ್ಲಿ ಕೆಳಗಿನಿಂದ ನೋಡಿದರೆ ಹಲವಾರು

ರೀತಿಯ ಹೂ-ಗಿಡಗಳು ಕಂಗೊಳಿಸುತ್ತಿರುವ ಹಾಗೆ ಕಾಣುವುದರ ಜೊತೆಗೆ ಆ ಬಣ್ಣಗಳ ಮಿಶ್ರಣದ ಸೆಳೆತ ಹಾಗೆ ನೋಡುಗರ ಮನಸ್ಸು ಸೆಳೆಯುವಂತಾಗಿದೆ. ಇಂತಹ ಸಂಯೋಜನೆಯಿಂದ ಸಹೃದಯರು ನೋಡುವ ಅವರವರ ಭಾವದ ಗ್ರಹಿಕೆಗೆ ಬಿಟ್ಟಿದ್ದು, ಅನುಭವವು ಪುನರ್ ನಮನ ಮಾಡಿಕೊಂಡು ಸೌಂದರ್ಯಕ್ಕೆ ಪರಿಕಲ್ಪನೆ ಹುಟ್ಟಿಸುತ್ತದೆ.

ಶಿರ್ಷಿಕೆ ರಹಿತ-೨

ಈ ಕಲಾಕೃತಿಯು ತಿರುಳು-ಮರಳು ಮಾಡಿದರು ಸಹಿತ ಹಲವಾರು ರೀತಿಯ ಆಕೃತಿಗಳು ಕಂಡುಬರುತ್ತವೆ. ನೀರಿನ ಸೆಳೆತ ಆಯಾಮಗಳ ಸೃಷ್ಟಿಯ ನಿಸರ್ಗವಾಗಿರಬಹುದು ಇಲ್ಲವೇ ಮಧ್ಯ-ಮಧ್ಯ ಬಿಟ್ಟಿರುವ ಆ ಬಿಳುಪಿನ ಭಾಗವನ್ನೆಲ್ಲ ನೋಡಿದರೆ ಪಾಪಸಕಳ್ಳಿಯ ಗಿಡಗಳಾಗಿರಬಹುದು. ಆ ಹಸಿರು,ಹಳದಿ, ನೀಲಿ ಮತ್ತು ಕಪ್ಪು ಬಣ್ಣಗಳಿಂದ ಚಿತ್ರಿತವಾಗಿರುವುದು ಒಟ್ಟಾರೆ ಸಂಯೋಜನೆಗಳಿಂದ ತಿಳಿದುಬರುವುದು. ಇಂತಹ ಕಲಾಕೃತಿ ಇತರೆಲ್ಲ ಕಲಾವಿದರಿಗಿಂತ ಸೃಜನತೆಯಲ್ಲಿ ಭಿನ್ನ ಆಯಾಮವನ್ನು ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ.

ಚಿತ್ರ ಶಿರ್ಷಿಕೆ ರಹಿತ-೩:

ಈ ಕಲಾಕೃತಿಯ ಸಹಿತ ಹೇಗೆ ನೋಡಿದರು ಒಂದು ರೀತಿಯ ಆಕಾರ ಕಾಣುತ್ತದೆ ಹಾಗೆ ದಟ್ಟವಾದ ನದಿಯ ತೀರದ ಮೇಲೆ ಗುಡ್ಡ ಗಾಡುಗಳು ಹಾಗೂ ಬಿರುಕು ಬಿರುಕು ಕಾಣುತ್ತಿರುವ ಪ್ರದೇಶ, ಅದರ ಮಧ್ಯ ಮೂವರು ಹೋಗಿ ನಿಂತಿರುವ ಹಾಗೆ ಕಾಣಿಸುತ್ತದೆ. ಇವುಗಳಲ್ಲಿ ಕಂದುಗೆಂಪು, ಕಪ್ಪು ಮತ್ತು ಹಳದಿ ಕೆಂಪು ಮಿಶ್ರಿತವಾಗಿ ರಚಿಸಿರುವ ಈ ಸಂಯೋಜನೆಯ ಚಿತ್ರವಾಗಿದೆ ಎನ್ನುವ ಪರಿಕಲ್ಪನೆ ಹೊಂದಿದೆ.

ನಿಂತಿರುವ ಮಹಿಳೆ

ಇದು ಒಬ್ಬ ಸ್ತ್ರೀ ನಿಂತಿರುವ ದೃಶ್ಯವಾಗಿದೆ. ಇದರಲ್ಲಿ ರೇಖೆಗಳ ಎಳೆತ ಬಣ್ಣಗಳ ಸೆಳೆತ ಎಲ್ಲವೂ ಎಷ್ಟೋಂದು ತೀವ್ರತೆಯಿಂದ ಕೊಡಿರುವುದು ಕಂಡುಬರುತ್ತದೆ. ಆ ಜಲವರ್ಣಗಳ ಮಿಶ್ರಣ ಆ ಹೆಣ್ಣಿನ ನೋಟವನ್ನು ಆಕೆ ನಿಂತಿರುವ ಭಂಗಿಯಲ್ಲಿ ಏನೋ ಯೋಜನೆ ಮಾಡುತ್ತಿರುವ ಹಾಗೆ ಎದ್ದು ಕಾಣುತ್ತಿದೆ. ಆಕೆಯ ಹಿಂದಿನ ದೃಶ್ಯವು ಬಣ್ಣಗಳ ಮಿಶ್ರಣದಿಂದ ಎಷ್ಟೋಂದು ಸುಂದರವಾಗಿ ಕಾಣುತ್ತಿದೆ ಎಂಬವುದನ್ನು ನೋಡುಗನಿಗೆ ಚಿತ್ರ ನೋಡುವುದರಿಂದ ತಿಳಿದು ಬರುತ್ತದೆ. ಇಂತಹ ಸೌಂದರ್ಯ ಪರಿಲ್ಪನೆ ಹುಟ್ಟಿಸುವಂತಹ ಕಲಾಕೃತಿ ನಿರ್ಮಿಸಿ ನೈಪುಣ್ಯತೆಯನ್ನು ಕಲಾಕೃತಿ ಅಧ್ಯಯನಕ್ಕೆ ಒಳಪಡಿಸುವುದರಿಂದ ತಿಳಿದುಬರುತ್ತದೆ.

ನಿಸರ್ಗ ಚಿತ್ರ

ಇದು ನಿಸರ್ಗ ಚಿತ್ರವಾಗಿದ್ದು, ನಿಸರ್ಗದಲ್ಲಿರುವಂತಹ ಅಂದರೆ ಗ್ರಾಮೀಣ ಪ್ರದೇಶದದಲ್ಲಿ ಇರುವಂತಹ ಮನೆಗಳು ಸುತ್ತಮುತ್ತಲಿನ ಗಿಡಮರಳು ಸುತ್ತಲೂ ಮನೆಗಳು ಪ್ರಾಣಿ ಪಕ್ಷಿಗಳಿಂದ ಕೂಡಿರುವಂತಹ ಈ ಚಿತ್ರದಲ್ಲಿ ಬಣ್ಣಗಳು ಸಹಿತ ಅಷ್ಟೇ ಮನಸ್ಸಿಗೆ ಮುದವನ್ನು ನೀಡುತ್ತವೆ. ಹಿಂದಕ್ಕೆ ಹೋದಂತೆಲ್ಲ ಮೋಡವಾದಾಗ ವಾತಾವರಣ ಹೇಗಿರುತ್ತೋ ಹಾಗೆ ಈ ಚಿತ್ರ ಎದ್ದು ಕಾಣುವಂತೆ ಚಿತ್ರ ಸಂಯೋಜನೆ ಮಾಡಿದ್ದಾರೆ ಎಂಬುದನ್ನು ಚಿತ್ರವನ್ನು ಗಮನಿಸಿದರೆ ಗೊತ್ತಾಗುತ್ತದೆ.

ಮುಸ್ಲಿಂ ಪುರುಷರು

ಈ ಒಂದು ಕಲಾಕೃತಿಯಲ್ಲಿ ಇಬ್ಬರು ಮುಸ್ಲಿಂ ವ್ಯಕ್ತಿಗಳ ಚಿತ್ರವಾಗಿದ್ದು, ಇವರ ಹಾವ ಭಾವಗಳು ನಿಂತಿರುವ ಶೈಲಿ ಅವರು ತಲೆಗೆ ಹಾಕಿಕೊಂಡಿರುವ ಟೋಪಿ ಕಣ್ಣಿಗೆ ಹಾಕಿಕೊಂಡಿರುವ ಕನ್ನಡಕ ಮತ್ತು ಕೋರೆ ಮೀಸೆ ಉದ್ದವಾದ ಗಂಡ ಹೀಗೆ ಅವರು ಮುಖ ಸಹಿತ ಉದ್ದವಾಗಿದೆ. ಸ್ವಲ್ಪ ಅಗಲ ಹೊಂದಿದೆ, ಕಿವಿಗಳು ಉದ್ದವಾಗಿವೆ. ಅವರ ಕುತ್ತಿಗೆಯು ಸಹಿತ ಉದ್ದವಾಗಿಯೇ ಇರುವುದು ಕಂಡು ಬರುವಂತೆ ಚಿತ್ರ ಸಂಯೋಜನೆ ಮಾಡಲಾಗಿದೆ. ಇಲ್ಲಿಯೂ ಕೆಂಪು, ಹಳದಿ, ಕಂದು, ಕೆಂಪು ಬಣ್ಣಗಳನ್ನು ಬಳಸಿರುವುದು ಕಂಡುಬರುತ್ತದೆ.

ಜೈನ್ ಧರ್ಮದ ನಮೋಕಾರದ ಮಹಾಮಂತ್ರದ ಚಿತ್ರಗಳು

ಇದು ಮಹಾವೀರರು ಅರಳಿ ಗಿಡದ ಕೆಳಗೆ ತಪಸ್ಸಿಗೆ ಕುಳಿತಿರುವ ಒಂದು ದೃಶ್ಯ ಇದಾಗಿದ್ದು, ಗಂಧರ್ವರು ಪುಷ್ಪಗಳನ್ನು ಸುರಿಯುತ್ತಿರುವುದು, ಕಮಲದಲ್ಲಿ ಕುಳಿತು ತಪಸ್ಸಿನಲ್ಲಿ ಮಗ್ನರಾಗಿದ್ದಾರೆ. ಕೆಳಗಡೆ ಎಲ್ಲ ಜನಾಂಗದ ಊರಿನ ಜನರು, ಪ್ರಾಣಿ, ಪಕ್ಷಿಗಳು, ನಿಸರ್ಗದ ಎಲ್ಲವೂ ಬುದ್ಧನ ಮುಂದೆ ನಿಂತು ಕೊಂಡು ನಮಗೂ ಬುದ್ದನು ವರ ಕೊಡುತ್ತಾನೋ ಅನ್ನು ಒಂದು ರೀತಿಯಲ್ಲಿ ಸಂಯೋಜನೆ ಮಾಡಿರುವುದು ಕಂಡುಬರುತ್ತದೆ. ಇದಕ್ಕೆ ಕಲಾವಿದರು ಪರಿಶ್ರಮದ ಫಲ ಎಂದು ತಿಳಿದುಕೊಳ್ಳಬಹುದು.

ನಿಸರ್ಗ ಚಿತ್ರಗಳು :

ಈ ಚಿತ್ರವು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ಅತಿಥಿಗೃಹ (ಗೇಸ್ಟ್ ಹೌಸ್) ಇದು ಒಂದಿನ ಭಾಗ ಕುಳಿತುಕೊಂಡು ಮಾಡಿರುವಂತಹ ದೃಶ್ಯವಾಗಿದೆ. ಇದು ಕೂಡ ಹಂಪಿ ಎಂದರೆ ಸಾಕು ಕಲ್ಲು ಬಂಡೆಗಳ ರಾಶಿಯೇ ಅಲ್ಲಿರುವ ಹಾಗೆ ಅಲ್ಲದೇ ವಿದ್ಯಾರಣ್ಯದ ಆವರಣದಲ್ಲಿಯೂ ಕೂಡ ತುಂಬಾ ಚೆನ್ನಾಗಿ, ಗಿಡ ಮರಗಳಿಂದ ತುಂಬಿ ತುಳುಕುತ್ತಿರುವ ಈ ವಾತಾವರಣದ ಮಧ್ಯ ಈ ಅತಿಥಿ ಗೃಹ

ತುಂಬ ವಿಶಾಲವಾಗಿದೆ. ಇದನ್ನು ತುಂಬ ಸೌಂದರ್ಯಾತ್ಮಕವಾಗಿ ಸೆರೆ ಹಿಡಿದಿದ್ದಾರೆ. ಇದು ಮಾಧ್ಯಮದ ಮೇಲೆ ಚಿತ್ರವನ್ನು ರಚಿಸಿದ್ದಾರೆ ಎಂಬುದು ತಿಳಿದುಬರುತ್ತದೆ.

ನಿಸರ್ಗ ಚಿತ್ರಗಳು :

ಈ ನಿಸರ್ಗವು ನೋಡಿದರೆ, ಮಲೆನಾಡಿನ ಪ್ರದೇಶವೆಂದು ತಿಳಿದುಬರುತ್ತದೆ. ಆ ಹಂಚಿನ ಮನೆ ಗಿಡ ಮರಗಳು, ಸುತ್ತಲೂ ವಾತಾವರಣ ಸಂಪಾಗಿರುವುದು ಎದ್ದು ಕಾಣುತ್ತಿದೆ. ದೂರ ಹೋದಂತೆಲ್ಲ ಪರಿಸರದ ತುಂಬೆಲ್ಲಾ ಇರುವ ಆ ಗಿಡ ಮರಗಳು ಮುಸುಕಾಗಿವೆ. ತಮ್ಮ ತಮ್ಮ ಮನೆಯ ಮುಂದೆ ಕೆಲಸದಲ್ಲಿ ನಿರತರಾಗಿರುವ ಮನುಷ್ಯನು ಕಂಡುಬರುತ್ತಾರೆ. ಇವೆಲ್ಲವುಗಳಿಗೆ ಬಣ್ಣಗಳೇ ಮೂಲ ಹಸಿರು, ಕೆಂಪು, ಕಂದುಗೆಂಪು, ಕಪ್ಪು, ಹಳದಿ ಆಕಾಶ ಎಲ್ಲವೂ ಇರುವಂಆತೆ ಲೇಪಿಸಿದಾಗ ಇದರಿಂದ ಕಲಾವಿದನು ಯಾವ ರೀತಿ ವರ್ಣ ಲೇಪನದ ಚಮತ್ಕಾರವನ್ನು ತೋರಿಸಿದ್ದಾರೆ ಎಂಬುದು ತಿಳಿದು ಬರುತ್ತದೆ.

ಇದು ಕೂಡ ನಿಸರ್ಗ ಚಿತ್ರವಾಗಿದ್ದು, ಇಲ್ಲಿಯೂ ಆಕಾಶ, ಮೋಡ ಸುತ್ತಲಿನ ಪರಿಸರ, ಆದರೆ ಒಂದೇ ಒಂದು ಹಂಚಿನ ಮನೆ ಇರುವುದು ಕಂಡುಬರುತ್ತದೆ. ಮನೆಯ ಮುಂದೆ ಒಬ್ಬ ಮಹಿಳೆ ನಡೆದುಕೊಂಡು ಮನೆಯ ಒಳಗೆ ಹೋಗುತ್ತಿದ್ದಾಳೆ. ಅಲ್ಲದೇ ಎದುರಿಗೆ ದೊಡ್ಡದೊಂದು ಮರವಿದೆ. ಮನೆಯ ಸುತ್ತಲೂ ಸುಂದರವಾದ ವಾತಾವರಣವಿದ್ದು, ಯಾವ ಗದ್ದಲವಿಲ್ಲದೆ ತುಂಬಾ ಚೆನ್ನಾಗಿ ಕಂಡುಬರುವಂತೆ ಸಂಯೋಜನೆ ಮಾಡಲಾಗಿದೆ. ನಂತರ ಇನ್ನು ಪ್ರೇಶ್ ಕಲರ್ಸ್ ಇರುವುದು ಕಂಡುಬರುತ್ತದೆ. ಕೆಂಪು, ನೀಲಿ, ಹಳದಿ, ಹಸಿರು, ಕಪ್ಪು, ಕಂದುಗೆಂಪು ಬಣ್ಣವು ಎಲ್ಲವೂ ಎದ್ದು ಕಾಣುತ್ತಿವೆ ಚಿತ್ರ ಸಂಯೋಜನೆ ಮಾಡಲಾಗಿದೆ.

ಇಂತಹ ಚಿತ್ರ ದೃಶ್ಯಾತ್ಮಕವಾಗಿ ಚಿತ್ರಿಸಿರುವುದು ವಿಶೇಷವೆಂದು ಹೇಳಬಹುದು.

ಈ ಚಿತ್ರವು ಹಂಪಿ ದಾರಿಗೆ ಇದ್ದು, ದೊಡ್ಡ ದೊಡ್ಡ ಕಲ್ಲಿನ ಬಂಡೆಗಳು ಹೋಗುವ ದಾರಿಗೆ ಎಲ್ಲಿ ಮೇಲೆ ಬೀಳುತ್ತವೆಯೋ ಅನ್ನೋ ಭಾವದ ಆತಂಕ ನೋಡುಗರಿಗೆ ಹುಟ್ಟುತ್ತದೆ. ಆದರೆ ಎಷ್ಟೇ ಏನೆ ಆದರೂ ಸಹಿತ ಇವು ಕಲ್ಲುಗಳು ಇದ್ದ ಹಾಗೆಯೇ ನೈಜ ರೀತಿಯಲ್ಲಿ ಇವೆ. ಅವುಗಳ ಹಿಂದೆ ವಿಜಯನಗರ ಸಾಮ್ರಾಜ್ಯದ ಕಾಲದ ಮಂಟಪಗಳು ಕಟ್ಟಡಗಳು ಕಂಡುಬರುತ್ತವೆ. ಹತ್ತಿ ಇಳಿಯಲಿಕ್ಕೆ ಮೆಟ್ಟಿಲುಗಳಿವೆ. ಹೋಗುವ ದಾರಿಗೆಲ್ಲ ಮಂಟಪಗಳಿದ್ದು, ಎಡಗಡೆ ಸ್ವಲ್ಪ ಭಾಗ ಕಾಣುತ್ತದೆ ದಾರಿಯುದ್ದಕ್ಕೂ ಕಂಬಗಳಿವೆ, ಹಂಪಿಯ ಕಲ್ಲಿನ ಬಂಡೆಗಳ ಬಣ್ಣಗಳನ್ನು ಸೆರೆ ಹಿಡಿದು ಕಲಾಕೃತಿಗಳನ್ನು ರಚಿಸುವುದು ತುಂಬಾ ಕಷ್ಟದ ವಿಷಯ. ಇಂತಹ ಸಂಯೋಜನಾತ್ಮಕ ನಿಸರ್ಗ ಚಿತ್ರವನ್ನು ಚಿತ್ರಿಸಿರುವುದು

ಕಂಡುಬರುತ್ತವೆ. ಈ ರೀತಿಯ ನಿಸರ್ಗದ ಚಿತ್ರಣವು ಇನ್ನೊಬ್ಬ ಚಿತ್ರ ಕಲಾವಿದನನ್ನು ಅಧ್ಯಯನಕ್ಕೆ ಬಳಸಿಕೊಳ್ಳಲು ಯೋಗ್ಯವಾದ ರೀತಿಯಲ್ಲಿ ಚಿತ್ರಿಸಿರುವುದು ಕಂಡು ಬರುತ್ತದೆ.

ಇದು ಕೂಡ ಹಂಪಿಯ ಅಕ್ಕ-ತಂಗಿ ಬಂಡೆ ಅಂತ ಹೆಸರು ಪ್ರಸಿದ್ಧವಾದ ಎರಡು ಕಲ್ಲುಗಳು ಈ ಬಂಡಿಗಳು ತುಂಬಾ ದೊಡ್ಡದಾಗಿಯೂ ಮತ್ತು ಒಂದಕ್ಕೊಂದು ಅಂಟಿಕೊಂಡಿವೆ. ಇವು ಕೂಡ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನಕ್ಕೆ ಕಮಲಾಪೂರದಿಂದ ಹೋಗುವ ದಾರಿಯ ಮಧ್ಯದಲ್ಲಿದೆ ಸಿಗುತ್ತದೆ. ಈ ಬಂಡೆಗಳು ಇಂದು ಶಿಥಿಲವಾಗಿದ್ದು, ಇವತ್ತಿಗೆ ಇಂತಹ ಕಲಾವಿದರಿಂದ ಮೊದಲು ಹೇಗೆ ಇದ್ದವು ಎಂಬುವುದು ಇವರ ನಿಸರ್ಗ ಚಿತ್ರಣದಿಂದ ತಿಳಿದುಕೊಳ್ಳಲು ಒಂದು ರೀತಿಯ ಸಂಗ್ರಹ ಕೂಡ ಕಲಾಕೃತಿಗಳೆಂದು ಹೇಳಬಹುದಾಗಿದೆ.

ವಸ್ತು ಚಿತ್ರಗಳು

ಈ ಕಲಾಕೃತಿಯು ಜಲವರ್ಣದಿಂದ ಮಾಡಿದ ಸ್ಥಿರ ಚಿತ್ರಣವಾಗಿದೆ. ಅಂದರೆ ವಸ್ತುಗಳನ್ನು ಮುಂದಿಟ್ಟು ಅಳತೆಯ ಬದ್ಧವಾಗಿ ಮಾಡುವಂತಹ ಚಿತ್ರವಾಗಿದ್ದು, ನಂತರ ಇದರಲ್ಲಿ ವಸ್ತುಗಳೆಂದರೆ ಬರಣಿ, ಹಣ್ಣು, ತರಕಾರಿ, ಗ್ಲಾಸು, ಬಟ್ಟೆ, ಇವುಗಳೆಲ್ಲವು ಒಂದು ಆಕಾರಕ್ಕೆ ತಕ್ಕಂತೆ ಹೊಂದಿಸಿಕೊಂಡು ಸಂಯೋಜನೆ ಮಾಡುವಂತಹ ಕಲಾಕೃತಿ ಇದಾಗಿದ್ದು, ಇದರಲ್ಲಿನ ಬಣ್ಣಗಳು ತುಂಬಾ ಚೆನ್ನಾಗಿ ಎದ್ದು ಕಾಣುತ್ತವೆ. ಲೇಪನ ಮಾಡಿರುವುದು ಅತ್ಯಂತ ಸೌಂದದರ್ಯಾತ್ಮಕವಾಗಿ ಕಂಡುಬರುವುದನು ಕಾಣಬಹುದಾಗಿದೆ.

ಇದು ಕೂಡ ಸ್ಥಿರ ಚಿತ್ರಣವಾಗಿದ್ದು, ಈ ಚಿತ್ರದಲ್ಲಿ ಒಂದು ಪ್ಲಾವರ್ ಪಾರ್ಟ್ ಇದ್ದು, ಅದರ ತುಂಬೆಲ್ಲ ಎಲೆ ಹೂಗಳನ್ನು ಅಲಂಕಾರ ಮಾಡಿ ಕೆಳಗೆ ಒಂದು ಬದಿಯಲ್ಲಿ ಸೇಬು ಇನ್ನೊಂದು ಬದಿಗೆ ನೀರು ತುಂಬಿರುವ ಗ್ಲಾಸ ಬಾಳೆಹಣ್ಣುಗಳನ್ನೆಲ್ಲ ಇಟ್ಟುಕೊಂಡು ಮಾಡಿರುವಂತಹ ಸಂಯೋಜನಾತ್ಮಕ ಚಿತ್ರಣ ಇದಾಗಿದೆ. ಇಂತಹ ಚಿತ್ರಣದಿಂದ ಉತ್ತಮ ಸಂಯೋಜನೆ ಮಾಡುವುದರ ಕಾಲಕ್ಕೆ ಹೆಚ್ಚಾಗುತ್ತದೆ ಎಂಬುದನ್ನು ಕಲಾಕೃತಿಯನ್ನು ನೋಡುವುದರಿಂದು ತಿಳಿದುಕೊಳ್ಳಬಹುದಾಗಿದೆ.

ಶಿರಭಾವ ಚಿತ್ರಗಳು :

ಬೇಂದ್ರೆಯವರ ಭಾವಚಿತ್ರ:

ಈ ಒಂದು ಶಿರ ಭಾವ ಚಿತ್ರವು ಸಾಧನಕೇರಿಯ ಸಾಹಿತಿಯಾಗಿರುವ ದ.ರಾ. ಬೇಂದ್ರೆಯವರದ್ದಾಗಿದ್ದು, ಇದರಲ್ಲಿ ಬೇಂದ್ರೆಯವರ ಎಲ್ಲ ಹಾವ ಭಾವಗಳು ಹಾಗೂ ಮನಸ್ಸಿನ

ಭಾವನೆಗಳನ್ನು ಅರ್ಥೈಸಿಕೊಂಡು, ಒಬ್ಬ ಸಾಹಿತಿಯು ತನ್ನ ಆಲೋಚನೆಯಿಂದ ಹೇಗೆ ಬದುಕನ್ನು ನಡೆಸುತ್ತಿರುವಾಗ ಅವರ ಮುಖದ ಭಾವನೆಗಳು ಸೆರೆಹಿಡಿದು ಚಿತ್ರಿಸಿರುವುದು ಕಂಡು ಬರುತ್ತದೆ.

ಈ ಒಂದು ಚಿತ್ರವು ಶಿರಭಾವ ಚಿತ್ರವಾಗಿದ್ದು (ಪೊಟ್ರೇಟ್) ಇದು ಜಲವರ್ಣದಿಂದ ಮಾಡಿದಂತಹ ಮತ್ತು ಈ ಚಿತ್ರವು ಮನುಷ್ಯರು ಎದುರಿಗೆ ಕುಳಿತುಕೊಂಡು ಅವರ ಮುಖದ ಹಾವ-ಭಾವಗಳ ಲಕ್ಷಣಗಳು ಹಾಗೂ ಅವರ ಮನೋಭಾವವನ್ನು ಅರ್ಥೈಸಿಕೊಂಡು ಎಲ್ಲವನ್ನು ತೀಕ್ಷ್ಣವಾಗಿ ಗಮನಿಸಿ ಅವರು ಬಣ್ಣವು ಹೇಗಿದೆ ಹಾಗೆ ಬರುವ ರೀತಿಯಲ್ಲಿ ಈ ಚಿತ್ರ ರಚಿಸಲಾಗಿದೆ. ಇದರಲ್ಲಿ ಒಬ್ಬ ಕನ್ನಡಕ ಹಾಕಿಕೊಂಡು ಮುಖವನ್ನು ಹೆಚ್ಚಾಗಿ ತನ್ನ ಎಡಕ್ಕೆ ತಿರುಗಿಸಿಕೊಂಡು ಕುಳಿತಿರುವ ದೃಶ್ಯ ಇದಾಗಿದೆ. ಇಂತಹ ಚಿತ್ರವನ್ನು ಅತ್ಯಂತ ಸುಂದವಾಗಿ ಚಿತ್ರ ಸಂಯೋಜನೆಗೊಳಿಸಿರುವುದು ಕಂಡು ಬರುತ್ತದೆ.

ಈ ಚಿತ್ರವು ಶಿರಭಾವ ಚಿತ್ರವಾಗಿದ್ದು, ಇದು ಕೂಡ ಜಲವರ್ಣದಿಂದ ಅಂದರೆ ಅಕ್ರ್ಯಾಲಿಕ್‌ದಿಂದ ಕ್ಯಾನವಾಸ ಮಾಧ್ಯಮದ ಮೇಲೆ ಮಾಡಿರುವುದಾಗಿದೆ. ಈ ಚಿತ್ರವು ಅಜ್ಜಿಯ ಒಂದು ಮುಖ ಚಿತ್ರವಾಗಿದ್ದು, ಆ ಅಜ್ಜಿಯ ಮುಖದಲ್ಲಿನ ನೆರೆಗೆಗಳು ಹಾಕಿಕೊಂಡಿರುವ ಮೂಗಿನ ನತ್ತು (ಮೂಗುತಿ) ಕಿವಿಯ ಓಲೆ, ಹೀಗೆ ಎಲ್ಲವೂ ಸೂಕ್ಷ್ಮವಾಗಿ ಗಮನಿಸಿ ಚಿತ್ರಿಸಿರುವುದು ಚಿತ್ರವನ್ನು ಅಧ್ಯಯನ ಮಾಡುವುದರಿಂದ ಕಂಡುಬರತ್ತದೆ.

ಕೋಲಾಜ್ ಚಿತ್ರಗಳು

ಈ ಚಿತ್ರವು ಗಣೇಶನ ಒಂದು ಚಿತ್ರವಾಗಿದ್ದು, ಇದು ಕೂಡ ಕೋಲಾಜ್ ಚಿತ್ರವಾಗಿದ್ದು, ಇದರಲ್ಲಿ ಅತಿ ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಗಣೇಶನ ಚಿತ್ರವಿದೆ ಎನ್ನುವುದು ತಿಳಿಯುತ್ತದೆ. ಅಂದರೆ ಒಂದು ರೀತಿಯ ಅಮೂರ್ತ ರೀತಿಯ ಚಿತ್ರ ಸಂಯೋಜನ ಎಂದು ತಿಳಿದು ಬರುತ್ತದೆ. ಅಲ್ಲದೇ ನೀಲಗಿರಿ ಗಿಡದ ಎಲೆಗಳನ್ನು ತೆಗೆದುಕೊಂಡು ಅವು ಒಣಗಿದ ನಂತರ ತನ್ನ ರೂಪವನ್ನು ಕಳದುಕೊಳ್ಳಬಾರದು ಎನ್ನುವ ಉದ್ದೇಶವಿದ್ದು, ಅದಕ್ಕೆ ಕಲಾವಿದರು ಅವುಗಳನ್ನು ನೆರಳಿನಲ್ಲಿ ಒಣಗಿಸಿ ನಂತರ ಅಂಟಿಸಿ ಮಾಡಿದಂತಹ ಈ ಕಲಾಕೃತಿಯೂ ತಿಳಿಯಾದ ಹಸಿರು ಮತ್ತು ಕಂದುಗೆಂಪು ಈ ಎರಡು ಬಣ್ಣಗಳಿಂದ ಕೂಡಿದ ಕಲಾಕೃತಿಯಾಗಿದೆ. ಇಂತಹ ಸೃಜನಾತ್ಮಕ ಸಂಯೋಜನೆಗಳಿಂದ ನಿರ್ಮಿಸಿದ ಕಲಾಕೃತಿ ಇತರರಿಗೆ ಮಾದರಿಯನ್ನು ನೀಡುತ್ತದೆ. ಒಟ್ಟಾರೆ ಚಿತ್ರ ಸಂಯೋಜನೆ ಉತ್ತಮ ರೀತಿಯಿಂದ ಕಂಡು ಬಂದಿದೆ ಎಂದು ಹೇಳಬಹುದಾಗಿದೆ.

ಈ ಒಂದು ಚಿತ್ರ ಕೋಲಾಜ್ ಕಲಾಕೃತಿಯಾಗಿದ್ದು, ಕೋಲಾಜ್ ಎಂದರೆ ಉಪಯೋಗಕ್ಕೆ ಬರದೆ ಇರುವಂತಹ ಯಾವುದಾದರೂ ವಸ್ತುಗಳನ್ನು ತೆಗೆದುಕೊಂಡು ಮಾಡುವಂತಹ ಕಲಾಕೃತಿಗಳು ಹಾಗೆ ಈ ಒಂದು ಚಿತ್ರವು ಒಬ್ಬ ಮನುಷ್ಯರ ಮುಖವನ್ನು ಹೋಲುತ್ತದೆ. ಅಲ್ಲದೇ ಅನೇಕ ತರಹದ ಕಾಗದಗಳು ತುಕಡಿಗಳನ್ನು ಅಂಟಿಸಿ ಮುಖದ ಒಂದು ಲಕ್ಷಣಕ್ಕೆ ಬರುವ ಬಣ್ಣಗಳು ಹೇಗೆ ಇರುತ್ತವೆಯೋ ಹಾಗೆ ಪೇಪರ್ಸ್‌ಗಳನ್ನು ಅಂಟಿಸಿ ಮಾಡಿರುವಂತಹ ಕಲಾಕೃತಿ ಇದಾಗಿದೆ. ಇದರಲ್ಲಿ ಕರಕುಶಲತೆಯ ಕೌಶಲ್ಯವು ಮುಖ್ಯವಾಗಿರುತ್ತದೆ. ಇಂತಹ ಪ್ರಯತ್ನವನ್ನು ಕಲಾವಿದರು ಮಾಡಿರುವುದನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಬಹುದು. ಇದು ಅತ್ಯಂತತ ಸಮಯವನ್ನು ತೆಗೆದುಕೊಂಡಿರುವುದು ಚಿತ್ರ ರಚನೆಯಿಂದ ತಿಳಿದುಬರುತ್ತದೆ.

ತೈಲವರ್ಣ ಚಿತ್ರಗಳು :

ತೈಲವರ್ಣ ಚಿತ್ರ ರಚನೆ ಪ್ರಾರಂಭವಾದದ್ದು ೧೫ ನೇ ಶತಮಾನದ ಪ್ರಾರಂಭದಲ್ಲಿ ಆಗ ಕ್ಯಾನವಾಸ ಬಟ್ಟೆಯ ಮೇಲೆ ಬಣ್ಣ ಅಥವಾ ಪ್ಲಾಸ್ಟರ್ ಆಫ್ ಪ್ಯಾರಿಸನ್ನು ಲೇಪಿಸುತ್ತಿದ್ದರು. ಮೊಟ್ಟೆಯ ಬಿಳಿ ಭಾಗದೊಂದಿಗೆ ಬಣ್ಣವನ್ನು ಬೆರೆಸಿ ಕಲಾಕೃತಿಯನ್ನು ರಚಿಸುತ್ತಿದ್ದು ಇದನ್ನು ಟೆಂಪೆರಾ ಎಂದು ಕರೆಯುತ್ತಿದ್ದರು. ಇದರ ಮೇಲೆ ಮೆರುಗೆಣ್ಣೆಯನ್ನು ಲೇಪಿಸಿದರೆ ತೈಲಚಿತ್ರ ಸಿದ್ಧವಾಗುತ್ತಿತ್ತು. ತೈಲಚಿತ್ರ ರಚನೆಯ ಪ್ರಾರಂಭದಲ್ಲಿ ವರ್ಣ ದ್ರವ್ಯದ ಪುಡಿಯನ್ನು ಅಮೃತ ಶಿಲೆಯ ಮೇಲೆ ಅರೆದು ಅದಕ್ಕೆ ಸ್ವಲ್ಪ ತೈಲವನ್ನು ಕೃತಕವಾಗಿ ಸಿದ್ಧವಿರುವಂತಹ ಬಣ್ಣಗಳು ಸಿಗುತ್ತಿವೆ. ಬಣ್ಣವನ್ನು ತೆಳು ಮಾಡಲು ಟರ್ಪೆಂಟೈನ್ ಮತ್ತು ಲೀಸ್‌ನೇಲ್ ಉಪಯೋಗಿಸುತ್ತಾರೆ. ಭಾರತದಲ್ಲಿಯ ಕಲಾವಿದರಲ್ಲಿ ರವಿವರ್ಮನಿಂದ ತೈಲಚಿತ್ರ ರಚನೆ ವ್ಯಾಪಕವಾಗಿ ಆರಂಭಗೊಂಡಿತೆಂದು ಹೇಳಬಹುದು. ಈಗ ಶ್ರಿ ಎಂ. ಆರ್. ಬಾಳೀಕಾಯಿಯವರು ಕೆಲವೊಂದು ತೈಲವರ್ಣ ಚಿತ್ರಗಳನ್ನು ರಚಿಸಿದ್ದಾರೆ. ಇದು ಅವರಿಗೆ ಪಾಶ್ಚಾತ್ಯ ಕಲಾಕೃತಿಗಳನ್ನು ನೋಡುವುದರಿಂದ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂಬುವುದು ಕಲಾಕೃತಿಯ ನಿರ್ಮಾಣದಿಂದ ಕಂಡುಬರುತ್ತದೆ.

ಕಲಾಕೃತಿಗಳ ವಿಶ್ಲೇಷಣೆ :

ಪ್ರೇಮಿಗಳ ಚಿತ್ರ

ಈ ಚಿತ್ರವು ಇಬ್ಬರು ಪ್ರೇಮಿಗಳು (ಲವರ್ಸ್) ಕಲ್ಪನೆ ಇಟ್ಟುಕೊಂಡು ಆಯಿಲ್ ಪೆಸ್ಟಲ್‌ನಲ್ಲಿ ಸಂಯೋಜನೆ ಮಾಡಿದ್ದಾರೆ. ಇದು ಕ್ಯೂಬಿಜಂ ಶೈಲಿಯಲ್ಲಿ ರಚನೆಯಾಗಿದೆ. ಮುಂದೆ ಮಹಿಳೆ ಹಿಂದೆ ಪುರುಷನನ್ನು ತೋರಿಸಲಾಗಿದೆ. ಇಂದು ಮಹಿಳೆಯು ಪುರುಷವಾದವನ್ನು ಧಿಕ್ಕರಿಸಿ ಮುನ್ನಡಿಯುವ ದಾರಿಗೆ ತೋರುತ್ತದೆ. ಅಲ್ಲದೆ ಪ್ರೀತಿಯ ತೀವ್ರತೆ, ತೃಪ್ತತೆ ತ್ಯಾಗದ ಮನೋಭಾವವನ್ನು ಚೌಕಾಕೃತಿ,

ತ್ರಿಕೋನಾಕೃತಿ, ವರ್ತುಳಾಕೃತಿ ವರ್ಣದ ಹಿನ್ನೆಲೆಯಲ್ಲಿ ರಚಿತವಾಗಿರುವುದು ಕಂಡು ಬರುತ್ತದೆ. ಪ್ರೇಮಿಗಳ ಭಾವಭಿವ್ಯಕ್ತವನ್ನು ತನ್ನ ಸಂಯೋಜನೆಯಲ್ಲಿ ತೋರಿಸಿರುವುದು ಕಂಡುಬರುತ್ತದೆ.

ಮನುಷ್ಯನ ವಿವಿಧ ರೀತಿಯ ಮುಖಗಳು

ಇದು ಆಯಿಲ್ ಪೆಸ್ಟಲ್‌ನಿಂದ ಮಾಡಿದಂತಹ ಈ ಕಲಾಕೃತಿ ಇದರಲ್ಲಿ ಆರು ಮುಖಗಳನ್ನು ಹೊಂದಿದ್ದು, ಆ ಆರು ಮುಖಗಳು ಬೇರೆ ಬೇರೆಯಾಗಿವೆ. ಒಂದರಲ್ಲಿ ಮೂಗು ಮತ್ತು ಬಾಯಿ ವಕ್ರವಾಗಿದ್ದರೆ, ಇನ್ನೊಂದರಲ್ಲಿ ಕಣ್ಣುಗಳು ವಕ್ರವಾಗಿ ಬಾಯಿಯು ಓರೆಯಾಗಿದೆ. ಮತ್ತೊಂದರಲ್ಲಿ ಬಾಯಿಯು ಒಂದು ಕಡೆ ಕೆಳಗೆ ಇದ್ದರೆ ಇನ್ನೊಂದು ಕಡೆ ಮೇಲೆ ಹೋಗಿದೆ, ಹೀಗೆ ಪ್ರತಿಯೊಂದರಲ್ಲಿ ಒಂದೊಂದು ಆಕಾರ ಪಡೆದಿವೆ. ಹಾಗೆ ಮನುಷ್ಯನ ಒಂದೇ ತೆರನಾಗಿ ಇರುವುದಿಲ್ಲ ಹಲವಾರು ಮುಖಗಳನ್ನು ಹೊಂದಿರುತ್ತಾನೆ ಎಂಬುವುದು ಕಲಾವಿದನ ವಿಭಿನ್ನ ರೀತಿಯಲ್ಲಿ ಊಹೆಯಾಗಿರುವಂತೆ ಭಾವಭಿವ್ಯಕ್ತಗೊಳಿಸಿ ಮೇಲಿನ ರೀತಿಯಲ್ಲಿ ಅನೇಕ ಆಕಾರಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆ.

ಮನುಷ್ಯನ ಎರಡು ಮುಖಗಳು

ಈ ತೈಲವರ್ಣ ಚಿತ್ರವು ನಿಸರ್ಗದಲ್ಲಿರುವಂತಹ ಮನುಷ್ಯರ ಎರಡು ಮುಖಗಳು ಎದ್ದು ಕಾಣುತ್ತಿವೆ. ಒಂದು ನೀಲಿ ಮಿಶ್ರಿತ ಹಸಿರು, ಅದೇ ಹಸಿರು, ಇನ್ನೊಂದು ಮುಖವಾಗಿ ಪರಿವರ್ತನೆಯಾಗಿದೆ. ಆ ಮನುಷ್ಯ ತಲೆಯ ಮೇಲೆ ಇರುವಂತಹ ಕೂದಲುಗಳು ಪರಿಸರದ ಎಲ್ಲ ಕಡೆಗಳಲ್ಲೂ ಚದುರಿ ಹೋಗುತ್ತಿವೆ. ಸ್ವಲ್ಪ ಸ್ವಲ್ಪ ಬೆಳಕಿನ ಹಾಗೆ ಹಳದಿ, ಕಂದುಗೆಂಪು ಮಿಶ್ರಿತ ಬಣ್ಣಗಳನ್ನು ಬಳಸಿದ್ದಾರೆ.

ಭಿತ್ತಿ ಚಿತ್ರಗಳು :

ಇಂದೊಂದು ತುಂಬ ಹಳೆಯ ಕಾಲದಿಂದಲೇ ಬಂದಂತಹ ವರ್ಣ ಸಂಯೋಜನಾ ಚಿತ್ರಕಲೆಯ ಪದ್ಧತಿಯಾಗಿದೆ. ಭಿತ್ತಿ ಚಿತ್ರಗಳನ್ನು ಮ್ಯೂರಲ್ ಎಂತಲೂ ಕರೆಯುತ್ತಾರೆ. ಇದನ್ನು ಗೋಡೆಗಳ ಮೇಲೆ ಚಿತ್ರವನ್ನು ರಚಿಸುವ ವಿಧಾನಕ್ಕೆ ಭಿತ್ತಿ ಎಂದು ಕರೆಯುತ್ತಾರೆ. ಇಲ್ಲಿ ಜಲವರ್ಣದಿಂದ ಮಿಶ್ರ ಮಾಧ್ಯಮಗಳಿಂದಲೂ ಚಿತ್ರವನ್ನು ರಚಿಸಬಹುದು. ಇದಲ್ಲದೇ ಹಲವು ತಂತ್ರವಿಧಾನಗಳಿಂದ ಭಿತ್ತಿ ಚಿತ್ರವನ್ನು ರಚಿಸಬಹುದು. ಇವುಗಳಲ್ಲಿ ಮೊಸಯಿಕ್, ಟೆಂಪರಾ, ಟೆರಾಕುಟಾ ಎಂದು ಹಲವು ತಂತ್ರ ವಿಧಾನಗಳು ಮೊಟ್ಟೆ ಅಥವಾ ಯಾವುದೇ ಬಗೆಯ ಅಂಟಿನೊಂದಿಗೆ ಕೆಲವು ಕರಗುವ ಮತ್ತು ಕರಗದ ಬಣ್ಣಗಳನ್ನು ಬೆರೆಸಿ ತಯಾರಿಸುವ ವಿಶೇಷ ವರ್ಣಗಳ ಮಾಧ್ಯಮ ಟೆಂಪರಾ. ಈಜಿಪ್ತಿಯನ್ನರು, ರೋಮನ್ನರು ಹಾಗೂ ಗ್ರೀಕ್‌ರಿಂದ ಉಪಯೋಗಿಸಲ್ಪಟ್ಟ ಹಳೆಯ ಚಿತ್ರವಿಧಾನ. ಭಿತ್ತಿ ಚಿತ್ರಗಳು ಗೋಡೆ

ಅಥವಾ ಪಟ್ಟಿಕೆಗಳ ಮೇಲೆ ಚಿತ್ರರಚನೆಗೆ ಉಪಯೋಗಿಸಬಹುದಾದಂತಹ ಮಾಧ್ಯಮ ಟೆಂಪೆರಾದ ವೈಶಿಷ್ಟ್ಯಗಳು. ೧–ಬೇರೆ ಬೇರೆ ಮಾಧ್ಯಮಗಳ ಅನುಕರಣೆ, ೨–ಪರವಾಗಿ ಉಳಿಯುವಿಕೆ ೩–ಹೊಳಪಿಲ್ಲದ ಮೇಲ್ಮೈ ೪–ಬೇಗ ಒಣಗುವಿಕೆ ೫–ಯಾವುದೇ ಆಧಾರದ ಮೇಲೆ ಬರೆಯಬಹುದಾದ ಸಾಮರ್ಥ್ಯ ಇತ್ಯಾದಿ ಈ ವೈಶಿಷ್ಟ್ಯಗಳನ್ನು ಟೆಂಪರಾ ಹೊಂದಿದೆ. ಈ ರೀತಿಯಾಗಿ ಇಂದು ನಾವು ಈ ಭಿತ್ತಿ ಚಿತ್ರಗಳಿಗೆ ಅಜಂತಾ ಮತ್ತು ಹಂಪಿ ಪ್ರದೇಶದ ಭಿತ್ತಿಯನ್ನು ಹೆಸರಿಸಬಹುದು.

ಟಿಪ್ಪಣಿಗಳು

೧) ಚಿತ್ರಕಲಾ ಪ್ರಪಂಚ, ಪಿ.ಆರ್. ತಿಪ್ಪೇಸ್ವಾಮಿ, ಪುಟ ೩೪೫

೨) ಚಿತ್ರಕಲಾ ಪ್ರಪಂಚ, ಪಿ.ಆರ್. ತಿಪ್ಪೇಸ್ವಾಮಿ, ಪುಟ ೩೪೬

೩) ಬಿ.ವಿ.ಕೆ.ಶಾಸ್ತ್ರೀ (ಸಂ) ರೇಖಾಚಿತ್ರ ಪು–೫

೪) ಕಲಾವಿದರೊಂದಿಗೆ ಸಂದರ್ಶನ ದಿನಾಂಕ

೫) ಕಲೆ ಮತ್ತು ರಸಾಸ್ವಾದನೆ ಪ್ರೊ.ಎಂ. ಎಚ್. ಕೃಷ್ಣಯ್ಯ ಪುಟ–೧೮

೬) ಕಲೆ ಮತ್ತು ರಸಾಸ್ವಾದನೆ ಪ್ರೊ.ಎಂ. ಎಚ್. ಕೃಷ್ಣಯ್ಯ ಪುಟ–೧೮

೭) ಕಲೆ ಮತ್ತು ರಸಾಸ್ವಾದನೆ ಪ್ರೊ.ಎಂ. ಎಚ್. ಕೃಷ್ಣಯ್ಯ ಪುಟ–೨೧

೮) ಕಲಾ ಪ್ರಪಂಚ, ಶಿವರಾಮ ಕಾರಂತ ಪುಟ–೨೩

೯) ಚಿತ್ರ–ಚಿತ್ರ ಚಿ.ಸು. ಕೃಷ್ಣಶೆಟ್ಟಿ ಪುಟ–೯

೧೦) ಚಿತ್ರಕಲಾ ಪ್ರಪಂಚ ಪಿ.ಆರ್.ತಿಪ್ಪೇಸ್ವಾಮಿ ಪುಟ–೫೬

೧೧) ಚಿತ್ರಕಲಾ ಪ್ರಪಂಚ ಪಿ.ಆರ್.ತಿಪ್ಪೇಸ್ವಾಮಿ ಪುಟ–೩೬೨

೧೨) ಚಿತ್ರಕಲೆ & ಪೂರಕ ಕ್ಷೇತ್ರಗಳು ಶ್ರೀ ಎಸ್.ಸಿ.ಪಾಟೀಲ ಪುಟ–೧೦೧

೧೩) ಕಲಾಕೋಶ ಪಿ.ಆರ್. ತಿಪ್ಪೇಸ್ವಾಮಿ, (ಪ್ರ.ಸಂ.) ಪುಟ–೧೬೧































ಜೈನಧರ್ಮದ ನಮೋಕಾರದ ಮಹಾಮಂತ್ರದ ಚಿತ್ರಗಳು






















































ಅಧ್ಯಾಯ : ಐದು

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾಕೃತಿಗಳ ಸ್ವರೂಪ

ಅಧ್ಯಾಯ-೫

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾಕೃತಿಗಳ ಸ್ವರೂಪ

ವಸ್ತುವಿಷಯ :

ಮೊದಲು ವಸ್ತುವಿಷಯಗಳಲ್ಲಿ ಎರಡು ಗುಂಪುಗಳನ್ನಾಗಿ ಮಾಡಿ ಒಂದು ಸಜೀವ ಇನ್ನೊಂದು ನಿರ್ಜೀವ ವಸ್ತುಗಳು ಈ ಎರಡು ವಸ್ತುವಿಷಯಗಳನ್ನು ಬಳಸಿಕೊಂಡು ಕಲಾವಿದ ಭಾವನಾತ್ಮಕವಾಗಿ ಕಲಾಕೃತಿಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಮನಷ್ಯ ತನ್ನ ಬುದ್ಧಿಮಟ್ಟ ಬೆಳವಣಿಗೆಗೆ ಅಥವಾ ಕಲಾಜಗತ್ತಿನ ಬೆಳವಣಿಗೆಗಾಗಿ ಪರಿಸರದಲ್ಲಿ ಸಿಗುವಂತಹ ವ್ಯಕ್ತಿಗಳಾಗಲಿ, ಪ್ರಭಾವಗಳಾಗಲಿ, ಸ್ವಾಭಾವಿಕವಾಗಿ ಪರಿಣಾಮ ಬೀಳುತ್ತವೆ. ತನ್ನ ಪರಿಸರ, ಪ್ರಭಾವ ಆ ಪರಿಸರದಲ್ಲಿರುವಂತಹ ವ್ಯವಸ್ಥೆ ಅವು ಹೆಚ್ಚು ಪ್ರಭಾವಿತವಾಗತ್ತವೆ. ಅವು ವಸ್ತುನಿಷ್ಟವಾಗಿ ಆಗಿರಲಿ, ವಸ್ತುವಾಗಲಿ, ವ್ಯಕ್ತಿಯಾಗಲಿ, ವಿಕೃತವಾದ ಘಟನೆಯಾಗಲಿ ಯಾವುದೇ ಒಂದು ವಿಷಯ ತೆಗೆದುಕೊಂಡರು ಸಹಿತ ಕಲಾವಿದ ತನ್ನ ಸಂಯೋಜನೆಯ ಮುಖಾಂತರ ಭಾವನೆಗಳನ್ನು ಅಭಿವ್ಯಕ್ತಪಡಿಸಲಿಕ್ಕೆ ಈ ವಸ್ತುವಿಷಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ.

ಈ ವಸ್ತುವಿಷಯಗಳಲ್ಲದೇ ನಿರ್ಜೀವ ವಸ್ತುಗಳು, ಕಲ್ಲು, ಮಣ್ಣು, ನಿಸರ್ಗ, ಘನ ವಸ್ತುಗಳು ಮತ್ತು ಕಣ್ಣಿಗೆ ಕಾಣಿಸದೆ ಇರುವ ವಸ್ತುಗಳೂ ಇದ್ದು, ಅವುಗಳನ್ನು ತನ್ನ ಸಂಯೋಜನೆಗಳಲ್ಲಿ ವಸ್ತುನಿಷ್ಟವಾಗಿ ಆಯ್ಕೆ ಮಾಡಿಕೊಂಡು ಒಂದು ದೃಶ್ಯ ರಚಿಸಬೇಕಾದರೆ ನಿಸರ್ಗದ ಭಾವನೆಯನ್ನು, ದೃಶ್ಯವನ್ನು, ವೇಳೆಯನ್ನು ಆ ಘಟನೆಯ ವೇಳೆಯನ್ನು ಸೆರೆ ಹಿಡಿಯಲಿಕ್ಕೆ ಕಲಾವಿದ ಪ್ರಯತ್ನ ಪಡುತ್ತಾನೆ. ಆ ಸಂದರ್ಭದಲ್ಲಿ ಇರುವಂತಹ ಬಿಸಿಲು, ನೆರಳು, ಬೆಳಕು ಹವಾಮಾನ ಇವೆಲ್ಲ ಆ ಚಿತ್ರ ನೋಡಿದರೆ

ಇಂತಹ ಸಮಯದಲ್ಲಿ ರಚಿಸಿರುವುದು ಎಂದು ತಿಳಿದುಬರುವುದು. ನಂತರ ವಸ್ತು ವಿಷಯಗಳು ಏನಿವೆ ಎನ್ನುವುದನ್ನು ಕಲಾವಿದ ಚಿತ್ರದ ಮೂಲಕ ವರ್ಣನೆ ಮಾಡುತ್ತಾನೆ. ಬಣ್ಣಗಳ ಮುಖಾಂತರ ಆಕಾರಗಳ ಮುಖಾಂತರ, ಘಟನಗಳ ಮುಖಾಂತರ ರೇಖೆಗಳನ್ನು ರಚನೆ ಮಾಡಿ ಅವುಗಳಿಗೆ ತನ್ನದೇ ಆದ ಆಕಾರ ಕೊಟ್ಟು ಸಂಯೋಜನೆಯ ರೂಪದಲ್ಲಿ ಒಂದು ಕಲಾಕೃತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾನೆ. ಇದು ದೃಶ್ಯಕಲಾ ರಚನೆ ವಿಧಿವಿಧಾನದ ಒಂದು ನಿಯಮವಾಗಿದೆ.

ಒಂದು ಜನಪದವಾಗಿರಬಹುದು ಸಾಮಾಜಿಕ ಪರಿಸರವಾಗಿರಬಹುದು ಒಂದು ಒಳ್ಳೆಯ ಭಾವನಾತ್ಮಕವಾಗಿರಬಹುದು. ತನ್ನ ಮಾನಸಿಕ ಪ್ರಭಾವವಾಗಿರಬಹುದು. ಇಲ್ಲವೇ ತನ್ನದೇ ಕನಸು ಕಂಡಿರಬಹುದು. ಇಂತಹವುಗಳನ್ನೆಲ್ಲ ತನ್ನ ಚಿತ್ರಗಳಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತಾನೆ. ವಸ್ತು ನಿಷ್ಟತೆಯಲ್ಲಿ ವಸ್ತುವಿನ ಗುಣಗಳ ಆಯಾಮಗಳನ್ನು ಹಾಗೂ ಅವುಗಳಿಗಿರುವ ಶಕ್ತಿಯನ್ನು ಹಾಗೂ ಪ್ರಭಾವವನ್ನು ತಿಳಿದುಕೊಳ್ಳಲಿಕ್ಕೆ ಕಲಾವಿದ ಪ್ರಯತ್ನ ಮಾಡುತ್ತಾನೆ. ಅದು ಜೀವ ಹಾಗೂ ಸಜೀವವಾಗಿರಬಹುದು ಇವುಗಳಿಗೆಲ್ಲ ಕಲಾವಿದ ಜೀವಕಳೆಯನ್ನು ಕೊಟ್ಟಿರುತ್ತಾನೆ ಎಂಬುವುದು ವೇದವಾಕ್ಯವಾಗಿದೆ.

ಯಾವುದೇ ಕಲಾಕೃತಿಯನ್ನು ರಚಿಸಬೇಕಾದರೆ ಚಿತ್ರಿಸುವ ಕಲಾಕೃತಿಯ ವಸ್ತುವಿನ ಆಯ್ಕೆಯೂ ಅಷ್ಟೇ ಮಹತ್ವದ್ದಾಗಿರುತ್ತದೆ. ಶ್ರೀ ಎಂ. ಆರ್. ಬಾಳೀಕಾಯಿ ಅವರು ಚಿತ್ರಿಸಿದ ಕಲಾಕೃತಿಗಳಲ್ಲಿ ರೇಖಾಚಿತ್ರಗಳು ಮತ್ತು ವರ್ಣ ಚಿತ್ರ ಕಲಾಕೃತಿಗಳನ್ನು ನಾವು ನೋಡಬಹುದು. ಆದರೆ ರೇಖಾ ಚಿತ್ರಗಳಲ್ಲಿ ರೇಖೆಗಳನ್ನು ಬಿಟ್ಟರೆ ಅವುಗಳಲ್ಲಿಯೇ ಕಪ್ಪು ಬಿಳುಪಿನ ಸಂಯೋಜನೆ ಮತ್ತು ನೆರಳು ಬೆಳಕಿನ ವ್ಯತ್ಯಾಸ ಗುರುತಿಸುವುದರ ಜೊತೆಗೆ ಪೆನ್ನು, ಪೆನ್ಸಿಲ್, ಇಂಕ್, ಚಾರ್ಕೊಲ್, ಕ್ರೆಯಾನ್ಸ್ ಅಲ್ಲದೇ ಮಿಶ್ರ ಮಾಧ್ಯಮದ ರೇಖಾ ಕೃತಿಗಳನ್ನು ರಚಿಸಿದ್ದಾರೆ. ಜೊತೆಗೆ ವರ್ಣ ಕಲಾಕೃತಿಯಲ್ಲಿ ಶೈಲಿ ಒಂದಾದರೂ ಮೂಡುವಂತಹ ವಿಧಾನಗಳು ಬೇರೆ-ಬೇರೆ ಕಂಡುಬರುತ್ತದೆ. ಜಲವರ್ಣ, ತೈಲವರ್ಣ ಮತ್ತು ನಿಸರ್ಗದಲ್ಲಿ ಸಿಗುವಂತಹ ಎಲೆ, ಹೂಗಳಂತಹ ನಿಸರ್ಗ ವರ್ಣಗಳಂತಹ ಅನೇಕ ವರ್ಣಕಲಾಕೃತಿಗಳನ್ನು ರಚಿಸಿದ್ದಾರೆ. ಈ ಎರಡು ಕಲಾಕೃತಿಗಳನ್ನು ನೋಡಿದಾಗ ಅವುಗಳ ವಸ್ತು ವಿಷಯಗಳು ಹಂತ ಹಂತವಾಗಿ ಬದಲಾವಣೆಯನ್ನು ಹೊಂದುತ್ತಾ ಬಂದಿರುವುದು ಸಂಶೋಧನೆಯಿಂದ ಕಂಡುಬರುತ್ತದೆ. ಇವರ ಅಧ್ಯಯನ ಕಾಲದಲ್ಲಿ ರಚಿತವಾಗಿರುವ ಕಲಾಕೃತಿಗಳ ವಸ್ತುವಿಷಯಗಳೇ ಬೇರೆ ಅಧ್ಯಾಪಕ ವೃತ್ತಿಯಲ್ಲಿ ನಿರ್ಮಾಣಗೊಂಡ ಕಲಾಕೃತಿಗಳೇ ಬೇರೆ. ಇನ್ನು ಈಗಿನ ನಿವೃತ್ತಿ ಸಂದರ್ಭದಲ್ಲಿ ರಚಿಸುತ್ತಿರುವ ವಸ್ತುವಿಷಯಗಳು ಪ್ರತಿಯೊಂದರ ಹೊಸತನವನ್ನು ಎದ್ದು ಕಾಣಿಸುತ್ತಿವೆ. ಈ ಎಲ್ಲ ವಸ್ತು

ವಿಷಯಗಳು ಬೇರೆ ಬೇರೆಯಾಗಿ ಆಯಾ ಹಂತಕ್ಕೆ ರಚಿತವಾಗಿರುವದನ್ನು ಸಂಶೋಧನೆಯ ಅಧ್ಯಯನಗಳಿಂದ ಕಾಣಬಹುದಾಗಿದೆ.

ಶ್ರೀ ಎಂ. ಆರ್ ಬಾಳೀಕಾಯಿ ಅವರ ಕಲಾಕೃತಿಗಳಲ್ಲಿ ವಸ್ತುವಿಷಯವನ್ನು ಹುಡುಕುತ್ತಾ ಹೋದಂತೆಲ್ಲ ಹೊಸ ಹೊಸದಾಗಿ ಕಾಣುವುದರ ಜೊತೆಗೆ ಇನ್ನು ಹುಡುಕಬೇಕು ಇದರಲ್ಲಿ ಏನಿದೆ, ಎನ್ನುವ ಕುತೂಹಲವನ್ನು ಉಂಟು ಮಾಡುತ್ತದೆ. ಪ್ರತಿಯೊಂದು ವಸ್ತುವನ್ನು ತಮ್ಮ ಕಲಾಕೃತಿಯ ವಸ್ತುವಿಷಯವನ್ನಾಗಿ ಬಳಸಿಕೊಳ್ಳುವದರ ಜೊತೆಗೆ ಒಂದು ಮಗು ಆಟವಾಡುತ್ತಿದ್ದರೆ ಸಾಕು ಅದರಲ್ಲಿ ಹಲವಾರು ವಿಷಯಗಳನ್ನು ಕಂಡು ಕೊಳ್ಳುತ್ತಾರೆ. ಒಂದು ಪಕ್ಷಿಯ ಕೂಗು ಕೇಳಿದರೂ ಸಹಿತ ಅದು ತಮ್ಮ ಕಲಾಕೃತಿಯ ವಸ್ತುವನ್ನಾಗಿಸಿಕೊಳ್ಳುತ್ತಾರೆ. ತಾಯಿ ಮಕ್ಕಳ ಸಂಬಂಧ ಹೇಗಿರುತ್ತೆ ಎನ್ನುವುದನ್ನು ಸಹಿತ ಅನೇಕ ರೇಖಾ ಚಿತ್ರಗಳನ್ನು ವಿಷಯವನ್ನಾಗಿ ರಚಿಸಿದ್ದಾರೆ. ಯಾವುದೇ ಒಂದು ಸಂಖ್ಯೆ ಕೊಟ್ಟರು ಸಹಿತ ಅದರಲ್ಲಿ ಒಂದು ರೇಖಾಚಿತ್ರ ರಚಿಸುತ್ತಾರೆ. ನಂತರ ಅಕ್ಷರ ಕೊಟ್ಟರು ಹಾಗೆ ತಮ್ಮ ಕೈಚಳಕದಿಂದ ಕಲಾಕೃತಿಗಳನ್ನು ರಚಿಸುವುದರ ಜೊತೆಗೆ ಅವರು ನಿವೃತ್ತಿಯ ಬದುಕಿನಲ್ಲಿಯೂ ಸಹಿತ ಇನ್ನು ಅನೇಕ ವಸ್ತು ವಿಷಯಗಳು ನನ್ನ ಕಣ್ಮುಂದೆ ಬರುತ್ತಿವೆ. ಅವುಗಳನ್ನು ಮಾಡುವುದಾಗಲಿ ಇನ್ನು ಏನು ಮಾಡಿಲ್ಲ ಮಾಡಬೇಕಾದದು ಬಹಳಷ್ಟಿದೆ ಎನ್ನುವ ಈ ಕಲಾವಿದರು ಕೆಲಸದ ಒತ್ತಡವಿದ್ದರು ಸಹಿತ ದಿನಕ್ಕೆ ಒಂದಾದರೂ ಚಿತ್ರ ಬಿಡಿಸಿ ಮಲಗುವ ಹವ್ಯಾಸ ಇವರದ್ದಾಗಿದೆ.

ಅವರ ಈ ಒಂದು ಹವ್ಯಾಸಗಳನ್ನು ಗಮನಿಸಿದಾಗ ನಿವೃತ್ತಿಯನ್ನು ಹೊಂದಿದ ಮೇಲೆಯೇ ಹೆಚ್ಚಿನ ರೀತಿಯಲ್ಲಿ ಕಲಾ ಚಟುವಟಿಕೆಗಳನ್ನು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ ಈಗಿನ ಕಲಾ ವಿದ್ಯಾರ್ಥಿಗಳು ಒಂದು ಚಿತ್ರ ಬಿಡಿಸು ಎಂದರೆ ಏನಾದರೂ ಕುಂಟ ನೆಪ ಹೇಳುತ್ತಾರೆ. ಅದು ಇಲ್ಲ, ಇದು ಇಲ್ಲ ಅಂತ. ಆದರೆ ಬಾಳೀಕಾಯಿ ಅವರು ತಮಗೆ ಯಾವುದಾದರೂ ಅಲ್ಲಿದ್ದ ಕ್ಷಣದಲ್ಲಿ ಏನಾದರು ವಸ್ತುವಿಷಯ ಸಿಕ್ಕರೆ ಸಾಕು ಸಾಮಾನ್ಯವಾಗಿ ಎಲ್ಲರ ಹತ್ತಿರ ಬಸ್ ಟಿಕೆಟ್ ಇದ್ದೆ ಇರುತ್ತೆ. ಹಾಗೆ ಅವುಗಳ ಮೇಲೆಯೇ ಅನೇಕ ರೇಖಾ ಚಿತ್ರಗಳನ್ನು ಮಾಡಿದ್ದಾರೆ. ನಂತರ ತೆಂಗಿನ ಮರದಲ್ಲಿ ಪೊದರು ಬಿಡುತ್ತೇ, ಆ ಪೊದರನ್ನು ತೆಗೆದುಕೊಂಡು ಅದರ ಮೇಲೆಯೂ ಅನೇಕ ಕಲಾಕೃತಿಗಳನ್ನು ಮಾಡಿರುವುದು ಸಂಶೋಧನೆಯಿಂದ ತಿಳಿದುಬರುತ್ತದೆ.

ಪ್ರಭಾವ-ಪ್ರೇರಣೆ:

ಮಾನವನ ಜೀವನಕ್ಕೂ ಕಲೆಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿ ತಾನು ಅನುಭವಿಸಿದ ಘಟನೆ, ಸ್ಥಳ, ಸ್ಥಿತಿ-ಗತಿ, ನೋವು-ನಲಿವು ಮುಂತಾದವುಗಳ ಒತ್ತಡದಿಂದ ಒಂದೊಂದು ರೀತಿಯ

ಸಂವೇದನೆಯನ್ನು ಪಡೆಯುತ್ತಾನೆ. ಅದಕ್ಕನುಗುಣವಾಗಿ ತನ್ನ ಅನಿಸಿಕೆಗಳನ್ನು ಹೇಳಬೇಕು ಎನ್ನುವ ಭಾವನೆ ಪ್ರತಿಯೊಬ್ಬ ಮಾನವನಲ್ಲಿ ಸ್ವಾಭಾವಿಕವಾಗಿರುತ್ತದೆ. ಆದರೆ ಆ ಗುಣ ಅನುಭವನಗಳನ್ನು ಪ್ರಜೆಯ ವಸ್ತುಗಳಾದಾಗ ಅವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಇವು ವಿವಿಧ ರೀತಿಯ ಸಂವಹನ ಮಾಧ್ಯಮಗಳ ಮೂಲಕ ಸೃಷ್ಟಿಸುವ ಪ್ರತಿಯೊಂದರಲ್ಲಿರುವ ಕಲಾವಿದರಲ್ಲಿ ಪ್ರೇರಣೆ ತುಂಬುತ್ತದೆ. ಈ ಪರಿಸರದ ವಾತಾವರಣವನ್ನು ತಾನು ಅನುಭವಿಸಿದಾಗ ಮಾತ್ರ ಅದು ಕಲಾತ್ಮಕವಾಗಿ ರೂಪಿತವಾಗುತ್ತದೆ. ಅದಕ್ಕಾಗಿ ಸಾಮಾನ್ಯ ಮನುಷ್ಯನಿಗೂ ಕಲಾವಿದನಿಗೂ ಸ್ವಲ್ಪ ವ್ಯತ್ಯಾಸವಿದೆ. ಸಾಮಾನ್ಯ ಮನುಷ್ಯನಾದವನು ತನ್ನ ಸುತ್ತಮುತ್ತಲಿನ ಪರಿಸರವನ್ನು ನೋಡುವ ರೀತಿಯೇ ಬೇರೆ. ಅದೇ ಪರಿಸರವನ್ನು ಒಬ್ಬ ಕಲಾವಿದನು ನೋಡುವ ರೀತಿಯೇ ಬೇರೆಯಾಗುತ್ತದೆ. ಒಬ್ಬ ಸಾಮಾನ್ಯ ಮನುಷ್ಯ ಯಾವುದನ್ನು ಅರಿಯದೆ ಹೋಗುತ್ತಾನೆ. ಉದಾ: ಒಂದು ಶಾಸನವನ್ನು ನೋಡಿದರೆ ಅದರಿಂದ ಏನನ್ನು ತಿಳಿದುಕೊಳ್ಳದೇ ಅದರ ಮೇಲೆ ಬೇರೆ ಏನೋ ಪ್ರಯೋಗ ಮಾಡಿ ಅದನ್ನು ವಿರೂಪಗೊಳಿಸುತ್ತಾನೆ. ಆದರೆ ಕಲಾವಿದರಿಗೆ ಇವೆಲ್ಲವೂ ಕಲಾತ್ಮಕವಾಗಿ ಕಾಣಿಸುತ್ತವೆ. ವಿರೂಪಗೊಂಡಿರುವ ಶಾಸನವನ್ನು ನೋಡಿ ಅದರಲ್ಲಿ ಏನಿದೆಯೆಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಇದು ಯಾವ ಕಾಲದ್ದು, ಯಾರು ನಿರ್ಮಿಸಿದ್ದು ಹೀಗೆ ಹತ್ತು ಹಲವು ಬಗೆಯ ಕಲಾತ್ಮಕ ಮತ್ತು ಸಂಶೋಧನಾತ್ಮಕ ದೃಷ್ಟಿಯಿಂದ ಅವಲೋಕಿಸುತ್ತಾನೆ. ಒಂದು ಹಳೆಯ ಮನೆ, ಹಾಳು ಬಿದ್ದ ಮನೆಯನ್ನು ನೋಡಿದ ಕೂಡಲೇ ಅದರ ಆಕಾರ, ಮೈವಳಿಕೆ ಮತ್ತು ಅದರಲ್ಲಿರುವ ಸುಂದರತೆಯನ್ನು ಕಲಾತ್ಮಕವಾಗಿ ಗಮನಿಸುತ್ತಾನೆ. ಈ ವಿಷಯಗಳನ್ನು ತನ್ನ ಪ್ರಾರಂಭದ ಕಲಾ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳುತ್ತಾನೆ. ಹೀಗೆ ಇವುಗಳ ಜೊತೆಗೆ ಶ್ರೀ ಎಂ. ಆರ್. ಬಾಳೀಕಾಯಿಯವರಿಗೆ ಅವರ ಊರಲ್ಲಿರುವಂತಹ ಪರಿಸರ, ದನ–ಕರ, ಹಬ್ಬ–ಹರಿದಿನ, ಜನಪದ ಆಟಗಳು–ಕ್ರೀಡೆಗಳು ಇಂತಹ ಕಲಾ ಚಟುವಟಕೆಗಳ ಮಧ್ಯ ಅನೇಕ ವಿಷಯಗಳನ್ನು ಕುರಿತು ಚಿತ್ರಿಸಲು ತನ್ನ ವಸ್ತುವಿಷಯಗಳನ್ನಾಗಿ ಬಳಸಿಕೊಂಡಿರುತ್ತಾರೆ. ಹೀಗೆ ಒಬ್ಬ ಕಲಾವಿದನಿಗೆ ಅವನು ನೆಲೆಸಿರುವ ಪರಿಸರದ ವಾತಾವರಣವೇ ಮೊದಲ ಪ್ರೇರಣೆಯಿಂದ ಪ್ರಭಾವಕ್ಕೆ ಒಳಗಾಗಿ ಇಂತಹ ವಾತಾವರಣದಲ್ಲಿಯೇ ಅವನು ಕಲಾತ್ಮಕತೆಯನ್ನು ಕಂಡು ಕಲಾ ಸೃಷ್ಟಿಯಲ್ಲಿ ತೊಡಗುತ್ತಾನೆ.

ಜೀವನ ಬದಲಾಯಿಸಿದಂತೆ ಜೀವನದ ಮೌಲ್ಯಗಳು ಬದಲಾಗುತ್ತವೆ. ಹಾಗೆ ಕಲೆಯು ಬದಲಾಗುತ್ತದೆ. ಬದುಕಿನಿಂದ ಸಂವೇದನೆಗೊಂಡು ಬದುಕಿಗೆ ಸ್ಫೂರ್ತಿಯನ್ನು ಕೊಡುವ ಚಿತ್ರಕಲೆ ಬದುಕಿನ ನಿಯಮಗಳನ್ನು ಒಂದು ರೀತಿಯಾಗಿ ಅನುಸರಿಸಿ ಅದರಲ್ಲಿಯೂ ಕಾಣುತ್ತೇವೆ. ಹಳೆಯದರ ಸ್ಥಾನಕ್ಕೆ ಹೊಸದು ಒಂದು ನಿಲ್ಲುತ್ತದೆ. ಈ ಹೊಸದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ. ಈ ಕಲಾನುಗುಣಗಳು ಕಲಾ ಅಭಿವ್ಯಕ್ತಿ ಕ್ರಿಯೆಯಾಗಿ ಹೊರಬರುತ್ತದೆ. ಈ ಕ್ರಿಯೆಯನ್ನು ಕಲಾತ್ಮಕ ಸೃಷ್ಟಿಯೆಂದು ಹೇಳಬಹುದು.

ಹೀಗಾಗಿ ಕಲಾವಿದನಿಗೆ ಸೃಷ್ಟಿಯೇ ಮೊದಲ ಪ್ರೇರಣಾ ಶಕ್ತಿಯಾಗಿ ಹೊರ ಹೊಮ್ಮುತ್ತದೆ. ನಿಸರ್ಗ ನಿರಂತರವಾಗಿ ನಡೆಯುವ ಕ್ರಿಯೆ ಅದೊಂದು ರಾಜಕೀಯ, ಧಾರ್ಮಿಕ, ಸಾಮಾಜಿಕ ಬದಲಾವಣೆಗಳಿಗೆ ಪ್ರತಿಕ್ರಿಯೆ ತೋರುವ ಕಾರಣ ಕಲೆಯ ವಿಕಾಸ ಮಾರ್ಗದಲ್ಲಿ ಕೆಲವೊಂದು ವಿಶಿಷ್ಟ ಲಕ್ಷಣ, ವೈಚಿತ್ರ್ಯಗಳನ್ನು ಇಂದಿನ ಸಮಕಾಲೀನ ಕಲೆಯಲ್ಲಿ ಗುರುತಿಸಬಹುದಾಗಿದೆ. ಮಾನವನ ಇತಿಹಾಸದ ಹಿಂದೆ ಅಡಕವಾಗಿರುವ ನಿಯಮಗಳ ಜೊತೆಗೆ ಅವು ಹೇಗೆ ಆತನ ಮನಸ್ಸಿನ ಕಾರ್ಯ ಚಟುವಟಿಕೆಗಳ ಮೇಲೆ ಪ್ರಭಾವವನ್ನು ಬೀರುತ್ತವೆಂಬುವುದನ್ನು ಕಲಾವಿದರ ಕಲಾಕೃತಿಗಳ ಅಧ್ಯಯನ ನಡೆಸಿರುವುದರಿಂದ ತಿಳಿದುಬರುತ್ತದೆ.

ಈ ಕಲಾ ಜಗತ್ತಿನಲ್ಲಿ ಅನೇಕ ಕಲಾವಿದರು ತಮ್ಮದೇ ಆದ ಶೈಲಿ ವೈಶಿಷ್ಟ್ಯತೆಯಿಂದ ತಮ್ಮ ಸಮಕಾಲೀನ ಕಲಾವಿದರಿಂದ ಬೇರೆಯೇ ಎನ್ನುವಂತೆ ತಮ್ಮ ಕಲಾಕೃತಿಗಳ ಮೂಲಕ ತಮ್ಮ ತನವನ್ನು ಅಭಿವ್ಯಕ್ತ ಪಡಿಸಿದ್ದಾರೆ. ಈ ಪ್ರಪಂಚದ ಎಲ್ಲಾ ಚಿತ್ರಕಲಾವಿದರು ಒಂದಿಲ್ಲಾ ಒಂದು ರೀತಿಯಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಪ್ರಾರಂಭದ ಹಂತದಲ್ಲಿ ಪ್ರಭಾವ ಬೀರುವುದನ್ನು ಕಾಣುತ್ತೇವೆ. ಕೊನೆಗೆ ತಮ್ಮದೇ ಆದ ಶೈಲಿಯ ಚಿತ್ರಗಳನ್ನು ಚಿತ್ರಿಸಿ ತಮ್ಮ ಪ್ರಭಾವದ ಪ್ರತಿಮೆಯನ್ನು ಸೃಷ್ಟಿಸುವಲ್ಲಿ ಸಫಲರಾಗುತ್ತಾರೆ.

ಶ್ರೀ ಎಂ. ಆರ್. ಬಾಳೀಕಾಯಿ ಅವರು ತಮ್ಮ ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಹಲವಾರು ರೀತಿಯ ಪ್ರಭಾವಕ್ಕೆ ಒಳಗಾಗಿ ಕಲಾಸೃಷ್ಟಿಯಲ್ಲಿ ತೊಡಗಿಸಿಕೊಂಡಿರುವುದನ್ನು ನಾವು ಕಾಣಬಹುದು. ಬಾಳೀಕಾಯಿ ಅವರ ಪ್ರಾಥಮಿಕ ಹಂತದ ಪ್ರಭಾವಕ್ಕೆ ಒಳಗಾಗಿರುವುದು ಅವರಲ್ಲಿರುವಂತಹ ಕಲೆಯ ಆಸಕ್ತಿ ಜೊತೆಗೆ ಊರಲ್ಲಿ ನಡೆಯುವಂತಹ ಹಬ್ಬ ಹರಿದಿನಗಳ ಸಂಭ್ರಮದ ಆಚರಣೆ, ಗಣೇಶನ ಹಬ್ಬ, ದೀಪಾವಳಿಯ ಹಬ್ಬ ಇಂತಹಗಳೆಲ್ಲ ಕಲಾವಿದರ ಮೇಲೆ ಹೆಚ್ಚಾಗಿ ಪ್ರಭಾವ ಬೀರುವುದರ ಜೊತೆಗೆ ಅವರ ಮನೆಯಲ್ಲಿ ಚಿತ್ರ ಬಿಡಿಸಿದರೆ ಹರೆದು ಹಾಕುವುದು, ಬೈಯುವುದು, ಹೊಡೆಯುವುದು ಮಾಡುವುದನ್ನು ಅಂದರೆ ಬೇಡ ಅನ್ನೋದನ್ನೆಲ್ಲ ಇನ್ನು ಹೆಚ್ಚುಚ್ಚು ಮಾಡಬೇಕು ಅನ್ನೋ ಒಂದು ಛಲ ಅವರಲ್ಲಿ ಪ್ರಭಾವಿತಗೊಂಡಿತು.

ಕಲಾವಿದನಾಗಲಿ ಬೇರೆಯಾಗಲಿ ಅವನು ಒಂದು ಸಮಾಜದಲ್ಲಿ ಬೆಳೆಯಬೇಕು. ಕಲಾವಿದನಾದವನು ಯಾವ ಸಮಾಜದಲ್ಲಿ ಬೆಳೆಯುತ್ತಾನೋ ಆ ಸಮಾಜದಿಂದ ಸಾಕಷ್ಟು ಪ್ರಭಾವಿತನಾಗಿರುತ್ತಾನೆ. ಸಮಾಜ ಬಿಟ್ಟು ನಾವಿಲ್ಲ ನಮ್ಮನ್ನು ಬಿಟ್ಟು ಸಮಾಜವಿಲ್ಲ ಎನ್ನುವಂತೆ ತಮ್ಮ ಕೃತಿಯ ಮೂಲಕ ವ್ಯಕ್ತಪಡಿಸುತ್ತಾನೆ. ಕಲಾವಿದನ ವಿಚಾರಾತ್ಮಕ ದೃಷ್ಟಿ ಎಷ್ಟು ಬೆಳೆಯುತ್ತೋ ಅಷ್ಟೇ ಗಾಢವಾದ ಚಿತ್ರ ರಚಿಸುತ್ತಾನೆ. ಮನುಷ್ಯ

ಏನೆಲ್ಲ ಮಾಡಬೇಕಾದರೆ ಯಾವುದೋ ಒಂದು ವಿಧದಿಂದಲಾದರೂ ಅವನು ಪ್ರಭಾವಕ್ಕೆ ಒಳಪಟ್ಟಿರುತ್ತಾನೆ. ಇದು ಸೃಷ್ಟಿಯ ನಿಯಮ ಪ್ರಭಾವಕ್ಕೆ ಒಳಗಾಗದ ವ್ಯಕ್ತಿಯಿಲ್ಲ ಇದು ಕಲಾವಿದನಿಗೂ ಹೊರತಾಗಿಲ್ಲ. ಕಲಾವಿದನು ಕಲಾಸೃಷ್ಟಿಯಲ್ಲಿ ತೊಡಗಬೇಕಾದರೆ ಅವನು ಯಾವುದಾದರೂ ಒಂದು ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗುತ್ತಾನೆ. ಪ್ರಭಾವಿತಗೊಂಡಾಗಲೇ ಅವನಿಂದ ಒಳ್ಳೆಯ ಕಲಾಕೃತಿಯೊಂದು ಹೊರಬರಲು ಸಾಧ್ಯ. ಹೀಗೆ ಪ್ರಭಾವ ಎನ್ನವಂಥದ್ದು ಸಹಜವಾಗಿಯೇ ಬರುವಂಥದ್ದು, ಅದಕ್ಕೆ ಕಟ್ಟಳೆಗಳೆಲ್ಲ, ನಿಬಂಧನೆಗಳೆಲ್ಲಾ ಪ್ರಭಾವಕ್ಕೊಳಗಾದ ಮೇಲೆಯೇ ಕಲಾವಿದನು ಉನ್ನತ ಮಟ್ಟಕ್ಕೆ ಬರಲು ಪ್ರಯತ್ನಿಸುತ್ತಾನೆ. ಕೆಲವರು ನಿಸರ್ಗದಿಂದ ಪ್ರಭಾವಕ್ಕೆ ಒಳಪಟ್ಟರೆ ಕೆಲವರು ತಮ್ಮ ಪರಿಸರದ ವಾತವಾರಣದಿಂದ ಪ್ರಭಾವಕ್ಕೊಳಪಡುತ್ತಾರೆ. ಇನ್ನೂ ಕೆಲವರು ಬೇರೆಯವರ ಕಲಾಕೃತಿಗಳಿಂದ ಅವರ ಕಲಾಶೈಲಿಯಿಂದ ಪ್ರಭಾವಕ್ಕೋಳಗಾಗುತ್ತಾರೆ. ಹೀಗೆ ಪ್ರಭಾವವೆನ್ನುವುದು. ಅವರವರ ಮಾನಸಿಕ ಬುದ್ಧಿಮಟ್ಟಕ್ಕೆ ಸಂಬಂಧಿಸಿದಂತೆ ಕ್ರಿಯಾತ್ಮಕವಾಗಿ ರೂಪಗೊಂಡು ಒಳಹೊಕ್ಕುತ್ತದೆ. ಇದರಿಂದ ಅವರದೇ ಆದ ಹೊಸ ಶೈಲಿ ಕೃತವಾದ ಕಲಾಕೃತಿ ಸೃಷ್ಟಿಗೊಳ್ಳುತ್ತದೆ.

ಬೇರೆ ಬೇರೆ ಕಲೆಗಳಿಗೂ ಚಿತ್ರಕಲೆಗೂ ಒಂದು ಪ್ರಮುಖ ಭೇದವುಂಟು. ಉಳಿದ ಅನೇಕ ಪ್ರದರ್ಶಕ ಕಲೆಗಳು ಎಲ್ಲ ರೀತಿಯಿಂದ ನೋಡುಗರ ಮೇಲೆ ನೇರವಾಗಿ ಪ್ರಭಾವ ಬೀಳುತ್ತವೆ ಉದಾ: ನಾಟಕ, ಚಲನಚಿತ್ರ, ಯಕ್ಷಗಾನ, ಬಯಲಾಟ ಮತ್ತಿತರ ಜನಪದ ಕಲೆಗಳು, ಆದರೆ ಚಿತ್ರಕಲೆ ವ್ಯಕ್ತಿ ಕೇಂದ್ರಿತವಾದ ಕಲೆ. ಇದು ಕೇವಲ ಚಿತ್ರಕಲಾವಿದರಿಗೆ ಬಿಟ್ಟರೆ ಕಲಾಪ್ರೇಮಿಗಳಿಗೆ ಮಾತ್ರ ಪ್ರಭಾವ ಬೀರುತ್ತದೆ. ಅದನ್ನು ಮೊದಲು ಹೋಗಲಾಡಿಸುವ ಸಲುವಾಗಿ ಶ್ರೀ ಎಂ. ಆರ್. ಬಾಳೀಕಾಯಿಯವರು ಒಂದು ಚಿತ್ರಕಲಾ ಪ್ರದರ್ಶನ ಮಾಡಬೇಕಾದರೆ ಗ್ಯಾಲರಿಗಳಲ್ಲಿ ಹೋಗಿ ಅದು ನಗರಗಳಲ್ಲಿರುವದರಿಂದ ಅಲ್ಲಿ ಎಲ್ಲರಿಗೂ ಬರಲು ಆಗುವುದಿಲ್ಲ. ಅದಕ್ಕೋಸ್ಕರ ಇವರು ತಮ್ಮ ಸಾಧನಕೇರಿಯ ಪ್ರತಿಯೊಬ್ಬರ ಮನೆಗಳಲ್ಲಿ ವಾರಕ್ಕೆ ಒಂದು ದಿವಸದಂತೆ ಎಲ್ಲ ಮನೆಗಳಲ್ಲಿಯೂ ಪ್ರದರ್ಶನ ಮಾಡುತ್ತಿದ್ದರು. ಆಗ ಎಲ್ಲ ಮನೆಯವರು ಬರುವುದು ಕಲಾಕೃತಿಗಳನ್ನು ನೋಡುವುದು, ಚರ್ಚೆ ಮಾಡುವುದು ಹೀಗೆ ಪ್ರತಿಯೊಬ್ಬರಿಗೂ ಚಿತ್ರಕಲೆಯ ಪ್ರಭಾವ ಬೀರುವಂತೆ ತಮ್ಮ ಶ್ರಮವು ವಿಶ್ವಸನೀಯವಾದ ಪ್ರಯತ್ನವಾಗಿದೆ. ತಾನು ಕಲಾಕೃತಿಯಲ್ಲಿ ರಚಿಸುತ್ತಾ ಇತರರಿಗೂ ಕಲಾಕೃತಿಗಳ ರಚನೆಗೆ ಪ್ರಭಾವಿತರನ್ನಾಗಿ ಮಾಡುತ್ತಾ ಕಲಾಕೃತಿ ರಚಿಸಿಕೊಂಡು ಬಂದವರಲ್ಲಿ ಒಬ್ಬರಾಗಿದ್ದಾರೆಂದು ತಿಳಿದುಬರುತ್ತದೆ.

ಪ್ರೇರಣೆ :

ಪ್ರೇರಣೆ ಎಂದರೆ ಬೇರೆ ಬೇರೆ ವಿಧಾನಗಳಲ್ಲಿ ನೋಡಬೇಕಾಗುವದಲ್ಲದೇ ಪ್ರೇರಣೆ ಒಬ್ಬನಿಗೆ ತಕ್ಷಣ ನಿಂತ ಜಾಗದಲ್ಲಿಯೇ ಪ್ರೇರಣೆಯಾಗುತ್ತದೆ. ಅದನ್ನು ವಿಚಾರಕ್ಕೊಳಪಡಿಸಿ ತನ್ನ ಕಲಾಕೃತಿಯಲ್ಲಿ

ಹೊರತರಲಿಕ್ಕೆ ಪ್ರಯತ್ನಪಡುತ್ತಾನೆ. ಒಬ್ಬರ ಅನುಕರಣೆ, ಭಾವನೆ, ವಿಚಾರ, ತಂತ್ರಗಾರಿಕೆ ಮುಂತಾದ ಬಗೆಯ ಶೈಲಿಗಳಿಗೆ ಪ್ರಭಾವ ಬೀರಿ ಅದರಿಂದ ಪ್ರಭಾವಿತನಾಗುತ್ತಾನೆ. ಆದರೂ ಅದಕ್ಕೆ ಪೂರ್ಣವಾಗಿರದಿರುವ ವಿಚಾರಕ್ಕೆ ಸ್ಪಂದನೆ ಕೊಟ್ಟು, ಪ್ರೇರಣೆ ಪಡೆದು ತಾನು ಪ್ರಭಾವಿತನಾಗುತ್ತಾನೆ. ಅಲ್ಲದೇ ಇದಕ್ಕೆ ಇನ್ನು ಆಕಾರ, ಬಣ್ಣ ಕೊಟ್ಟು ತನ್ನ ತನದಲ್ಲಿ ನೋಡಲಿಕ್ಕೆ ಪ್ರಯತ್ನ ಪಡುತ್ತಾನೆ. ಆಗ ಒಂದು ಉತ್ತಮ ಕಲಾಕೃತಿಯಾಗಲಿಕ್ಕೆ ಸಾಧ್ಯವಿದೆ. ಬಾಳೀಕಾಯಿ ಗುರುಗಳು ಪಿಕಾಸೋವಿನ ಶೈಲಿಯಲ್ಲಿ ಕಲಾಕೃತಿ ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ ಎಂಬುವುದು ಅವರ ಕಲಾಕೃತಿ ರಚಿಸಿರುವುದರಿಂದ ತಿಳಿದುಬರುತ್ತದೆ. ಆದರೆ ಇದ್ದುದ್ದನ್ನು ಇದ್ದ ಹಾಗೆ ಮಾಡಿಲ್ಲ. ಕ್ಯೂಬಿಜಂ ಶೈಲಿಯಲ್ಲಿ ಪ್ರೇರಣೆ ಪಡೆದುಕೊಂಡು ಕಲಾವಿದರು ತಮ್ಮ ಚಿತ್ರಕಲಾ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಹೊರತಾಗಿ ಅದೇ ಶೈಲಿಯನ್ನು ಮುಂದುವರೆಸಿಕೊಳ್ಳದೆ ತಮ್ಮದೆ ಆದ ಶೈಲಿಗಳಲ್ಲಿ ಹಲವಾರು ಕಲಾಕೃತಿಗಳನ್ನು ವಿಶಿಷ್ಠವಾಗಿ ರಚಿಸಿರುವುದು ಸಂಶೋಧನೆಯಿಂದ ತಿಳಿದುಬರುತ್ತದೆ.

ಕಲಾಕೃತಿ ಮಾಡುವ ವಿಧಾನಗಳು ಬೇರೆ ವಸ್ತುಗಳು ಬೇರೆ ಹೀಗೆ ವ್ಯಕ್ತಿಗಳ ಪ್ರೇರಣೆಯ ಪರಿಸರದ ಪ್ರೇರಣೆ, ಸಾಮಾಜಿಕ ಪ್ರೇರಣೆ ಇವುಗಳಿಂದ ಅಭಿವ್ಯಕ್ತಿತವಾದ ಆಂತರಿಕ ಕಲಾಕೃತಿಗಳಾಗಿವೆ. ಉದಾ: ಶ್ರೀ ಎಂ. ಆರ್. ಬಾಳೀಕಾಯಿಯವರು ಚಿಕ್ಕವರಿದ್ದಾಗ ಅಂದರೆ ಅವರ ಪ್ರೌಢಶಾಲಾ ಶಿಕ್ಷಣ ಮುಗಿದ ಮೇಲೆ ಅಲ್ಲಿ ಇಲ್ಲಿ ಪೇಪರ್ಸ್ ಓದುವುದು, ವಿಷಯ ತಿಳಿದುಕೊಳ್ಳುವುದು ಹೀಗೆಲ್ಲ ಮಾಡುವಾಗ ಒಂದು ದಿವಸ ಗದಗ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಎನ್ನುವ ವಿಷಯ ನೋಡಿದಾಗ ಅವರಿಗೂ ಅದರಿಂದ ಪ್ರೇರಣೆಗೊಂಡು ಅಲ್ಲಿಯೇ ಹೆಸರು ನೊಂದಾಯಿಸಬೇಕೆಂತ ಅನಿಸಿದ್ದನ್ನು ಇದು ನನ್ನ ಪ್ರೇರಣೆಗೆ ಮೂಲ ಕಾರಣ ಎಂದು ಹೇಳುತ್ತಾರೆ. ಹೀಗೆ ಪ್ರೇರಣೆ ಎನ್ನುವುದು ಸಾಮಾನ್ಯ ಜನರಿಂದ ಹಿಡಿದು ಒಂದು ಚಿಕ್ಕ ಮಗುವಿನವರೆಗೂ ಪ್ರೇರಣೆಯಾಗುತ್ತದೆ. ಬೇರೆ ಬೇರೆ ಆಯಾಮಗಳಲ್ಲಿ ನೋಡಬಹುದರಿಂದ ಹೆಚ್ಚಾಗುತ್ತೆ ಹೊರತಾಗಿ ಕಡಿಮೆಯಾಗುವುದಿಲ್ಲವೆಂದೇ ಹೇಳಬಹುದು.

ಪ್ರೇರಣೆ ನಿಸರ್ಗದ ಪ್ರತಿಯೊಂದರಲ್ಲಿ ಸಿಗುವಂತಹ ವಸ್ತುವಾಗಿದೆ. ಇದಕ್ಕೆ ಕೊನೆಯೆಂಬುವುದೇ ಇಲ್ಲ. ಇದು ಎಲ್ಲ ಕ್ಷೇತ್ರಗಳಲ್ಲಿಯು ಪ್ರೇರಣೆಗಳು ಬದಲಾವಣೆಯಾಗುತ್ತಾ ಹೋಗುವುದನ್ನು ಕಾಣಬಹುದು.

ಕಲಾಕಾರನಿಗೆ ಅನೇಕ ವಿಧದಲ್ಲಿ ಪ್ರೇರಣೆ ದೊರಕುವುದರ ಜೊತೆಗೆ ಕೆಲವೊಮ್ಮೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಕಲಾಕಾರನ ಮನಸ್ಸಿನಲ್ಲಿ ಬುದ್ಧಿಶಕ್ತಿ ಜಾಗೃತವಾಗಿದ್ದು, ಸಂವೇದನಾ

ಶೀಲಾವಾಗಿರಬೇಕು ಎನ್ನುವುದಂತೂ ಅತ್ಯವಶ್ಯಕ. ಸಮಾಜದ ಸಂಘರ್ಷ, ನಿರಾಶೆ ಹಾಗೂ ಉಲ್ಲಾಸ ದ್ವಂದ್ವ ಇವೆಲ್ಲವೂ ಕಲಾವಿದನ ಸಂವೇದನಾಶೀಲ ಮನಸ್ಸನ್ನು ಉತ್ತೇಜಿಸಲು ಸಮರ್ಥವಾಗುತ್ತವೆ. ಮಾನವ ಜೀವನ ಮುಖ್ಯವಾಗಿ ತನು, ಮನ ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿದೆ. ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾ ಕಾಲವು ಮಾಡುತ್ತಿರುತ್ತದೆ. ತನುವಿಗೆ ಬೇಕಾದ ಆಶನ ವಸತಿ ಸಂಸಾರಕ್ಕೆ ಬೇಕಾದ ಉಪಜೀವನದ ಮಾರ್ಗವನ್ನು ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ, ಕಲೆ, ನೈತಿಕ ಮೌಲ್ಯಗಳನ್ನು ಆತ್ಮದ ಉದ್ಧಾರಕ್ಕಾಗಿ ಧರ್ಮ, ಆಧ್ಯಾತ್ಮ ಪಾರಮಾರ್ಥಿಕ ಮೌಲ್ಯಗಳನ್ನು ಕೊಡಬಲ್ಲವುದೇ ನಿಜವಾದ ಶಿಕ್ಷಣ. ಈ ರೀತಿಯ ವಿದ್ಯೆ ಪ್ರಸಾರದಿಂದ ಕರ, ಉರ, ಶಿರ ಸಂವರ್ಧನೆಯಾಗುವುದು. ಕರವು ಕಾರ್ಯವನ್ನು, ಉರುವು ಹೃದಯವನ್ನು, ಶಿರವು ಅರಿವನ್ನು ಸೂಚಿಸುತ್ತದೆ. ಶಿಕ್ಷಣವು ದೇಹಕ್ಕೆ ಪುಷ್ಟಿಯನ್ನು, ಮನಕ್ಕೆ ವೈಶಾಲ್ಯತೆಯನ್ನು, ಆತ್ಮಕ್ಕೆ ಆನಂದವನ್ನು ಕೊಟ್ಟು ಅಂತಃಕರಣವನ್ನು ಅರಳಿಸಿ ಸದ್ಗುಣಗಳನ್ನು ಮೈಗೂಡಿಸಿಕೊಂಡು ಬರಲು ಇದು ಪ್ರೇರಣೆಯನ್ನು ನೀಡುತ್ತದೆ.

ಪ್ರೇರಣೆಯು ಮನುಷ್ಯನ ಮಾನಸಿಕವಾದ ಶಕ್ತಿಗೆ ಚೈತನ್ಯವನ್ನು ತುಂಬುವುದು ಇದರಿಂದ ತನ್ನ ಕ್ಷೇತ್ರದಲ್ಲಿ ವ್ಯಾಪಕವಾಗಿ ಬೆಳೆಯಲು ದಾರಿಯನ್ನು ತೋರಿಸುತ್ತದೆ. ಇದು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಚಿತ್ರಕಲಾ ಕ್ಷೇತ್ರವು ಇದಕ್ಕೆ ಹೊರತಾಗಿಲ್ಲ. ಒಬ್ಬ ಕಲಾವಿದ ಒಂದು ಹಂತವನ್ನು ತಲುಪಬೇಕಾದರೆ ಅವನ ಹಿಂದೆ ಯಾವುದಾದರೂ ಒಂದು ರೀತಿಯಿಂದ ಪ್ರೇರಣೆ ಇದ್ದೆ ಇರುತ್ತದೆ. ಹಾಗೆ ಶ್ರೀ ಎಂ. ಆರ್. ಬಾಳೀಕಾಯಿ ಅವರಿಗೆ ಬಾಲ್ಯದಿಂದಲೇ ಕಲೆಯ ಅಭಿರುಚಿಯನ್ನು ಹೊಂದಿದವರು, ಇವರು ಪ್ರಾಥಮಿಕ ಹಂತದಲ್ಲಿಯೇ ತುಂಬಾ ಆಸಕ್ತಿಯನ್ನು ಬೆಳೆಸಿಕೊಂಡರು. ಅವರ ಮನೆತನದವರು ಅದಕ್ಕೆ ವಿರೋಧವಾಗಿದ್ದರೂ ಸಹಿತ ತಮ್ಮ ಅಭಿರುಚಿಯನ್ನು ಬೀಡದೆ ಅದನ್ನೇ ಮುಂದುವರೆಸಿಕೊಂಡು ಬಂದರು. ನಂತರ ಪ್ರಾಥಮಿಕ ಹಂತದಲ್ಲಿಯೇ ಶಂಕರ ಪುರಿಬಾವಾ ಅವರ ಗುರುಗಳು ಇವರಿಗೆ ತುಂಬಾ ಪ್ರೇರಣೆ ಕೊಡುವುದರ ಜೊತೆಗೆ ಮನೆಯವರಿಗೆಲ್ಲ ಮನವರಿಕೆ ಮಾಡಿದರು. ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾಭಿರುಚಿಯನ್ನು ಕಂಡು ಚಿತ್ರಕಲೆಯ ಬಗ್ಗೆ ಹೆಚ್ಚಿನ ಜ್ಞಾನವನ್ನು ತುಂಬುತ್ತಾ ಇವರಿಗೆ ಪ್ರೇರಣೆಯನ್ನು ನೀಡಿದವರಲ್ಲಿ ಮೊದಲಿಗರೆಂದು ಹೇಳಬಹುದು. ಒಬ್ಬ ಕಲಾವಿದ ಒಂದು ಹಂತವನ್ನು ತಲುಪಬೇಕಾದರೆ ಅವನ ಹಿಂದೆ ಯಾವುದೇ ರೀತಿಯಿಂದಲೂ ಪ್ರೇರಣೆ ಇದ್ದೆ ಇರುತ್ತದೆ. ಪ್ರೇರಣೆಯು ಕಣ್ಣಿಗೆ ಕಾಣದ ಅಂತರ್ಮುಖಿಯಾದ ಒಂದು ಚೈತನ್ಯಯುತ ಶಕ್ತಿ. ಇದು ಅಂತರ್ಮುಖಿಯಾದರೂ ಬಾಹ್ಯ ಪ್ರಚೋದನೆಗೆ ಹೆಚ್ಚು ಸಹಕಾರಿಯಾಗಬಲ್ಲದು. ಕಲಾವಿದನಾದವನು ಕೆಲವೊಂದು ಸಾರಿ ತನ್ನ ಸುತ್ತ ಮುತ್ತಲಿನ ಪರಿಸರದ ವಾತಾವರಣದಿಂದಲೂ ಪ್ರೇರಣೆಯನ್ನು ಪಡೆಯುವುದರ ಜೊತೆಗೆ ತಾನು ಹುಟ್ಟಿ ಬೆಳೆದ ಪರಿಸರದಿಂದ ಪ್ರಭಾವಿತಗೊಂಡವರಲ್ಲಿ ಶ್ರೀ ಎಂ. ಆರ್. ಬಾಳೀಕಾಯಿಯವರು ಒಬ್ಬರಾಗಿದ್ದಾರೆ.

ಕಲಿಕೆಯ ದೃಷ್ಟಿಯಿಂದ ಪ್ರೇರಣೆಯು ಬೇಕೆ ಬೇಕು ಪ್ರೇರಣೆ ಇರದೇ ಯಾರು ಯಾವ ಹಂತದಲ್ಲೂ ಮುಂದೆ ಬರಲಾರರು ಪ್ರತಿಯೊಬ್ಬರ ಬೆನ್ನ ಹಿಂದೆಯೂ ಯಾವುದೇ ರೀತಿಯಿಂದಲಾದರೂ ಪ್ರೇರಣೆಯು ಇದ್ದೇ ಇರುತ್ತದೆ. ಈ ಪ್ರೇರಣೆಯನ್ನು ಉಪಯೋಗಿಸಿಕೊಂಡಿರುವ ಅವರ ಜಾಣ್ಮೆಯನ್ನು ತೋರುತ್ತದೆ. ಹೀಗಾಗಿ ಜಾಣ್ಮೆ ಎನ್ನುವುದು ಮನುಷ್ಯನ ಬೆನ್ನ ಹಿಂದೆ ಇದ್ದೇ ಇರುತ್ತದೆ. ಆದರೆ ದಾರಿ ಕಾಣದೆ ಇದ್ದಾಗ ಇನ್ನೋಬ್ಬರ ಸಹಾಯವನ್ನು ಕೇಳುತ್ತದೆ. ಆಗ ಇನ್ನೊಬ್ಬರು ಬಂದು ನಮ್ಮಗೆ ದಾರಿಯನ್ನು ತೋರಿಸುತ್ತಾರೆ. ಗುರಿಯೇನು ನಮ್ಮದೇ ಇರಬಹುದು ಆದರೆ ಹೋಗುವ ಮಾರ್ಗಕ್ಕೆ ಪ್ರೇರಣೆ ನೀಡಿ ತೋರಿಸಿಕೊಟ್ಟವರು ಬೇರೆಯವರು. ಅದಕ್ಕೆ ಬೇರೆಯವರ ಸಹಾಯ ಬೇಕೆ ಬೇಕು. ಇಂತಹ ದಾರಿಗಳೂ ಕೂಡ ಒಂದು ಪ್ರೇರಣೆ ಆಗಿರುತ್ತದೆ. ಪ್ರೇರಣೆ ಸಹಾಯ ಎನ್ನುವ ಪದಕ್ಕೆ ಸಮೀಪದಲ್ಲಿದೆ. ಸಹಾಯ ಪ್ರೇರಣೆ ಎರಡೂ ಪದಗಳು ಬೇರೆ ಬೇರೆಯಾದರೂ ಅದರ ಅರ್ಥ ಕೆಲವು ಸಂದರ್ಭಗಳಲ್ಲಿ ಒಂದೇ ಆಗಿರುತ್ತದೆ. ಸಹಾಯವೂ ಬಾಹ್ಯ ಪ್ರಚೋದನೆಗೆ ಸಂಬಂಧಪಟ್ಟರೆ ಪ್ರೇರಣೆಯೂ ಆಂತರಿಕ ಪ್ರಚೋದನೆಗೆ ಸಂಬಂಧಪಟ್ಟಿರುತ್ತದೆ.

ಕಲೆ ಮೂಲತಃ ಮಾನವನ ಸೃಷ್ಟಿ ಅದು ಪ್ರತಿಭಾವಂತ ಮಾನವನ ಜೀವನಾನುಭವ ಅಭಿವ್ಯಕ್ತ ಕಲೆ ಮಾನವತೆಯ ವಿಶಿಷ್ಟ ಶಕ್ತಿ. ಭೌತಿಕ ಜಗತ್ತಿನ ಬಾಹ್ಯ ಸೃಷ್ಟಿಗಿಂತ ಹೆಚ್ಚಾಗಿ ಮಾನವನ ಆಂತರಿಕ ನಿತ್ಯ ಸತ್ಯದ ಆನಂದಾನುಭವದ ಅಭಿವ್ಯಕ್ತಿ ಕಲಾವಿದನ ಈ ಕಲೆ ಭಾವ, ಬಣ್ಣ, ರೇಖೆ ಮುಂತಾದ ವಿವಿಧ ಮಾಧ್ಯಮದಲ್ಲಿ ಹೊಮ್ಮಿ ಸಮಾಜದ ಹೃದಯವಂತಿಕೆಯನ್ನು ಹೆಚ್ಚಿಸುತ್ತದೆ. ಯಾವುದೇ ಒಂದು ನಾಡಿನ ಜನಾಂಗದ ಬದುಕಿನ ಬೆಳವಣಿಗೆಯನ್ನು ಅವರ ಪರಂಪರೆ ಹಾಗೂ ಸಂಪ್ರದಾಯಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವ ಪಡೆದಿರುವ ಕಲೆಗಳ ಜೊತೆಗೆ ಬಾಳೀಕಾಯಿ ಅವರು ಮೂಲತಃ ಜೈನ ಧರ್ಮದವರು. ಜೈನ ಧರ್ಮದ ೨೪ ತೀರ್ಥಂಕರರ ಕಲಾಕೃತಿಗಳನ್ನು ಸಹಿತ ರಚಿಸಿದ್ದಾರೆ. ಮಾನವನ ಸಾಂಸ್ಕೃತಿಕ ಲೋಕದ ಪ್ರತಿ ಹಂತದಲ್ಲೂ ಕಲೆ ಪ್ರೇರಣೆಯ ವಸ್ತು ಆಗಿರುತ್ತದೆ. ಕಲಾವಿದನಿಗೆ ಪ್ರಕೃತಿಯ ಪ್ರೇರಣೆಯನ್ನು ನೀಡುತ್ತದೆ. ಅಲ್ಲದೇ ಒಂದೊಂದು ಸವಾಲನ್ನು ಎದುರಿಸುವ ಸಂದರ್ಭವನ್ನು ಸೃಷ್ಟಿಸುತ್ತದೆ.

ತಂತ್ರಗಾರಿಕೆ :

ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಒಂದಿದ್ದರೆ ಸಾಲದು, ತಾಂತ್ರಿಕ ನೈಪುಣ್ಯತೆಯೊಂದಿಗೆ ಮನೋವಿಜ್ಞಾನದ ತತ್ವಗಳನ್ನು ಅಳವಡಿಸಿಕೊಂಡರು ಸಹಿತ ಚಿತ್ರ ಕಲಾಕೃತಿಯ ನೈಪುಣ್ಯತೆ ಇನ್ನು ಹೆಚ್ಚುತ್ತದೆ. ಕಲೆಯೂ ಯಾವಾಗಲೂ ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ

ಸಾಧನಯಾಗಿದೆ. ಅದಕ್ಕಾಗಿ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವುದು. ಅದಕ್ಕೆ ಕಲಾಕೃತಿಯ ಹಿಂದೆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ ಮನಃಶಾಸ್ತ್ರಕ್ಕೆ ಬಿಡಲಾರದ ಸಂಬಂಧವಿದ್ದು, ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆ ಎಂದು ಹೇಳಬಹುದು.

ಶ್ರೀ ಎಂ. ಆರ್. ಬಾಳೀಕಾಯಿಯವರು ಕಲಾಕೃತಿಗಳನ್ನು ರಚಿಸುವಾಗ ಬಳಸಿದ ತಂತ್ರ ವಿಧಾನವನ್ನು ಗಮನಿಸಿದಾಗ ಎಲ್ಲವೂ ಆಯಾ ಸಂದರ್ಭಕ್ಕೆ ತಕ್ಕಂತೆ ತಂತ್ರಗಾರಿಕೆಯನ್ನು ಬಳಸಿ ಅನೇಕ ಹೊಸ ಹೊಸ ರೀತಿಯಲ್ಲಿ ಒಂದಕ್ಕೆ ಸೀಮಿತವಾಗಿರದೆ ಪ್ರತಿಯೊಂದು ಕಲಾಕೃತಿಗೂ ಹೊತನವನ್ನು ಬಳಸಿಕೊಂಡಿರುವ ಕಲಾಕೃತಿಯ ವಿಶ್ಲೇಷಣೆಯಿಂದ ಕಂಡುಬರುತ್ತದೆ..

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾಕೃತಿಗಳನ್ನು ನೋಡಿದೊಡನೆ ಅವುಗಳಲ್ಲಿ ಏನೋ ಒಂದು ರೀತಿಯ ಮನಸ್ಸು ಸೆಳೆಯುವ ಆಕರ್ಷಣೆ ತನ್ನನ್ನು ತಾನೇ ಕರೆದೊಯ್ಯುತ್ತದೆ. ಕಲಾಕೃತಿಗಳು ನೋಡುತ್ತಾ ಹೋದಂತೆಲ್ಲಾ ಬೇಸರವಾಗದೆ ಇನ್ನು ನೋಡಬೇಕು ಎಂದೆನಿಸುತ್ತದೆ. ಸುಮಾರು ಐದು ಸಾವಿರದಿಂದ ಹತ್ತು ಸಾವಿರಗಳವರೆಗೆ ಇರುವ ಅವರ ಚಿತ್ರಗಳು ನೋಡುಗರ ಮನಸ್ಸು ತಲ್ಲಣಗೊಳಿಸುತ್ತದೆ. ಅವರು ಹೆಚ್ಚಾಗಿ ವ್ಯಕ್ತಿಯ ಮುಖ ಮತ್ತು ತಲೆಯನ್ನು ವಸ್ತುವನ್ನಾಗಿಸಿಟ್ಟಕೊಂಡು ಕಲಾಕೃತಿಗಳನ್ನು ರಚಿಸುತ್ತಾರೆ. ಇದಕ್ಕೆ ಕಾರಣ ಕೇಳಿದಾಗ ಮಾನವನ ಪ್ರತಿಯೊಂದು ದೇಹದ ಎಲ್ಲ ಭಾಗವು ತಲೆಯಲ್ಲಿರುವುದು ಅದಕ್ಕೆ ಅವರು ಹೆಚ್ಚಾಗಿ ಇವುಗಳಿಗೆ ಮಹತ್ವ ಕೊಡುವುದರ ಜೊತೆಗೆ ಇದರಲ್ಲಿಯೇ ಅನೇಕ ತಂತ್ರಗಾರಿಕೆಯನ್ನು ಬಳಸುತ್ತಾರೆ. ಅಲ್ಲದೇ ಎಷ್ಟೋ ಹಾವ ಭಾವಗಳು ನಮ್ಮ ಮುಖದಿಂದ ಗೊತ್ತಾಗುತ್ತವೆ. ತಲೆಯಲ್ಲಿ ಚಲನ ವಲನಗಳು ಮತ್ತು ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ ಇವುಗಳನ್ನೆಲ್ಲ ತುಂಬಿಕೊಂಡು ಸೃಷ್ಟಿಕರ್ತ ಅಮೂರ್ತಗಳನ್ನು ಮಾಡುತ್ತಾನೆ. ಇನ್ನು ಕೆಲವು ಮೂರ್ತಗಳನ್ನು ಮಾಡುತ್ತಾನೆ. ಆದರೆ ನಾವೆಲ್ಲ ಇಷ್ಟಪಡುವುದು ಮೂರ್ತ ಅಲ್ಲದೇ ಅಮೂರ್ತಗಳಲ್ಲಿಯೂ ಸೌಂದರ್ಯತೆ ಇದೆ ಎಂಬುದನ್ನು ಕಲಾವಿದರಾದ ಶ್ರೀ ಎಂ. ಆರ್. ಬಾಳೀಕಾಯಿ ಸರ್ ಅವರು ತಮ್ಮ ಕಲಾಕೃತಿಗಳಲ್ಲಿ ತಮ್ಮ ತಂತ್ರಗಾರಿಕೆಯಿಂದ ತೋರಿಸಿಕೊಟ್ಟಿದ್ದಾರೆ.

ಬಾಳೀಕಾಯಿ ಅವರನ್ನು ಕೇಳಿದಾಗ ಒಂದು ವಸ್ತುವನ್ನು ರಚನೆ ಮಾಡಿಕೊಳ್ಳಲಿಕ್ಕೆ ಬೇಕಾಗುವ ಕ್ರಮಗಳೆಂದರೆ ಒಂದು ವಸ್ತುವಿನ ಬಾಹ್ಯ ಚಿತ್ರ ರಚಿಸಿ, ಅದು ಯಾವುದೋ ಒಂದು ಪರಿಸರದಲ್ಲಿ ಸಿಗುವಂತಹ ಆ ವಸ್ತುವಿನ ರೇಖೆಯನ್ನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಎರಡುಕಡೆಯಿಂದ ಹಾಕುತ್ತಾನೆ. ಕಲಾವಿದ ಹಿಂದಕ್ಕೆ ತಿರುಗುತ್ತಾನೆ. ಮುಂದಕ್ಕೂ ತಿರಗುತ್ತಾ ಕಣ್ಣು ಯಾವಾಗಲೂ

ತೆರೆದಿರುತ್ತಾನೆ. ಎಲ್ಲ ದಿಕ್ಕುಗಳಲ್ಲಿಯೂ ಚಲಿಸುವುದರ ಜೊತೆಗೆ ನೋಡುವ ಶಕ್ತಿ ಒಬ್ಬ ಸಾಹಿತಿಗೂ ಇದೆ. ಒಬ್ಬ ಕಲಾವಿದನಿಗೂ ಇದೆ. ಅದಕ್ಕೆ ರವಿ ಕಾಣದನ್ನ ಕವಿ ಕಂಡ ಕವಿ ಕಾಣದನ್ನ ಕಲಾವಿದ ಕಂಡ, ಹಾಗೆ ಎಷ್ಟೊಂದು ತಂತ್ರಗಳನ್ನು ಬಳಸಿಕೊಂಡಿದ್ದಾನೆ ಎನ್ನುವುದನ್ನು ಕಾಣಬಹುದು. ಇದರ ನಿಜ ಸ್ವರೂಪದ ರೇಖೆಗಳಲ್ಲಿಯೂ ತೆರಲಿಕ್ಕೆ ಪ್ರಯತ್ನ ಮಾಡಿದ್ದಾರೆ. ರೇಖೆಗಳಿಂದ ಒಂದು ಸಂಯೋಜನೆ ಮತ್ತು ಘನವಸ್ತುಗಳ ರೂಪಗಳನ್ನು ಚಿತ್ರಿಸುವುದಕ್ಕೆ ಪೆನ್ನು, ಪೆನ್ಸಿಲ್, ಕಪ್ಪು ಬಣ್ಣ ಚಾರ್‌ಕೂಲ್ ಇವುಗಳನ್ನು ಬಳಸಿಕೊಂಡು ಹೊಸ ಹೊಸ ಆಯಾಮಗಳ ತಂತ್ರಗಾರಿಕೆಯ ರೇಖೆಗಳನ್ನು ರಚಿಸಲು ಪ್ರಯತ್ನ ಪಟ್ಟಿರವುದು ಕಂಡುಬರುತ್ತದೆ.

ಕಲಾವಿದರು ಕೂಡ ತಂತ್ರಗಳನ್ನು ಕಲಾಕೃತಿಗಳಲ್ಲಿ ಅದಲು-ಬದಲು ಮಾಡುವುದರೊಂದಿಗೆ ಮೇಲಿಂದ ಕೆಳಕ್ಕೆ ಕೆಳಗಿನಿಂದ ಮೇಲೆ ತಮಗೆ ಬೇಕಾದ ರೀತಿಯಲ್ಲಿ ಉಪಯೋಗವಾಗುವಂತೆ ತಮ್ಮ ಕಲಾಕೃತಿಗಳಲ್ಲಿ ತಿರುಗಿಸಿಕೊಳ್ಳುತ್ತಾರೆ. ತಂತ್ರಗಾರಿಕೆ ಬಿಟ್ಟು ಕಲಿಯಬೇಕಾದರೆ ಪೂರ್ವದಲ್ಲಿ ರೇಖೆಗಳನ್ನು ಬಳಸಿಕೊಂಡಾಗಲಿ ಅಥವಾ ಶಿಕ್ಷಣ ಕೊಡುವ ಪದ್ಧತಿಯಿಂದಾಗಲಿ ತನ್ನ ರೇಖೆಗಳನ್ನು ಒಂದು ಪುಟ ಪಟ್ಟಿ (ಸ್ಕೇಲ್) ಇಟ್ಟುಕೊಂಡು ಕಲಿಯುತ್ತಾನೋ ಅಥವಾ ಅದನ್ನು ದಾಟಿ ಕಲಿಯುತ್ತಾನೆಯೋ ಅದು ಅವನ ತಂತ್ರಗಾರಿಕೆ, ನಂತರ ಕಲಾವಿದ ಪೂರ್ವಜ್ಞಾನದ ಒಂದು ಕಲ್ಪನೆಯಿಂದ ತಂತ್ರಗಾರಿಕೆಗಳು ಕಲಾಕೃತಿಗಳಲ್ಲಿ ಬೇರೆ ಬೇರೆ ಬದಲಾವಣೆಯನ್ನು ಮಾಡಿಕೊಂಡಿರುವುದು ಇವರ ಕಲಾಕೃತಿಯಲ್ಲಿ ತೋರಿಸಿಕೊಡುತ್ತದೆ.

ಶ್ರೀ ಎಂ. ಆರ್. ಬಾಳೀಕಾಯಿ ಅವರ ಅನೇಕ ಕಲಾಕೃತಿಗಳನ್ನು ಗಮನಿಸಿದಾಗ ಒಂದೇ ತರಹದ ತಂತ್ರ ಬಳಸದೇ ಬೇರೆ ಬೇರೆ ವಸ್ತುಗಳನ್ನು ಜೊತೆಗೆ ಬಣ್ಣವನ್ನು ಲೇಪನ ಮಾಡಿ ಅವುಗಳಿಗೆ ಎಲೆ, ದಾಸವಾಳದ ಹೂ, ತೆಂಗಿನ ಪೊದರು, ತೆಂಗಿನ ಗರಿ ಇನ್ನಿತರ ವಸ್ತುಗಳನ್ನು ಬಳಸಿಕೊಂಡು ಒಂದೊಂದು ಕಲಾಕೃತಿಯಲ್ಲಿ ಒಂದಲ್ಲ, ಎರಡಲ್ಲ, ಹಲವಾರು ತಂತ್ರಗಳನ್ನು ಬಳಸುವುದರ ಜೊತೆಗೆ ಇನ್ನು ಹೊಸ ಹೊಸದನ್ನು ಕಂಡು ಹಿಡಿಯುವುದರಲ್ಲಿ ಕ್ರಿಯಾಶೀಲರಾಗಿದ್ದಾರೆ.

ಕ್ರೀಯಾಶೀಲದ ಜೊತೆಗೆ ಅನೇಕ ತಂತ್ರ ವಿಧಾನವನ್ನು ಬಳಸಿಕೊಂಡು ಕೇವಲ ಬಣ್ಣಗಳಲ್ಲಿಯೇ ಆಟವಾಡದೆ ಬೇರೆ ಬೇರೆ ಪ್ರಯೋಗಗಳನ್ನು ಮಾಡುವುದರೊಂದಿಗೆ ಹೆಚ್ಚಾಗಿ ಗಾಢವಾದ ಬಣ್ಣಗಳನ್ನು ಬಳಸಿಕೊಂಡು ತಮ್ಮ ಕಲಾಕೃತಿಗೆ ತಕ್ಕಂತೆ ಬಣ್ಣಗಳನ್ನು ಕಲಿಸುವ ತಟ್ಟೆ ಇಲ್ಲವೇ ಇನ್ನಾವುದರ ಮೇಲೆ ಹಾಕಿ ತಮಗೆ ಬೇಕಾದ ರೀತಿಯಲ್ಲಿ ಬಣ್ಣಗಳನ್ನು ಕಲಿಸಿ ನಂತರ ತಮ್ಮ ಕಲಾಕೃತಿಯೊಂದನ್ನು ಅದರ ಮೇಲೆ ಇಟ್ಟು ತೆಗೆದರೆ ಸಾಕು ಪೇಪರ್ ಅಥವಾ ಕ್ಯಾನವಾಸ ಯಾವುದೇ ಇರಲಿ ಅಲ್ಲೊಂದು ಅದ್ಭುತ

ಕಲಾಕೃತಿ ನಿರ್ಮಾಣವಾಗುತ್ತದೆ. ಇವುಗಳ ಜೊತೆಗೆ ಕಣ್ಣಿಗೆ ಕಂಡದ್ದು ಮನಸ್ಸಿಗೆ ಅನಿಸಿದ್ದನ್ನು ತಕ್ಷಣ ಮಾಡಬೇಕು ಎನ್ನುವ ಹಂಬಲವುಳ್ಳವರು.

ತಂತ್ರಗಾರಿಕೆಯಲ್ಲಿ ಮೈವಳಿಕೆಯಿಂದ ವಸ್ತು ಹೇಗೆ ಕಾಣಿಸುತ್ತದೆ. ಮೈವಳಿಕೆ ಇಲ್ಲದಿದ್ದರೆ ಹೇಗೆ ಕಾಣಿಸುತ್ತದೆ. ಮೃದು ಅಥವಾ ಗಾಢವಾಗಿ, ಇನ್ನೂ ಗಾಢವಾಗಿ ಇದ್ದರೆ ಹೇಗಿರುತ್ತದೆ. ಗಾಢವಾಗಿ ಹೋದಂತೆಲ್ಲ ದೂರ ಹೋಗಬೇಕು. ಮೃದುವಾಗಿ ಇದ್ದಂತೆಲ್ಲ ಹತ್ತಿರದಿಂದ ನೋಡಬೇಕು ಎನ್ನುವುದು ಹಿಂದಿನ ಕಲಿಕೆಯಲ್ಲಿ ಶ್ರೀ ಎಂ. ಆರ್. ಬಾಳೀಕಾಯಿ ಅವರ ಗುರುಗಳಾದ ಡಿ. ಫ್ಹಿ. ಹಾಲಭಾವಿಯವರು ಹೇಳುತ್ತಾರೆ ವ್ಯಕ್ತಿ ಚಿತ್ರಗಳನ್ನು ರಚಿಸುವುದು ಸುಲಭವಲ್ಲ ಯಾಕೆಂದರೆ ಚಿತ್ರದಲ್ಲಿ ನಾವು ವ್ಯಕ್ತಿಯನ್ನು ತೋರಿಸಬಹುದು. ಆದರೆ ವ್ಯಕ್ತಿಯ ಹಾವ ಭಾವಗಳನ್ನು ತೋರಿಸಬೇಕು. (Expression is very important in a portrait or life painting) ಒಂದು ವೇಳೆ ಅಲ್ಲಿ ಭಾವನೆ (Expression) ಇಲ್ಲದಿದ್ದರೆ ಅದು ಕಲಾಕೃತಿಯೆನಿಸಲಿಕ್ಕೆ ಯೋಗ್ಯವಿಲ್ಲದಂತಾಗುತ್ತದೆ. ಅದಕ್ಕೆ ವ್ಯಕ್ತಿ ಚಿತ್ರಗಳಲ್ಲಿ ಭಾವವೇ ಪ್ರಧಾನವಾಗಿರುತ್ತದೆ ಎಂದು ಹಾಲಭಾವಿ ಗುರುಗಳು ಆಗಾಗ ಹೇಳುತ್ತಿರುವ ಮಾತು ನೆನಪಿಸಿಕೊಳ್ಳುತ್ತಾರೆ. ಅದರಂತೆ ಒಂದು ಪ್ರಭಾವ ಪ್ರೇರಣೆಯ ಜ್ಞಾನ ಕಲಾವಿದರಿಗೆ ಇದೆ. ಅವರು ಆ ಜ್ಞಾನವನ್ನು ನನ್ನ ತಂತ್ರಗಳಲ್ಲಿ ಬಳಸಿಕೊಂಡು ಒಂದು ಕಲಾಕೃತಿ ಹೀಗೆ ನೋಡಬೇಕು ಅಂತ ಏನಿಲ್ಲ ಆದರೆ ನೋಡಿದ ಕ್ಷಣ ಇದು ಶ್ರೀ ಎಂ. ಆರ್. ಬಾಳೀಕಾಯಿ ಅವರದೆ ಡ್ರಾಯಿಂಗ್ ಅವರದೆ ಪೇಂಟಿಂಗ್ ಇದು ಅವರ ಕಲಾಕೃತಿ ಎನ್ನುವ ಹಾಗೆ ತಂತ್ರಗಾರಿಕೆ, ಸೃಜನಾತ್ಮಕತೆ ಇರುವಂತೆ ತಮ್ಮದೇ ಆದ ತಂತ್ರಗಳನ್ನು ಬಳಸಿಕೊಂಡು ಕಲಾಕೃತಿ ರಚಿಸಿದರುವುದು ಕಂಡುಬರುತ್ತದೆ.

ಈ ರೀತಿಯ ಸೃಜನಾತ್ಮಕತೆ ಬರಬೇಕಾದರೆ ಒಬ್ಬ ಕಲಾವಿದ ಒಂದು ವಸ್ತುವಿನಲ್ಲಿ ಭಾವನಾತ್ಮಕವಾಗಿ ಸಾವಿರಾರು ಶಬ್ಧಗಳನ್ನು ಕೊಡುವುದಲ್ಲದೇ ರೇಖೆಗಳ ಗತಿ ಬರಿ ಚಿತ್ರ ರಚನೆಯ ಪದ್ಧತಿ ಮತ್ತು ವರ್ಣ ಸಾಮರಸ್ಯದ ವಿಂಗಡನೆಗಳಿಂದಲೇ ಕಲಾಕೃತಿಗಳಿಗೆ ಒಂದು ರೂಪುರೇಷಗಳನ್ನು ಕೊಡುವುದರ ಜೊತೆಗೆ ಕಲಾಕೃತಿಯಲ್ಲಿಯ ಆಕಾರ ಮೈವಳಿಕೆ, ತಾಳ–ಮೇಳಗಳ ಸ್ವಂತಿಕೆಯ ಈ ತಂತ್ರಗಾರಿಕೆಯಿಂದ ಹೊಸತನ ಮತ್ತು ಒಳ ಅರ್ಥಗಳನ್ನು ಸೂಕ್ಷ್ಮವಾಗಿ ಗುರುತಿಸುವುದರ ಜೊತಗೆ ಸೃಜನಾತ್ಮಕವಾಗಿ ಆಕಾರ ಪ್ರಮಾಣ ಬದ್ಧವಾಗಿದ್ದರೆ ಮಾತ್ರ ಸಾಲದು, ಬಣ್ಣಗಳ ಹರವಿಕೆಯಲ್ಲಿಯು ತಾಳ–ಮೇಳದಲ್ಲಿ ಸಮತೋಲನವು ಅಷ್ಟೇ ಪ್ರಧಾನ ಪಾತ್ರವಹಿಸುತ್ತದೆ. ಇದು ನೋಡಿ ಪಡೆದ ಜ್ಞಾನವು ಅವರ ಅನುಭವದ ಜ್ಞಾನ ಎಂದು ತಿಳಿಯಪಡಿಸುತ್ತಾರೆ.

ಶೈಲಿ :

ಚಿತ್ರ ರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾ ಕೌಶಲ್ಯ ಕೂಡ ಬದಲಾಗುತ್ತದೆ. ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಬಗೆ-ಬಗೆಯ ಕೌಶಲ್ಯ ಹಾಗೂ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತಾನಾಗಿಯೇ ತನ್ನ ಮನಸ್ಸಿನ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಪ್ರಾಯೋಗಿಸುತ್ತಾನೆ. ಮಾನಸಿಕ ಭಾವನೆಗಳನ್ನು ಹೊರಗೆಡಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ರೂಪಿಸಿಕೊಳ್ಳುತ್ತಾನೆ. ಆದರೆ ಬಾಳೀಕಾಯಿ ಅವರು ಒಂದೇ ಶೈಲಿಗೆ ಮೊರೆ ಹೋಗದೆ ಬೇರೆ ಬೇರೆ ಶೈಲಿಗಳಲ್ಲಿ ತಮ್ಮ ಕಲಾಕೃತಿಗಳನ್ನು ರಚಿಸಿದ್ದಾರೆ.

ಶೈಲಿ ಎಂದರೇನು ಅದನ್ನು ಕೆಲವರು ಮಾತುಗಳಲ್ಲಿ ಸರ್ವಸಮ್ಮತವಾದ ರೀತಿಯಲ್ಲಿ ಹೇಳುವುದು ಸಾಧ್ಯವಿಲ್ಲ. ಇದಕ್ಕೆ ಪ್ರಧಾನ ಕಾರಣ ಶೈಲಿಯ ಸ್ವರೂಪವನ್ನು ಕುರಿತು ಬೇರೆ ಬೇರೆ ಕಾಲಗಳ, ಬೇರೆ ಬೇರೆ ತಜ್ಞರ ವಿವರಣೆಗಳು ಅವುಗಳನ್ನು ಬಹುಭಾಗವಾಗಿ ಪರಿಶೀಲಿಸಿದ ಮೇಲೆ ಶೈಲಿಯನ್ನು ಕುರಿತು ಸಾಹಿತ್ಯ ಮತ್ತು ಕಲಾಕೃತಿಗಳ ವಿಮರ್ಶೆಯ ಸಂಬಂಧದಲ್ಲಿ ಶೈಲಿ ಎಂಬ ಮಾತು ಪದೇ ಪದೇ ಬರುತ್ತಿರುತ್ತದೆ.

ಕಲಾವಿದನ ಶೈಲಿ ಹೇಗೆ ರೂಪಗೊಳ್ಳುತ್ತದೆ ಎಂಬುದು ಒಂದು ಮುಖ್ಯ ಪ್ರಶ್ನೆ. ಭಾವನೆಗಳು ಕಲಾವಿದನ ಮನಸ್ಸಿನಲ್ಲಿ ರೂಪುಗೊಳ್ಳವಾಗಲೆ ಅವುಗಳನ್ನು ನಿರೂಪಿಸುವ ರೇಖೆ, ಬಣ್ಣಗಳ ಸಂಬಂಧ, ಅವನ ಮನಸ್ಸಿನಲ್ಲಿ ಮೂಡುತ್ತವೆ. ಹಿಂದಿನ ಕಲಾವಿದರ ಅಭ್ಯಾಸದಿಂದ ಶ್ರೇಷ್ಠ ಕಲಾವಿದರ ಅಭಿವ್ಯಕ್ತಿಯ ಶಕ್ತಿ ಬೆಳೆಯುತ್ತದೆ. ಹೀಗೆ ವಿದ್ವತ್ತು ಅನುಭವ, ಭಾವ ತೀವ್ರತೆ, ಅಭಿವ್ಯಕ್ತಿಯ ಶಕ್ತಿ, ಕಲೆಯ ಭಂಡಾರ ಹಾಗೂ ಪ್ರತಿಭೆಯ ಸುರಮ್ಯ ಸಮ್ಮೇಳನದಿಂದ ಒಬ್ಬ ಕಲಾವಿದನ ಶೈಲಿ ರೂಪಗೊಳ್ಳುತ್ತದೆ. ಶೈಲಿ ಕಲಾವಿದನನ್ನು ಹಿಂಬಾಲಿಸುವ ಛಾಯೆ. ಕಲಾವಿದನ ಅಭಿವ್ಯಕ್ತಿಯ ಮಾಧ್ಯಮ ಬಣ್ಣ ಮತ್ತು ರೇಖೆಗಳು ಈ ಮಾಧ್ಯಮವನ್ನು ಅವನು ಎಷ್ಟು ಅರ್ಥವಾಗುವಂತೆ, ಪ್ರಭಾವಶಾಲಿ ಆಗುವಂತೆ ಉಪಯೋಗಿಸುತ್ತಾನೋ ಅನುಸರಿಸಿ ಅವನ ಶೈಲಿ ರೂಪುಗೊಳ್ಳುತ್ತದೆ. ಇಲ್ಲಿ ಕಲಾವಿದನ ಅನುಭವದ ತಂತ್ರಜ್ಞಾನ ಪ್ರತಿಭೆ ಅವನ ರಚನಾ ಸಾಮರ್ಥ್ಯವನ್ನು ಶೈಲಿ ಎಂದು ಅರ್ಥವಾಗುತ್ತದೆ.

ಶ್ರೀ ಎಂ. ಆರ್. ಬಾಳೀಕಾಯಿ ಅವರು ರೇಖಾ ವಿನ್ಯಾಸ ಅವರದೇ ಆದ ವಿಶಿಷ್ಟತೆಯಿಂದ ಕೂಡಿದ್ದಾಗಿದೆ. ಭಾವ ಚಿತ್ರ, ನಿಸರ್ಗ ಚಿತ್ರ ಸಂಯೋಜನಾ ಚಿತ್ರ ಮತ್ತು ಕೋಲಾಜ್ ಚಿತ್ರಗಳಲ್ಲಿ ರೇಖೆಗಳು ಭಾವ ಸಂಚಾರ ವಿಸ್ಮಯಕಾರಿಯಾದ ಸೌಂದರ್ಯಾನುಭೂತಿಯಿಂದ ಕೂಡಿದ ಶಕ್ತಿ ಪಡೆದುಕೊಂಡಂತಿದೆ. ಈ ರೇಖಾ ಶೈಲಿಯು ರಸದಾನುಭವದ ಭಾವ ಸೂಚಕವಾದ ತಮ್ಮದೇ ಆದ

ರೇಖಾ ವಿನ್ಯಾಸವನ್ನು ರೂಪಸಿಕೊಂಡಿವೆ. ಅವರ ರೇಖೆ ಹಾಗೂ ವರ್ಣ ಚಿತ್ರಗಳಲ್ಲಿ ಭಾರತೀಯ ಗ್ರಾಮೀಣ ಸೊಗಡಿನ ವಿವಿಧ ಭಂಗಿಗಳಲ್ಲಿ ವಿವಿಧ ಹಾವ-ಭಾವಗಳ ಸೊಬಗನ್ನು ಆನಂದಿಸಬಹುದಾಗಿದೆಯಲ್ಲದೇ ರೇಖೆಯನ್ನು ಸಹಿತ ಕೆಲವು ಸರಣಿಗಳ ರೂಪದಲ್ಲಿ ಹೊಂದಿಸಿದ್ದಾರೆ. ಆದರೆ ಪ್ರತ್ಯೇಕವಾಗಿ ಒಂದೇ ಶೈಲಿಗೆ ಅಂಟಿಕೊಳ್ಳದ ಕಲಾವಿದ ಎಂದರು ತಪ್ಪಾಗಲಾರದು.

ಒಬ್ಬ ಹೆಸರಾಂತ ಕಲಾವಿದ ಪಿಕಾಸೊವಿನ ಶೈಲಿ ಕಾನ್‌ಸ್ಟೇಬಲ್‌ವಿನ ಶೈಲಿ ವ್ಯಾನ್‌ಗಾಸ ನ ಶೈಲಿ ಅಂಥ ಹೇಳುತ್ತೇವೆ. ಆದರೆ ಶೈಲಿ ಎಂದರೆ ತಾನು ಒಂದು ಹೊಸ ಪ್ರಯೋಗ ಮಾಡಿ ಕಲಾಕೃತಿ ರಚನೆ ಮಾಡುವಾಗ ಅದೇ ತರಹ ಮೂಡಿರಬಹುದು ಅಲ್ಲಿ ವಿಷಯ ಒಂದೇ ಆಗಿರಬಹುದು. ಆದರೆ ಮಾಡುವ ತಂತ್ರಗಾರಿಕೆ ಬೇರೆ ಆಗಿರುತ್ತದೆ.

ಜಗತ್ತಿನಲ್ಲಿರುವಂತಹ ಎಲ್ಲ ವಸ್ತುಗಳು ಘನ ವಸ್ತುಗಳು, ಅದಕ್ಕೆ ಘನಾಕೃತಿಗಳನ್ನು ಮಾಡಲಿಕ್ಕೆ ಪ್ರಾರಂಭಿಸಿದೆ ಎನ್ನುತ್ತಾನೆ. ಕಲಾವಿದ ಪಿಕಾಸೊ (ಕ್ಯೂಬಿಜಂ) ತನ್ನ ತನವನ್ನು ಗುರುತಿಸಿಕೊಳ್ಳಲಿಕ್ಕೆ ಆ ಒಂದು ಶೈಲಿಯನ್ನು ಕಂಡುಕೊಂಡನು. ಹಾಗೆ ಈ ಸಮಕಾಲೀನ ಕಲಾವಿದರು ತಮ್ಮ ಶೈಲಿಯನ್ನು ಗುರುತಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಒಂದು ಆಯಾಮವಾದರೆ, ತಂತ್ರಗಾರಿಕೆ ಎನ್ನುವುದು ಕಲಾವಿದನು ಗುರುತಿಸಿಕೊಳ್ಳಲಿಕ್ಕೆ ಮಾಡಿಕೊಂಡಂತಹ ಶೈಲಿ, ಆ ಶೈಲಿಗೆ ಶ್ರೀ ಎಂ. ಆರ್. ಬಾಳೀಕಾಯಿಯವರು ಯಾವತ್ತು ಬರಿಯಾಗದೆ, ಇದೆ ಅವರ ಶೈಲಿ ಎಂದುಕೊಂಡವರಲ್ಲ. ಕಾರಣ ಒಂದೇ ಶೈಲಿಯಲ್ಲಿ ಮಾಡಿದರೆ ಹೊಸತನವನ್ನು ಯಾವಾಗ ಮಾಡುವುದು ಎನ್ನುವ ಪ್ರಭಾವ ಸ್ಫೂರ್ತಿ ಬೀರಿರುವುದರಿಂದ ಬೇರೆ ಬೇರೆ ಆಯಾಮಗಳನ್ನು ರೂಪಿಸಿಕೊಂಡು ತಂತ್ರಗಾರಿಕೆಯ ಬದಲಾವಣೆಯನ್ನು ಸೃಜನಾತ್ಮಕತೆಗೆ ಅವರ ತಂತ್ರಗಾರಿಕೆ ಎನ್ನುವುದು ಸ್ಪಷ್ಟವಾಗಿದೆ. ಇಂತಹದೆ ಅಂತ ಇಲ್ಲ. ಕೆಲವೊಂದಿಷ್ಟು ಕಲಾಕೃತಿಗಳು ಮಾಡಿದ ನಂತರ, ಮತ್ತೆ ಬೇರೆ ಶೈಲಿಗೆ ತೆರಳುತ್ತಾರೆ. ಅದರಲ್ಲಿಯೂ ೮ ರಿಂದ ೧೦ ರವರೆಗೆ ಕಲಾಕೃತಿಗಳನ್ನು ಮಾಡಿ ಒಂದಕ್ಕೆ ಸೀಮಿತವಾಗಿರದೆ ಹೊಸ ಹೊಸ ವಿಚಾರಗಳ ಬಗ್ಗೆ ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ.

ಬೇರೆ ಬೇರೆ ಆಯಾಮಗಳಲ್ಲಿ ಹೊಸತನವನ್ನು ಹುಡುಕಿಕೊಳ್ಳಲಿಕ್ಕೆ ಸಾಧ್ಯವಿದೆ ಎಂದು ಅದು ಒಂದೆ ವಿಷಯಕ್ಕೆ ನಿಖರವಾಗಿರದೆ, ವಿಷಯ ಒಂದೇ ಅದರಲ್ಲಿ ಡ್ರಾಯಿಂಗ್, ಪೇಂಟಿಂಗ್, ಕಲರ್ಸ್ ಎಲ್ಲವುಗಳ ಜೊತೆಗೆ ಸ್ಥಳವಿದೆ. ವಸ್ತುವಿದೆ. ಅವಕಾಶವಿದೆ ಆದರೆ ಮಾಡುವ ವಿಧಾನಗಳು ಬದಲಾವಣೆಯಾಗುತ್ತವೆ. ಹಾಗೆ ಇನ್ನು ಹೊಸತನ ಏನು ಸಿಗುತ್ತೆ ಅನ್ನುವ ಹುಡುಕಾಟದಲ್ಲಿದ್ದಾರೆ. ಶ್ರೀ ಎಂ. ಆರ್. ಬಾಳೀಕಾಯಿಯವರು ತಮ್ಮ ಶಕ್ತಿಯನ್ನು ಒಂದರಲ್ಲಿಯೇ ತೋರಿಸುವುದಕ್ಕಿಂತ ಹೊಸ ಶಕ್ತಿಗೆ ಹೊಸ ವಿಚಾರಕ್ಕೆ ಹೊಸ ತಂತ್ರಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕು ಎಂಬುವುದು ಬಹಳ ಸೂಕ್ತವಾಗಿ ವಿವರಿಸಿದರು.

ಟಿಪ್ಪಣಿಗಳು

೧) ವರ್ಣ ಸಂಜಯ : ಡಾ. ಎಸ್. ಸಿ. ಪಾಟೀಲ, ಪುಟ ೨೨

೨) ಕಲಾವಿದರೊಂದಿಗೆ ಸಂದರ್ಶನ ಮಾಡಿದಾಗ ತಿಳಿದ ವಿಷಯ ದಿ ೦೪-೦೬-೨೦೧೪

೩) ಚಿತ್ರಕಲಾವಿದ ಜೆ.ಎಸ್. ಖಂಡೇರಾವ, ಮಲ್ಲಿಕಾರ್ಜುನ ಬಾಗೋಡಿ ಪುಟ ೧೦೬

೪) ಜ್ಞಾನ ಗಂಗೋತ್ರಿ ವಿಶ್ವಕೋಶ, ಕಲೆ ಮತ್ತು ಸಾಹಿತ್ಯ ಸಂಪುಟ-೫ ಪ್ರಸಾರಂಗ ಮೈಸೂರ ವಿ.ವಿ. ಪುಟ-೬೦೬

ಅಧ್ಯಾಯ : ಆರು

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾಚಟುವಟಿಕೆಗಳು ಮತ್ತು ಕಲಾ ಸಾಧನೆ

ಅಧ್ಯಾಯ–೬

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾ ಚಟುವಟಿಕೆಗಳು ಮತ್ತು ಕಲಾ ಸಾಧನೆ

ಶ್ರೀ ಎಂ. ಆರ್. ಬಾಳೀಕಾಯಿ ಅವರು ಬಾಲ್ಯದಲ್ಲಿಯೇ ಕಲಾಸಕ್ತಿಯನ್ನು ಹೊಂದಿದವರಾದ್ದರಿಂದ ಅವರು ಯಾವುದಾದರೂ ಒಂದು ರೀತಿಯ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅನೇಕ ಕಲಾ ಚಟುವಟಿಕೆಗಳನ್ನು ಮಾಡುತ್ತಾ ಬಂದಿದ್ದಾರೆ. ಇವರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯುವಾಗಲೇ ಹಲವಾರು ರೀತಿಯ ಕಲಾಚಟುವಟಿಕೆಗಳನ್ನು ಮಾಡುತ್ತಾ ಬಂದಿರುವುದು ತಿಳಿದುಬರುತ್ತದೆ. ಇವರು ಇನ್ನು ಚಿಕ್ಕ ವಯಸ್ಸಿನಲ್ಲಿರುವಾಗಲೇ ಅವರ ಊರಿನಲ್ಲಿ ಏನಾದರೂ ಕಾರ್ಯಕ್ರಮಗಳು ನಡೆಯುತ್ತಿದ್ದರೆ ಈ ಚಿಕ್ಕ ಬಾಲಕನನ್ನೆ ಕರೆದುಕೊಂಡು ಹೋಗುತ್ತಿದರು. ಮನೆ ಮನೆಗಳಲ್ಲಿಯೂ ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೇ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಜೊತೆಗೆ ಶಾಲೆಯಲ್ಲಿ ವರ್ಷದ ಕೊನೆಯಲ್ಲಿ ಶಾಲಾವಾರ್ಷಿಕೋತ್ಸವನ್ನು ಏರ್ಪಡಿಸುತ್ತಿದ್ದರು. ಆ ಸಂದರ್ಭಗಳಲ್ಲಿ ಚಿತ್ರಕಲೆಯ ಪ್ರದರ್ಶನ ಮಾಡುವುದು ಇನ್ನಿತರ ಬೇರೆ ಬೇರೆ ಕಲಾ ಚಟುವಟಿಕೆಗಳನ್ನು ಮಾಡುತ್ತಿದ್ದರು. ಹೀಗೆ ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಕಲೆಯ, ಕಲಾಚಟುವಟಿಕಗಳ ಹುಚ್ಚನ್ನು ಹಚ್ಚಿಕೊಂಡು ಮುಂದೆ ಪ್ರೌಢಶಾಲಾ ಶಿಕ್ಷಣದ ಹಂತದಲ್ಲಿಯೇ ಇನ್ನು ಹೆಚ್ಚಾಗಿ ಚಿತ್ರಕಲೆಯಲ್ಲಿ ತಮ್ಮ ಸಮಯವನ್ನು ಸೀಮಿತವಾಗಿಟ್ಟುಕೊಂಡರು. ಕಲೆಯ ಕುರಿತಾಗಿ ಹೊಸ ಬೆಳಕನ್ನು ಕಾಣುವಂತಹ ಬೆಳವಣಿಗೆ ಮೂಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದವರು

ಪ್ರೌಢಶಿಕ್ಷಣದ ಹಂತದಲ್ಲಿಯೇ ಇವರಿಗೆ ಒಲಿದ ಭಾಗ್ಯವೆಂದರೆ ಇವರ ಹುಟ್ಟಿದ ಊರಲ್ಲಿ ಮೊದಲು ಪ್ರೌಢ ಶಾಲೆ ಇರಲಿಲ್ಲ. ಮುಂದೆ ಕೆಲವು ದಿವಸಗಳಲ್ಲಿಯೇ ಪ್ರಾರಂಭವಾದ ನಂತರ ಆ

ಊರಲ್ಲಿ ಯಾರು ಚಿತ್ರಕಲಾ ಶಿಕ್ಷಕರು ಇರಲಿಲ್ಲ. ಆಗ ಇವರಿಗೆ ವಾರಕ್ಕೆ ಎರಡು-ಮೂರು ಕ್ಲಾಸುಗಳನ್ನು ಹೇಳುವುದಕ್ಕೆ ಅವಕಾಶ ಸಿಕ್ಕಿತು. ನಂತರ ದಿನಗಳಲ್ಲಿ ತಾವು ಚಿತ್ರಕಲೆಯ ಕುರಿತು ಅಭ್ಯಾಸ ಮಾಡಲು ಗದಗ ಕಾಲೇಜಿಗೆ ಬಂದಾಗ ಅಲ್ಲಿಯೂ ಕೂಡ ಅನೇಕ ಕಲಾಚಟುವಟಿಕೆಗಳನ್ನು ಮಾಡುವುದರ ಜೊತೆಗೆ ಸ್ವಲ್ಪ ದಿನಗಳಲ್ಲಿಯೇ ವೃತ್ತಿಯ ಬದುಕನ್ನು ಕಂಡುಕೊಳ್ಳುವುದರೊಂದಿಗೆ ತಮ್ಮ ಕಲಾ ಚಟುವಟಿಕೆಗಳು ಹಾಗೆಯೇ ಮುಂದುವರೆದವು.

ಪ್ರದರ್ಶನಗಳು :

೧) ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

೨) ಸಮೂಹ ಚಿತ್ರಕಲಾ ಪ್ರದರ್ಶನ

ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ:

ಶ್ರೀ ಎಂ. ಆರ್. ಬಾಳೀಕಾಯಿ ಅವರು ನಾಡಿನ ಹಲವಾರು ಕಡೆಗಳಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ಮಾಡಿದ್ದಾರೆ. ಅವರು ಮೊದಲ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ೧೯೬೨ ರಿಂದ ೧೯೭೦ ರವರಗೆ ಬಾಣಾವರದಲ್ಲಿ ನಂತರ ಹಾಸನ ೧೯೬೩, ಅರಸೀಕೆರೆ-೧೯೬೪, ಹೆಬ್ಬಾಳ-೧೯೬೯, ಅಜ್ಜಂಪುರ, ತರೀಕೆರೆ, ಚಿಕ್ಕಮಗಳೂರು-೧೯೭೫ ವರೆಗೆ, ನಂತರ ವೆಂಕಟಪ್ಪ ಆರ್ಟ್ ಗ್ಯಾಲರಿ ಬೆಂಗಳೂರು-೧೯೯೨, ಧಾರವಾಡದಲ್ಲಿ ೧೯೭೩-೭೯ ರವರೆಗ ನಂತರ ಅಲ್ಲಿಯೇ ೧೯೯೨ ರಿಂದ ೨೦೦೧ ರವರಗೆ ಇದರ ನಂತರ ೧ ರಿಂದ ೬ ಫೆಬ್ರುವರಿ ೨೦೦೮ ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ ಆರ್ಟ್ ಕಾಂಪ್ಲೇಕ್ಸ್, ಗ್ಯಾಲರಿ ನಂ.೧ ಬೆಂಗಳೂರು ಮತ್ತು ೨೪ ರ ಅಗಸ್ಟ್ ೨೦೦೯ ರಲ್ಲಿ ವಿಶ್ವೇಶ್ವರಮಠ ಗದಗ, ಹೀಗೆ ಇವರು ಇನ್ನು ಹಲವಾರು ಕಡೆಗಳಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ಕೈಗೊಂಡಿದ್ದಾರೆ.

ಸಮೂಹ ಚಿತ್ರಕಲಾ ಪ್ರದರ್ಶನ :

ತಮ್ಮ ಕಲಾ ಸ್ನೇಹಿತರ ಬಳಗದೊಂದಿಗೆ ಅನೇಕ ಸಮೂಹ ಕಲಾಪ್ರದರ್ಶನವು ಕೈಗೊಂಡಿದ್ದಾರೆ. ೧೯೯೩ ರಂದು ವಿಜಾಪೂರದಲ್ಲಿ ರಾಜ್ಯಮಟ್ಟದ ಪ್ರಥಮ ಕಲಾ ಪ್ರದರ್ಶನ, ೧೯೯೪ ರಲ್ಲಿ ಮತ್ತೆ ವಿಜಾಪೂರದಲ್ಲಿ, ೧೯೯೯-೨೦೦೦ ನ್ಯೂಡೆಲ್ಲಿ, ೨೦೦೬ ಕರ್ನಾಟಕ ಚಿತ್ರಕಲಾ ಪರಿಷತ್ ೧೭ ರಿಂದ ೨೨ ರವರೆಗೆ ಜನೇವರಿ ೨೦೦೭ ಮತ್ತು ಏಪ್ರೀಲ್ ೨೦೧೦ ರಲ್ಲಿ ಈ ತರಹದ ಅನೇಕ ಸಮೂಹ ಚಿತ್ರಕಲಾ ಪ್ರದರ್ಶನಗಳನ್ನು ಅಂತರಾಷ್ಟ್ರೀಯ-ರಾಷ್ಟ್ರೀಯ ಮಟ್ಟದಲ್ಲಿಯೂ ಹಮ್ಮಿಕೊಂಡಿದ್ದರು.

ಬೇರೆ ಬೇರೆ ಕಲಾ ಪ್ರದರ್ಶನಗಲಲ್ಲಿ ಶಿಬಿರಗಳು :

ಬಾಳೀಕಾಯಿಯವರು ಅನೇಕ ಕಡೆಗಳಲ್ಲಿ ಅಂದರೆ ಅಂತರಾಷ್ಟ್ರೀಯ, ರಾಷ್ಟ್ರ, ರಾಜ್ಯ ಮಟ್ಟದಲ್ಲಿಯೂ ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿರುತ್ತಾರೆ. ಜೊತೆಗೆ ಆಯ್ಕೆಗೆ ಕಳುಹಿಸಿರುವಂತಹ ಕಲಾಕೃತಿಗಳು ಆಯ್ಕೆಯಾಗಿ ಪ್ರದರ್ಶನಗೊಂಡಿವೆ. ಅವುಗಳೆಂದರ ಮೈಸೂರ ದಸರಾ ಉತ್ಸವ ಸತತವಾಗಿ ೧೯೬೭ ರಿಂದ ೯೬ ರವರೆಗೆ ನಂತರ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಿಲ್ವರ್ ಜುಬ್ಲಿ ಪ್ರದರ್ಶನ ೧೯೮೭ ಮತ್ತೆ ಕರ್ನಾಟಕ ಲಲಿತಕಲಾ ಅಕಾಡೆಮಿ ಅಯೋಜಿಸಿದ ಕಲಾಶಿಬಿರ ಸೆಮಿನಾರ ಕರ್ನಾಟಕ ಲಲಿತಕಲಾ ಅಕಾಡೆಮಿ ಆಯೋಜಿಸಿದ್ದು-೧೯೯೨, ೭ನೇ ರಾಷ್ಟ್ರೀಯ ಕಲಾಮೇಳ, ಮದ್ರಾಸ್ ೧೯೯೩, ರಾಷ್ಟ್ರೀಯ ಕಲಾ ಶಿಬಿರ ಗದಗ-೧೯೯೪ ರಾಷ್ಟ್ರೀಯ ಕಲಾಮೇಳ ಬೆಂಗಳೂರು-೧೯೯೪, ಕಲಾ ಸಂಯೋಜಿತಾ ಬೆಂಗಳೂರು-೧೯೯೫, ರಾಷ್ಟ್ರೀಯ ಕಲಾಮೇಳ, ನ್ಯೂಡೆಲ್ಲಿ ೧೯೯೬ ರಿಜನಲ್ ಸೆಂಟರ್ ಮದ್ರಾಸ್ ೧೯೯೬, ರಾಷ್ಟ್ರೀಯ ಕಲಾಮೇಳ ಕಲ್ಕತ್ತಾ ೧೯೯೭, ಕೆ. ಎಲ್. ಕೆ. (ರವೀಂದ್ರ ಭವನ) ನ್ಯೂಡೆಲ್ಲಿ ೧೯೯೯ದ ಮಿಲಿಯನ್ ಶೋ ದೇಯರ್ ಸ್ಟೋರಿ ಸಮಕಾಲೀನ ಕಲಾಪ್ರದರ್ಶನ (ಹೆಲ್ತ್ ಅಶೋಷಿಯಷನ್ ಆಫ್ ಇಂಡಿಯಾ) ನ್ಯೂಡೆಲ್ಲಿ ೨೦೦೨, ಧಾರವಾಡ ಉತ್ಸವ ೨೦೦೨ ಲಕ್ಕುಂಡಿ ಉತ್ಸವ ೨೦೦೯, ಹೀಗೆ ಹಲವಾರು ಕಡೆಗಳಲ್ಲಿ ಭಾಗವಹಿಸವುದರ ಜೊತೆಗೆ ಶಿಬಿರಗಳಲ್ಲಿಯೂ ಭಾಗವಹಿಸಿರುತ್ತಾರೆ.

ಪ್ರಾತ್ಯಕ್ಷಿಕೆಗಳು :

ಶ್ರೀ ಎಂ. ಆರ್. ಬಾಳೀಕಾಯಿ ಅವರು ಅನೇಕ ಕಡೆಗಳಲ್ಲಿ ಜಲವರ್ಣದಲ್ಲಿ ಅಂದರೆ ನಿಸರ್ಗ ಚಿತ್ರಗಳು, ಭಾವ ಚಿತ್ರಗಳು, ಎಲ್ಲ ಕಡೆಗಳಲ್ಲಿಯೂ ಪ್ರಾತ್ಯಕ್ಷಿಕೆ ಕೊಡುವುದರ ಜೊತೆಗೆ ಕಲಾ ವಿದ್ಯಾರ್ಥಿಗಳನ್ನು ಬಹಳ ಪ್ರೀತಿಯಿಂದ ಕಾಣುವುದು ಇವರಲ್ಲಿ ಕಂಡುಬರುತ್ತದೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಮೈಸೂರಿನಲ್ಲಿ, ಬದಾಮಿಯಲ್ಲಿ, ಧಾರವಾಡ, ಬೆಂಗಳೂರು ಹೀಗೆ ಅನೇಕ ಪ್ರದೇಶಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಕೊಟ್ಟರು.

ಚಿತ್ರಕಲಾ ವಿಷಯಗಳಿಗೆ ಸಂಬಂಧಿಸಿದ ಅನೇಕ ಕಲಾ ಚಟುವಟಿಕೆಗಳನ್ನು ಮಾಡುತ್ತಾ ಪಿಹೆಚ್.ಡಿ. ಹಾಗೂ ಎಂ.ಫಿಲ್ ವಿದ್ಯಾರ್ಥಿಗಳ ಮಹಾ ಪ್ರಬಂಧಗಳು ಮತ್ತು ಸಂಪ್ರಬಂಧಗಳು ಪರಿಶೀಲಿಸಿದ್ದಾರೆ. ೨೦೦೧ ಪುನರ್ ಚೇತನ ಎಂಬ ಕನ್ನಡ ವಿಶ್ವವಿದ್ಯಾಲಯದ ಒಂದು ತಿಂಗಳ ಕಾರ್ಯಕ್ರಮದಲ್ಲಿ ಕೋಲಾಜ್ ಕಲೆಯ ವಿಷಯಕ್ಕೆ ಉಪನ್ಯಾಸ ನೀಡಿದ್ದಾರೆ. ೨೦೦೩ ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ ಬನಶಂಕರಿಯಲ್ಲಿ ನಾಲ್ಕನೇ ವಾರ್ಷಿಕೋತ್ಸವದಲ್ಲಿ ಜೈನ ಹಸ್ತಪ್ರತಿಗಳು ಈ ವಿಷಯದ ಮೇಲೆ ವಿಚಾರ ಸಂಕೀರ್ಣದಲ್ಲಿ

ಮಾತನಾಡಿದ್ದರು. ಇನ್ನು ಅನೇಕ ಕಡೆಗಳಲ್ಲಿ ಕಲೆಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ವಿಚಾರ ಸಂಕೀರ್ಣಗಳನ್ನು ಮಾಡಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು:

ಶ್ರೀಯುತ ಎಂ. ಆರ್. ಬಾಳೀಕಾಯಿಯವರಿಗೆ ೧೯೬೭ ರಲ್ಲಿ ಕಲಾ ಮತ್ತು ಕರಕುಶಲ ಪ್ರದರ್ಶನ, ಹಾಸನ, ೧೯೬೯ ರಲ್ಲಿ ಮೈಸೂರ ದಸರಾ ದ್ವಿತೀಯ ಬಹುಮಾನ, ೧೯೬೯, ೭೧, ರವರೆಗೆ ಮೈಸೂರು ದಸರಾದಲ್ಲಿ ಸತತವಾಗಿ ಮೂರು ವರ್ಷ ರಂಗೋಲಿಗೆ ಪ್ರಥಮ ಬಹುಮಾನ, ೧೯೭೨ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರದರ್ಶನ ಜೊತೆಗೆ ಪ್ರಥಮ ಬಹುಮಾನ, ೧೯೮೩ ರಲ್ಲಿ ರೋಟರ್‍ಯಾಕ್ಟ್ ಧಾರವಾಡದಲ್ಲಿ ದ್ವಿತೀಯ ಬಹುಮಾನ, ೧೯೮೩ ರಲ್ಲಲಿಯೇ ಕೆ.ಎಚ್. ಕಬ್ಬೂರ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಧಾರವಾಡ ಮತ್ತು ಅದೇ ವರ್ಷ ರೇನ್ ಬೋ ಆರ್ಟ್ ಕೌನ್ಸಿಲ್, ಧಾರವಾಡ, ೧೯೯೧ ರಲ್ಲಿ ಅಖಿಲ ಭಾರತ ಲಲಿತ ಕಲಾ ಪ್ರದರ್ಶನ, ಧಾರವಾಡ ೧೯೯೩ ರಲ್ಲಿ ಬೆಲ್ಲದ ಕೃಷಿ ಪ್ರತಿಷ್ಠಾನದಿಂದ ಉತ್ತಮ ಕಲಾ ಶಿಕ್ಷಕ ಪ್ರಶಸ್ತಿ, ೧೯೯೪ ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಚಿತ್ರಕಲಾ ಶಿಕ್ಷಕರ ಪ್ರಶಸ್ತಿ ಕರ್ನಾಟಕ ರಾಜ್ಯ ಸರಕಾರದಿಂದ, ೧೯೯೪ ರಲ್ಲಿ ರೋಟರಿ ಕ್ಲಬ್ ಸತ್ಕರಿಸಿದ್ದು, ೧೯೯೫ ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾವಿದರ ಪ್ರಶಸ್ತಿ, ೧೯೯೬ ರಲ್ಲಿ ರಾಷ್ಟ್ರೀಯ ಮಟ್ಟದ ಆರ್ಟ್ ಮತ್ತು ಕ್ರಾಫ್ಟ ಸೊಸೈಟಿ, ನ್ಯೂಡೆಲ್ಲಿ ಸತ್ಕರಿಸಿದಲ್ಲದೆ ಪ್ರತಿ ವರ್ಷ ೨೦೦೦/– ರೂಗಳನ್ನು ಗೌರವ ಧನವೆಂದು ಕೊಡುತ್ತಾ ಬಂದಿದೆ. ೧೯೯೬ ರಲ್ಲಿ ಕಲಾನಿಧಿ ಬಿರುದು (ಹಳೆ ವಿದ್ಯಾರ್ಥಿಗಳ ಸಂಘ, ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ ಧಾರವಾಡ, ೨೦೦೧ ರಲ್ಲಿ ಹೆಬ್ಬಾಳದ ಜೈನ ಶ್ರಾವಕ–ಶ್ರಾವಕಿಯರಿಂದ ಸತ್ಕಾರ. ೨೦೦೩ ರಲ್ಲಿ ಆಲ್ ಇಂಡಿಯಾ ಫೈನ್ ಆರ್ಟ್ & ಕ್ರಾಫ್ಟ ಸೊಸೈಟಿ, ದೆಹಲಿ ಹಿರಿಯ ಕಲಾವಿದರಿಗೆ ಸನ್ಮಾನ, ೨೦೦೭ ರಲ್ಲಿ ಕರ್ನಾಟಕ ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ೨೦೧೦ ರಲ್ಲಿ ಕಲಾಗುರು ಡಿ.ವ್ಹಿ. ಹಾಲಭಾವಿ ಪ್ರಶಸ್ತಿ, ೨೦೧೨ ರ ೧೦ನೇ ಚಿತ್ರಸಂತೆಯಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಉತ್ತಮ ಕಲಾಶಿಕ್ಷಕ ಮತ್ತು ಕಲಾವಿದ ಪ್ರಶಸ್ತಿ, ೨೦೧೨ ರಲ್ಲಿಯೇ ನಾಡೋಜ ಆರ್. ಎಂ. ಹಡಪದ ಅವರ ಪ್ರಶಸ್ತಿಯನ್ನು ಬದಾಮಿಯಲ್ಲಿ ಪಡೆದಿದ್ದಾರೆ. ಈ ಪ್ರಶಸ್ತಿ ಕೊಡುವುದಕ್ಕೆ ಸುಮಾರು ೫ ರಿಂದ ೬ ತಿಂಗಳವರಗೆ ಕಲಾವಿದರಾದ ಶ್ರೀ ಎಂ. ಆರ್. ಬಾಳೀಕಾಯಿ ಅವರ ಮನೆಗೆ ಬಂದು ವಿಷಯ ಸಂಗ್ರಹ ಮಾಡಿಕೊಂಡು ಹೋಗಿದ್ದಾರೆ.

ಕಲಾಕೃತಿಗಳ ಸಂಗ್ರಹಗಳು :

ಕೆ.ಪಿ.ಟಿ.ಸಿ.ಎಲ್. ಕಮೀಶನರ್ ಆಫೀಸ್, ಬೆಂಗಳೂರು ರಾಜ್ಯ ಮತ್ತು ಕೇಂದ್ರ ಲಲಿತ ಕಲಾ ಅಕಾಡೆಮಿಯ ಜನಪದ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ಕನ್ನಡ ಮತ್ತು ಸಂಸ್ಕೃತಿ

ಇಲಾಖೆ, ಧಾರವಾಡ ಬೇಂದ್ರೆ ಭವನ, ಧಾರವಾಡ, ಸ್ವಿಜರ್‌ಲ್ಯಾಂಡ್, ಜರ್ಮನ್, ಅಮೇರಿಕಾ ಮುಂತಾದ ಸ್ಥಳಗಳಲ್ಲಿ ಮತ್ತು ಶ್ರೀ ಮಂಜುನಾಥ ಕಲಾ ಸಂಗ್ರಹಾಲಯ, ಧರ್ಮಸ್ಥಳ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ರವೀಂದ್ರ ಆರ್ಟ ಗ್ಯಾಲರಿ, ದೆಹಲಿ, ಇಂತಹ ಅನೇಕ ಅಂತರಾಷ್ಟ್ರಿಯ, ರಾಷ್ಟ್ರ, ರಾಜ್ಯಗಳಲ್ಲಿಯೂ ಸಹಿತ ಶ್ರೀಯುತ ಎಂ. ಆರ್. ಬಾಳೀಕಾಯಿ ಅವರ ಕಲಾಕೃತಿಗಳು ಸಂಗ್ರಹಗೊಂಡಿವೆ ಎಂಬ ಮಾಹಿತಿಯನ್ನು ಸಂಗ್ರಹಿಸಿಲಾಗಿದೆ.

ಪ್ರಶಸ್ತಿ, ಪುರಸ್ಕಾರ, ಬಹುಮಾನಗಳು ನಿಮಗೆ ಕೊಟ್ಟಿದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ಅಂತ ಕೇಳಿದಾಗ, ಕಲಾವಿದರು ಹೇಳುತ್ತಾರೆ, ಪ್ರಶಸ್ತಿ ಬಹುಮಾನಗಳು ನಮ್ಮ ಮೇಲ್ಮಟ್ಟವನ್ನು ಕೆಳಗಿಳಿಸುತ್ತವೆ. ಅಂಹಕಾರ ಬರುತ್ತದೆ, ಆದರೆ ಕೊಟ್ಟರು ಸಹಿತ ಅಂಹಕಾರದ ಚಿಂತನೆಯಲ್ಲಿರಬಾರದು. ಅವಾರ್ಡ ತೆಗೆದುಕೊಂಡರೆ ದೊಡ್ಡ ಕಲಾವಿದನಲ್ಲ. ದೊಡ್ಡ ಕಲಾವಿದನಾಗಿರುವುದರಿಂದ ಅವಾರ್ಡ ಕೊಡುವುದು ಮನುಷ್ಯನಿಗೆ ಸಂಸ್ಕಾರ ಬಹಳ ಮುಖ್ಯವಾಗಿರಬೇಕು ಇಲ್ಲದಿದ್ದರೆ ಎಲ್ಲವೂ ಸೂನ್ಯ.

ಪ್ರಶಸ್ತಿ ಕೊಡುವುದು ಸಾಮಾನ್ಯ, ತೆಗೆದುಕೊಳ್ಳುವನು ಅದಕ್ಕೆ ಯೋಗ್ಯನಿದ್ದಾನೆಯೋ ಎಂದು ಎಚ್ಚರದಿಂದ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಸೂನ್ಯ ಎಂದು ಹೇಳಿದರು.

ಶ್ರೀ ಎಂ. ಆರ್. ಬಾಳೀಕಾಯಿ ಅವರು ಹೇಳುತ್ತಾರೆ ಕೊಟ್ಟಾರ ತೆಗೆದುಕೊಂಡಿದ್ದೀನಿ ಅಷ್ಟೇ ಕೊಡದೆ ಇದ್ದರು ಯಾಕೆ ಕೊಟ್ಟಿಲ್ಲ ಅಂತ ಕೇಳುವುದಿಲ್ಲ ಅಂತ ಹೇಳಿದರು. ಯಾಕೆಂದರೆ ಪ್ರಶಸ್ತಿ ಸಲುವಾಗಿ ಅವರು ಕೆಲಸ ಮಾಡಲಿಲ್ಲ, ಅವರಿಗೆ ಇದರಲ್ಲಿ ಖುಷಿ ಇದೆ, ಆನಂದವಿದೆ. ಯಾವಾಗಲೂ ಚಿಂತನಶೀಲನಾಗಿರುತ್ತಾರೆ. ಕಲೆಯು ಅವರಿಗೆ ಜೀವನದ ದಿಕ್ಕನ್ನೇ ಬದಲಾಯಿಸಿ ಅತಿಯಾದ ಖುಷಿ ಕೊಟ್ಟಿರುವುದು ಅವರು ಯಾವತ್ತು ಮರೆಯೊದಿಲ್ಲ ಇದರಲ್ಲಿರುವಂತಹ ಖುಷಿ ಬೇರೆ ಯಾವುದರಲ್ಲಿಯೂ ಸಿಕ್ಕಿಲ್ಲ ಅಂತ ಹೇಳುತ್ತಾರೆ. ನಾವು ಚಿಕ್ಕವರೆಂಬ ಭಾವನೆಯಿಂದ ಏನೆಲ್ಲ ಕಲಿಯಬಹುದು, ದೊಡ್ಡವರೆಂದು ದಡ್ಡತನ ತೋರಿಸದೇ ವ್ಯಕ್ತಿತ್ವ ಹಾಳು ಮಾಡಿಕೊಳ್ಳದೆ ನಮ್ಮ ವಿಶ್ವದ ಗ್ರಂಥಾಲಯವು ನಮ್ಮ ತಲೆಯಲ್ಲಿಯೇ ಇದೆ. ಸುಮಾರು ಅಂತಸ್ತುಗಳ ಗ್ರಂಥಾಲಯವಿದ್ದರೂ ಅದು ಕಡಿಮೆ, ಅದಕ್ಕೆ ಅದನ್ನು ಉಪಯೋಗ ಮಾಡಿಕೊಂಡು ಮಾನವೀಯ ಮೌಲ್ಯಗಳಿಂದ ಗೌರವವನ್ನು ತಂದುಕೊಳ್ಳಬೇಕು.

ಈ ಪ್ರಶಸ್ತಿ ಪುರಸ್ಕಾರಗಳು ತಮ್ಮ ವಿಚಾರದಲ್ಲಿ ಕೇಳಿದಾಗ ಅಂದರೆ ತಾವು ಕೂಡ ಅನೇಕ ಕಾರ್ಯ ಸಮಿತಿಯಲ್ಲಿ ಪಾಲ್ಗೊಂಡಿರುವ ಸಂದರ್ಭಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳಿಗೆ ಪ್ರಶಸ್ತಿ ಕೊಡುವ

ಒತ್ತಡಗಳು ಮತ್ತು ರಾಜಕೀಯ ಒಳ ಸಂಚುಗಳು ಬಂದಾಗ ಅವುಗಳ ದಿಕ್ಕು ತೋರಿಸದೆ, ಅದರಿಂದ ಆಚೆಯೂ ಬಂದಿದ್ದಾರೆ ಎನ್ನುವುದು ತಿಳಿದು ಬರುತ್ತದೆ. ಅಲ್ಲದೇ ಯೋಗ್ಯವಾಗಿರುವಂತಹ ಕಲಾವಿದರಿಗೆ ಪ್ರಶಸ್ತಿಯೂ ಕೊಟ್ಟಿದ್ದೇನೆ ಎನ್ನುವುದರ ಜೊತೆಗೆ ಪ್ರಶಸ್ತಿ ಪುರಸ್ಕಾರಗಳ ವಿಷಯದಲ್ಲಿ ತುಂಬಾ ದೂರವಾಗಿದ್ದೀನಿ ಎಂದು ಹೇಳಿದರು.

ಶ್ರೀ ಎಂ. ಆರ್. ಬಾಳೀಕಾಯಿಯವರಿಗೆ ಪ್ರಶಸ್ತಿ ಕೊಡುವ ಸಂದರ್ಭದಲ್ಲಿ ಅನೇಕ ಜನರು ೨ ಲಕ್ಷ ರೂಗಳವರೆಗೆ ಕೊಟ್ಟು ತೆಗೆದುಕೊಂಡಿದ್ದಾರೆ. ಅಂತಹ ಸಮಯದಲ್ಲಿ ಇವತ್ತಿಗೂ ನಮಗೆ ಯಾವುದೇ ಪ್ರಶಸ್ತಿ ಪುರಸ್ಕಾರಗಳ ಜೊತೆಗೆ ಹಣವನ್ನು ಕೊಟ್ಟಿಲ್ಲ, ಕೊಡಬೇಕಿತ್ತು ಆದರೆ ಅದನ್ನು ಅವರು ಯಾವತ್ತು ಕೇಳಿಲ್ಲ. ಅದು ಅವರಿಗೆ ಉಳಿಯುವುದಿಲ್ಲ. ಅವರಿಗೆ ಉಳಿಯುವುದು ಅವರ ಕಲಾಕೃತಿಗಳು ಮಾತ್ರ ಎನ್ನುವುದು ಅವರ ಮಾತುಗಳಿಂದ ತಿಳಿದುಬರುತ್ತದೆ ಎಂಥ ನಿಸ್ವಾರ್ಥ ವ್ಯಕ್ತಿ ಎಂದು ತಿಳಿಯುತ್ತದೆ.

ಕಲಾ ಸಾಧನೆ :

ಚಿತ್ರಕಲೆಯ ಸಾಧನೆಯ ಕುರಿತು ಕಲಾವಿದರಿಗೆ ಕೇಳಿದಾಗ

ಚಿತ್ರಕಲೆಗೆ ಸಂಬಂಧಪಟ್ಟ ವಿಷಯ ತಿಳಿದ ಮಟ್ಟಿಗೆ ಅಷ್ಟೋಂದು ಸಾಹಿತ್ಯವಾಗಿ ಗೊತ್ತಿಲ್ಲವೆಂದು ಹೇಳುತ್ತಾರೆ. ಆದರೆ ಚಿತ್ರಕಲೆಗೆ ಈಗ ದೃಶ್ಯಕಲೆ ಎನ್ನುತ್ತಾರೆ. ದೃಶ್ಯಕಲೆ ಎಂದರೆ ಲಲಿತಕಲೆಗಳನ್ನು ಒಳಗೊಂಡಿರುತ್ತವೆ. ವಿಶೇಷವಾಗಿ ಚಿತ್ರಕಲೆಯಲ್ಲಿ ಕಲಾಕೃತಿಯ ಹಿನ್ನೆಲೆ, ಮುನ್ನೆಲೆ ಅದರ ಭಾವನೆಗಳು ಎಲ್ಲವೂ ಗೊತ್ತಾಗುವುದು ಮತ್ತು ನೋಡುವುದು ಒಬ್ಬ ಸಾಮಾನ್ಯ ಮನುಷ್ಯನ ಲಕ್ಷಣ. ಆದರೆ ಒಬ್ಬ ಕಲಾವಿದನು ನೋಡುವುದರ ಜೊತೆಗೆ ಮೌನವಾಗಿ ಆಳಕ್ಕೆ ಇಳಿದು ತನ್ನ ಭಾಷೆಗಳ ಮೂಖಾಂತರ ಎಲ್ಲವನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಾನೆ. ಒಂದು ಚಿತ್ರ ಮಾಧ್ಯಮದಿಂದ ಅದರಲ್ಲಿ ಸಂಯೋಜನೆ ಹೇಗಿದೆ. ಸಾಮಾನ್ಯ ಜನರ ಮೇಲೆ ಹೇಗೆ ಪ್ರಭಾವ ಬಿರುತ್ತದೆ ಅಥವಾ ಕಲಾವಿದನು ತನ್ನ ಭಾವನೆಯನ್ನು ಮಾತ್ರ ಹೊರ ಹಾಕಿದ್ದಾನೆ ಎನ್ನುವ ಹಲವಾರು ವಿಚಾರಗಳು ಮನಸ್ಸಿನಲ್ಲಿ ಮೂಡುತ್ತವೆ ಹಾಗೂ ಶ್ರೀ ಎಂ. ಆರ್. ಬಾಳೀಕಾಯಿ ಅವರು ತಮ್ಮ ಸೃಜನಶೀಲತೆಯನ್ನು ದೃಶ್ಯಕಲೆಗಳಿಗೆ ಮಾತ್ರ ಸೀಮಿತಗೊಳಿಸಲು ದೃಶ್ಯಕಲಾ ಸಾಹಿತ್ಯೆಕ್ಕು ತಮ್ಮ ಪಾಂಡಿತ್ಯವನ್ನು ವಿಸ್ತರಿಸಿದ್ದಾರೆ. ಆಗಾಗ ಅವರು ತಮ್ಮ ವಿತ್ರರು, ಹಿತೈಷಿಗಳ ಕೋರಿಕೆಯ ಮೇರೆಗೆ ಕಲೆಯ ಕುರಿತಾದ ಗಂಭೀರವಾದ ಲೇಖಗಳನ್ನು ಬರೆದುಕೊಟ್ಟಿದ್ದಾರೆ. ಅವು ಸ್ಮರಣ ಸಂಚಿಕೆ, ಅಭಿನಂದನಾ ಗ್ರಂಥ, ಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೆಲವು ಲೇಖನಗಳನ್ನು ಮತ್ತು ಅವರ ವಿಚಾರಗಳನ್ನು ಸಾಹಿತ್ಯರೂಪದಲ್ಲಿ ಪ್ರಕಟವಾಗಿರುವುದನ್ನು ಕೂಡ ಇಲ್ಲಿ ದಾಖಲಿಸಬಹುದಾಗಿದೆ. ಈ ರೀತಿಯ ದಾಖಲೀಕರಣದಿಂದ ಒಬ್ಬ ಕಲಾವಿದನ ಒಟ್ಟು ಚರಿತ್ರೆ

ಒಂದೆಡೆ ಲಭ್ಯವಾಗುವುದರಿಂದ ಮುಂದೆ ಅಧ್ಯಯನ ಮಾಡುವವರಿಗೆ ಈ ಪ್ರಬಂಧ ಸಹಕಾರಿಯಾಗುತ್ತಿದೆಂಬ ಆಶಯ ಈ ಅಂಕಣಕ್ಕಿದೆ.

ಶ್ರೀ ಎಂ. ಆರ್. ಬಾಳೀಕಾಯಿ ಅವರ ಕೆಲವೊಂದು ಲೇಖಗಳು "ಜೀವನ ಶಿಕ್ಷಣ" ಸರಕಾರಿ ಶಿಕ್ಷಕರ ತರಬೇತಿ ಕೇಂದ್ರದ ಮಾಸಿಕದಲ್ಲಿ "ಕಲಿಸುವ ಸಾಮಗ್ರಿಗಳು" ಕುರಿತು ೧೯೯೫ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ವಜ್ರಮಹೋತ್ಸವ ಸ್ಮರಣ ಸಂಚಿಕೆ, ಚಿತ್ರಾಕ್ಷಿಯಲ್ಲಿ "ಯಥಾದರ್ಶನ" ಕುರಿತು ೧೯೯೫ ಜನತಾ ಶಿಕ್ಷಣ ಸಮಿತಿ ಧಾರವಾಡ "ಸಂಸ್ಕರಣ ಗ್ರಂಥ ಶಿಕ್ಷಣ" ಸನ್ಮಾನ "ಉತ್ತರ ಕರ್ನಾಟಕ ಶೈಕ್ಷಣಿಕ ಸಾಧನೆ ಹಲವು ಮುಖಗಳು-ಚಿತ್ರಕಲಾ ಶಿಕ್ಷಣ" ಕುರಿತು-೧೯೯೯, ಕರ್ನಾಟಕ ಕಲಾವಾರ್ತೆ ೨೦೦೧, ಸ್ಮರಣ ಸಂಚಿಕೆ "ಕಂಕಣ ಧರ್ಮದಲ್ಲಿ ಮಾನವ ಜನಾಂಗದ ನಂಬಿಕೆಗಳು" ವಿಷಯದ ಕುರಿತು ೨೦೦೧, ಡಾ. ಬಿ. ಕೆ. ಹಿರೇಮಠ ಬಾಗಲಕೋಟ ಇವರ ಅಭಿನಂದನಾ ಗ್ರಂಥವಾದ ನಿಜದ ನೆಲೆ ಇದರಲ್ಲಿ "ಕೋಲಾಜ ಕಲೆ" ಕುರಿತು ೨೦೦೩ ರಲ್ಲಿ ಲೇಖನ ಬರೆದಿದ್ದಾರೆ ಎಂದು ತಿಳಿದುಬರುತ್ತದೆ.

ಲೇಖನಗಳು ಸಾಹಿತ್ಯ ಭಾಷೆಯ ಮೂಲಕ ತೋಡಿಕೊಳ್ಳುವ ಮಾಧ್ಯಮ ಸಾಹಿತ್ಯದ ಉದ್ದೇಶ ಹಾಗೂ ಅದರ ಅಭಿವ್ಯಕ್ತ ಮಾಧ್ಯಮವಾದ ಭಾಷೆಯ ಉದ್ದೇಶ ಒಂದೇ ಇವೆರಡು ಉದ್ದೇಶವೂ ಸಂವಹನವೇ, ಸಾಹಿತ್ಯದ ಮಾಧ್ಯಮವಾದ ಭಾಷೆ ಸಾಮಾಜಿಕ ಮಾಧ್ಯಮವೂ ಹೌದು, ನಮ್ಮ ದೈನಂದಿನ ವ್ಯವಹಾರಗಳಲ್ಲ. ನಮ್ಮ ಎಲ್ಲ ಬಗೆಯ ಸಂವಹನ ಸಂವಾದಗಳಿಗೂ ಬಳಕೆಯಾಗುವ ಭಾಷೆಯ ಪ್ರಾಯೋಜನಿಕತೆ ಸ್ವರೂಪ ನಮಗೆಲ್ಲ ತಿಳಿದೆ ಇದೆ. ನಮ್ಮ ಶಿಕ್ಷಣವು ಭಾಷೆಯ ಮೂಲಕ ನಡೆಯುವುದರಿಂದ ಅನಿವಾರ್ಯವಾಗಿ ಎಲ್ಲರಿಗೂ ಹತ್ತಿರವಾಗುತ್ತಿದೆ. ಹೀಗೆ ಸಾಹಿತ್ಯ ಸಹೃದಯದ ಜೊತೆಗೆ ಸಮಾನತೆ ಕಲ್ಪಿಸಿಕೊಳ್ಳುತ್ತದೆ.


ಕರ್ನಾಟಕವು ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನ ಲೇಖನಗಳಾಗಲಿ, ವೈಚಾರಿಕ ಪ್ರಬಂಧಗಳಾಗಲಿ, ಹೆಚ್ಚಿನ ಸಂಖ್ಯೆಯಲ್ಲಿ ಬರದಿರಲು ಕಾರಣ ಈ ಕ್ಷೇತ್ರದಲ್ಲಿ ಈವರೆಗೆ ಏನು ಕೆಲಸವಾಗಿದೆ ಎಂಬ ಅರಿವಿನ ಕೊರತೆಯೇ ಆಗಿದೆ. ಸಾಹಿತ್ಯನಾಟಕ ಜನಪದ ಕ್ಷೇತ್ರಗಳಿಗೆ ಹೋಲಿಸಿದರೆ ಚಿತ್ರಕಲೆಯ ಬಗ್ಗೆ ಬಂದಿರುವ ಲೇಖನಗಳು ಕಡಿಮೆಯೆಂದೇ ಹೇಳಬಹುದಾದರೂ ತೀರಾ ನಿರಾಶದಾಯಕವಾಗಿಲ್ಲ.

ಕಲಾವಿದರು ಅನೇಕ ಪುಸ್ತಕಗಳಿಗೆ ಮುಖಪುಟಗಳನ್ನು ಬರೆಯುವುದರ ಜೊತೆಗೆ, ಚನ್ನವೀರ ಕಣವಿಯವರಿಗೆ ಅನೇಕ ರೇಖಾ ಚಿತ್ರಗಳನ್ನು ಬರೆದುಕೊಟ್ಟಿದ್ದಾರೆ. ನಂತರ ಇವರು ವೃತ್ತಿಯಲ್ಲಿದ್ದಾಗ ಉತ್ತರ ಕರ್ನಾಟಕದ ಮಹಾನ್ ಕಲಾವಿದರ ಪರಿಚಯ ಎಲ್ಲರಿಗೂ ಆಗುವಂತೆ ಕಲಾವಿದರ ಫೋಟೋ

ಮತ್ತು ಅದರ ಕಲಾಕೃತಿಗಳೊಂದಿಗೆ ಒಂದು ವರ್ಷದ ಕ್ಯಾಲೆಂಡರನ್ನು ಹೊರತಂದರು. ಇದರ ನಂತರ ಆಗ ಕುಲಕರ್ಣಿ ಅಂತ ಆಯುಕ್ತರು ಕೇಳಿದರಂತೆ ಹಣವಿದೆ ಏನು ಮಾಡೋದು ಅಂದಾಗ ಸರ್ ಶಿಕ್ಷಣ ಸಿಂಚನ ಅನ್ನೋ ಒಂದು ಪುಸ್ತಕ ಹೊರ ತಂದರೆ ಚೆನ್ನಾಗಿರುತ್ತದೆ. ಅದರಲ್ಲಿ ಎಲ್ಲ ಕಲಾವಿದರ ಕಲಾಕೃತಿಗಳನ್ನು ತೆಗೆದುಕೊಂಡು ಒಂದು ಪುಸ್ತಕ ಕೊಟ್ಟರೆ ಎಲ್ಲರಿಗೂ ಪರಿಚಯವಾಗುತ್ತೆ ಅಲ್ಲದೇ ಎಷ್ಟೋಂದು ಕಲಾಪ್ರಿಯರು ಇರುತ್ತಾರೆ. ಅವರಿಗೆಲ್ಲ ಗೊತ್ತಾಗುವುದರ ಜೊತೆಗೆ ಒಂದು ದೊಡ್ಡ ಸಂಶೋಧನೆ ಮಾಡಿದಂತಾಗುತ್ತದೆ. ಎಂದಾಗ ಅವರು ಸರಿ ಅಂತ ಹೇಳಿ ನಿಮಗೆ ಮಾರ್ಚ ಮುಗಿಯುವುದರೊಳಗಾಗಿ ಪುಸ್ತಕ ತಂದು ಕೊಡುತ್ತೇನೆ. ನೀವು ಹೇಳಿದ್ದು ತುಂಬಾ ಒಳ್ಳೆಯದಾಯಿತು ಅಂತ ಹೋದವರು ಮಾತಿಗೆ ತಪ್ಪದೆ ಪುಸ್ತಕವನ್ನು ತಂದು ಕೊಟ್ಟರು ಇದಕ್ಕೆಲ್ಲ ಶ್ರೀ ಎಂ. ಆರ್. ಬಾಳೀಕಾಯಿವರ ಮಾರ್ಗದರ್ಶನ ಪಡೆದುಕೊಳ್ಳುವುದರ ಜೊತೆಗೆ ಒಂದು ಒಳ್ಳೆಯ ಪುಸ್ತಕ ಹೊರಬರಲು ಕಾರಣರಾದರು.

ಶ್ರೀ ಎಂ. ಆರ್. ಬಾಳೀಕಾಯಿಯವರು ೨೦೦೨ ರಲ್ಲಿ ವೆಂಕಟಪ್ಪ ಪ್ರಶಸ್ತಿ ಆಯ್ಕೆ ಕಮೀಟಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಇಂತಹ ಕೆಲಸಗಳ ಜೊತೆಗೆ ಕಲೆಗೆ ಸಂಬಂಧಿಸಿದ ವಿಷಯಗಳ ಕುರಿತು ಸುಮಾರು ಹದಿನೈದು ಬಾರಿ ಆಲ್ ಇಂಡಿಯಾ ರೇಡಿಯೋದಲ್ಲಿ ಧಾರವಾಡ ಮತ್ತು ಬಳ್ಳಾರಿಯಿಂದ ಮಾತನಾಡಿದ್ದಾರೆ. ಅಲ್ಲದೇ ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು ೨೦೧೨ ರಿಂದ ೨೦೧೪ ರವರಗೆ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ. ಈಗ ಸ್ವಂತ ಚಿತ್ರಮನೆ ಎಂಬ ಕಲಾ ಗ್ಯಾಲರಿ ಪ್ರಾರಂಭಿಸಿದ್ದಾರೆ.








1
2
3
4




CHIT
SA
ಕರ್ನಾಟಕ ಚಿತ್ರಕ
rnataka Chitraka




ಪ್ರಶಸ್ತಿ ಪ್ರದಾನ ಸಮಾರಂಭ






ಚಿತ್ರಕೂ ಪ್ರದರ್ಶನಗಳು









ಅವರು ಕರ್ನಾಟಕ ಲಲಿತ ಕಲೆಯ
ಸೇವೆಗಾಗಿ ಕರ್ನಾಟಕ ಲಲಿತಕಲಾ
ಅಕಾಡೆಮಿಯ ರ ಗೌರವ
ಪ್ರಶಸ್ತಿಯನ್ನು
ದಿನಾಂಕ:


तिलक-महाराष्ट्र-विद्यापीठ, पुणे
• प्रमाण–पत्रम् •
प्रथमा परीक्षा
१८८० शाके
नामा
अण्यामुत्तीर्णतामलभत
इति निवेदयति





This is to certify that
Smt / Shri M. R. Balikai
participated in
'ART TEACHERS CAMP'
'ಕಲಾ ಶಿಕ್ಷಕರ ಶಿಬಿರ'
organised by the
National Council of Educational Research and Training, New Delhi
in collaboration with the
Department of State Educational Research and training, and the Karnataka Chitrakala Parishath, Bangalore
from 20th to 29th, December 1986
at Karnataka Chitrakala Parishath, Bangalore-560001


HEAD
Department of Education in Social Sciences and Humanities NCERT, New Delhi

DIRECTOR,
Department of State Educational Research and Training
Basavanagudi,
Bangalore

Hony. DIRECTOR,
& Principal,
Chitrakala Parishath,
Bangalore



ಎಮ್. ಆರ್ ಬಾಳಿಕಾಯಿ




ಪ್ರಶಸ್ತಿ ಪತ್ರ

ದಿನಾಂಕ 20-10-93

ಅಧ್ಯಕ್ಷ

ಕಾರ್ಯದರ್ಶಿ











ಕಲಾವಿದರೊಂದಿಗೆ ಸಂದರ್ಶನ ಮಾಡುತ್ತಿರುವ ಸಂಶೋಧಕರು



ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ-೭

ಸಮಾರೋಪ

ಇಂದಿನ ಕಲಾವಿದರು ಬರಿ ಕಲಾ ಸೃಷ್ಟಿಕಾರರು ಮಾತ್ರ ಅಲ್ಲ. ಅವರ ಅಧ್ಯಯನ ಪ್ರೀಯತೆ ಅಸಾಮಾನ್ಯವಾದದ್ದು ಕಲೆಗೆ ಸಂಬಂಧಿಸಿದ ವಿಷಯಗಳನ್ನು ಅಧ್ಯಯನ ಮಾಡಬೇಕು. ಓದಬೇಕು, ಕೇಳಬೇಕು, ನೋಡಬೇಕು ಎನ್ನುವ ಹಂಬಲವುಳ್ಳವರು ಹಲವಾರು ಜನರಿದ್ದಾರೆ. ಭಾರತದ ಕಲಾ ವೈಭವದ ಕುರುಹುಗಳನ್ನು ಅವಲೋಕಿಸಬೇಕು ವಿದೇಶಗಳ ಮಹಾನ್ ಕಲಾವಿದರ ಕಲಾಕೃತಿಗಳ ಸೊಗಸನ್ನು ಕಲಿಯಬೇಕು ಎಂಬ ವಿಶಿಷ್ಟ ಕುತೂಹಲ ಆಕರ್ಷಣೆ ಜಗತ್ತನ್ನು ಮುಕ್ತ ಮನಸ್ಸಿನಿಂದ ಪರಿಗ್ರಹಿಸುವ ಮತ್ತು ಕಲಾವಿದ ಮಕ್ಕಳಂತೆ ಸೂಕ್ಷ್ಮ ಸಂವೇದಿಯಾಗಿರಬೇಕು. ಸರ್ವತಂತ್ರ ಸ್ವತಂತ್ರನಾಗಿರಬೇಕು, ಸ್ವಯಂ ಸ್ಫೂರ್ತಿ, ಪ್ರತಿಭೆಯುಳ್ಳವರಾಗಿರಬೇಕು ಎಂದು ಶ್ರೀ ಎಂ. ಆರ್. ಬಾಳೀಕಾಯಿಯವರು ಬಲ್ಲವರಾದರೂ ಒಬ್ಬ ಕಲಾವಿದ ಗಟ್ಟಿ ನೆಲೆಯಲ್ಲಿ ವ್ಯವಹರಿಸಬೇಕಾದರೆ ಆತನಿಗೆ ಕಲೆಯ ವ್ಯಾಕರಣ ತಿಳಿದಿರುವುದು ತುಂಬಾ ಅಗತ್ಯ, ಹೀಗೆ ಒಬ್ಬ ಕಲಾವಿದನಾಗಬೇಕಾದರೆ ನಿಸರ್ಗವೇ ಮೊದಲ ಗುರು ಅದಕ್ಕಾಗಿ ಕಲಾವಿದ ಸೌಂದರ್ಯನ್ವೇಷಕನಾಗಬೇಕು. ಆಗುಹೋಗುಗಳಿಗೆ ಸ್ಪಂದಿಸುವ ಹಾಗೂ ಪ್ರಕೃತಿಯೊಂದಿಗೆ ಬೆರೆತು ಕ್ಷಣ ಕ್ಷಣಕ್ಕೂ ಚಿನ್ನಾಟವಾಡುವ ಸೌಂದರ್ಯ ಚೇತನವನ್ನು ಕಂಡುಕೊಳ್ಳಲು ಕಣ್ಣುಗಳನ್ನು ಸಹ ಪಳಗಿಸಬೇಕಾಗುತ್ತದೆ.

ಕಲೆ ಸುಸಂಸ್ಕೃತ ಜೀವನದ ಪ್ರತಿಬಿಂಬ ನಾಗರೀಕ ಜೀವನದ ಪ್ರತಿನಿಧಿ ಒಂದು ದೇಶದ ಕಲೆಯು ಆದೇಶದ ಸಂಸ್ಕೃತಿಯ ಪಡೆನೆರಳಾಗಿರುತ್ತವೆ ಎಂಬುವುದರಲ್ಲಿ ಮತ್ತೊಂದು ಮಾತಿಲ್ಲ

ಮನುಷ್ಯನ ಮನಸ್ಸಿನ ವಿಕಾಸವೇ ಬದುಕಿನ ಸುಖ ದುಃಖ ಸಮಿಶ್ರವಾದ ಬದುಕನ್ನು ಅಸಹ್ಯವಾಗಿಸಿಕೊಳ್ಳಲು ಮನುಷ್ಯ ಕಲೆಯ ಮಾಧ್ಯಮವಾಗಿ ಹುಡುಕಿಕೊಂಡ ಹಾಗೆ ಅವಿದ್ಯಾವಂತ ವ್ಯಕ್ತಿಯೊಬ್ಬ ತನ್ನ ಜೀವನದಲ್ಲಿ ಬದುಕನ್ನು ಚಿತ್ರಕಲಾಕೃತಿಗಳ ಮಾರ್ಗ ಆರಿಸಿಕೊಂಡಿದ್ದು ಯಾವುದೇ ರೀತಿಯ ಸಂಪತ್ತನ್ನು ಸಂಪಾದಿಸಲಿಲ್ಲ. ಕೇವಲ ತನ್ನ ಮನಸ್ಸಿನ ತೃಪ್ತಿಗೆ ಮನದ ಮುಕ್ತಿಗೆ ಹಗಲಿರುಳು ದುಡಿದರು. ಕಲೆಗಾಗಿ ತಮ್ಮ ಜೀವನ ಎಂದು ಹೇಳುತ್ತಿರುತ್ತಾರೆ ಅಂತವರಲ್ಲಿ ಇವರು ಒಬ್ಬರಾಗಿರುತ್ತಾರೆ.

ನಾಡಿನ ಚಿತ್ರ ಕಲೆಯ ಅಧ್ಯಯನದಲ್ಲಿ ಶ್ರೀ ಎಂ. ಆರ್. ಬಾಳೀಕಾಯಿಯವರಂತಹ ಕಲಾವಿದರ ಜೀವನ ಅವರ ಸಾಧನೆ ಕಲಾಕೃತಿಗಳ ಕೊಡುಗೆ ಅಷ್ಟೇ ಮಹತ್ವ ಪೂರ್ಣವಾದದ್ದು, ಯಾವುದೇ ಒಂದು ಅಧ್ಯಯನಕ್ಕೆ ಅಧ್ಯಯನ ಕ್ರಮ ಮುಖ್ಯವಾಗಿದ್ದು, ಅಧ್ಯಯನಕ್ಕೆ ಸೀಮಿತವಾದ ವಿಷಯವು ಅಗತ್ಯವಾಗಿರುತ್ತದೆ. ಹೀಗಾಗಿ ಏಳು ಅಧ್ಯಾಯಗಳನ್ನೊಳಗೊಂಡಿರುವ ಈ ಪ್ರಬಂಧವು ಒಂದೊಂದು ಅಧ್ಯಾಯದಲ್ಲಿ ಅದರ ವ್ಯಾಪ್ತಿಗೆ ಸಂಬಂಧಿಸಿದ ವಿಷಯದ ಪದರುಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಕಲೆಯು ಮೂಲತಃ ಮಾನವ ಸೃಷ್ಟಿ. ಅದು ಪ್ರತಿಭಾನ್ವಿತ ಮಾನವನ ಜೀವನಾನುಭವ ಅಭಿವ್ಯಕ್ತಿ ಕಲೆ. ಮಾನವತೆಯ ವಿಶಿಷ್ಟ ಆನಂದದಾಯಿನಿಯಾದ ಮಾತೃಭಕ್ತಿ. ಭೌತಿಕ ಜಗತ್ತಿನ ಬಾಹ್ಯ ಸೃಷ್ಟಿಗಿಂತ ಹೆಚ್ಚಾಗಿ ಮಾನವನ ಆಂತರಿಕ ನಿತ್ಯಸತ್ಯದ, ಆನಂದಾನುಭವದ ಅಭಿವ್ಯಕ್ತಿ. ಯಾವುದೇ ಕಲಾಕೃತಿ ಹಿಂದೆ ಆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಜೀವನ ಕಲೆಯ ವಿವಿಧ ಆಯಾಮಗಳನ್ನಾಗಿ ರೂಪಿಸಿಕೊಳ್ಳದವರೆಗೆ ಒಂದು ವಿಶಿಷ್ಟ ಒಳಗಣ್ಣು ಇರುತ್ತದೆ ಈ ಅಂತರ ದೃಷ್ಟಿ ಬೆಳೆದಂತೆಲ್ಲ ಅವನ ಕಲಾರಸಿಕನಾಗುತ್ತಾನೆ. ಕಲಾರಾಧಕನಾಗಿರುತ್ತಾನೆ. ಉತ್ತಮ ಮಾನವನಾಗಿರುತ್ತಾನೆ.

ಚಿತ್ರಕಲಾ ಕ್ಷೇತ್ರಕ್ಕೆ ಅಪಾರವಾದ ಸೇವೆ ಮಾಡು–ಅವುರೊಂದಿಗೆ ಒಬ್ಬ ಸೃಜನಶೀಲ ಕಲಾವಿದರಾಗಿ ಭಾವಚಿತ್ರಗಳು–ರೇಖಾಚಿತ್ರಗಳು, ಸಂಯೋಜನಾ ಚಿತ್ರಗಳು ಜನಪದ ಚಿತ್ರಗಳು ತಾಂತ್ರಿಕ ಕಲಾಕೃತಿಗಳು ಮುಂತಾದ ವಿಷಯಗಳಲ್ಲಿ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ.

ಶ್ರೀ ಎಂ. ಆರ್. ಬಾಳೀಕಾಯಿ ಬದುಕು ಮತ್ತು ಕಲಾಕೃತಿಗಳ ಅಧ್ಯಯನ ಕೈಗೊಂಡಿದ್ದು ಬಾಳೀಕಾಯಿಯವರ ಕಲಾ ಬದುಕನ್ನು ಹಿಡಿದಿಡುವ ಒಂದು ಚಿಕ್ಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ೫ ರಿಂದ ೧೦ ಸಾವಿರ ಕಲಾಕೃತಿಗಳನ್ನು ವಿವಿಧ ವಿಷಯಗಳ ಮೇಲೆ ಹಾಗೂ ವಿವಿಧ ಮಾಧ್ಯಮಗಳಲ್ಲಿ ಚಿತ್ರಿಸಿದ್ದು ಅವರ ಸಾಧನೆಯ ಒಟ್ಟು ನೋಟವನ್ನು ಈ ಕೆಳಗಿನ ಅಧ್ಯಯನಗಳಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳಲ್ಲಿ ವಿಗಂಡಿಸಿಕೊಂಡು ಚರ್ಚಿಸಲಾಗಿದೆ. ಮೊದಲನೆ ಅಧ್ಯಾಯದಲ್ಲಿ ಉದ್ಧೇಶವನ್ನು ವಿವರಿಸಿಸುವುದರೊಂದಿಗೆ ಅಧ್ಯಯನ ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಎಂ. ಆರ್. ಬಾಳೀಕಾಯಿಯವರ ಜೀವನ ಹಾಗೂ ಶಿಕ್ಷಣ, ಇದರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಪರಿಸರದ ಹಿನ್ನೆಲೆ, ಪ್ರೋತ್ಸಾಹ ಅಧ್ಯಾಪಕರು ಪೂರೈಸಿದ ವ್ಯಾಸಂಗದ ದಿನಗಳು ಕಲೆಯ ಒಲವು, ಇವರಿಗಿದ್ದ ಕಲಾಚಟುವಟಿಕೆಗಳು, ಕಲಾಭ್ಯಾಸಕ್ಕೆ ಪ್ರೇರಣೆ ನೀಡಿದ ಕಲಾಬಳಗ, ಇವೆಲ್ಲವುಗಳ ಕುರಿತು ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಅವರ ವೃತ್ತಿಗೆ ಸೇರಿದ ವಿಧಗಳು ಮೊದಲು ವೃತ್ತಿಗೆ ಸೇರಿದ ಸ್ಥಳ, ಅಲ್ಲಿಯ ವಾತಾವರಣ ಅಲ್ಲಿಂದ ವರ್ಗವಾಗಿ ಬಂದದ ನಂತರ ದಿನಗಳು ಮತ್ತು ಕಾರ್ಯನಿರ್ವಹಿಸುತ್ತಿರುವಾಗ ಮತ್ತೆ ತಮ್ಮ ಕಲಾಶಿಕ್ಷಣ ಮುಂದುವರೆಸಿದ ದಿನಗಳು ಅಲ್ಲಿ ಎದುರಾದ ಕಷ್ಟ ನಷ್ಟಗಳು ಅವರ ಕಲಾಬಳಗವನ್ನು ಕುರಿತು ಸ್ಥೂಲವಾಗಿ ಪರಿಚಯಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ (ಶ್ರೀ ಎಂ. ಆರ್. ಬಾಳೀಕಾಯಿಯವರ ಕಲಾ ಪ್ರಕಾರಗಳಾದ ರೇಖಾಚಿತ್ರಗಳು, ವರ್ಣಚಿತ್ರಗಳು, ಇವುಗಳನ್ನು ಹೇಗೆ ರಚಿಸಿದರು ಶೀರ್ಷಿಕೆ ಇಟ್ಟುಕೊಂಡು ರಚಿಸಿರುವುದೇ ಅಥವಾ ಇಲ್ಲವೇ ಹೀಗೆ ಎಲ್ಲ ಕಲಾಕೃತಿಗಳ ಬಗ್ಗೆ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ (ಶ್ರೀ ಎಂ. ಆರ್. ಬಾಳೀಕಾಯಿ ಅವರ ಕಲಾಕೃತಿಗಳ ಸ್ವರೂಪಗಳ ಕುರಿತು ವಸ್ತುವಿಷಯ, ಪ್ರಭಾವ, ಪ್ರೇರಣೆ, ತಂತ್ರಗಾರಿಕೆ ಮತ್ತು ಶೈಲಿ ಇವುಗಳನ್ನು ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ಹೇಗೆ ಬಳಸಿಕೊಂಡಿದ್ದಾರೆ ಎನ್ನುವುದನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಆರನೆ ಅಧ್ಯಾಯ ಶ್ರೀ ಎಂ. ಆರ್. ಬಾಳೀಕಾಯಿಯವರ ಕಲಾಚಟುವಟಿಕೆಗಳು ಮತ್ತು ಕಲಾಸಾಧನೆ ಕುರಿತು ಇಲ್ಲಿಯವರೆಗೆ ಮಾಡಿದಂತಹ ಪ್ರದರ್ಶನಗಳು ಪ್ರಾತ್ಯಕ್ಷಿಕೆಗಳು, ಶಿಬಿರಗಳು, ಪ್ರಶಸ್ತಿ ಪುರಸ್ಕಾರಗಳು, ಕಲಾಕೃತಿಗಳ ಬಗ್ಗೆ ಪರಿಚಯಿಸಲಾಗಿದೆ.

ಏಳನೇ ಅಧ್ಯಾಯವು ಸಮಾರೋಪವಾಗಿದ್ದು ಇದು ಮೇಲಿನ ಎಲ್ಲ ಅಧ್ಯಾಯದಲ್ಲಿ ವಿಶಿಷ್ಟ ಫಲಿತಗಳನ್ನು ಹೊಂದಿದೆ.

ಪ್ರಸ್ತುತ ಅಧ್ಯಯನದ ಕೆಲವು ಪ್ರಮುಖ ಫಲಿತಗಳು

೧) ಶ್ರೀ ಎಂ. ಆರ್. ಬಾಳೀಕಾಯಿ ಅವರು ಒಬ್ಬ ಹುಟ್ಟು ಕಲಾವಿದರಾಗಿ ಈ ಕ್ಷೇತ್ರಕ್ಕೆ ಯಾವ ಅಪೇಕ್ಷೆ ಇಲ್ಲದೆ ಕೆಲಸ ಮಾಡಿದರು.

೨) ಬಾಲ್ಯದಿಂದಲೂ ಬಡ ಕೃಷಿಕರ ಮನೆಲಿ ಹುಟ್ಟಿ ಬೆಳೆದ ಇವರಿಗೆ ಯಾವ ಪ್ರೋತ್ಸಾಹ ದೊರೆಯದಿದ್ದರೂ, ಕಲೆಯ ವ್ಯಾಮೋಹ ಕಡಿಮೆಯಾಗದೆ ಒಬ್ಬ ದೊಡ್ಡ ಕಲಾವಿದನಾಗಬೇಕೆಂಬ ಅವರು ಛಲ ಮತ್ತು ಪರಿಶ್ರಮ ಅವರನ್ನು ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು.

೩) ಪೆನ್ನು, ಪೆನ್ಸಿಲ್, ಹಾಳೆ, ಬಣ್ಣ-ಬಣ್ಣದ ಹಾಳೆ, ಮಣ್ಣು ಇವುಗಳಿಗೆ ನಿರಂತರವಾಗಿ ಪಳಗಿದ ಕೈಗಳು ಈಗಲೂ ಪಳಗುತ್ತಿರುವುದು ಕಂಡುಬರುತ್ತದೆ.

೪) ಶ್ರೀ. ಎಂ.ಆರ್. ಬಾಳೀಕಾಯಿ ಅವರು ತಮ್ಮ ವೃತ್ತಿ ಜೀವನದಲ್ಲಿ ಇದ್ದುಕೊಂಡು ನಾಡಿನ ಹಿರಿಯ ಕಲಾಚೇತನರಾದ ಶ್ರೀಯುತ ಡಿ. ವಿ. ಹಾಲಭಾವಿ ಮತ್ತು ಟಿ. ಪಿ. ಅಕ್ಕಿಯವರಂತಹ ಕಲಾವಿದರಿಂದ ಚಿತ್ರಕಲಾ ಶಿಕ್ಷಣ, ಮಾರ್ಗದರ್ಶನ ಪಡೆದು ಒಬ್ಬ ಉತ್ತಮ ಕಲಾಶಿಕ್ಷಣ ಹಾಗೂ ಕಲಾವಿದರಾಗಿ ಬೆಳೆದರು.

೫) ಭಾವಚಿತ್ರ, ಸಂಯೋಜನಾ ಚಿತ್ರ, ಗೋಡೆಯ ಮೇಲೆ ಭಿತ್ತಿಚಿತ್ರ, ನಿಸರ್ಗ (ಭೂದೃಶ್ಯ) ಚಿತ್ರ, ರೇಖಾಚಿತ್ರ ಮುಂತಾದವುಗಳನ್ನು ವಿವಿಧ ಮಾಧ್ಯಮಗಳಲ್ಲಿ ಸಾಕಷ್ಟು ಕಲಾಕೃತಿಗಳನ್ನು ರಚಿಸಿದ್ದಾರೆ. ಸತತವಾಗಿ ರಚಿಸುತ್ತಾ ಇದ್ದಾರೆ.

೬) ಶ್ರೀ ಎಂ. ಆರ್. ಬಾಳೀಕಾಯಿಯವರು ಸಮಾಜದ ಪ್ರತಿಯೊಂದು ವಿಷಯದ ಆಗುಹೋಗುಗಳ ಬಗ್ಗೆ ರಚಿಸಿದಂತಹ ಕಲಾಕೃತಿಗಳಾಗಿವೆ.

೭) ಇವರ ಕಲಾಕೃತಿಗಳ ನಾಡಿನ ವಿವಿಧೆಡೆಗೆ ಸಂಗ್ರಹಗೊಂಡಿದ್ದು ಜನರ ಮೆಚ್ಚುಗೆಯನ್ನು ಪಡೆದಿವೆ. ಹಾಗೂ ಕರ್ನಾಟಕ ಸಂಸ್ಕೃತಿಯ ಆಸ್ತಿಗಳೆಂದು ಹೇಳಬಹುದು.

೮) ಈಗಲೂ ಇವರು ಕಲಾಗುರುಗಳನ್ನು ಮತ್ತು ಕಲಾಶಿಕ್ಷಕರನ್ನು, ಕಲಾವಿದರನನ್ನು ಅತ್ಯಂತ ಗೌರವದಿಂದ ಕಾಣುವುದರ ಜೊತೆಗೆ ಕೃತಜ್ಞತಾ ಭಾವನೆಯಿಂದ ನೆನೆಯುತ್ತಾರೆ.

೯) ಶ್ರೀ ಎಂ. ಆರ್. ಬಾಳೀಕಾಯಿಯವರು ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶಗಳ ಜೊತೆಗೆ ಪ್ರಾತ್ಯಕ್ಷಿಕೆ, ಕಲಾಶಿಬಿರ, ವಿಚಾರು ಸಂಕಿರಣಗಳಲ್ಲಿ ಭಾಗವಹಿಸಿರುತ್ತಾರೆ.

೧೦) ಅನೇಕ ಅಂತರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮಟ್ಟದ ಇವುಗಳೊಂದಿಗೆ ಉತ್ತಮ ಕಲಾ ಶಿಕ್ಷಕ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

೧೧) ಧಾರವಾಡ ಜಿಲ್ಲೆಯ ಯಾವ ಫಲಾಪೇಕ್ಷೆ ಇಲ್ಲದೆ ಇರುವ, ಇವರು ಈಗ ಧಾರವಾಡ ಜಿಲ್ಲೆಯ ಉತ್ತಮ ಕಲಾಪಿದ ಮತ್ತು ಕೋಲಾಜ್ ಕಲಾವಿದರೆಂದೆ ಹೆಸರು ವಾಸಿಯಾಗಿದ್ದಾರೆ.

೧೨) ಶ್ರೀ ಎಂ. ಆರ್. ಬಾಳೀಕಾಯಿಯವರು ತಮ್ಮ ವೃತ್ತಿಯಲ್ಲಿ ಅನೇಕ ಕೆಲಸ ಕಾರ್ಯಗಳು ಮಾಡುವುದರೊಂದಿಗೆ ಅನೇಕ ವಿದ್ಯಾರ್ಥಿಗಳನ್ನು ಬೆಳೆಸುವುದರ ಜೊತೆಗೆ ಧಾರವಾಡ ಜಿಲ್ಲೆಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ.

೧೩) ಒಬ್ಬ ಹಿರಿಯ ಕಲಾವಿದರಾಗಿ ಉನ್ನತ ಮಟ್ಟದಲ್ಲಿ ಬೆಳೆದರೂ ಸಹಿತ, ಚಿಕ್ಕಮಕ್ಕಳೊಂದಿಗೆ ಚಿಕ್ಕವರಾಗಿ ನಾನು ಇನ್ನು ಚಿಕ್ಕವ. ಕಲೆಯುವುದು ಬಹಳಷ್ಟಿದೆ ಎಂದು ತಮ್ಮ ನಿವೃತ್ತಿ ಬದುಕನ್ನು ನಿರಂತರವಾಗಿ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ.

೧೪) ವೃತ್ತಿಯಿಂದ ನಿವೃತ್ತಿ ಹೊಂದಿದ ಮೇಲೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಗೌರವ ಉಪನ್ಯಾಸಕರಾಗಿ ನಾಲ್ಕು ವರ್ಷಗಳ ಕಾಲ ಸೇವೆ ಗೈದಿದ್ದಾರೆ.

೧೫) ಪ್ರಸ್ತುತ ಸಂದರ್ಭದ ಕಲಾ ಶಿಕ್ಷಕರಿಗೆ ಹಾಗೂ ಮುಂದಿನ ಕಲಾಶಿಕ್ಷಕರಾಗಬೇಕನ್ನುವವರಿಗೆ, ಇಂತಹ ಹಿರಿಯ ಕಲಾಶಿಕ್ಷಕ ಹಾಗೂ ಕಲಾಶಿಕ್ಷಣತಜ್ಞರೆಂದೆ ಎನಿಸಿಕೊಂಡವರಂತಹ ಶ್ರೀ ಎಂ. ಆರ್. ಬಾಳೀಕಾಯಿ ಸರ್ ಅವರು ಒಂದು ಮಾದರಿಯಾಗಿ ಕಂಡು ಬರುತ್ತಾರೆ ಎಂಬ ಅಂಶವನ್ನು ಇವರ ಅಧ್ಯಾಯದಲ್ಲಿ ಕಂಡುಕೊಳ್ಳಬಹುದು.

೧೬) ಕರ್ನಾಟಕದ ಕಲಾಕ್ಷೇತ್ರಕ್ಕೆ ಹಿರಿಯ ಸ್ವತಂತ್ರ ಪೂರ್ವದ ಕಲಾವಿದರಲ್ಲಿ ಇವರು ಒಬ್ಬರು. ಇಂತಹ ಕಲಾವಿದರ ಕಲಾದೈರಿ, ತಂತ್ರಗಾರಿಕೆ, ಅವರು ಬಳಸಿಕೊಂಡಂತಹ ವಸ್ತು ವಿಷಯಗಳು ಇವೆಲ್ಲವು ಕೂಡ ನಮ್ಮ ಕರ್ನಾಟಕದ ಕಲಾವಿದರ ಕಲಾಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಒಂದು ಬಹುದೊಡ್ಡ ಕೊಡುಗೆ. ಇಂತಹ ಮಾಹಿತಿ ಸಂಗ್ರಹ ಮಾಡಿಕೊಂಡಿರುವುದು ನಮ್ಮ ಕಲಾಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿ ಕಂಡು ಬರುತ್ತದೆ.

೧೭) ಬಾಲ್ಯದಿಂದಲೂ ಕೂಡ ತಮ್ಮ ಕಲಾವೃತ್ತಿಯವರೆಗೆ ಅಂದರೆ ಅವರ ಬಾಲ್ಯದ ಕಲಿಕೆ ನಂತರ ಪ್ರೌಢಾವಸ್ಥೆಯಲ್ಲಿಯೂ ಅವರು ಚಿತ್ರಕಲಾ ವಿಷಯದಲ್ಲಿ ಕಲಿಯಲೇಬೇಕು ಎನ್ನವು ಛಲ. ಅವರು ಪಟ್ಟಂತಹ ಕಷ್ಟ ಅವರ ಪರಿಶ್ರಮ ನಂತರ ಶಿಕ್ಷಕ ವೃತ್ತಿಯಲ್ಲಿ ತಾನಿರುವ ನೆಲೆಯಲ್ಲಿ ಚಿತ್ರಕಲಾ ವಿಷಯ ಬಗ್ಗೆ ತಿಳಿಸುವುದು. ಜೊತೆಗೆ ಕಲಿಸಿಕೊಡುವುದರೊಂದಿಗೆ ಒಬ್ಬ ಆದರ್ಶ ಕಲಾ ಶಿಕ್ಷಕನೆಂದು ಅನಿಸಿಕೊಂಡು ತಾನು ಪಡೆದಿರುವಂತಹ ಅನುಭವವನ್ನು ಇತರರಿಗೆ ಹಂಚಬೇಕು ಎನ್ನುವ ಉದ್ದೇಶದಿಂದ ಮುಮದೆ ಬರುವಂತಹ ಕಲಾಸಕ್ತರಿಗೆ, ಕಿರಿಯ ಕಲಾವಿದರಿಗೆ, ಒಂದು ಮಾದರಿಯೂ ಕೂಡ ಹೌದು. ಇಂತಹ ಮಾದರಿಯ ಅಧ್ಯಯನದಿಂದ ಕಲಾಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ.

೧೮) ಯಾವುದೇ ಪ್ರಶಸ್ತಿ ಪುರಸ್ಕಾರಗಳಿಗೆ ಮನ್ನಣೆ ಕೊಡದೆ, ರಾಜಕೀಯ ಅಂಶಗಳಿಗೆ ಒಳಗಾಗದೆ ತಾನಿದ್ದ ನೆಲೆಯಲ್ಲಿ ಚಿತ್ರಕಲಾ ಒಂದು ವಿಷಯವನ್ನಾಗಿ ಕುರಿತು ಎಲ್ಲರಿಗೂ ಮನದಟ್ಟು ಮಾಡಿಕೊಡುವಂತಹ ಹಾಗೂ ನಿತ್ಯ ಜೀವನ ಪರಿಯಂತ ಚಿತ್ರಕಲೆಯೇ ತನ್ನ ದೇಹದ ಒಂದು

ಅಂಗ ಎಂದು ಕಲಿಯುವುದರ ಜೊತೆಗೆ ಕಲಿಸುತ್ತಾ ಬಂದಿರುವ ಶ್ರೀ ಎಂ. ಆರ್. ಬಾಳೀಕಾಯಿ ಅವರು ನಮ್ಮ ಕಲಾಕ್ಷೇತ್ರಕ್ಕೆ ಒಂದು ಕೊಡುಗೆಯ ಜೊತೆಗೆ ಸಮಕಾಲೀನ ಸಂದರ್ಭದಲ್ಲಿರುವಂತಹ ಆರ್. ಎಂ. ಹಡಪದ, ವಿ. ಟಿ. ಕಾಳಿ ಇವರಿಗೆಲ್ಲ ಸಿಕ್ಕಿರುವ ಮನ್ನಣೆ, ಮಾನ್ಯತೆ ಸಿಗಬೇಕಾಗಿರುವುದು ಬಹುಮುಖ್ಯವಾಗಿರುವ ಸಂಗತಿ. ಇಂತಹ ಒಬ್ಬ ಉತ್ತಮವಾಗಿರುವಂತಹ ವ್ಯಕ್ತಿಗೆ ಯಾವುದೇ ರೀತಿಯಿಂದ ಸಂಘ–ಸಂಸ್ಥೆಗಳಿಂದಾಗಲೀ, ಸರಕಾರದಿಂದ ಸವಲತ್ತುಗಳಾಗಲೀ ಬಳಸಿಕೊಳ್ಳದೇ ಇರುವುದು ನಮಗೆ ಸೋಚನೀಯ ಸಂಗತಿ. ಆದ್ದರಿಂದ ಇವರಿಗೆ ಸರಕಾರದಿಂದ ಸಹಾಯ ಸವಲತ್ತುಗಳು ಸಿಗಬೇಕು, ಇನ್ನು ಉಳಿದ ಕಲಾವಿದರಗೆ ಇವರಿಂದ ಸಹಾಯವಾಗಬೇಕು.

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಎಲ್ಲವನ್ನು ಕಲಾಕೃತಿಗಳ ಅಧ್ಯಾಯ ಮಾಡಲಿಕ್ಕೆ ಆಗದೆ ಪಕ್ಷಿನೋಟದ ಅಧ್ಯಯನವಾಗಿದೆ. ಅದಕ್ಕೆ ಇವರ ಅಧ್ಯಯನ ಮಾಡಲಿಕ್ಕೆ ಒಳಹೊಕ್ಕರೆ ಬರೀ ರೇಖಾಚಿತ್ರಗಳನ್ನೆ ಸಮಗ್ರವಾಗಿ ಅಧ್ಯಯನ ಮಾಡಲಿಕ್ಕೆ ಅವಕಾಶವಿದೆ. ಇಂತಹ ಅವಕಾಶಗಳನ್ನು ಮುಂದಿನ ಸಂಶೋಧಕರು ಸಂಶೋಧನಾ ಅಧ್ಯಯನಕ್ಕೆ ಬಳಸಿಕೊಳ್ಳಲು ಅನೇಕ ಅಂಶಗಳು ಸಿಗುತ್ತವೆ. ಅಲ್ಲದೆ ಕಲಾಕೃತಿಗಳ ಅಧ್ಯಯನ, ರೇಖಾಚಿತ್ರಗಳ ಅಧ್ಯಯನ, ನಿಸರ್ಗ ಚಇತ್ರಗಳ ಅಧ್ಯಯನ (ಬಾಲ್ಯದೃಶ್ಯ) ಹೀಗೆ ಬಿಡಿ ಬಿಡಿಯಾಗಿ ಅಧ್ಯಯನ ಮಾಡಬಹುದಾಗಿದೆ. ಹಾಗಾಗಿ ವ್ಯಕ್ತಿ ಅಧ್ಯಯನ ಇವರ ಮೇಲೆ ಮಾಡುವುದು ತುಂಬಾ ಅವಶ್ಯಕತೆ ಇದೆ. ಸಂಶೋಧನಾ ವ್ಯಾಪ್ತಿಗೆ ತಕ್ಕಂತೆ ಸೀಮಿತಗೊಳಿಸಿಕೊಂಡಿದ್ದೇನೆ

ಅನುಬಂಧಗಳು

ಗ್ರಂಥಋಣ

೧) ಉತ್ತರ ಕರ್ನಾಟಕದ ಭಿತ್ತಿಚಿತ್ರಗಳು, ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೧ — ಡಾ. ಯಾದಪ್ಪ ಪರದೇಶಿ,

೨) ಕಲಾಪ್ರಪಂಚ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೧೯೭೮, — ಡಾ. ಶಿವರಾಮ ಕಾರಂತ

೩) ಕಲಾವಿದ ಹೆಬ್ಬಾರರ ರೇಖಾ ಲಾವಣ್ಯ ನವಕರ್ನಾಟಕ ಪ್ರಕಾಶನ ಬೆಂಗಳೂರು–೧೯೯೯ — ವ್ಯಾಸರಾಯ ಬಲ್ಲಾಳ

೪) ಕಲಾ ಸಂವೇದನೆಯ ಒಳನೋಟಗಳು ಕರ್ನಾಟಕ ಕಲಾ ಅಕಾಡೆಮಿ ಬೆಂಗಳೂರು–೧೯೯೭ — ಕೆ.ವ್ಹಿ. ಸುಬ್ರಮಣ್ಯಂ

೫) ಕರ್ನಾಟಕ ಜನಪದ ಚಿತ್ರಕಲೆ ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ, — ಡಾ. ಎಸ್. ಸಿ. ಪಾಟೀಲ

೬) ಕಲೆ ಮತ್ತು ರಸಸ್ವಾದನೆ ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು–೧೯೯೨ — ಪ್ರೊ. ಎಂ. ಎಚ್.ಕೃಷ್ಣಯ್ಯ

೭) ಕಲಾ ಸಿದ್ಧಾಂತ ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ — ವಿ. ಕೃ. ಗೋಕಾಕ

೮) ಕಲಾಕೋಶ ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು–೧೯೯೪ — ಪಿ. ಆರ್. ತಿಪ್ಪೇಸ್ವಾಮಿ

೯) ಕಲಾ ಪ್ರಪಂಚ ಎಸ್. ಬಿ. ಎನ್. ಪಬ್ಲಿಷರ್ಸ್ ಬೆಂಗಳೂರು–೨೦೦೯ — ಡಾ. ಶಿವರಾಮ ಕಾರಂತ

೧೦) ಕಲಾವಿದ ಆರ್. ಎಂ. ಹಡಪದ ಒಂದು ಅಧ್ಯಯನ ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ದೃಶಕಲಾ ವಿಭಾಗ, ಕ.ವಿ.ವಿ. ಹಂಪಿ–೨೦೦೩ — ಡಾ. ಸಿದ್ಧಲಿಂಗಸ್ವಾಮಿ ಆ. ಹಿರೇಮಠ,

೧೧) ಕಲಾವಿದ ಎಂ. ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು–ಒಂದು ಅಧ್ಯಯನ,
ಪಿಹೆಚ್.ಡಿ. ಮಹಾಪ್ರಬಂಧ, ಸಂಶೋಧಕರು
ದೃಶಕಲಾ ವಿಭಾಗ, ಕ.ವಿ.ವಿ. ಹಂಪಿ–೨೦೦೨ — ಶ್ರೀಮತಿ ಲಕ್ಷ್ಮೀದೇವಿ ಗವಾಯಿ

೧೨) ಕಲಾವಿದ ವಿ.ಟಿ. ಕಾಳೆ, ಬದುಕು ಮತ್ತು ಕಲಾಕೃತಿಗಳು
ಪಿಹೆಚ್.ಡಿ. ಮಹಾಪ್ರಬಂಧ,
ದೃಶಕಲಾ ವಿಭಾಗ, ಕ.ವಿ.ವಿ. ಹಂಪಿ–೨೦೧೧ — ಸುಚಿತ್ರಾ ಜಿ. ಲಿಂಗದಳ್ಳಿ,

೧೩) ಕಲೆಗಾರರ ಕಥೆಗಳು,
ಪ್ರಕಾಶಕರು, ಸಮಾಜ ಪುಸ್ತಕಾಲಯ,
ಧಾರವಾಡ ೧೯೯೫ — ಬಿ. ಪಿ. ಬಾಯಿರಿ,

೧೪) ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು,
ಪ್ರ. ಶ್ರೀ ಡಿ. ವ್ಹಿ. ಹಾಲಭಾವಿ, ಸ್ಕೂಲ್ ಆಫ್ ಆರ್ಟ್
ವಜ್ರಮಹೋತ್ಸವ ಸಮಿತಿ,
ಧಾರವಾಡ–೧೯೯೫ — ಡಾ. ಎಸ್. ಸಿ. ಪಾಟೀಲ,

೧೫) ಚಿತ್ರಕಲಾವಿದ ಡಾ. ಎಸ್. ಎಂ. ಪಂಡಿತ,
ಪ್ರಸಾರಾಂಗ, ಕ.ವಿ.ವಿ.
ಹಂಪಿ–೨೦೧೦ — ಡಾ.ಮೋಹನರಾವ್ ಬಿ. ಪಂಚಾಳ

೧೬) ಚಿತ್ರಕಲಾ ಚಿಂತನೆ,
ಪ್ರಗತಿ ಪ್ರಕಾಶನ
ದಾವಣಗೆರೆ–೧೯೯೫ — ಶಂಕರ ಪಾಟೀಲ

೧೭) ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯಕಲಾ ಮಂದಿರದ ಕೊಡುಗೆ
ಎಂ.ವ್ಹಿ.ಎ. ಅ.ಪ್ರ.ಕಿ.ಸಂ. ಪ್ರಬಂಧ,
ದೃಶಕಲಾ ವಿಭಾಗ, ಕ.ವಿ.ವಿ.
ಹಂಪಿ–೨೦೦೨ — ಪ್ರಕಾಶ ಬ. ಬಂಡಿ

೧೮) ಚಿತ್ರಕಲಾ ಪ್ರಪಂಚಕ್ಕೆ ಧಾರವಾಡ ಸರಕಾರಿ ಚಿತ್ರಕಲಾ
ಮಹಾವಿದ್ಯಾಲಯದ ಕೊಡುಗೆ, ಎಂ.ವ್ಹಿ.ಎ.
ಕಿರು ಸಂಶೋಧನಾ ಪ್ರಬಂಧ ಅಪ್ರಕಟಿಕ,
ಸಂಶೋಧಕರು ದೃಶಕಲಾ ವಿಭಾಗ, ಕ.ವಿ.ವಿ.
ಹಂಪಿ–೨೦೧೧ — ಚನ್ನಪ್ಪ ಚ. ಬಾರಕೇರ

೧೯) ಜನಪದ ಕಲೆ : ಅವಲೋಕನ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು — ಡಾ. ಅಂಬಳಿಕೆ ಹಿರಿಯಣ್ಣ
ಡಾ. ಶಾಲಿನಿ ರಘುನಾಥ

೨೦) ಧಾರವಾಡದ ಕೋಲಾಜ ಚಿತ್ರ ಕಲಾವಿದರು
ಬಿ.ವ್ಹಿ.ಎ. ಅಪ್ರಕಟಿತ ಕಿರು ಪ್ರಬಂಧ,
ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ,
ಕೆಲಗೇರಿ, ಧಾರವಾಡ–೨೦೧೧ — ಸುನೀಲ ಹೆಗಡೆ

೨೧) ಸವ್ಯಕಲೆ ಹಾಗೂ ಕಲೆಗಾರರು ಕಥೆಗಳು,
ಪ್ರ. ಪ್ರತಿಭಾ ಗ್ರಂಥಮಾಲೆ,
ಧಾರವಾಡ–೧೯೮೨–೧೯೯೦ — ಬಿ. ಪಿ. ಬಾಯಿರಿ

೨೨) ನಿಜದ ನೆಲೆ
ಬ.ವಿ.ವಿ. ಸಂಘ, ಬಾಗಲಕೋಟ–೨೦೦೨, — ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪ್ರಾತೋಟ

೨೩) ಭಾರತೀಯ ಚಿತ್ರಕಲೆ
ಪುತ್ತೂರು ಪ್ರಕಾಶನ, ೧೯೩೦, — ಶಿವರಾಮ ಕಾರಂತ

೨೪) ಎಂ. ಆರ್. ಬಾಳೀಕಾಯಿ
ಪ್ರ.ಸಂ. ಪೀಟರ್ ಲೂಯಿಸ್,
ಕರ್ನಾಟಕ ಲಲಿತ ಕಲಾ ಅಕಾಡೆಮಿ,
ಬೆಂಗಳೂರು–೨೦೦೪ — ಸುರೇಶ ಡಿ. ಹಾಲಭಾವಿ,

೨೫) ಮಹಾವೀರ ಬಾಳೀಕಾಯಿ ಕಲೆ ಮತ್ತು ಜೀವನ,
ಎಂ.ವ್ಹಿ.ಎ. ಅ.ಪ್ರ.ಕಿ. ಪ್ರಬಂಧ,
ದೃಶ್ಯಕಲಾ ವಿಭಾಗ ಕ.ವಿ.ವಿ., ಹಂಪಿ–೨೦೦೫ — ಎಸ್.ಎಸ್. ಗಡ್ಡಿ,

೨೬) ಎಂ. ಆರ್. ಬಾಯಿಕಾಯಿಯವರ ಇತ್ತೀಚಿನ ಕಲಾಕೃತಿಗಳು ಒಂದು ಅಧ್ಯಯನ
ಬಿ.ವ್ಹಿ.ಎ. ಅ.ಪ್ರ.ಕಿ. ಪ್ರಬಂಧ,
ಶಿಲ್ಪ & ವರ್ಣಚಿತ್ರಕಲಾ ವಿಭಾಗ,
ಕ.ವಿ.ವಿ. ಹಂಪಿ–೨೦೦೭ — ಮಹೇಶ ಬೇವಿನಗಿಡ

೨೭) ರೇಖಾಚಿತ್ರ, ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು–೧೯೯೧, — ಬಿ. ವಿ. ಕೆ. ಶಾಸ್ತ್ರಿ

೨೮) ವರ್ಣ ಸಂಜಯ, ವಿಜಯ ಲಲಿತ ಕಲಾ ಮಹಾವಿದ್ಯಾಲಯ,
ಇಳಕಲ್–೨೦೦೧, — ಡಾ. ಎಸ್. ಸಿ. ಪಾಟೀಲ

೨೯) ಸೌಂದರ್ಯ ಮೀಮಾಂಸೆ,
ಪ್ರಕಾಶಕರು ಮೈಸೂರ–೨೦೦೧ — ಡಾ. ಶ್ರೀ ಶ್ರೀನಿವಾಸನ್, ಡಿ.ವಿ.ಕೆ. ಮೂರ್ತಿ

೩೦) ಶ್ರೀಯುತ ಎಂ. ಆರ್. ಬಾಳೀಕಾಯಿಯವರ ಕಲೆ ಮತ್ತು ಜೀವನ
ಅ.ಪ್ರ.ಕಿ.ಪ್ರಬಂಧ, ಭಾರತೀಯ ಕಲಾ ಕೇಂದ್ರ ಕಿಲ್ಲೆ,
ಧಾರವಾಡ–೨೦೦೬ — ನಿಜಮಾ ಅ. ಮಿರ್ಜಾ

ವಕ್ತೃಗಳು

೧) ಶ್ರೀ ಎಂ.ಆರ್. ಬಾಳೀಕಾಯಿ ಅವರ ಪ್ರಾಥಮಿಕ ಶಿಕ್ಷಣದ ಗುರುಗಳಾದ ಶ್ರೀ ಶಂಕರ ಪುರಿ ಬಾವಾನವರ ಅವರೊಂದಿಗೆ ಸಂದರ್ಶನ ಮಾಡಲಾಗಿದೆ. ದಿ: ೦೨-೦೫-೨೦೧೪ ರಂದು ಬೆಳಗಾಂವ ಜಿಲ್ಲಾ ಬೈಲಹೊಂಗಲ ತಾಲೂಕು ಗೋವನಕೊಪ್ಪ ಗ್ರಾಮದ

೨) ಶ್ರೀ ಎಂ.ಆರ್. ಬಾಳೀಕಾಯಿ ಅವರ ಗೆಳೆಯರಾದ ಶ್ರೀ ವಿ.ಡಿ. ಬಡಿಗೇರ ನಿವೃತ್ತ ಪ್ರಾಧ್ಯಾಪಕರು ಹುಬ್ಬಳ್ಳಿ ಅವರೊಂದಿಗೆ ದಿ: ೧೯-೦೪-೨೦೧೪ ರಂದು ಸಂದರ್ಶನ ಮಾಡಲಾಯಿತು.

೩) ಶ್ರೀ ಎಂ.ಆರ್. ಬಾಳೀಕಾಯಿ ಅವರ ಶಿಷ್ಯರಾದ ಶ್ರೀ ಕೆ.ಕೆ. ಮಕಾಳೆ ಕ.ವಿ.ವಿ. ಹಂಪಿ ಇವರೊಂದಿಗೆ ದಿ: ೨೯-೦೩-೨೦೧೪ ರಂದು ಸಂದರ್ಶನ ಮಾಡಲಾಯಿತು.

೪) ಶ್ರೀ ಎಂ.ಆರ್. ಬಾಳೀಕಾಯಿ ಅವರ ಶಿಷ್ಯಳಾದ ಶ್ರೀಮತಿ ರೇಣುಕಾ ಮಾರ್ಕಂಡೆ ಧಾರವಾಡ ಅವರೊಂದಿಗೆ ದಿ: ೨೦-೦೫-೨೦೧೪ ರಂದು ಮಾಡಲಾಗಿದೆ.

೫) ಶ್ರೀ ಎಂ.ಆರ್. ಬಾಳೀಕಾಯಿ ಅವರ ಶಿಷ್ಯರುಗಳು ಸಿ.ಸಿ. ಬಾರಕೇರ ಡಿ.ಕೆ. ಕಾಮಕರ್ ಚಿಣ್ಣನವರ ಧಾರವಾಡ ಇವರುಗಳೊಂದಿಗೆ ದಿ: ೦೯-೦೪-೨೦೧೪ ರಂದು ಸಂದರ್ಶನ ಮಾಡಲಾಯಿತು.

೬) ಶ್ರೀ ಎಂ.ಆರ್. ಬಾಳೀಕಾಯಿ ಅವರ ಶಿಷ್ಯರಾದ ಶ್ರೀ ಬಿ.ಜಿ. ಚೌದರಿ ಜಮಖಂಡಿ ಇವರೊಂದಿಗೆ ಸಂದರ್ಶನ ದಿ: ೦೨-೦೪-೨೦೧೪ ರಂದು ಮಾಡಲಾಯಿತು.



ಶ್ರೀ ಎಮ್.ಆರ್. ಬಾಳೀಕಾಯಿ :

ಬದುಕು ಮತ್ತು ಕಲಾಕೃತಿಗಳು